ಬುಧವಾರ, ಜುಲೈ 19, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾರ್ಯಾಚರಣೆ
ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಉಗ್ರರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಯೋಧ





ಪ್ರಕಟಣೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ವಿಧಾನ ಪರಿಷತ್‌ನಲ್ಲಿ ಮತ ವಿಭಜನೆಗೆ ಪಟ್ಟು ಹಿಡಿದ ಬಿಜೆಪಿ– ಜೆಡಿಎಸ್ • ಸರ್ಕಾರದ ನಿಲುವಿಗೆ ಸೋಲು

ಎಪಿಎಂಸಿ ಮಸೂದೆ: ಪರಿಶೀಲನೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ಮಸೂದೆಯ ಪರಿಶೀಲನೆಗೆ ವಿಧಾನ ಪರಿಷತ್‌ನಲ್ಲಿ ಸದನ ಸಮಿತಿ ರಚನೆಯಾಗಲಿದೆ.

ಮಸೂದೆ ವಿರೋಧಿಸಿದ ಬಿಜೆಪಿ, ಜೆಡಿಎಸ್ ಸದಸ್ಯರು ತಿದ್ದುಪಡಿಗಳನ್ನು ಪರಿಶೀಲಿಸಲು ಸದನ ಸಮಿತಿಗೆ ವಹಿಸಲು ಪಟ್ಟು ಹಿಡಿದರು, ಸರ್ಕಾರ ಒಪ್ಪಲಿಲ್ಲ. ಸದನದ ಬಲ ಗಮನಿಸಿದ ಬಿಜೆಪಿ ಸದಸ್ಯರು, ಮತ ಹಾಕೋಣ, ಬಹುಮತ ಆಧರಿಸಿ ನಿರ್ಣಯ ಕೈಗೊಳ್ಳೋಣ ಎಂದು ಪಟ್ಟು ಹಿಡಿದರು. ಮಸೂದೆಯ ಪರ-ವಿರೋಧವನ್ನು ಮತವಿಭಜನೆಗೆ ಹಾಕಿದಾಗ, ಬಿಜೆಪಿ-ಜೆಡಿಎಸ್ ಸದಸ್ಯರು ವಿರೋಧಿಸಿ ಮತ ಹಾಕಿದರು. ಕಾಂಗ್ರೆಸ್ ಕಡೆ ಸದಸ್ಯ ಬಲ ಕಡಿಮೆ ಇದ್ದುದರಿಂದ ಸರ್ಕಾರ ಗೆಲುವು ಸಾಧಿಸಲಾಗಲಿಲ್ಲ. ಮತ ವಿಭಜನೆಯಲ್ಲಿ ವಿರೋಧ ಪಕ್ಷಗಳು ಗೆದ್ದವು. ಸದನ ಸಮಿತಿಗೆ ಒಪ್ಪಿಸುವ ತೀರ್ಮಾನಕ್ಕೆ ಬರಲಾಯಿತು.

> **ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಕಾಯ್ದೆಗೆ ತಿದ್ದುಪಡಿಯಾಗದಿದ್ದಲ್ಲಿ ರಾಜ್ಯದ ಎಪಿಎಂಸಿಗಳು ನಾಶವಾಗಲಿವೆ. ಬೆಂಬಲ ಬೆಲೆ ನಿಗದಿಗೆ ತೊಡಕಾಗಲಿದೆ**
> **ಶಿವಾನಂದ ಎಸ್. ಪಾಟೀಲ**, ಕೃಷಿ ಮಾರುಕಟ್ಟೆ ಸಚಿವ

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ಮಸೂದೆ ಮಂಡಿಸಿದಾಗ, ವಿರೋಧ ವ್ಯಕ್ತವಾಯಿತು. ಸುದೀರ್ಘ ಚರ್ಚೆ ಬಳಿಕ ಮಸೂದೆಯನ್ನು ಸದನ ಸಮಿತಿಗೆ ವಹಿಸಬೇಕು ಎಂದು ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ವೈ.ಎ.ನಾರಾಯಣ ಸ್ವಾಮಿ ಒತ್ತಾಯಿಸಿದರು.

> **ರೈತರು ತಮ್ಮ ಬೆಳೆಗಳನ್ನು ತಮ್ಮಿಚ್ಛೆಯಂತೆ ಮಾರಾಟ ಮಾಡಲು ಬಿಜೆಪಿ ಸರ್ಕಾರ ಅವಕಾಶ ನೀಡಿತ್ತು. ರೈತರ ಮಾರಾಟ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಕಿತ್ತುಕೊಳ್ಳುತ್ತಿದೆ**
> **ಕೋಟ ಶ್ರೀನಿವಾಸ ಪೂಜಾರಿ**, ಬಿಜೆಪಿ ಸದಸ್ಯ

ಮೂರು ತಾಸು ಚರ್ಚೆ ನಂತರ ಸಮಿತಿಗೆ ಒಪ್ಪಿಸುವ ಪ್ರಸ್ತಾವ ಸಲ್ಲದು. ಮಸೂದೆ ಅಂಗೀಕಾರ ಪ್ರಕ್ರಿಯೆ ಆರಂಭಿಸಬೇಕು ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಕೋರಿದರು. ಬಿಜೆಪಿ ಸದಸ್ಯರ ಕೋರಿಕೆ ಮನ್ನಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಸದನ ಸಮಿತಿಗೆ ವಹಿಸುವ ಪ್ರಸ್ತಾವವನ್ನು ಮತವಿಭಜನೆಗೆ ಹಾಕಿದರು. ಪ್ರಸ್ತಾವದ ಪರವಾಗಿ ಬಿಜೆಪಿ, ಜೆಡಿಎಸ್ (ಮರಿತಿಬ್ಬೇಗೌಡ ಹೊರತುಪಡಿಸಿ) ಪ್ರಸ್ತಾವದ ಪರವಾಗಿ 31 ಹಾಗೂ ವಿರುದ್ಧವಾಗಿ 21 ಮತಗಳು ಬಂದವು.

'ಇದಕ್ಕೂ ಮೊದಲು ಮಸೂದೆಯ ಕುರಿತು ಸದನದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ಸಚಿವ ಶಿವಾನಂದ ಎಸ್. ಪಾಟೀಲ ಮಾತನಾಡಿ, ಹಿಂದಿನ ಸರ್ಕಾರ ಜಾರಿಗೆ ತಂದಿದ್ದ ಕಾಯ್ದೆಯಿಂದ ರೈತರಿಗೆ, ಎಪಿಎಂಸಿಗೆ ಸಾಕಷ್ಟು ಅನನುಕೂಲವಾಗಿತ್ತು. ಕೇಂದ್ರ ಸರ್ಕಾರ ಈಗಾಗಲೇ ಕಾಯ್ದೆ ಹಿಂಪಡೆದಿದೆ. ಹಲವು ರಾಜ್ಯಗಳಲ್ಲೂ ರದ್ದಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೂ ಜಾರಿಯಾಗಿಲ್ಲ. ತಿದ್ದುಪಡಿ ಮಸೂದೆಯೊಂದಿಗೆ ಮಾರುಕಟ್ಟೆ ಹೊರಗಿನ ವ್ಯವಹಾರಕ್ಕೆ ಯಾವುದೇ ಸಮಸ್ಯೆ ಇಲ್ಲ. ರೈತ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ತಿದ್ದುಪಡಿ ತರಲಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರ ದಲಾಲರು, ವ್ಯಾಪಾರಿಗಳ ಪರವಾಗಿದೆ. ರಾಜ್ಯದ 75 ಲಕ್ಷ ರೈತರಿಗೆ ಅನ್ಯಾಯ ಮಾಡುತ್ತಿದೆ. ರೈತರ ಮಾರಾಟ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಅಂಶಗಳನ್ನು ತಿದ್ದುಪಡಿ ಒಳಗೊಂಡಿದೆ. ಮಸೂದೆ ವಾಪಸ್ ಪಡೆಯಬೇಕು ಎಂದು ಬಿಜೆಪಿ, ಜೆಡಿಎಸ್ ಸದಸ್ಯರು ಒತ್ತಾಯಿಸಿದರು.

'ಕೋವಿಡ್' ಭ್ರಷ್ಟಾಚಾರ ತನಿಖೆಗೆ ಕ್ರಮ'

ಬೆಂಗಳೂರು: 'ಕೋವಿಡ್ ನಿಯಂತ್ರಣ ಮತ್ತು ನಿವಾರಣೆ ಹೆಸರಿನಲ್ಲಿ ರಾಜ್ಯದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಸಮಗ್ರ ತನಿಖೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಪ್ರದೀಪ್ ಈಶ್ವರ್ ಅವರ ಗಮನ ಸೆಳೆಯುವ ಸೂಚನೆಗೆ ಮಂಗಳವಾರ ಉತ್ತರ ನೀಡಿದ ಅವರು, 'ಕೋವಿಡ್ ಅವಧಿಯಲ್ಲಿನ ಭ್ರಷ್ಟಾಚಾರದ ಆರೋಪ ಕುರಿತು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಹಾಗೂ ಮಹಾಲೇಖಪಾಲರ ವರದಿಯನ್ನು ನಿರೀಕ್ಷಿಸುತ್ತಿದ್ದೆವು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ಮಂಡನೆಯಾಗಿದೆ' ಎಂದರು.

ಮುಖ್ಯಮಂತ್ರಿಯವರ ಜತೆ ಚರ್ಚಿಸಿ ತನಿಖೆ ಕುರಿತು ಶೀಘ್ರದಲ್ಲಿ ನಿರ್ಧಾರಕ್ಕೆ ಬರಲಾಗುವುದು ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಸಿ.ಎಂ ಊಟಕ್ಕೆ ಕರೆದಿದ್ದರು ಹೋಗಿದ್ದೆ: ಯು.ಟಿ. ಖಾದರ್

ಬೆಂಗಳೂರು: 'ಮುಖ್ಯಮಂತ್ರಿಯವರು ನಿನ್ನೆ ರಾತ್ರಿ ಡಿನ್ನರ್‌ಗೆ ಕರೆದಿದ್ದರು. ಅದ್ದರಿಂದ ವೆಸ್ಟ್ ಎಂಡ್ ಹೋಟೆಲ್‌ಗೆ ಹೋಗಿದ್ದೆ. ಅದರಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಶ್ನೆ ಇಲ್ಲ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

'ನಾನು ಮನಸ್ಸಿನಲ್ಲ ಮಾರಾಯ, ನೀವು ಕರೆದರೂ ಬರುತ್ತೇನೆ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಅವರ ಕುತೂಹಲಕ್ಕೆ ಖಾದರ್ ಪ್ರತಿಕ್ರಿಯಿಸಿದರು.

'ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸೋನಿಯಾಗಾಂಧಿಯವರನ್ನು ಭೇಟಿ ಮಾಡಿದ್ದೀರಿ ಎಂದು ಪತ್ರಿಕೆಗಳಲ್ಲಿ ಬಂದಿದೆ. ನೀವು ಸ್ಪೀಕರ್ ಸ್ಥಾನದಲ್ಲಿ ಕುಳಿತ ಬಳಿಕ ಪಕ್ಷಾತೀತರಾಗಿದ್ದೀರಿ. ಯಾವುದೇ ಪಕ್ಷದ ಪ್ರಭಾವಕ್ಕೆ ಒಳಗಾಗಬಾರದು. ಆ ರೀತಿ ಭೇಟಿ ಮಾಡುವುದು ಸರಿಯಲ್ಲ' ಎಂದು ಜ್ಞಾನೇಂದ್ರ ಹೇಳಿದರು.



ಬಡವರ ಹೊಟ್ಟೆ ಮೇಲೆ ಹೊಡೆಯಲು ಮದ್ಯದ ತೆರಿಗೆ ಏರಿಕೆ: ಎಂ.ಟಿ.ಕೃಷ್ಣಪ್ಪ

ಬೆಂಗಳೂರು: 'ಅಬಕಾರಿ ಮೇಲೆ ಶೇ 20 ರಷ್ಟು ತೆರಿಗೆ ಹೆಚ್ಚಿಸಿದ್ದರಿಂದ ಬಡವರ ಹೊಟ್ಟೆ ಮೇಲೆ ಹೊಡೆದಂತಾಗಿದೆ. ಅದರ ಹಣದಿಂದ ಗ್ಯಾರಂಟಿ ಯೋಜನೆ ಜಾರಿ ಮಾಡುವುದು ಸರಿಯಲ್ಲ' ಎಂದು ಜೆಡಿಎಸ್‌ನ ಎಂ.ಟಿ.ಕೃಷ್ಣಪ್ಪ ಹೇಳಿದರು.

'ಕಷ್ಟಜೀವಿಗಳು ಮದ್ಯಪಾನ ಮಾಡುತ್ತಾರೆ. ಅಂತಹವರ ಮೇಲೆ ತೆರಿಗೆ ಹೆಚ್ಚಿಸಿದ್ದು ಸರಿಯಲ್ಲ' ಎಂದು ಕೃಷ್ಣಪ್ಪ ಹೇಳಿದಾಗ, ಕಾಂಗ್ರೆಸ್‌ನ ಕೆ. ಷಡಕ್ಷರಿ ಆಕ್ಷೇಪ ವ್ಯಕ್ತಪಡಿಸಿದರು. 'ನೀವು ಕುಡಿಯುವುದಿಲ್ಲವೇ?' ನೀನೂ ಕುಡಿತೀಯಾ, ನಾನೂ ಕುಡಿತೇನೆ. ಬಹುತೇಕರು ಕುಡಿಯುತ್ತಾರೆ' ಎಂದು ಕೃಷ್ಣಪ್ಪ ಹೇಳಿದರು.

'ನಿಮ್ಮ ಮನೆ ಟಾಯ್ಲೆಟ್ ತೊಳೆಯುವವನು ಕುಡಿದುಕೊಂಡು ಬಂದೇ ಕೆಲಸ ಮಾಡುತ್ತಾನೆ. ಬಡಪಾಯಿ ಅವನ ಕೈಯಲ್ಲೇ ಕ್ಲೀನ್ ಮಾಡಿಸುತ್ತೀರ ಹೊರತು ನೀವು ಕ್ಲೀನ್ ಮಾಡುತ್ತೀರಾ' ಎಂದೂ ಕೃಷ್ಣಪ್ಪ ಪ್ರಶ್ನಿಸಿದರು.

ಭೂ ಪರಿವರ್ತನೆ ಸರಳೀಕರಣಕ್ಕೆ ಮಸೂದೆ

ಬೆಂಗಳೂರು: ಕೃಷಿ ಜಮೀನನ್ನು ಸ್ವಯಂ-ಘೋಷಣೆಯೊಂದಿಗೆ ಭೂ ಪರಿವರ್ತನೆಗೆ ಅವಕಾಶ ಕಲ್ಪಿಸುವ ಭೂ ಕಂದಾಯ ತಿದ್ದುಪಡಿ ಮಸೂದೆ–2023 ಸೇರಿದಂತೆ ಐದು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಕೃಷಿ ಜಮೀನುಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಸ್ವಯಂಘೋಷಣೆಯ ಪ್ರಮಾಣಪತ್ರದೊಂದಿಗೆ ಭೂ ಪರಿವರ್ತನೆಗೆ ಈ ತಿದ್ದುಪಡಿ ಅವಕಾಶ ಕಲ್ಪಿಸಲಿದೆ. ಜಮೀನು ಮಾಲೀಕರು ಸ್ವಯಂ ಘೋಷಣೆಯ ಪ್ರಮಾಣಪತ್ರ ಸಲ್ಲಿಸಿದ ದಿನದಿಂದ 30 ದಿನಗಳೊಳಗೆ ಜಿಲ್ಲಾಧಿಕಾರಿ ತೀರ್ಮಾನ ಪ್ರಕಟಿಸದಿದ್ದರೆ ಅರ್ಜಿಗೆ ಅನುಮೋದನೆ ನೀಡಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಎಂದು ಈ ತಿದ್ದುಪಡಿ ಹೇಳುತ್ತದೆ. ಸುಳ್ಳು ದಸ್ತಾವೇಜುಗಳ ನೋಂದಣಿಯನ್ನು ರದ್ದುಪಡಿಸಲು ಜಿಲ್ಲಾ ನೋಂದಣಾಧಿಕಾರಿಗೆ ಅಧಿಕಾರ ನೀಡುವ ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ–2023, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನೌಕರರ ಸ್ಥಳ ನಿರೀಕ್ಷೆಗೆ ಸೇವಾ ಷರತ್ತುಗಳನ್ನು ವಿಧಿಸುವ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2023 ಮಂಡಿಸಲಾಯಿತು.

ವಾರ್ಷಿಕ ₹50 ಸಾವಿರಕ್ಕಿಂತ ಕಡಿಮೆ ಆದಾಯದ ಬಡ ಕುಟುಂಬಗಳು ದಾಖಲಿಸಿದ ಅಥವಾ ಅವರ ವಿರುದ್ಧದ ಪ್ರಕರಣಗಳನ್ನು ದಿನದ ವಿಚಾರಣೆಯ ಪಟ್ಟಿಯಲ್ಲಿ ಆದ್ಯತೆ ಮೇಲೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆ ಮಸೂದೆ–2023 ಹಾಗೂ ರಾಜ್ಯ ಸರ್ಕಾರದ ವ್ಯಾಜ್ಯಗಳ ನಿರ್ವಹಣೆಯಲ್ಲಿ ಹೊಣೆಗಾರಿಕೆ ನಿಗದಿಪಡಿಸುವ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಮಸೂದೆಯನ್ನೂ ಮಂಡಿಸಲಾಯಿತು.

ಶರಾವತಿ ಸಂತ್ರಸ್ತರ ಪುನರ್ವಸತಿ ಸಭೆ: ಜಂಟಿ ಸರ್ವೆವರೆಗೂ ಇಂಡೀಕರಣಕ್ಕ ತಡೆ

ಸಣ್ಣ ಹಿಡುವಳಿದಾರರಿಗೆ ಸರ್ಕಾರದ ಅಭಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿರುವ ಸಣ್ಣ ಹಿಡುವಳಿದಾರರು, ನಿವಾಸಿಗಳನ್ನು ಒಕ್ಕಲೆಬ್ಬಿಸಲು ಅವಕಾಶ ನೀಡುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಸೌಧದ ಸಭಾಂಗಣದಲ್ಲಿ ಮಂಗಳವಾರ ಶರಾವತಿ ಮುಳುಗಡೆ ಸಂತ್ರಸ್ತರ ಪುನರ್ವಸತಿ ಕುರಿತು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು.

ಅರಣ್ಯ ಪ್ರದೇಶದಲ್ಲಿ ಮೂರು ಎಕರೆ ಭೂಮಿ ಸಾಗುವಳಿ ಮಾಡಿದವರಿಗೆ ಯಾವುದೇ ಸಮಸ್ಯೆ ಇಲ್ಲ. ಅವರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಕಾನೂನು ತೊಡಕುಗಳನ್ನು ನಿವಾರಿಸಲು ಪರಿಣತರ ಸಮಿತಿ ರಚಿಸಲಾಗುವುದು ಎಂದರು.

ಜಂಟಿ ಸರ್ವೆ ಆಗದೇ ಅರಣ್ಯ ಹಾಗೂ ಕಂದಾಯ ಭೂಮಿಯ ನಿಖರ ವ್ಯಾಪ್ತಿ ನಿಗದಿಯಾಗುವುದಿಲ್ಲ. ಜಂಟಿ ಸರ್ವೆ ಕಾರ್ಯವನ್ನು ಶೀಘ್ರ ಕೈಗೊಳ್ಳಲಾಗುವುದು. ಅಲ್ಲಿಯವರೆಗೂ ಯಾವ ಭೂಮಿಯನ್ನೂ ಇಂಡೀಕರಣ ಮಾಡದಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಹಲವು ನದಿಗಳ ಮೂಲ, ನೂರಾರು ಅಪರೂಪದ ಪ್ರಭೇದಗಳ ನೆಲೆಯಾಗಿರುವ ಪಶ್ಚಿಮ ಘಟ್ಟದ ಸಂರಕ್ಷಣೆ, ಅರಣ್ಯ, ಅಮೂಲ್ಯ ಸಸ್ಯ ಪ್ರಭೇದ, ಪ್ರಾಣಿ ಸಂಕುಲ, ಜೀವ ವೈವಿಧ್ಯ ಹಾಗೂ ಜನರ ಬದುಕು ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವುದೇ ಸುಸ್ಥಿರ ಅಭಿವೃದ್ಧಿ. ಅದಕ್ಕೆ ಬದ್ಧವಾಗಿ ಕೆಲಸ ಮಾಡಲಾಗುವುದು ಎಂದರು.



ವಿಧಾನಸೌಧದಲ್ಲಿ ಮಂಗಳವಾರ ನಡೆದ ಶರಾವತಿ ಮುಳುಗಡೆ ಸಂತ್ರಸ್ತ ಪುನರ್ವಸತಿ ಕುರಿತ ಸಭೆಯಲ್ಲಿ (ಎಡದಿಂದ) ಸಾಗರ ಶಾಸಕ ಬೇಳೂರು ಗೋಪಾಲ ಕೃಷ್ಣ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ಶಿವಮೊಗ್ಗ ಶಾಸಕ ಎಸ್.ಎನ್. ಚನ್ನಬಸಪ್ಪ ಇದ್ದರು –ಪ್ರಜಾವಾಣಿ ಚಿತ್ರ

> **ಅರಣ್ಯದ ವಿಷಯಗಳಲ್ಲಿ ಸಂಪುಟಸಭೆ ನಿರ್ಧಾರ ತೆಗೆದುಕೊಂಡರೂ, ನ್ಯಾಯಾಲಯ ಮಧ್ಯಪ್ರವೇಶಿಸುತ್ತದೆ. ಕಾನೂನು ತೊಡಕು ನಿವಾರಿಸಿಕೊಂಡು ಮುಳುಗಡೆ ಸಂತ್ರಸ್ತರಿಗೆ ನೆರವಾಗುವೆವು.**
> **ಎ.ಎಸ್. ಪೊನ್ನಣ್ಣ**, ಮುಖ್ಯಮಂತ್ರಿ ಕಾನೂನು ಸಲಹೆಗಾರ

ಸಚಿವ ಮಧು ಬಂಗಾರಪ್ಪ ಮಾತನಾಡಿ, ರಾಜ್ಯಕ್ಕೆ ಬೆಳಕುಕೊಟ್ಟ ಶರಾವತಿ ಮುಳುಗಡೆ ಸಂತ್ರಸ್ತರ ಬದುಕು ಅತಂತ್ರವಾಗಿದೆ. ಮುಳುಗಡೆ ಸಂತ್ರಸ್ತರ ಪುನರ್ವಸತಿಗಾಗಿ 1958-68ರ ಅವಧಿಯಲ್ಲಿ 27 ಅಧಿಸೂಚನೆಗಳ ಮೂಲಕ 9,127 ಎಕರೆ ಅರಣ್ಯ ಭೂಮಿಯನ್ನು ನೀಡಲಾಗಿತ್ತು. ಡಿ ರಿಸರ್ವೇಷನ್ ಮಾಡಿದ ಸರ್ಕಾರದ ಆದೇಶವನ್ನೇ ಹೈಕೋರ್ಟ್ ವಜಾಗೊಳಿಸಿದೆ. ಇದರಿಂದ ಸಂತ್ರಸ್ತರು ಮತ್ತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪೂರ್ವಾನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯೂ ಸ್ವೀಕೃತವಾಗಿಲ್ಲ. ತಕ್ಷಣ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು. ಸಂಪುಟದಲ್ಲಿ ಒಪ್ಪಿಗೆ ಪಡೆದು ಮರು ಅಧಿಸೂಚನೆ ಹೊರಡಿಸಬೇಕು ಎಂದು ಸಲಹೆ ನೀಡಿದರು.

ಸಚಿವರಾದ ಕೃಷ್ಣ ಬೈರೇಗೌಡ, ಬಿ. ನಾಗೇಂದ್ರ, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಶಾಸಕರಾದ ಬೇಳೂರು ಗೋಪಾಲಕೃಷ್ಣ, ಭೀಮಣ್ಣ ನಾಯಕ, ಶಾರದಾ ಪೂರ್ಯಾನಾಯ್ಕ, ಎಸ್.ಎನ್. ಚನ್ನಬಸಪ್ಪ, ಶಿವಮೊಗ್ಗ ಜಿಲ್ಲಾಧಿಕಾರಿ ಸೆಲ್ವಮಣಿ, ಪಾಲಿಕೆ ಸದಸ್ಯ ಬಿ.ಎ.ರಮೇಶ್ ಹೆಗ್ಡೆ ಉಪಸ್ಥಿತರಿದ್ದರು.

'ತಲೆಮಾರು ನಿಗದಿ ಸಡಿಲಿಕೆಗೆ ಪ್ರಸ್ತಾವ'

ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಭೂ ಮಂಜೂರಾತಿ ಕಾಯ್ದೆ ಅನ್ವಯ ಶಿವಮೊಗ್ಗ ವೃತ್ತ ವ್ಯಾಪ್ತಿಯಲ್ಲಿ 1.03 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. ತಿರಸ್ಕೃತವಾಗಿದ್ದ 90 ಸಾವಿರ ಅರ್ಜಿಗಳನ್ನು ಸರ್ಕಾರದ ಸುತ್ತೋಲೆಯ ನಂತರ ಪುನರ್ ಪರಿಶೀಲನೆ ಮಾಡಲಾಗಿದೆ. ಸರ್ಕಾರದ ಮುಂದಿನ ಸೂಚನೆವರೆಗೂ ತಿರಸ್ಕೃತವಾದ ಅರ್ಜಿದಾರರ ಒತ್ತುವರಿ ಪ್ರದೇಶ ತೆರವು ಮಾಡಬಾರದು. ಅಧಿಕಾರಿಗಳು ಮಾನವೀಯತೆಯಿಂದ ನಡೆದುಕೊಳ್ಳಬೇಕು ಎಂದು ಸಚಿವ ಮಧು ಬಂಗಾರಪ್ಪ ಸೂಚಿಸಿದರು.

ಭೂಮಿ ಮಂಜೂರಾತಿಗೆ ತೊಡಕಾಗಿರುವ ಮೂರು ತಲೆಮಾರುಗಳ ದಾಖಲೆ ನೀಡುವ ಅಂಶಕ್ಕೆ ತಿದ್ದುಪಡಿ ತರಬೇಕು. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು ಎಂದರು.

'ಸಿಎಂ, ಡಿಸಿಎಂ ವಾಗ್ದಾನಕ್ಕೆ ಬದ್ಧ'

ಕಳೆದ ಡಿಸೆಂಬರ್‌ನಲ್ಲಿ ಆಯನೂರಿನಿಂದ ಶಿವಮೊಗ್ಗದವರೆಗೆ ಹಮ್ಮಿಕೊಂಡಿದ್ದ 'ಮಲೆನಾಡು ಜನಾಕ್ರೋಶ' ಪಾದಯಾತ್ರೆ ಕಾರ್ಯಕ್ರಮದಲ್ಲಿ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾಗವಹಿಸಿದ್ದರು. ಅಂದು ಜನರಿಗೆ ನೀಡಿದ್ದ ವಾಗ್ದಾನದಂತೆ ಮಲೆನಾಡಿನ ಜನರ ಸಮಸ್ಯೆಗಳಿಗೆ ಸರ್ಕಾರ ಸ್ಪಂದನೆ ನೀಡುತ್ತಿದೆ ಎಂದು ಮಧು ಬಂಗಾರಪ್ಪ ಅವರು ಹೇಳಿದರು.

ಸಾಲಕ್ಕೆ ತೊಡಕಾದ 'ಹಂಗಾಮಿ' ಪದ

ಮಲೆನಾಡು ಭಾಗದ ಬಹುತೇಕ ಜನರ ಕಂದಾಯ ದಾಖಲೆಗಳಲ್ಲಿ ಹಂಗಾಮಿ ಎಂದು ನಮೂದಿಸಿರುವ ಕಾರಣ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯಲು ತೊಡಕಾಗಿದೆ. ಅದನ್ನು ತೆಗೆದುಹಾಕಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಬೇಕು. ಮಂಗಗಳ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಮಂಗಗಳ ಉಪಟಳ ನಿಯಂತ್ರಿಸುವ ಶಬ್ದರಹಿತ ಸಾಧನ ಬಳಕೆಗೆ ರೈತರಿಗೆ ಅವಕಾಶ ನೀಡಬೇಕು ಎಂದು ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಎ.ರಮೇಶ್ ಹೆಗ್ಡೆ ಅವರು ಕೋರಿದರು.

ರಾಜ್ಯದಲ್ಲಿ ಐಎಎಸ್ ಜೀತಪದ್ಧತಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿರೋಧ ಪಕ್ಷಗಳ ಮೈತ್ರಿಕೂಟದ ಸಭೆಗೆ ಬಂದ ರಾಜಕೀಯ ನಾಯಕರ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿ ರಾಜ್ಯ ಸರ್ಕಾರ ಐಎಎಸ್ ಜೀತಪದ್ಧತಿಯನ್ನು ಜಾರಿಗೆ ತಂದಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ರಾಜಕೀಯ ನಾಯಕರ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿರುವ ಪಟ್ಟಿಯನ್ನು ಲಗತ್ತಿಸಿ ಸರಣಿ ಟ್ವೀಟ್ ಮಾಡಿರುವ ಅವರು, 'ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಐಎಎಸ್ ಜೀತ ಪದ್ಧತಿಯನ್ನು ಜಾರಿಗೆ ತಂದು ಕರ್ನಾಟಕದ ಹೆಮ್ಮೆ, ಪರಂಪರೆಗೆ ಘಟಶ್ರಾದ್ಧ ಮಾಡಿದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಹೊರರಾಜ್ಯದ ರಾಜಕಾರಣಿಗಳ ಸೇವೆಗೆ ರಾಜ್ಯದ ಐಎಎಸ್ ಅಧಿಕಾರಿಗಳನ್ನು ಕಳಿಸಿದ ಸರ್ಕಾರದ ನಡೆ ತಪ್ಪು. ಇದು ರಾಜ್ಯ ಸರ್ಕಾರದ ಕಾರ್ಯಕ್ರಮ ಅಲ್ಲ, ಹೊಸ ಸರ್ಕಾರದ ಪ್ರಮಾಣ ಸ್ವೀಕಾರವೂ ಅಲ್ಲ. ಕೇವಲ ರಾಜಕೀಯ ಸಭೆಯಷ್ಟೆ. ರಾಜಕೀಯ ನಾಯಕರಿಗೆ ಆತಿಥ್ಯ ನೀಡಲು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿರುವುದು ಕನ್ನಡಿಗರಿಗೆ ಮಾಡಿದ ಅವಮಾನ ಎಂದು ಹೇಳಿದ್ದಾರೆ.

> **ಎನ್‌ಡಿಎ ಮೈತ್ರಿಕೂಟದ ಆಹ್ವಾನಕ್ಕೆ ಕಾಯುತ್ತಿರುವುದಾಗಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಸುದ್ದಿಯಲ್ಲಿರಲು ಅವರಿಗೆ ವಿಷಯ ಬೇಕು, ಅದಕ್ಕೆ ಟೀಕಿಸುತ್ತಾರೆ**
> **ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಈ ಪ್ರಕರಣದಲ್ಲಿ ಐಎಎಸ್ ಸೇವಾ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಇಂತಹ ಆದೇಶ ಹೊರಡಿಸಿದ ಮುಖ್ಯ ಕಾರ್ಯದರ್ಶಿಯವರು ರಾಜ್ಯದ ಜನತೆಗೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದ್ದಾರೆ.

'ಸ್ವಾಗತಕ್ಕಷ್ಟೇ ನಿಯೋಜನೆ'

'ನಗರಕ್ಕೆ ಬಂದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರದ ಮಾಜಿ ಸಚಿವರನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಿದ್ದರಿಂದ ಶಿಷ್ಟಾಚಾರದ ಪ್ರಕಾರ ಆ ಎಲ್ಲ ಅತಿಥಿಗಳ ಸ್ವಾಗತಕ್ಕೆ ಮಾತ್ರ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿರೋಧಪಕ್ಷಗಳ ಮೈತ್ರಿಕೂಟ ಕಾರ್ಯಕ್ರಮಕ್ಕೆ ಐಎಎಸ್ ಅಧಿಕಾರಿಗಳನ್ನು ಬಳಸಿಕೊಂಡಿದ್ದಾರೆ ಎಂದು ಜೆಡಿಎಸ್ ಮತ್ತು ಬಿಜೆಪಿ ಟೀಕಿಸಿದ್ದವು.

'ಇತರ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರದ ಮಾಜಿ ಸಚಿವರು ರಾಜ್ಯದ ಅತಿಥಿಗಳಾಗಿ ಬಂದಾಗ ಅಧಿಕಾರಿಗಳನ್ನು ನಿಯೋಜಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಯಾವುದೇ ಶಿಷ್ಟಾಚಾರ ಉಲ್ಲಂಘನೆಯಾಗಿಲ್ಲ. ಶಿಷ್ಟಾಚಾರದ ಪ್ರಕಾರ ಗಣ್ಯರ ಸ್ವಾಗತಕ್ಕಷ್ಟೇ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತೆ ಹೊರತು ರಾಜಕೀಯ ಕಾರ್ಯಕ್ರಮಕ್ಕೆ ಬಳಸಿಕೊಂಡಿರಲಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.



ವಿಠಲ–ರುಕ್ಮಿಣಿ ದರ್ಶನ

ಬೆಳಗಾವಿ ಜಿಲ್ಲೆಯ ಹಿಡಕಲ್ ಜಲಾಶಯದ ಹಿನ್ನೀರಿನ ಪ್ರಮಾಣ ಕಡಿಮೆಯಾಗಿದ್ದರಿಂದ ಯಮಕನಮರಡಿ ಸಮೀಪದ ವಿಠ್ಠಲ–ರುಕ್ಮಿಣಿ ದೇವಸ್ಥಾನ ಸಂಪೂರ್ಣವಾಗಿ ಗೋಚರಿಸುತ್ತಿದೆ. ಪ್ರತಿ ವರ್ಷ ಜಲಾಶಯದ ನೀರಲ್ಲಿ ಮುಳುಗುತ್ತಿದ್ದ ಈ ದೇವಸ್ಥಾನದ ದರ್ಶನಕ್ಕೆ ಈಗ ಭಕ್ತರಿಗೆ ಅವಕಾಶ ಸಿಕ್ಕಿದೆ –ಪ್ರಜಾವಾಣಿ ಚಿತ್ರ

ಪ್ರವರ್ಗ–1ಕ್ಕೆ ಸವಿತಾ ಸಮಾಜ: ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸವಿತಾ ಸಮಾಜವನ್ನು 'ಪ್ರವರ್ಗ–1'ಕ್ಕೆ ಸೇರ್ಪಡೆ ಮಾಡುವಂತೆ ಕೋರಿಕೆ ಬಂದಿದ್ದು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಭರವಸೆ ನೀಡಿದರು.

ನಗರದಲ್ಲಿ ಮಂಗಳವಾರ ನಡೆದ ಕರ್ನಾಟಕ ಸವಿತಾ ಕ್ಷೌರಿಕರ ಹಿತರಕ್ಷಣಾ ವೇದಿಕೆಯ 15ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸವಿತಾ ಸಮಾಜಕ್ಕೆ ಎಲ್ಲ ರೀತಿಯ ನೆರವು ನೀಡಲು ರಾಜ್ಯ ಸರ್ಕಾರವು ಬದ್ಧವಿದೆ. ಸವಿತಾ ಸಮಾಜದವರನ್ನು ಹೀಗಳೆಯುವಂತೆ ಜಾತಿನಿಂದನಾ ಪದವಾಗಿ ಕೆಲವರು ಬಳಸುತ್ತಿದ್ದಾರೆ. ಅಂಥವರಿಗೆ ಶಿಕ್ಷೆ ನೀಡಬೇಕೆಂದು ಸಮಾಜವು ಒತ್ತಾಯಿಸಿದೆ. ಸಮಾಜದ ಆತ್ಮಗೌರವ ಹೆಚ್ಚಿಸುವ ಉದ್ದೇಶದಿಂದ ನಿಂದನೆ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಚಿಂತನೆ ನಡೆಸಲಾಗಿದೆ' ಎಂದು ಹೇಳಿದರು.



ವಾರ್ಷಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಸಮಾಜದ ಮುಖಂಡ ಎಸ್. ವಿಶ್ವನಾಥ್ (ಸನ್ಮಾನ), ಎಂ.ಕೃಷ್ಣಪ್ಪ (ಕ್ಷೌರಿಕ ರತ್ನ ಪ್ರಶಸ್ತಿ), ಆರ್.ವೇಣುಗೋಪಾಲ್ (ಸನ್ಮಾನ), ಎನ್.ವಿ. ನರಸಿಂಹಯ್ಯ (ಸವಿತಾ ಭೀಷ್ಮ ಪ್ರಶಸ್ತಿ) ಅವರನ್ನು ಗೌರವಿಸಲಾಯಿತು. (ನಿಂತವರು ಎಡದಿಂದ) ಸಮಾಜ ಸೇವಕಿ ಲಕ್ಷ್ಮಿ, ವೇದಿಕೆ ಉಪಾಧ್ಯಕ್ಷ ಎಂ.ಮಂಜುನಾಥ್ ಬಾಣಸವಾಡಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್, ಸಹಕಾರ ಸಚಿವ ಕೆ.ಎನ್.ರಾಜಣ್ಣ, ಕೊಂಚೂರಿನ ಸವಿತಾ ಪೀಠ ಮಹಾಸಂಸ್ಥಾನದ ಸವಿತಾನಂದನಾಥ ಸ್ವಾಮೀಜಿ, ಗೃಹ ಸಚಿವ ಜಿ.ಪರಮೇಶ್ವರ, ಮುಖಂಡ ಮಾವಳ್ಳಿ ಕೃಷ್ಣ, ಕಲಾವಿದ ಮತ್ತುರಾಜು ಇದ್ದರು – ಪ್ರಜಾವಾಣಿ ಚಿತ್ರ

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, 'ಸವಿತಾ ಸಮಾಜವು ಒಗ್ಗಟ್ಟು ತೋರಿದರೆ ಎಲ್ಲ ಸೌಲಭ್ಯಗಳೂ ದೊರೆಯಲಿವೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ರಾಜಕೀಯ ಸ್ಥಾನಮಾನಗಳನ್ನೂ ಪಡೆದುಕೊಳ್ಳಬೇಕು. ರಾಜಕೀಯ ಸ್ಥಾನಮಾನ ಇಲ್ಲದಿದ್ದರೆ ಹೆಚ್ಚಿನ ಸವಲತ್ತು ಪಡೆದುಕೊಳ್ಳಲು ಸಾಧ್ಯ ಆಗುವುದಿಲ್ಲ' ಎಂದು ನುಡಿದರು.

'ಸಮಾಜವು ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದಿದೆ. ಸಮಾಜವು ಅಭಿವೃದ್ಧಿ ಹೊಂದಲು ಪ್ರತ್ಯೇಕ ಮೀಸಲಾತಿ ಅಥವಾ 'ಪ್ರವರ್ಗ–1'ಕ್ಕೆ ಸೇರ್ಪಡೆ ಮಾಡಬೇಕು' ಎಂದು ಕೊಂಚೂರು ಕ್ಷೇತ್ರದ ಸವಿತಾಪೀಠ ಮಹಾಸಂಸ್ಥಾನದ ಸವಿತಾನಂದನಾಥ ಸ್ವಾಮೀಜಿ ಕೋರಿದರು.

ಬೇಡಿಕೆ ಏನೇನು?

- ಹೊರ ರಾಜ್ಯದಿಂದ ಬಂದವರು ಪರವಾನಗಿ ಪಡೆಯದೇ ಕರ್ನಾಟಕದಲ್ಲಿ ಸೆಲೂನ್, ಸ್ಪಾ ತೆರೆಯುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಸವಿತಾ ಸಮಾಜದವರ ಮೇಲೆ ಜಾತಿ ನಿಂದನಾ ಪದ ಬಳಸುತ್ತಿದ್ದು, ಇದು ನೋವು ತರಿಸಿದೆ. ಜಾತಿ ನಿಂದನೆ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಬೇಕು.
- ಕುಲವೃತ್ತಿ ಉಳಿಸಲು ಆಧುನಿಕ ತರಬೇತಿ ಅಗತ್ಯವಿದೆ. ಇದಕ್ಕೆ ಜಾಗದ ಕೊರತೆಯಿದ್ದು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಜಾಗ ನೀಡಬೇಕು.

81 ನಾಡಬಾಂಬ್ ಪತ್ತೆ: ಬಂಧನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮೊಳಕಾಲ್ಮುರು ತಾಲ್ಲೂಕಿನ ದೇವಸಮುದ್ರ ಗ್ರಾಮದಲ್ಲಿ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಸಂಗ್ರಹಿಸಿಟ್ಟುಕೊಂಡಿದ್ದ 81 ನಾಡಬಾಂಬ್‌ಗಳನ್ನು ವಶಕ್ಕೆ ಪಡೆದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ದೇವಸಮುದ್ರ ಗ್ರಾಮದ ನಿವಾಸಿ ಸುಮನ್ (23) ಹಾಗೂ ಆಂಧ್ರಪ್ರದೇಶದ ಅನಂತಪುರದ ಶಿಕಾರಿ ಗಂಗಣ್ಣ (50) ಬಂಧಿತರು. ಪತ್ತೆಯಾದ ನಾಡಬಾಂಬ್‌ಗಳನ್ನು ಮಂಗಳವಾರ ನಿಷ್ಕ್ರಿಯಗೊಳಿಸಲಾಗಿದೆ.

ಸುಮನ್ ಮನೆಯ ಮೇಲೆ ಪೊಲೀಸರು ಈಚೆಗೆ ದಾಳಿ ನಡೆಸಿದ್ದರು. ಆರೋಪಿ ಮನೆಯಲ್ಲಿ ಅಪಾರ ಪ್ರಮಾಣದ ನಾಡಬಾಂಬ್ ಪತ್ತೆಯಾಗಿದ್ದವು. ದಾಳಿಯ ಸುಳಿವು ಅರಿತು ತಪ್ಪಿಸಿಕೊಂಡಿದ್ದ ಆತನನ್ನು ಬಳಿಕ ಪೊಲೀಸರು ಬಂಧಿಸಿದ್ದರು. ಆತ ನೀಡಿದ ಸುಳಿವಿನ ಆಧಾರದ ಮೇರೆಗೆ ಶಿಕಾರಿ ಗಂಗಣ್ಣನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಹಂದಿ ಬೇಟೆಗಾಗಿ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ನಾಡಬಾಂಬ್ ಸಾಗಣೆ ಮಾಡುತ್ತಿದ್ದ ಸಂಗತಿ ಗೊತ್ತಾಗಿದೆ.

ಕರಾವಳಿ, ಉತ್ತರ ಒಳನಾಡಿನಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಬುಧವಾರದಿಂದ ಮೂರು ದಿನಗಳ ಕಾಲ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜುಲೈ 19ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗೆ 'ಆರೆಂಜ್ ಅಲರ್ಟ್' ಹಾಗೂ ಅಂದೇ ಬೀದರ್, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಜುಲೈ 20ರಂದು ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಹಾಗೂ 21ರಂದು ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್‌ರಾಕ್‌ನಲ್ಲಿ 12 ಸೆಂ.ಮೀ ಮಳೆಯಾಗಿದೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಜನ್ಮದಿನ, ಭೋವಿ ಗುರುಪೀಠದಲ್ಲಿ ಸಂಭ್ರಮ


ರಜತೋತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಸಮಾಜ ಸೇವಾ ದೀಕ್ಷೆಯ ರಜತ ಮಹೋತ್ಸವ ಹಾಗೂ 14ನೇ ಪಟ್ಟಾಧಿಕಾರ ಸಂಭ್ರಮಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತ ಸಮೂಹ ಸ್ವಾಮೀಜಿ ಆಶೀರ್ವಾದ ಪಡೆಯಿತು.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನದ ಅಂಗವಾಗಿ ಮಠದ ಆವರಣದಲ್ಲಿ ರಾಷ್ಟ್ರೀಯ ಭೋವಿ ಜನೋತ್ಸವವನ್ನು ಮಂಗಳವಾರ ಸಾಂಕೇತಿಕವಾಗಿ ಆಚರಿಸಲಾಯಿತು.

ಇಮ್ಮಡಿಶ್ರೀ ರಜತಮಹೋತ್ಸವಕ್ಕೆ ನಾಡಿನ ಹಲವು ಮಠಾಧೀಶರು ಆಗಮಿಸಿದ್ದರು. ಗುರುಕುಲದಲ್ಲಿ ಒಟ್ಟಿಗೆ ಶಿಕ್ಷಣ ಪಡೆದ ಮಠಾಧೀಶರೊಂದಿಗೆ ಸ್ವಾಮೀಜಿ ನಸುಕಿನಲ್ಲಿ ಪೂಜಾ ಕೈಂಕರ್ಯ ನೆರವೇರಿಸಿದರು. ಬಳಿಕ ಭಕ್ತರಿಗೆ ದರ್ಶನ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಶಾಸಕರಾದ ಮಾನಪ್ಪ ವಜ್ಜಲ್, ಎಂ.ಚಂದ್ರಪ್ಪ ಇದ್ದರು.



ಚಿತ್ರದುರ್ಗದ ಹೊರವಲಯದ ಭೋವಿ ಗುರುಪೀಠದ ಆವರಣದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಭೋವಿ ಜನೋತ್ಸವದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು

ಸಮಾಜ ಸೇವಾ ದೀಕ್ಷೆ ಪಡೆದು 25ನೇ ವರ್ಷಕ್ಕೆ ಪದಾರ್ಪಣೆ ಮಾಡಿದ ಅಂಗವಾಗಿ 300ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ₹ 25 ಲಕ್ಷ ವಿದ್ಯಾರ್ಥಿ ವೇತನ ನೀಡಲಾಯಿತು. ಎಸ್ಸೆಸ್ಸೆಲ್ಸಿಯಿಂದ ಸ್ನಾತಕೋತ್ತರ ಪದವಿವರೆಗೆ ವ್ಯಾಸಂಗ ಮಾಡಿ ಸಾಧನೆ ತೋರಿದ ಸಮುದಾಯದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಧು–ವರರ ಸಮಾವೇಶದಲ್ಲಿ 250ಕ್ಕೂ ಹೆಚ್ಚು ಜನರು ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡರು.

'ಸಮಸಮಾಜ, ಜಾತ್ಯತೀತ ರಾಷ್ಟ್ರ ನಿರ್ಮಾಣಕ್ಕೆ ಶಿಕ್ಷಣದ ಅಗತ್ಯವಿದೆ. ವಚನ ಧರ್ಮದಲ್ಲಿ ವೈಚಾರಿಕತೆ ಹಾಗೂ ವೈಜ್ಞಾನಿಕತೆ ಎರಡೂ ಇವೆ. ಇಂತಹ ವಚನಗಳನ್ನು ಶಾಲಾ ಪಠ್ಯದಲ್ಲಿ ಅಳವಡಿಸಬೇಕಿದೆ. ಪ್ರತಿ ಮನೆಯಲ್ಲಿ ವಚನ ಸಾಹಿತ್ಯ ಇಟ್ಟುಕೊಂಡು ಅಧ್ಯಯನ ಮಾಡಿದರೆ ಮಕ್ಕಳಲ್ಲಿ ಪ್ರಬುದ್ಧತೆ ಬೆಳೆಯಲಿದೆ' ಎಂದು ಪ್ರತಿಭಾ ಪುರಸ್ಕಾರ ನೆರವೇರಿಸಿದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಶಿಕ್ಷಣವು ವ್ಯಕ್ತಿತ್ವ ವಿಕಸನದ ಹಾದಿಯೂ ಹೌದು. ಸಾಕ್ಷರತೆ ಹೊಂದಿದವರು ಸಮಾಜದ ಏಳಿಗೆಗೆ ಶ್ರಮಿಸಬೇಕಿದೆ. ಪದವೀಧರರು ಉದ್ಯೋಗ ಸೃಷ್ಟಿಸುವ ಮೂಲಕ ಸಮುದಾಯದ ಅಬಲರು, ಶಕ್ತಿಹೀನರ ಅಭಿವೃದ್ಧಿಗೆ ಕೈಜೋಡಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಹಾಕಿಕೊಟ್ಟ ದಾರಿಯಲ್ಲಿ ಸಾಗಬೇಕಿದೆ' ಎಂದು ಸಲಹೆ ನೀಡಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	89.80	1,846	399
ಹಾರಂಗಿ	2,859	2,846.44	3,140	50
ಕಬಿನಿ	2284.00	2,270.70	2,629	800
ಹೇಮಾವತಿ	2,922	2,894	1,732	200
ಲಿಂಗನಮಕ್ಕಿ	1,819	1,757.30	12,229	1,549.10
ಸೂಪಾ (ಮೀ)	564	528.52	12,530.36	4,615.54
ಮಾಣಿ	595	574.42	2,948	-
ತುಂಗಭದ್ರಾ	1,633	1,589.90	9,390	262
ಮಲಪ್ರಭಾ	2079.5	2,043.30	657	194
ಘಟಪ್ರಭಾ	2175	2,094.95	8,997	94
ಭದ್ರಾ	186	141.50	835	164
ಆಲಮಟ್ಟಿ (ಮೀ)	519.6	509.360	18,270	561
ನಾರಾಯಣಪುರ (ಮೀ)	492.25	486.78	00	50

* ನೆಲಮಟ್ಟದಿಂದ

ಬುಧವಾರ, ಜುಲೈ 19, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 199 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಚಂದ್ರಯಾನ-3'ರಲ್ಲಿ ಬಳಕೆಯಾಗಿರುವ 'ಎಲ್‌.ವಿ.ಎಂ.3' ರಾಕೆಟ್ ಭಾರತದ ತಾಂತ್ರಿಕ ಸಾಮರ್ಥ್ಯಕ್ಕೆ ಸಂಕೇತ



ಆಳ-ಅಗಲ
ಪ್ರಾದೇಶಿಕ ಪಕ್ಷಗಳಿಗೆ ಮಹತ್ವ ಕೊಟ್ಟ ಮೈತ್ರಿಯುಗ
ಕಕ್ಷೆ ಬದಲಾವಣೆ: ಮೂರನೇ ಪ್ರಕ್ರಿಯೆ ಪೂರ್ಣ 8
ಬ್ರಿಜ್‌ಭೂಷಣ್‌ಗೆ ಮಧ್ಯಂತರ ಜಾಮೀನು 9


ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,795 ▲	19,749 ▲	₹61,280 (ಬೆಂಗಳೂರು) ▲	₹77,300 (ಬೆಂಗಳೂರು) ▲	82.04 ▼

ಬಿಜೆಪಿಯೇತರ 26 ವಿರೋಧ ಪಕ್ಷಗಳ ಮಹಾ ಮೈತ್ರಿಕೂಟ • ಮುಂಬೈಯಲ್ಲಿ ಮುಂದಿನ ಸಭೆ • ಬಿಜೆಪಿ ನೇತೃತ್ವದ ಸಭೆಯಲ್ಲಿ 38 ಪಕ್ಷಗಳ ನಾಯಕರು ಭಾಗಿ

ಎನ್‌ಡಿಎ ಮಣಿಸಲು 'ಇಂಡಿಯಾ' ಅಣಿ


ಬಿಜೆಪಿ ನೇತೃತ್ವದ ಎನ್‌ಡಿಎಗೆ 'ಇಂಡಿಯಾ'ದ ಸವಾಲು ಎದುರಿಸಲು ಸಾಧ್ಯವೇ? ಈ ಯುದ್ಧದಲ್ಲಿ 'ಇಂಡಿಯಾ' ಗೆಲ್ಲಲಿದೆ. ಬಿಜೆಪಿ ಸೋಲಲಿದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ


ದೇಶದ ಹಿತ ಕಾಯಲು ನಾವು ಒಂದಾಗಿದ್ದೇವೆ. ಹೊಸ ಭಾರತದ ನಿರ್ಮಾಣ, ಸುಖ, ಶಾಂತಿ, ಸೌಹಾರ್ದದ ಭಾರತವನ್ನು ಸ್ಥಾಪಿಸುವುದು ನಮ್ಮ ಗುರಿ
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ನಾನು ತಪ್ಪುಗಳನ್ನು ಮಾಡಬಹುದು. ಆದರೆ, ದುರುದ್ದೇಶದಿಂದ ಏನನ್ನೂ ಮಾಡುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಇದ್ದಾಗಲೂ ಸಕಾರಾತ್ಮಕ ರಾಜಕಾರಣ ಮಾಡಿದ್ದೇವೆ
ನರೇಂದ್ರ ಮೋದಿ, ಪ್ರಧಾನಿ


ಭಾರತ ಮತ್ತು ಇಂಡಿಯಾ ಪದಗಳ ನಡುವೆ ನಮ್ಮ ನಾಗರಿಕತೆಯ ಸಂಘರ್ಷವಿದೆ. ಬ್ರಿಟಿಷರು ನಮ್ಮ ದೇಶಕ್ಕೆ ಇಂಡಿಯಾ ಎಂದು ಹೆಸರಿಟ್ಟರು. ಈ ವಸಾಹತುಶಾಹಿ ಹಿಡಿತದಿಂದ ಮುಕ್ತವಾಗಲು ನಾವು ಹೋರಾಡಬೇಕಿದೆ
ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ


ವಿರೋಧ ಪಕ್ಷಗಳ ತಯಾರಿ ಭರ್ಜರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮಣಿಸಲು ತಂತ್ರ ಹೆಣೆಯುತ್ತಿರುವ 26 ವಿರೋಧ ಪಕ್ಷಗಳು ಒಗ್ಗೂಡಿ 'ಭಾರತೀಯ ರಾಷ್ಟ್ರೀಯ ಅಭಿವೃದ್ಧಿಶೀಲ ಎಲ್ಲರನ್ನೂ ಒಳಗೊಳ್ಳುವ ಮೈತ್ರಿಕೂಟ' (ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಯನ್ಸ್– 'ಇಂಡಿಯಾ') ರಚಿಸಿಕೊಂಡಿದ್ದು, ಚುನಾವಣಾ ರಾಜಕೀಯದತ್ತ ಒಂದು ಹೆಜ್ಜೆ ಮುಂದಿಟ್ಟಿವೆ.

ಮೈತ್ರಿಕೂಟದ ಮುಂದಿನ ಸಭೆಯನ್ನು ಶೀಘ್ರದಲ್ಲಿ ಮುಂಬೈಯಲ್ಲಿ ನಡೆಸಿ, 11 ಸದಸ್ಯರ ಸಮನ್ವಯ ಸಮಿತಿ ರಚಿಸಲು ಇಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡ ನಾಯಕರು ತೀರ್ಮಾನಿಸಿದ್ದಾರೆ.

ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ಮತ್ತು ಮಂಗಳವಾರ ನಡೆದ ಸಭೆಯ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೈತ್ರಿಕೂಟದ ಹೆಸರು ಪ್ರಕಟಿಸಿದರು. ಅಧಿಕಾರಕ್ಕಾಗಿ ಅಲ್ಲ. ಸಂವಿಧಾನ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಾಂವಿಧಾನಿಕ ಸಂಸ್ಥೆಗಳ ಉಳಿವು, ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಈ 'ಇಂಡಿಯಾ' ಎಂದೂ ಘೋಷಿಸಿದರು.

'ಮಹಾರಾಷ್ಟ್ರದ ಮುಂಬೈಯಲ್ಲಿ 'ಇಂಡಿಯಾ'ದ ಸಭೆ ಸೇರಿ, ಒಕ್ಕೂಟದ ಸಮನ್ವಯ ಸಮಿತಿ, ಪ್ರಚಾರ ಮತ್ತು ಇತರ ಸಮಿತಿಗಳ ನಿರ್ವಹಣೆಗೆ ಕಾರ್ಯದರ್ಶಿಯನ್ನು ನೇಮಿಸುತ್ತೇವೆ. ದೆಹಲಿಯಲ್ಲಿ ಕಚೇರಿ ಆರಂಭಿಸಲಾಗುವುದು' ಎಂದು ತಿಳಿಸಿದರು.

'ಪಟ್ನಾದಲ್ಲಿ ನಡೆದ ಮೊದಲ ಸಭೆಯಲ್ಲಿ ಬಿಜೆಪಿಯೇತರ 16 ವಿರೋಧ ಪಕ್ಷಗಳ ನಾಯಕರು ಭಾಗವಹಿಸಿದ್ದರು. ಇಲ್ಲಿ ನಮ್ಮ ಸಭೆಯ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಡಿಎ ಸಭೆ ನಡೆಸಿದ್ದು, ಇಷ್ಟು ದಿನ ಮೈತ್ರಿ ಪಕ್ಷಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ. ನಮ್ಮ ಒಗ್ಗಟ್ಟು ನೋಡಿ ಮೋದಿ ಹೆದರಿದ್ದಾರೆ. ಅವರು 30 ಪಕ್ಷಗಳಿಗೆ ಆಹ್ವಾನ ನೀಡಿದ್ದಾರೆ. ಎನ್‌ಡಿಎದಲ್ಲಿ ಅಷ್ಟು ಪಕ್ಷಗಳು ಇವೆಯೇ, ಅವುಗಳಲ್ಲಿ ಎಷ್ಟು ಚುನಾವಣಾ ಆಯೋಗದಲ್ಲಿ ನೋಂದಣಿಯಾಗಿವೆ ಎನ್ನುವುದು ಗೊತ್ತಿಲ್ಲ' ಎಂದು ವ್ಯಂಗ್ಯವಾಡಿದರು.

9ನೇ ಪುಟ ನೋಡಿ



ಸಭೆಯ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು. ರಾಹುಲ್ ಗಾಂಧಿ, ಶರದ್ ಪವಾರ್, ಸೀತಾರಾಮ್ ಯೆಚೂರಿ, ಡಿ. ರಾಜಾ ಇದ್ದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಹೆಸರು ಸೂಚಿಸಿದ್ದು ಮಮತಾ ಬ್ಯಾನರ್ಜಿ

'ಮೈತ್ರಿಕೂಟಕ್ಕೆ ಹೆಸರಿಡುವ ಕುರಿತು ವಿರೋಧ ಪಕ್ಷಗಳ ನಾಯಕರು ಸುದೀರ್ಘವಾಗಿ ಚರ್ಚೆ ನಡೆಸಿದರು. ಒಬ್ಬೊಬ್ಬರು ಒಂದೊಂದು ಹೆಸರು ಮುಂದಿಟ್ಟರು. ಸೀತಾರಾಮ್ ಯೆಚೂರಿ 'ವೀ ಫಾರ್ ಡೆಮಾಕ್ರಸಿ', ವೈಕೋ ಅವರು 'ಇಂಡಿಯನ್ ಪೀಪಲ್ಸ್ ಅಲಯನ್ಸ್' ಹೆಸರು ಸೂಚಿಸಿದರು. ಮಮತಾ ಬ್ಯಾನರ್ಜಿ 'ಇಂಡಿಯಾ' ಹೆಸರು ಸೂಚಿಸಿದರು. ಎಂ.ಕೆ. ಸ್ಟಾಲಿನ್ ಮತ್ತು ರಾಹುಲ್ ಗಾಂಧಿ ಈ ಹೆಸರನ್ನು ಅನುಮೋದಿಸಿದರು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಇಂಡಿಯಾದಲ್ಲಿರುವ 'ಡಿ' ಪದದ ಅರ್ಥ ಏನಿರಬೇಕು? ಎಂಬ ಬಗ್ಗೆಯೂ ಚರ್ಚೆ ನಡೆಯಿತು. 'ಡಿ' ಎಂದರೆ ಡೆಮಾಕ್ರಸಿ ಎಂದು ಮೊದಲು ನಿರ್ಧರಿಸಲಾಗಿತ್ತು. ಚರ್ಚೆಯ ಬಳಿಕ ಡೆಮಾಕ್ರಟಿಕ್ ಬದಲು ಡೆವಲಪ್‌ಮೆಂಟಲ್ ಎಂದು ಅಂತಿಮಗೊಳಿಸಲಾಯಿತು ಎಂದೂ ಗೊತ್ತಾಗಿದೆ.

ಶಕ್ತಿ ಪ್ರದರ್ಶಿಸಿದ ಮೋದಿ ಬಳಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಡಿಎ ಮೈತ್ರಿಕೂಟದ 38 ಪಕ್ಷಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ರಾಜಧಾನಿಯಲ್ಲಿ ಮಂಗಳವಾರ 'ಶಕ್ತಿ ಪ್ರದರ್ಶನ'ದ ಸಭೆ ನಡೆಸಿ ವಿಪಕ್ಷಗಳ 'ಮಹಾ ಮೈತ್ರಿಕೂಟ'ಕ್ಕೆ ಸೆಡ್ಡು ಹೊಡೆದರು.

ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿ ಅಜಿತ್ ಪವಾರ್, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಇ.ಪಳನಿಸ್ವಾಮಿ, ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ, ಮೈತ್ರಿಕೂಟದ ಮುಖಂಡರಾದ ಚಿರಾಗ್ ಪಾಸ್ವಾನ್, ಉಪೇಂದ್ರ ಸಿಂಗ್ ಕುಶ್ವಾಹ್, ಓಂ ಪ್ರಕಾಶ್ ರಾಜ್‌ಭರ್ ಮತ್ತಿತರರು ಸಭೆಯಲ್ಲಿ ಭಾಗಿಯಾದರು. 2024ರಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ ಎಂದು ಮೋದಿ ಹೇಳಿದರು. 'ನಮ್ಮ ಮೈತ್ರಿಕೂಟದಲ್ಲಿ ಯಾವುದೇ ಪಕ್ಷ ದೊಡ್ಡದೂ ಅಲ್ಲ, ಯಾವುದೇ ಪಕ್ಷ ಚಿಕ್ಕದೂ ಅಲ್ಲ. 2014 ಹಾಗೂ 2019ರ ಚುನಾವಣೆಗಳಲ್ಲಿ ಬಿಜೆಪಿ ಬಹುಮತ ಗಳಿಸಿತ್ತು. ಆದರೆ, ಎನ್‌ಡಿಎ ಸರ್ಕಾರ ರಚಿಸಿತ್ತು' ಎಂದು ಹೇಳುವ ಮೂಲಕ ಪ್ರಧಾನಿ ಅವರು ಹೊಸ ಹಾಗೂ ಹಳೆಯ ಮಿತ್ರರಿಗೆ ವಿಶ್ವಾಸ ತುಂಬಿದರು. 'ಎನ್‌ಡಿಎ 2014ರಲ್ಲಿ ಶೇ 38, 2019ರಲ್ಲಿ ಶೇ 45ಕ್ಕಿಂತ ಹೆಚ್ಚು ಮತಗಳನ್ನು ಪಡೆದಿತ್ತು. 2024ರ ಚುನಾವಣೆಯಲ್ಲಿ ಶೇ 50ಕ್ಕಿಂತ ಅಧಿಕ ಮತಗಳನ್ನು ಪಡೆಯಲಿದೆ' ಎಂದು ಅಮಿತ ವಿಶ್ವಾಸ ವ್ಯಕ್ತಪಡಿಸಿದರು.

ಸಭೆಗೆ ಮುನ್ನ ಟ್ವೀಟ್ ಮಾಡಿದ ಪ್ರಧಾನಿ ಅವರು, 'ಎನ್‌ಡಿಎ ಮಿತ್ರ ಪಕ್ಷಗಳು ಒಂದೆಡೆ ಸೇರುತ್ತಿರುವುದು ಅತ್ಯಂತ ಸಂತಸದ ಸಂಗತಿ. ನಮ್ಮ ಪರೀಕ್ಷಿತ ಪರಿಣಾಮಕಾರಿ ಮೈತ್ರಿಯು ರಾಷ್ಟ್ರೀಯ ಪ್ರಗತಿ ಹಾಗೂ ಪ್ರಾದೇಶಿಕ ನಿರೀಕ್ಷೆಗಳನ್ನು ಸಾಕಾರಗೊಳಿಸುವುದನ್ನು ಎದುರು ನೋಡುತ್ತಿದೆ' ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಮೋದಿ ಅವರು ವಿಪಕ್ಷಗಳ ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದರು. 'ಭಾರತವು ಮೈತ್ರಿಕೂಟಗಳ ಸುದೀರ್ಘ ಪರಂಪರೆ ಹೊಂದಿದೆ. ಆದರೆ, ನಕಾರಾತ್ಮಕ ಚಿಂತನೆಯಿಂದ ರೂಪುಗೊಂಡ ಮೈತ್ರಿಕೂಟ ಎಂದಿಗೂ ಯಶಸ್ವಿಯಾಗುವುದಿಲ್ಲ' ಎಂದು ಹೇಳಿದರು.

'ಎನ್‌ಡಿಎ'ಗೆ ಹೊಸ ವ್ಯಾಖ್ಯಾನ ಕೊಟ್ಟ ಅವರು, 'ಎನ್' ಎಂದರೆ ನವ ಭಾರತ, 'ಡಿ' ಎಂದರೆ ಅಭಿವೃದ್ಧಿ ಹೊಂದಿದ ದೇಶ, 'ಎ' ಎಂದರೆ ಜನರು ಹಾಗೂ ಪ್ರದೇಶಗಳ ಆಕಾಂಕ್ಷೆಗಳು ಎಂದು ವರ್ಣಿಸಿದರು. 'ಎನ್‌ಡಿಎ ದೇಶದ ಜನರನ್ನು ಒಗ್ಗೂಡಿಸುತ್ತದೆ. ವಿರೋಧ ಪಕ್ಷಗಳು ಜನರನ್ನು ವಿಭಜಿಸುತ್ತಿವೆ' ಎಂದು ಟೀಕಾಪ್ರಹಾರ ನಡೆಸಿದರು.

ಎನ್‌ಡಿಎ ಸಿದ್ಧಾಂತವು ರಾಷ್ಟ್ರದ ಭದ್ರತೆ, ಪ್ರಗತಿ ಜನರ ಸಬಲೀಕರಣವನ್ನು ಎಲ್ಲಕ್ಕಿಂತ ಮುಂದೆ ಇಡುತ್ತದೆ ಎಂದ ಅವರು, 'ನಮ್ಮ ಮೈತ್ರಿಕೂಟವು ಪ್ರಾದೇಶಿಕ ಆಕಾಂಕ್ಷೆಗಳ ಕಾಮನಬಿಲ್ಲು' ಎಂದೂ ವ್ಯಾಖ್ಯಾನಿಸಿದರು.

ರಾಜಕೀಯವು ಪೈಪೋಟಿ ಹೊಂದಿರಬಹುದು. ಆದರೆ, ಹಗೆತನವಲ್ಲ. ವಿರೋಧ ಪಕ್ಷಗಳು ನಮ್ಮನ್ನು ನಿಂದಿಸುತ್ತವೆ ಹಾಗೂ ಓಡಿಸಲು ಪ್ರಯತ್ನಿಸುತ್ತಿವೆ ಎಂದರು. ಬಹುಕಾಲದಿಂದ ಬಿಜೆಪಿ ವಿರೋಧಿ ಪಾಳಯದಲ್ಲಿದ್ದ ಪ್ರಣವ್ ಮುಖರ್ಜಿ ಅವರಿಗೆ ಭಾರತ ರತ್ನ, ಮುಲಾಯಂ ಸಿಂಗ್ ಯಾದವ್ ಹಾಗೂ ಶರದ್ ಯಾದವ್ ಅವರಿಗೆ ಪದ್ಮ ಪ್ರಶಸ್ತಿಗಳನ್ನು ನಮ್ಮ ಸರ್ಕಾರವು ನೀಡಿದೆ ಎಂದು ಅವರು ನೆನಪಿಸಿದರು.

9ನೇ ಪುಟ ನೋಡಿ


ದೆಹಲಿಯಲ್ಲಿ ಮಂಗಳವಾರ ನಡೆದ ಎನ್‌ಡಿಎ ಸಭೆಯಲ್ಲಿ ಭಾಗವಹಿಸಿದ್ದ ರಾಮದಾಸ್ ಆಠವಳೆ, ಚಿರಾಗ್ ಪಾಸ್ವಾನ್, ಎಡಪ್ಪಾಡಿ ಕೆ. ಪಳನಿಸ್ವಾಮಿ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಚರ್ಚಿಸಿದರು. ಬಿಜೆಪಿಯ ಮುಖಂಡ ರಾಜನಾಥ್ ಸಿಂಗ್ ಅವರೂ ಇದ್ದಾರೆ –ಪಿಟಿಐ ಚಿತ್ರ

ಕೇರಳ ಮಾಜಿ ಸಿ.ಎಂ ಉಮ್ಮನ್ ಚಾಂಡಿ ನಿಧನ

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ ತಿರುವನಂತಪುರ: ಕಾಂಗ್ರೆಸ್ ನಾಯಕ, ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ (79) ಬೆಂಗಳೂರಿನ ಇಂದಿರಾನಗರದಲ್ಲಿರುವ ಚಿನ್ಮಯ ಹೃದಯಾಲಯದಲ್ಲಿ ಮಂಗಳವಾರ ನಿಧನರಾದರು.



ಅವರಿಗೆ ಪತ್ನಿ ಮರಿಯಮ್ಮ, ಪುತ್ರ ಚಾಂಡಿ ಉಮ್ಮನ್, ಪುತ್ರಿಯರಾದ ಮರಿಯಾ ಹಾಗೂ ಅಚ್ಚು ಇದ್ದಾರೆ.

ಗಂಟಲು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಕಳೆದ ಮೂರು ತಿಂಗಳಿನಿಂದ ಮನೆ ಆರೈಕೆಯಲ್ಲಿದ್ದರು.

'ಚಾಂಡಿ ಅವರನ್ನು ಸೋಮವಾರ ಸಂಜೆ ಆಸ್ಪತ್ರೆಗೆ ಕರೆತರಲಾಗಿತ್ತು. ಕ್ಯಾನ್ಸರ್‌ನಿಂದಾಗಿ ಅವರ ಸ್ಥಿತಿ ಅದಾಗಲೇ ಹದಗೆಟ್ಟಿತ್ತು' ಎಂದು ಚಿನ್ಮಯ ಹೃದಯಾಲಯದಲ್ಲಿ ಹೃದ್ರೋಗ ತಜ್ಞರಾಗಿರುವ ಡಾ.ವಶಿಷ್ಠ ದಾಸ್ ಹೇಳಿದ್ದಾರೆ.

3A ಪುಟ ನೋಡಿ

ಗ್ರಾಹಕರ ಕೋರ್ಟ್ ಜಡ್ಜ್‌ಗೆ ಹೈಕೋರ್ಟ್ ಮಂಗಳಾರತಿ

ಮನೆ ಬಾಡಿಗೆ ಬಾಕಿ: ₹15 ಲಕ್ಷ ಪಾವತಿಗೆ ಕಿರಿಕಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಡಾಲರ್ಸ್ ಕಾಲೊನಿಯ ಪ್ರತಿಷ್ಠಿತ ಪೆಬೆಲ್ ಬೇ ಅಪಾರ್ಟ್‌ಮೆಂಟ್‌ನಲ್ಲಿ ಐಷಾರಾಮಿ ಫ್ಲ್ಯಾಟ್‌ನ ಬಾಡಿಗೆ ಪಾವತಿಸದೆ, ಮನೆಯನ್ನೂ ಖಾಲಿ ಮಾಡದೆ ಮಾಲೀಕರ ವಿರುದ್ಧ ಪರಿಶಿಷ್ಟ ಜಾತಿ–ಪಂಗಡಗಳ (ಎಸ್‌ಸಿ, ಎಸ್‌ಟಿ) ದೌರ್ಜನ್ಯ ತಡೆ ಕಾಯ್ದೆ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದ ಜಿಲ್ಲಾ ಗ್ರಾಹಕ ನ್ಯಾಯಾಲಯದ ಸದಸ್ಯೆಗೆ (ಜಡ್ಜ್) ಹೈಕೋರ್ಟ್ ಮಂಗಳಾರತಿ ಮಾಡಿದೆ.

'ನಮ್ಮ ವಿರುದ್ಧ ಸಂಜಯನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಫ್ಲ್ಯಾಟ್ ಮಾಲೀಕರಾದ ವಿ.ಜಗದೀಶ್ ಭತೀಜಾ ಹಾಗೂ ಬೃಂದಾ ಭತೀಜಾ ದಾಖಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಕಲಂ 3(1) (ಆರ್) ಪ್ರಕಾರ ಘಟನೆ ಸಾರ್ವಜನಿಕ ಪ್ರದೇಶದಲ್ಲಿ ನಡೆದಿರಬೇಕು. ಆದರೆ, ದೂರುದಾರರು ಮನೆಯ ಒಳಗೆ ತಮ್ಮನ್ನು ನಿಂದಿಸಲಾಗಿದೆ ಎಂದು ಆರೋಪಿಸಿದ್ದಾರೆ. 3 ದಿನ ತಡ ಮಾಡಿ ದೂರು ನೀಡಲಾಗಿದೆ. ಜಿಲ್ಲಾ ಗ್ರಾಹಕ ನ್ಯಾಯಾಲಯದ ಸದಸ್ಯೆಯಾದ ದೂರುದಾರರು ತಮ್ಮ ಹಕ್ಕುಗಳ ಬಗ್ಗೆ ಸಂಪೂರ್ಣ ಅರಿವು ಹೊಂದಿರಬೇಕು. ಎಲ್ಲವನ್ನೂ ತಿಳಿದಿರುವ ಅವರು ದೂರು ದಾಖಲಿಸಲು ತಡ ಮಾಡುವ ಅಗತ್ಯವಿರಲಿಲ್ಲ' ಎಂದು ಅರ್ಜಿದಾರರ ವಿರುದ್ಧದ ದೂರನ್ನು ವಜಾಗೊಳಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಪಿ.ಪಿ.ಹೆಗ್ಡೆ ವಾದ ಮಂಡಿಸಿದರು.

ಪ್ರಕರಣವೇನು?



ಪೆಬೆಲ್ ಬೇ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಅನ್ನು ಬಾಡಿಗೆಗೆ ಪಡೆದಿದ್ದ ಬೆಂಗಳೂರು ಜಿಲ್ಲಾ ಗ್ರಾಹಕರ ನ್ಯಾಯಾಲಯದ ಜಡ್ಜ್ ರೇಖಾ ಸಾಯಣ್ಣವರ್, ಬಾಡಿಗೆ ಹಣ ಪಾವತಿಸದೆ ₹15 ಲಕ್ಷಕ್ಕೂ ಹೆಚ್ಚು ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದರು. ಮನೆ ಮಾಲೀಕರಿಗೆ ನೀಡಲಾಗಿದ್ದ ಚೆಕ್‌ಗಳು ಬೌನ್ಸ್ ಆಗಿದ್ದವು. ಮನೆ ಖಾಲಿ ಮಾಡಿಸಲು ಸಿವಿಲ್ ಕೋರ್ಟ್‌ನಿಂದ ಆದೇಶ ಪಡೆದಿದ್ದ ಮಾಲೀಕರು, ಇದೇ ವರ್ಷದ ಮಾರ್ಚ್ 29ರಂದು ಮನೆ ಖಾಲಿ ಮಾಡಿಸಿದ್ದರು. ಏತನ್ಮಧ್ಯೆ, ಸಂಜಯನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದ ರೇಖಾ ಸಾಯಣ್ಣವರ್, 'ಮಾರ್ಚ್ 26ರಂದು ಮನೆಗೆ ಬಂದಿದ್ದ ಮಾಲೀಕರು, ನನ್ನ ಜಾತಿ ನಿಂದನೆ ಮಾಡಿದ್ದರು' ಎಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ರೈತರ ಮೊಗದಲ್ಲಿ ಹರ್ಷ • ಬಿತ್ತನೆ ಕಾರ್ಯ ಚುರುಕು

ಕಲ್ಯಾಣ ಕರ್ನಾಟಕ: ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ.

ಮಳೆ ನಿರೀಕ್ಷೆಯಲ್ಲಿದ್ದ ಈ ಭಾಗದ ರೈತರ ಮೊಗದಲ್ಲಿ ಮಂದಹಾಸ ಮೂಡಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ.

ಕಲಬುರಗಿ ನಗರ, ಆಳಂದ, ಚಿಂಚೋಳಿ, ಕಾಳಗಿ, ಜೇವರ್ಗಿ, ಯಡ್ರಾಮಿ ಹಾಗೂ ಚಿತ್ತಾಪುರ ತಾಲ್ಲೂಕುಗಳಲ್ಲಿ ಬಿಟ್ಟೂ ಬಿಡದೆ ಮಳೆ ಸುರಿಯಿತು. ಬೀದರ್ ಜಿಲ್ಲೆಯಲ್ಲಿ ಸತತ ಮಳೆಗೆ ಮೂರು ಮನೆಗಳ ಗೋಡೆ ಕುಸಿದು ಬಿದ್ದಿದೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಬೀದರ್ ತಾಲ್ಲೂಕಿನ ಯರನಳ್ಳಿ, ಔರಾದ್ ತಾಲ್ಲೂಕಿನ ವಡಗಾಂವ ಹಾಗೂ ಬೋರಾಳ ಗ್ರಾಮದಲ್ಲಿ ತಲಾ ಒಂದು ಮನೆಯ ಗೋಡೆ ಭಾಗಶಃ ಕುಸಿದು ಬಿದ್ದಿದೆ.

ಮಹಾಡೋಣಗಾಂವ ಬಳಿ ಹಳ್ಳದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಹೊಲಗಳಿಗೆ ನುಗ್ಗಿದೆ. ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲೂ ಮಳೆಯಾಗಿದೆ. ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಜಿಟಿ ಜಿಟಿ ಮಳೆಯಾಗಿದೆ.

ಹುಬ್ಬಳ್ಳಿ, ಧಾರವಾಡ, ಗದಗ ಜಿಲ್ಲೆಯಲ್ಲಿ ಮಂಗಳವಾರ ದಿನವಿಡೀ ಹದವಾದ ಮಳೆಯಾದರೆ, ಬೆಳಗಾವಿ ನಗರ ಸೇರಿ ಜಿಲ್ಲೆಯಲ್ಲಿ ಬಿರುಸಿನ ಮಳೆಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ತುಂತುರು ಮಳೆಯಾಗಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಕಲಘಟಗಿ, ಉಪ್ಪಿನಬೆಟಗೇರಿ, ಅಳ್ನಾವರ, ಕುಂದಗೋಳ ಭಾಗದಲ್ಲಿ ಮಳೆಯಾಯಿತು. ಗದಗ ಜಿಲ್ಲೆಯ ಹಲವೆಡೆ ಬಿಟ್ಟೂ ಬಿಡದೇ ಜಿಟಿಜಿಟಿ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆ, ಬೆಳಗಾವಿ ನಗರ ಹಾಗೂ ವಿವಿಧ ತಾಲ್ಲೂಕುಗಳಲ್ಲಿ ಹಲವೆಡೆ ಉತ್ತಮ ಮಳೆ ಸುರಿಯಿತು.

ಒಳಹರಿವು ಏರಿಕೆ: ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದು ಜಿಲ್ಲೆಯಲ್ಲಿ ಘಟಪ್ರಭಾ ನದಿ ನೀರಿನ ಹರಿವು ಹೆಚ್ಚಿದೆ. ಹುಕ್ಕೇರಿ ತಾಲ್ಲೂಕಿನ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ 5,044 ಕ್ಯುಸೆಕ್‌ನಿಂದ 8,997 ಕ್ಯುಸೆಕ್‌ಗೆ ಏರಿಕೆಯಾಗಿದೆ.

(ದಾವಣಗೆರೆ ವರದಿ): ನಗರವೂ ಸೇರಿದಂತೆ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ. ನಗರದಲ್ಲಿ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಜೋರು ಮಳೆಯಾದರೆ, ಹರಿಹರ, ಚನ್ನಗಿರಿ, ಮಲೇಬೆನ್ನೂರು ಭಾಗದಲ್ಲಿ ಜಿಟಿಜಿಟಿ ಮಳೆ ಸುರಿದಿದೆ.


ಕಲಬುರಗಿಯಲ್ಲಿ ಮಂಗಳವಾರ ಮಳೆಯನ್ನು ಸಂಭ್ರಮಿಸಿದ ವಿದ್ಯಾರ್ಥಿನಿಯರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಒಳ ಪುಟ



ರಷ್ಯಾ ತೈಲ ಖರೀದಿ ಇಳಿಕೆ ಸಾಧ್ಯತೆ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಿಟಿಸಿಎಲ್ ಮಸೂದೆಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯವರ ಜಮೀನಿನ ಹಕ್ಕು ರಕ್ಷಣೆಗಾಗಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಮೀನು ಪರಭಾರೆ ನಿಷೇಧ (ತಿದ್ದುಪಡಿ) ಮಸೂದೆಗೆ ಮಂಗಳವಾರ ರಾತ್ರಿ ನಡೆದ ವಿಶೇಷ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಮಸೂದೆಯನ್ನು ಬುಧವಾರ (ಜುಲೈ 19) ವಿಧಾನಸಭೆಯಲ್ಲಿ ಮಂಡಿಸಲಾಗುವುದು. ಪರಿಶಿಷ್ಟರ ಭೂಮಿ ಅಕ್ರಮ ಪರಭಾರೆ ಪ್ರಶ್ನಿಸಿ ನ್ಯಾಯಾಲಯದಲ್ಲಿ ಮನವಿ ಸಲ್ಲಿಸುವುದಕ್ಕೆ ಹಿಂದೆ ವಿಧಿಸಿದ್ದ ಕಾಲಮಿತಿಯನ್ನು ರದ್ದುಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪರಿಶಿಷ್ಟ ಸಮುದಾಯದವರಿಗೆ ಸರ್ಕಾರ ಮಂಜೂರು ಮಾಡಿದ ಜಮೀನನ್ನು ಅನುಮತಿ ಇಲ್ಲದೇ ಮಾರಾಟ ಮಾಡುವುದಕ್ಕೆ ಹಾಲಿ ಪಿಟಿಸಿಎಲ್ ಕಾಯ್ದೆಯಲ್ಲಿ ನಿರ್ಬಂಧ ಇತ್ತು. ಅಕ್ರಮ ಪರಭಾರೆ ಪ್ರಶ್ನಿಸಿ, ವಾರಸುದಾರರು ಅರ್ಜಿ ಸಲ್ಲಿಸುವುದಕ್ಕೆ ಪಿಟಿಸಿಎಲ್ ಕಾಯ್ದೆಯಲ್ಲಿ ಕಾಲಮಿತಿ ನಿಗದಿಪಡಿಸಿರಲಿಲ್ಲ. ಕಾಲಮಿತಿ ನಿಗದಿಪಡಿಸದಿದ್ದರೆ ಅರ್ಜಿಗಳು ಮಾನ್ಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಹಾಗಾಗಿ, ಕಾಯ್ದೆ ಬಲ ಕಳೆದುಕೊಂಡಿತ್ತು. ಪರಿಶಿಷ್ಟರಿಗೆ ನ್ಯಾಯ ಒದಗಿಸುವುದಕ್ಕಾಗಿ ತಿದ್ದುಪಡಿ ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ.

ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ: ರಸ್ತೆ ಅಪಘಾತಗಳಲ್ಲಿ ಸಂತ್ರಸ್ತರಿಗೆ ₹1 ಕೋಟಿವರೆಗಿನ ಪರಿಹಾರ ನೀಡುವ ಪ್ರಕರಣಗಳ ವಿಚಾರಣೆಯನ್ನು ಜಿಲ್ಲಾ ನ್ಯಾಯಾಲಯಗಳಲ್ಲಿಯೇ ನಡೆಸಲು ಮೋಟಾರು ವಾಹನ ಕಾಯ್ದೆ ತಿದ್ದುಪಡಿ ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ.

ಕಾರವಾರ ಗ್ರಂಥಾಲಯದಲ್ಲಿ ಹಳೆಯ ಗ್ರಂಥ ಸಂರಕ್ಷಣೆ

ಇಲ್ಲಿದೆ 312 ವರ್ಷಗಳ 'ಮಹಾಭಾರತ'!

• ಗಣಪತಿ ಹೆಗಡೆ

ಪ್ರಜಾವಾಣಿ ವಿಶೇಷ

ಕಾರವಾರ: ನಗರದ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಆಗಾಗ ಅಪರೂಪದ ದೃಶ್ಯವೊಂದು ಕಾಣಲು ಸಿಗುತ್ತದೆ. ಹಸ್ತಪ್ರತಿ ಮಾದರಿಯ ಮುದ್ರಿತ ಗ್ರಂಥದ ಕಟ್ಟುಗಳನ್ನು ಬಿಚ್ಚಿ ಒಂದೊಂದೇ ಪುಟವನ್ನು ಎತ್ತಿಡುತ್ತಾ ವಿದ್ವಾಂಸರು ಅಧ್ಯಯನ ಮಾಡುವಂತಹ ದೃಶ್ಯವದು. ಗ್ರಂಥಾಲಯದಲ್ಲಿ 312 ವರ್ಷಗಳಷ್ಟು ಹಳೆಯದಾದ ಮತ್ತು ಸಂಸ್ಕೃತ ಭಾಷೆಯಲ್ಲಿರುವ 'ಮಹಾಭಾರತ' ಗ್ರಂಥವನ್ನು ಸಂರಕ್ಷಿಸಿ ಇಡಲಾಗಿದ್ದು ತನ್ನ ಆಕಾರ ಹಾಗೂ ಚರಿತ್ರೆಯಿಂದ ಸಾಹಿತ್ಯಾಸಕ್ತರ ಗಮನ ಸೆಳೆಯುತ್ತಿದೆ.


ಗ್ರಂಥವನ್ನು ಬಟ್ಟೆಯಲ್ಲಿ ಸುತ್ತಿಟ್ಟಾಗ ಅದೊಂದು ಪುಟ್ಟ ಪೆಟ್ಟಿಗೆಯಂತೆ ಕಾಣುತ್ತದೆ. ಯಾರಾದರೂ ವಿದ್ವಾಂಸರು ಬಂದು ಆ ಗ್ರಂಥವನ್ನು ಬಿಚ್ಚುವಾಗ ಕುತೂಹಲದ ಕಣ್ಣುಗಳು ಅದರ ಮೇಲೆ ದೃಷ್ಟಿ ಬೀರುತ್ತವೆ.

ಮುಂಬೈಯಲ್ಲಿ 1711ರಲ್ಲಿ ಮುದ್ರಿತವಾದ ಈ ಗ್ರಂಥವನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದ್ದು, ಮಹಾಭಾರತದ 12 ಪರ್ವಗಳನ್ನು ಒಳಗೊಂಡಿದೆ. 1986ರಿಂದ ಈ ಗ್ರಂಥವನ್ನು ವಿರಳ ಪುಸ್ತಕಗಳ ವಿಭಾಗದಲ್ಲಿ ಇಡಲಾಗಿದೆ.

'ಮಹಾಭಾರತದ 18 ಪರ್ವಗಳ ಪೈಕಿ 12 ಪರ್ವಗಳು ಮಾತ್ರ ನಮ್ಮಲ್ಲಿ ಲಭ್ಯವಿವೆ. ಆದಿ, ವಿರಾಟ, ಉದ್ಯೋಗ, ಅಶ್ವಮೇಧ, ಸೌಪ್ತಿಕಾ, ಕರ್ಣ, ಸಭಾ, ಅನುಶಾಸನ, ವನ, ಸತ್ಯ, ದ್ರೋಣ ಮತ್ತು ಆಶ್ರಮವಾಸಿ ಪರ್ವಗಳು ಓದಲು ಲಭ್ಯ. ಒಟ್ಟಾರೆ 1,500ಕ್ಕೂ ಹೆಚ್ಚು ಪುಟಗಳನ್ನು ಹೊಂದಿರುವ ಗ್ರಂಥ ಇದಾಗಿದೆ. ಪುಟಗಳ ನಡುವೆ ಅಲ್ಲಲ್ಲಿ ಮರದ ಪಟ್ಟಿಗಳನ್ನು ಇರಿಸಲಾಗಿದೆ' ಎಂದು ಜಿಲ್ಲಾ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕ ರಾಘವೇಂದ್ರ ಕೆ.ವಿ 'ಪ್ರಜಾವಾಣಿ'ಗೆ ತಿಳಿಸಿದರು.

'ಆಸಕ್ತರ ಅಧ್ಯಯನಕ್ಕೆಂದೇ ವೃದ್ಧರೊಬ್ಬರು ತುಂಬಾ ವರ್ಷಗಳ ಹಿಂದೆ ಈ ಗ್ರಂಥವನ್ನು ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದ್ದರು. ಆದರೆ, ಅವರ ಹೆಸರು ನೋಂದಣಿ ಪುಸ್ತಕದಲ್ಲಿ ಉಲ್ಲೇಖವಾಗಿಲ್ಲ. ಆ ವೃದ್ಧರು ಯಾರು, ಎಲ್ಲಿಂದ ಅವರು ಈ ಪ್ರತಿಯನ್ನು ತಂದಿದ್ದರು ಎನ್ನುವ ವಿವರಗಳು ಲಭ್ಯವಿಲ್ಲ' ಎಂದು ಹೇಳಿದರು.

'ಪ್ರತಿ ವಾರ ಅಥವಾ ಹದಿನೈದು ದಿನಕ್ಕೊಮ್ಮೆ ಸಿಬ್ಬಂದಿ ಗ್ರಂಥವನ್ನು ತೆರೆದು ಪರಿಶೀಲಿಸುತ್ತೇವೆ. ಅದರ ಸಂರಕ್ಷಣೆಗೆ ರಾಸಾಯನಿಕ ಅಂಶಗಳ ಬದಲು ನಾಫ್ತಾಲಿನ್ ಗುಳಿಗೆಗಳನ್ನು ಇಟ್ಟು ಹತ್ತಿಯ ಬಟ್ಟೆಯಲ್ಲಿ ಸುತ್ತುತ್ತೇವೆ. ಗಾಳಿ ಆಡದಂತೆ ಬಿಗಿಯಾಗಿ ಕಟ್ಟಿ, ಕಪಾಟಿನಲ್ಲಿ ಇಡುತ್ತೇವೆ' ಎಂದು ವಿವರಿಸಿದರು.



ಕಾರವಾರದ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸಂರಕ್ಷಿಸಿಟ್ಟ ಮಹಾಭಾರತ ಗ್ರಂಥ (ಎಡಚಿತ್ರ) ಗ್ರಂಥದ ಒಳಪುಟಗಳು


ಅಪರೂಪದ ಗ್ರಂಥವನ್ನು ಓದಲು ಬರುವವರು ಕಡಿಮೆ. ಹಿರಿಯ ಅಧ್ಯಯನಕಾರರು, ಸಂಸ್ಕೃತ ಪಾಠಶಾಲೆಗಳ ಮುಖ್ಯಸ್ಥರು ಮುಂಚಿತವಾಗಿ ತಿಳಿಸಿ, ಬರುತ್ತಾರೆ
ರಾಘವೇಂದ್ರ ಕೆ.ವಿ.
ಉಪನಿರ್ದೇಶಕ, ಜಿಲ್ಲಾ ಗ್ರಂಥಾಲಯ ಇಲಾಖೆ

ಇಂದಿನಿಂದ 'ಗೃಹ ಲಕ್ಷ್ಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ಐದು ಗ್ಯಾರಂಟಿಗಳಲ್ಲಿ ಪ್ರಮುಖವಾದ 'ಗೃಹ ಲಕ್ಷ್ಮಿ' ಯೋಜನೆ ನೋಂದಣಿ ಪ್ರಕ್ರಿಯೆಗೆ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಗೆ ತಿಂಗಳಿಗೆ ₹2,000 ದೊರೆಯಲಿದೆ. ಯಜಮಾನಿ ಅಥವಾ ಆಕೆಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಯೋಜನೆಗೆ ಅರ್ಹರಾಗುವುದಿಲ್ಲ. ಅಲ್ಲದೇ ಜಿಎಸ್‌ಟಿ ಲೆಕ್ಕಪತ್ರ ಸಲ್ಲಿಸುವವರಾಗಿದ್ದಲ್ಲಿಯೂ ಯೋಜನೆಗೆ ಅರ್ಹರಾಗುವುದಿಲ್ಲ.

'1.28 ಕೋಟಿ ಮಹಿಳೆಯರು ಈ ಯೋಜನೆಗೆ ಅರ್ಹರಿದ್ದು, ಹೆಸರು ನೋಂದಾಯಿಸಲು ಪಡಿತರ ಚೀಟಿಯ ಸಂಖ್ಯೆ, ಯಜಮಾನಿ ಹಾಗೂ ಪತಿಯ ಆಧಾರ್ ಕಾರ್ಡ್ ಸಂಖ್ಯೆ, ಆಧಾರ್‌ಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್ ಅಥವಾ ಫಲಾನುಭವಿಯು ಇಚ್ಛಿಸುವ ಪರ್ಯಾಯ ಬ್ಯಾಂಕ್ ಖಾತೆಯ ದಾಖಲೆಗಳನ್ನು ನೀಡಬೇಕು. ಪ್ರತಿ ದಿನ ಅರ್ಹ 60 ಫಲಾನುಭವಿಗಳಿಗೆ ಸಮಯ ಹಾಗೂ ನೋಂದಣಿ ಕೇಂದ್ರದ ವಿವರಗಳು ಮೊಬೈಲ್ ಸಂದೇಶದ ಮೂಲಕ ಸ್ವೀಕೃತವಾಗಲಿವೆ. ಸಂದೇಶ ಸ್ವೀಕೃತಗೊಂಡ ಫಲಾನುಭವಿಗಳು ಮಾತ್ರ ಸಂದೇಶದಲ್ಲಿ ವಿವರಿಸಿದ ಸೇವಾ ಕೇಂದ್ರಕ್ಕೆ ನಿಗದಿಪಡಿಸಿದ ಸಮಯಕ್ಕೆ ಹಾಜರಾಗಿ ಅರ್ಜಿ ಸಲ್ಲಿಸಬಹುದು.

ರಸ್ತೆ ಸುರಕ್ಷತಾ ತಜ್ಞರ ಸಮಿತಿಯಿಂದ ಪರಿಶೀಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಅಪಘಾತ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೆದ್ದಾರಿಯ ಸುರಕ್ಷತಾ ಪರಿಶೀಲನೆಗಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಸ್ತೆ ಸುರಕ್ಷತಾ ತಜ್ಞರ ಸಮಿತಿ ರಚಿಸಿದೆ.

‘ಸುರಕ್ಷಿತ ಪ್ರಯಾಣ ಉತ್ತೇಜಿಸುವ ಮೂಲಕ ಕರ್ನಾಟಕದ ಜನರಿಗೆ ಕಾರಿಡಾರ್‌ನ ಸೇವೆಯನ್ನು ಖಚಿತಪಡಿಸುವುದು ಈ ಸಮಿತಿ ರಚನೆಯ ಉದ್ದೇಶ. ಸಮಿತಿಯು ಪ್ರಸ್ತುತ ಹೆದ್ದಾರಿ ಪ್ರವಾಸದಲ್ಲಿದ್ದು, ಜುಲೈ 20ರೊಳಗೆ ಅಧ್ಯಯನ ಪೂರ್ಣಗೊಳಿಸಲಿದೆ. ಬಳಿಕ ಸಮಿತಿಯು ವರದಿಯನ್ನು 10 ದಿನಗಳಲ್ಲಿ ಸಲ್ಲಿಸಲಿದೆ’ ಎಂದು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

118 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್‌ವೇಯಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಈ ಹೆದ್ದಾರಿಯು ವಾಣಿಜ್ಯ ಚಟುವಟಿಕೆ ಉತ್ತೇಜಿಸುತ್ತಿದೆ ಮತ್ತು ಪ್ರದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಹೆದ್ದಾರಿಯು ಕರ್ನಾಟಕದ ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಕೇವಲ 75 ನಿಮಿಷಗಳಿಗೆ ಇಳಿಸಿದೆ ಎಂದು ಸಚಿವಾಲಯ ಹೇಳಿದೆ.

ಈ ಕಾರಿಡಾರ್‌ನಲ್ಲಿ 4 ರೈಲು ಮೇಲ್ಸೇತುವೆಗಳು, 9 ಪ್ರಮುಖ ಸೇತುವೆಗಳು, 40 ಸಣ್ಣ ಸೇತುವೆಗಳು, 89 ಅಂಡರ್‌ಪಾಸ್‌ಗಳು ಇವೆ. ಸಂಚಾರ ದಟ್ಟಣೆ ಕಡಿಮೆ ಮಾಡಲು ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಮತ್ತು ಶ್ರೀರಂಗಪಟ್ಟಣದಲ್ಲಿ ಬೈಪಾಸ್‌ಗಳನ್ನು ನಿರ್ಮಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್ ಆಫ್ ಇಂಡಿಯಾ Bank of India BOI

ಬೆಂಗಳೂರು ವಲಯ ಕಛೇರಿ, ಆಡಳಿತ ಮತ್ತು ಸೇವೆ ವಿಭಾಗ, ನಂ.11, ಬ್ಯಾಂಕ್ ಆಫ್ ಇಂಡಿಯ ಬಿಲ್ಡಿಂಗ್, ಕೆ.ಜಿ.ರಸ್ತೆ, ಬೆಂಗಳೂರು-560 009. ಫೋನ್ : 080-2295 9419/417, ಇ-ಮೇಲ್ : Bengaluru.AandS@bankofindia.co.in

ಬ್ಯಾಂಕಿನ ವಾಹನ ಮಾರಾಟಕ್ಕೆ

ಕ್ರಸಂ	ವಾಹನ ನೋಂದಣಿ ಸಂಖ್ಯೆ	ತಯಾರಿಕೆ ಮತ್ತು ಮಾಡಲ್	ಮೀಸಲು ಬೆಲೆ
1.	KA 02 MF 5187	Maruti SX4 VXI(BSIV)	ರೂ.1,50,000/- +ಜಿ.ಎಸ್.ಟಿ

ಹೆಚ್ಚಿನ ವಿವರಗಳಿಗೆ ನಮ್ಮ ಬ್ಯಾಂಕಿನ ವೆಬ್ ಸೈಟ್ www.bankofindia.co.in ನ ಟೆಂಡರ್ ವಿಭಾಗದಲ್ಲಿ ಲಾಗ್ ಆನ್ ಮಾಡಿ ನೋಡಬಹುದು ಅಥವಾ ಯಾವುದೇ ಕೆಲಸದ ದಿನ ಕಛೇರಿ ಸಮಯದಲ್ಲಿ ನಮ್ಮ ವಲಯ ಕಚೇರಿಯನ್ನು ಸಂಪರ್ಕಿಸಿ.

18.07.2023 ವಲಯ ವ್ಯವಸ್ಥಾಪಕರು

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010

ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯ 36ನೇ ವಾರ್ಷಿಕ ಸಾರ್ವತ್ರಿಕ ಸಭೆಯನ್ನು (‘ಎಜಿಎಂ’) 21 ನೇ ಆಗಸ್ಟ್, 2023 ಸೋಮವಾರ ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ವಿಡಿಯೋಕಾನ್ಫರೆನ್ಸಿಂಗ್ (‘ವಿಸಿ’) / ಇತರೆ ಆಡಿಯೋ ವಿಷುಯಲ್ ಮೀನ್ಸ್ ಮೂಲಕ (‘ಒಎವಿಎಂ’) ಏರ್ಪಡಿಲಾಗಿದೆ ಎಂದು 2013 (ಸದರಿ ‘ಕಾಯ್ದೆ’) ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 (ಲಿಸ್ಟಿಂಗ್ ನಿಬಂಧನೆ) ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ (‘ಎಂಸಿಎ’) ಹಾಗೂ ಸೆಕ್ಯೂರಿಟಿಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (‘ಸೆಬಿ’) ಸುತ್ತೋಲೆಗಳಿಗೆ ಅನುಗುಣವಾಗಿ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರಗಳ ಬಗ್ಗೆ ಕಾರ್ಯ ಕಲಾಪಗಳನ್ನು ನಡೆಸುವುದು ಇದರ ಉದ್ದೇಶ.

36ನೇ ವಾರ್ಷಿಕ ಸಾರ್ವತ್ರಿಕ ಸಭೆಯ ಸೂಚನೆ ಹಾಗೂ 2022-23 ರ ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೆ, ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರ್ ಗಳಲ್ಲಿ ನೋಂದಾಯಿಸಿರುವ ಇ-ಮೇಲ್ ಐಡಿಗಳಿಗೆ ಕಳುಹಿಸಲಾಗಿದೆ. 36ನೇ ಎಜಿಎಂ ಸೂಚನೆಯು ಹಾಗೂ 2022-23 ರ ವಾರ್ಷಿಕ ವರದಿಯು ಕಂಪನಿಯು ವೆಬ್‌ಸೈಟ್ ತಿತಿತಿ.ಣuಟಇಜಟಿ.ಛಿoಟ/ಜಟಿ-ಟಿಟ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ ಕಂಪನಿಯ ಷೇರುಗಳ ಪಟ್ಟಿ ಇರುವಲ್ಲಿ ಲಭ್ಯವಿದೆ. 36ನೇ ಎಜಿಎಂ ಸೂಚನೆಯು ನ್ಯಾಷನಲ್ ಸೆಕ್ಯೂರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿಯು ಸಹ ಲಭ್ಯವಿದೆ.

ಸಮಯಕ್ಕೆ ಅನುಗುಣವಾಗಿ ಬದಲಾಯಿಸುವ ನಿಯಮಗಳು, 2014 ಮತ್ತು ನಿಬಂಧನೆ 44 ರ ಅನುಸಾರ ಸಂಸ್ಥೆಗಳ ನಿಯಮ 20 (ಆಡಳಿತ ವರ್ಗ ಹಾಗೂ ಆಡಳಿತ) ಸೆಕ್ಷನ್ 108 ರ ನಿಬಂಧನೆಗಳಿಗೆ ಅನ್ವಯ ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ 36ನೇ ವಾರ್ಷಿಕ ಸಾರ್ವತ್ರಿಕ ಸಭೆಯ ನಿರ್ಣಯಗಳಿಗಾಗಿ ಇ-ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ಇ-ಮತ ಚಲಾವಣೆಯಲ್ಲಿ ಭಾಗವಹಿಸುವ ಸಂಪೂರ್ಣ ವಿಧಾನದ ಬಗ್ಗೆ ಎಜಿಎಂ ಸೂಚನೆಯಲ್ಲಿ ಲಭ್ಯವಿದೆ. ಭೌತಿಕ ಅಥವಾ ಡಿ ಮೆಟೀರಿಯಲೈಸ್ಡ್ ರೂಪದಲ್ಲಿ ಕಟ್ಟ ಕಡೆಯ ದಿನವಾದ 14 ಆಗಸ್ಟ್, 2023 ರಂದು ಕಂಪನಿಯ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಯಂತ್ರದ ಮೂಲಕ ಚಲಾಯಿಸಬಹುದು.

ರಿಮೋಟ್ ಇ-ಮತ ಚಲಾವಣೆಯು 2023, 18 ನೇ ಆಗಸ್ಟ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2023, 20ನೇ ಆಗಸ್ಟ್, ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ-ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ಮತ ಚಲಾವಣೆಯ ಫಲಿತಾಂಶವನ್ನು 2 ಕೆಲಸ ದಿನಗಳ ಒಳಗಾಗಿ ಘೋಷಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿಯು ಸಹ ಪ್ರಕಟಿಸಲಾಗುವುದು. ಯಾವುದೇ ವ್ಯಕ್ತಿಯ ಹೆಸರು ಸದಸ್ಯರ ರಿಜಿಸ್ಟರ್ ಅಥವಾ ಡಿಪಾಸಿಟರಿಸ್ ನಿರ್ವಹಿಸುವ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್ಟ ಕಡೆಯ ದಿನಾಂಕ 14 ಆಗಸ್ಟ್, 2023 ರಂದು ದಾಖಲಿಸಲ್ಪಡುತ್ತದೋ ಅವರಿಗೆ ಎಜಿಎಂ ದಿನದಂದು ರಿಮೋಟ್ ಮತ ಚಲಾವಣೆ ಅಥವಾ ಇ-ಮತ ಚಲಾವಣೆ ಸೌಲಭ್ಯವನ್ನು ಉಪಯೋಗಿಸುವ ಅರ್ಹತೆ ಹೊಂದಿರುತ್ತಾರೆ. ಯಾವುದೇ ವ್ಯಕ್ತಿಯು ವಾರ್ಷಿಕ ಸಾರ್ವತ್ರಿಕ ಸಭೆಯ (ಎಜಿಎಂ) ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಹೊಂದಿ ಕಟ್ಟ ಕಡೆಯ ದಿನಾಂಕದಂದು ಅಂದರೆ 14ನೇ ಆಗಸ್ಟ್ 2023 ರಂದು ಸದಸ್ಯರಾದಲ್ಲಿ ಜತಿಠಣuಟಿರ.ಛಿಜಟ.ಛಿo.ಟಿ ಗೆ ತಮ್ಮ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಮೇಲೆ ತಿಳಿಸಲಾದ ಕಟ್ಟ ಕಡೆಯ ದಿನದಂದು ಸದಸ್ಯರಾಗದ ವ್ಯಕ್ತಿಯು (ಕಂಪನಿಯ ಷೇರುಗಳನ್ನು ಹೊಂದದಿದ್ದಲ್ಲಿ) ಈ ಸೂಚನೆಯನ್ನು ಮಾಹಿತಿಯ ಉದ್ದೇಶಕ್ಕೆ ಮಾತ್ರ ಎಂದು ಪರಿಗಣಿಸಬೇಕು. ರಿಮೋಟ್ ಇ-ಮತ ಚಲಾವಣೆ ಮೂಲಕ ಮತ ಚಲಾಯಿಸಿರುವ ಸದಸ್ಯರು 36ನೇ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಭಾಗವಹಿಸಬಹುದು ಆದರೆ ಸಭೆಯಲ್ಲಿ ಪುನಃ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಯಾವ ಸದಸ್ಯರ ಇ-ಮೇಲ್ ಐಡಿಗಳು ಕಂಪನಿ/ಡಿಪಾಸಿಟರಿಸ್‌ನಲ್ಲಿ ನೋಂದಾಯಿಸದಿದ್ದಲ್ಲಿ ಇವರು ಕೆಳಗೆ ತಿಳಿಸಿರುವ ದಾಖಲೆಗಳನ್ನು evoting.nsdl.co.in ಗೆ ಕಳುಹಿಸಿ ಇ-ಮತ ಚಲಾವಣೆಗಾಗಿ ಸೂಚನೆಯಲ್ಲಿ ದೃಢಪಡಿಸಿರುವಂತೆ ತಮ್ಮ ಯುಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಸ್ವೀಕರಿಸಿ ತಮ್ಮ ಇ-ಮೇಲ್ ಐಡಿಯನ್ನು ನೋಂದಾಯಿಸತಕ್ಕದ್ದು.

- ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ, ಫೋಲಿಯೋ ಸಂಖ್ಯೆ, ಷೇರುದಾರರ ಹೆಸರು, ಷೇರು ಪ್ರಮಾಣ ಪತ್ರದ ಸ್ಕ್ಯಾನ್ಡ್ ಪ್ರತಿಯನ್ನು (ಹಿಂಭಾಗದ ಹಾಗೂ ಮುಂಭಾಗದ), ಪ್ಯಾನ್ (ಸ್ವಯಂ ಘೋಷಿತವಾದ ಪ್ಯಾನ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ), ಆಧಾರ್ (ಸ್ವಯಂ ಘೋಷಿತವಾದ ಆಧಾರ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಇವುಗಳೊಂದಿಗೆ ದಯವಿಟ್ಟು ಸಲ್ಲಿಸುವುದು.
- ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ ಡಿಪಿಐಡಿ-ಸಿಎಲ್‌ಐಡಿ (16 ಸಂಖ್ಯೆಯ ಡಿಪಿಐಡಿ + ಸಿಎಲ್‌ಐಡಿ ಅಥವಾ 16 ಸಂಖ್ಯೆಯ ಫಲಾನುಭವಿ ಐಡಿ), ಹೆಸರು, ಕ್ಲೈಂಟ್ ಮಾಸ್ಟರ್ ಅಥವಾ ಒಟ್ಟಾರೆ ಲೆಕ್ಕ ಪತ್ರ ಸಾರಾಂಶದ ಪ್ರತಿ, ಪ್ಯಾನ್ (ಸ್ವಯಂ ಘೋಷಿತವಾದ ಪ್ಯಾನ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ), ಆಧಾರ್ (ಸ್ವಯಂ ಘೋಷಿತವಾದ ಆಧಾರ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಇವುಗಳೊಂದಿಗೆ ದಯವಿಟ್ಟು ಸಲ್ಲಿಸುವುದು.

ಯಾವ ಸದಸ್ಯರು ಕಂಪನಿಯಲ್ಲಿ ತಮ್ಮ ಇ-ಮೇಲ್ ಐಡಿ ಹಾಗೂ ಬ್ಯಾಂಕ್ ಖಾತೆಯನ್ನು ನೋಂದಾಯಿಸದಿದ್ದಲ್ಲಿ ತಾವುಗಳು tilinvestor@timken.com ಇವರಿಗೆ ಮನವಿ ಸಲ್ಲಿಸಿ ನೋಂದಾಯಿಸಕೊಳ್ಳಬೇಕು. ಡಿವಿಡೆಂಡ್ ಹಣಕ್ಕೆ ಸಂಬಂಧಿಸಿದಂತೆ ಕಡ್ಡಾಯ ವಿಚಾರಗಳನ್ನು ಸದಸ್ಯರು ನೋಂದಾಯಿತ ಕಛೇರಿಯ ಕಂಪನಿ ಸದಸ್ಯರಿಗೆ ಮನವಿ ಸಲ್ಲಿಸಬೇಕು ಅಥವಾ tilinvestor@timken.com ಇಲ್ಲಿ ಮನವಿ ಸಲ್ಲಿಸುವುದು. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಫಲಾನುಭವಿಗಳು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಗಳ ವಿವರಗಳನ್ನು, ಇಮೇಲ್ ಐಡಿ ಹಾಗೂ ಪ್ಯಾನ್ ವಿವರಗಳನ್ನು ಭಾಗವಹಿಸುವ ಡಿಪಾಸಿಟರಿಗಳೊಂದಿಗೆ ದಾಖಲಿಸಿಕೊಳ್ಳಲು ಸಲಹೆ ನೀಡಲಾಗಿದೆ.

ಡಿವಿಡೆಂಡ್‌ನ ತೆರಿಗೆಗಾಗಿ ಸದಸ್ಯರು ವಿವರವಾದ ಮಾರ್ಗಸೂಚಿಯನ್ನು ಎಜಿಎಂನ ಸೂಚನೆಯಲ್ಲಿ ವೀಕ್ಷಿಸಬೇಕಾಗಿ ಕೋರಲಾಗಿದೆ. ಇದಕ್ಕೆ ಸಂಬಂಧಿಸಿದ ಮನಿವಿ ಫಾರಂಗಳು/ದೃಢ ಪಡಿಸುವ ದಾಖಲೆಗಳು ಕಂಪನಿಯು ವೆಬ್‌ಸೈಟ್ https://www.timken.com/en-in/investors/statutory-compliances ನಲ್ಲಿ ಲಭ್ಯವಿದೆ. ಡಿವಿಡೆಂಡ್ ಮೇಲೆ ತೆರಿಗೆ ಬಗ್ಗೆ ವಿಚಾರಣೆಗಾಗಿ TIL.TDS@.timken.com ಮೂಲಕ ಸಂಪರ್ಕಿಸುವುದು.

ಹಣಕಾಸು ವಾರ್ಷಿಕ 2022-23 ರ ಡಿವಿಡೆಂಡ್ ಹಣವನ್ನು ಒಂದು ವೇಳೆ ಎಜಿಎಂನಲ್ಲಿ ಘೋಷಿಸಿದ್ದಲ್ಲಿ, ಷೇರುದಾರರ ಅರ್ಹತೆಯನ್ನು ದೃಢ ಪಡಿಸಲು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಬಂಧನೆ 2015 ರ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 42 ರ ಅನುಸಾರ ಸಂಸ್ಥೆಯು 4 ಆಗಸ್ಟ್, 2023 ರಂದು ದಾಖಲೆ ದಿನಾಂಕ ಎಂದು ನಿಗಧಿ ಪಡಿಸಿದೆ.

ಯಾವುದೇ ವಿಚಾರಣೆಗೆ ಅಥವಾ ಇ-ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ (“ಎಫ್‌ಎಕ್ಯೂ”) ಗಳನ್ನು ಗಮನಿಸಿ ಮತ್ತು www.evoting.nsdl.com ನ ಡೌನ್ ಲೋಡಿಂಗ್ ಸೆಕ್ಷನಿನಲ್ಲಿ ಲಭ್ಯವಿರುವ ಇ-ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು. ಯಾವುದೇ ತೊಂದರೆ/ಕುಂದು ಕೊರತೆ ಇದ್ದಲ್ಲಿ, ಸದಸ್ಯರು ಕೆಳಸಹಿದಾರರನ್ನು tilinvestor@timken.com (ದೂರವಾಣಿ ಸಂಖ್ಯೆ.: 080-41362000) ಅಥವಾ ಆರ್‌ಟಿಎಯವರನ್ನು rta@cbmsl.com (ದೂರವಾಣಿ ಸಂಖ್ಯೆ.: 033-40116700 / 033-40116715) ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/- ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ-ಕಾಂಪ್ಲಯನ್ಸ್

ಬೆಂಗಳೂರು
18 ಜುಲೈ, 2023

ವಿದ್ಯುತ್ ದರ ಏರಿಕೆ ಪರಿಣಾಮ ● ಖಾಸಗಿ ಏಜೆನ್ಸಿಗೆ ನಿರ್ವಹಣೆ ಜವಾಬ್ದಾರಿ

ಶುದ್ಧ ನೀರಿನ ಬೆಲೆ ದುಪ್ಪಟ್ಟು

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿದ್ಯುತ್ ದರ ಏರಿಕೆಯಾಗಿರುವ ಬೆನ್ನಲ್ಲೇ ನಗರದ ಹಲವು ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ನೀರಿನ ಬೆಲೆಯನ್ನು ದಿಢೀರ್ ದುಪ್ಪಟ್ಟು ಮಾಡಲಾಗಿದ್ದು, ಸಾರ್ವಜನಿಕರ ಜೇಬಿಗೆ ಮತ್ತೊಂದು ಹೊಡೆತ ಬಿದ್ದಂತಾಗಿದೆ.

ರಾಜಾಜಿನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿರುವ ಹಲವು ಘಟಕಗಳ ಎದುರು ಬೆಲೆ ಏರಿಕೆ ಸಂದೇಶದ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. 20 ಲೀಟರ್‌ಗೆ ₹ 5 ಇದ್ದ ಬೆಲೆ, ಇದೀಗ ₹ 10 ಆಗಿದೆ.

ಕುಡಿಯುವ ನೀರಿಗಾಗಿ ಘಟಕಗಳನ್ನು ಅವಲಂಬಿಸಿರುವ ಜನ, ನಿತ್ಯವೂ ₹ 5 ನಾಣ್ಯ ಬಳಸಿ 20 ಲೀಟರ್ ನೀರು ಪಡೆಯುತ್ತಿದ್ದರು. ಜುಲೈ 15ರಿಂದ ಬೆಲೆ ಏರಿಕೆಯಾಗಿದ್ದು, ಇದೀಗ ₹ 5 ಎರಡು ನಾಣ್ಯಗಳನ್ನು ಬಳಸಿ 20 ಲೀಟರ್ ನೀರು ಪಡೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

‘ಘಟಕ ಸ್ಥಾಪನೆಯಾದ ದಿನದಿಂದಲೂ ₹ 5 ನಾಣ್ಯಕ್ಕೆ 20 ಲೀಟರ್ ನೀರು ನೀಡಲಾಗುತ್ತಿತ್ತು. ಇದೀಗ ವಿದ್ಯುತ್ ದರ ಏರಿಕೆಯಾಗಿದ್ದು, ಘಟಕದ ನಿರ್ವಹಣೆ ಖರ್ಚು ಸಹ ಹೆಚ್ಚಾಗಿದೆ. ಘಟಕದಲ್ಲಿರುವ ವಿದ್ಯುತ್ ಆಧಾರಿತ ಫಿಲ್ಟರ್ ಯಂತ್ರಗಳು ದಿನದ 24 ಗಂಟೆಯೂ ಸಕ್ರಿಯವಾಗಿರುತ್ತವೆ. ಹೀಗಾಗಿ, ವಿದ್ಯುತ್ ಬಳಕೆ



ರಾಜಾಜಿನಗರ ಪಶ್ಚಿಮ ಕಾರ್ಡ್ ರಸ್ತೆಯ ವಾರ್ಡ್ ಬೇಕರಿ ಬಳಿಯ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ಅಂಟಿಸಿರುವ ದರ ಏರಿಕೆ ಸಂದೇಶದ ಪೋಸ್ಟರ್

ಹೆಚ್ಚು, ಅನಿವಾರ್ಯವಾಗಿ, ನೀರಿನ ದರವನ್ನು ದುಪ್ಪಟ್ಟು ಮಾಡಲಾಗಿದೆ’ ಎಂದು ಘಟಕವೊಂದರ ಸಿಬ್ಬಂದಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ, ಸ್ಥಳೀಯ ಶಾಸಕರು ಹಾಗೂ ಇತರರ ಅನುದಾನದಲ್ಲಿ ಘಟಕ ನಿರ್ಮಿಸಲಾಗಿದೆ. ಆದರೆ, ನಿರ್ವಹಣೆ ಜವಾಬ್ದಾರಿಯನ್ನು ಖಾಸಗಿ ಏಜೆನ್ಸಿಗಳಿಗೆ ವಹಿಸಲಾಗಿದೆ’ ಎಂದು ಹೇಳಿದರು.

ಸೂಚನೆ ನೀಡದೇ ಏರಿಕೆ: ‘ವಾರಕ್ಕೆ ನಾಲ್ಕು ಬಾರಿ 20 ಲೀಟರ್ ನೀರು ತೆಗೆದುಕೊಂಡು ಹೋಗುತ್ತೇವೆ. ಜುಲೈ 15ಕ್ಕಿಂತ ಮುಂಚೆ ಘಟಕದ ಉಪಕರಣದಲ್ಲಿ ₹ 5 ನಾಣ್ಯ ಹಾಕಿದರೆ ₹ 20 ಲೀಟರ್ ನೀರು ಬರುತ್ತಿತ್ತು. ಆದರೆ, ಇದೀಗ ₹ 5 ಎರಡು ನಾಣ್ಯ ಹಾಕಬೇಕಾಗಿದೆ. ಯಾವುದೇ ಸೂಚನೆ ನೀಡದೇ ಏರಿಕೆ ಮಾಡಿರುವುದು ಖಂಡನೀಯ’ ಎಂದು ಪಶ್ಚಿಮ ಕಾರ್ಡ್ ರಸ್ತೆಯ ನಿವಾಸಿ ಶಂಕರ್ ಆಕ್ರೋಶ ವ್ಯಕ್ತಪಡಿಸಿದರು.

‘ಕಟ್ಟಡ ಕಾರ್ಮಿಕರು, ಕೂಲಿ ಕೆಲಸ ಮಾಡುವವರು, ನೌಕರಸ್ಥರು, ವ್ಯಾಪಾರಿಗಳು, ಹೋಟೆಲ್‌ನವರು ಘಟಕಗಳಿಂದ ನೀರು ಕೊಂಡೊಯ್ಯುತ್ತಾರೆ. ಬೆಲೆ ಏರಿಕೆ ಮಾಡಿರುವುದರಿಂದ ಅವರೆಲ್ಲರಿಗೂ ಹೊರೆ ಆಗಿದೆ. ತೀರ್ಮಾನ ಕೈಗೊಳ್ಳುವ ಮುನ್ನ ಜನರ ಅಭಿಪ್ರಾಯ ಸಂಗ್ರಹಿಸಬೇಕಿತ್ತು’ ಎಂದು ಅವರು ತಿಳಿಸಿದರು.

ಹೋಟೆಲ್‌ಗೆ ನೀರು ಆಧಾರ: ‘ಹಲವು ವರ್ಷಗಳಿಂದ ಹೋಟೆಲ್ ನಡೆಸುತ್ತಿದ್ದೇನೆ. ದಿನಕ್ಕೆ ಸುಮಾರು 100 ಲೀಟರ್ ಕುಡಿಯುವ ನೀರು ಬೇಕು. ₹ 25 ರೂಪಾಯಿಗೆ ₹ 20 ಲೀಟರ್‌ನ ಐದು ಕ್ಯಾನ್ ನೀರು ಪಡೆಯುತ್ತಿದ್ದೆ. ಇದೀಗ, ₹ 50 ಪಾವತಿಸಬೇಕಾಗಿದೆ’ ಎಂದು ಹೋಟೆಲ್ ವ್ಯಾಪಾರಿ ಲೋಹಿತ್ ಹೇಳಿದರು.

‘ಉಪಕರಣಕ್ಕೆ ತಕ್ಕಂತೆ ದರ ಏರಿಕೆ’

‘₹ 5 ನಾಣ್ಯಕ್ಕೆ ಹೊಂದುವ ರೀತಿಯಲ್ಲಿ ಉಪಕರಣ ಸಿದ್ಧಪಡಿಸಲಾಗಿದೆ. ವಿದ್ಯುತ್ ದರ ಏರಿಕೆಯಾಗಿದ್ದರೆ, ₹ 1 ಅಥವಾ ₹ 2 ಹೆಚ್ಚು ಮಾಡಬೇಕಿತ್ತು. ಆದರೆ, ಉಪಕರಣಕ್ಕೆ ತಕ್ಕಂತೆ ₹ 5 ಎರಡು ನಾಣ್ಯಗಳನ್ನು ಬಳಸುವ ರೀತಿಯಲ್ಲಿ ದರ ಏರಿಕೆ ಮಾಡಲಾಗಿದೆ. ಇದು ಅವೈಜ್ಞಾನಿಕ ಕ್ರಮ. ಇದರ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪರಿಶೀಲಿಸಿ ಕ್ರಮ: ಮುಖ್ಯ ಎಂಜಿನಿಯರ್

‘ನಗರದಲ್ಲಿ ಬಿಬಿಎಂಪಿ ವತಿಯಿಂದ ಕೊಳವೆಬಾವಿ ಕೊರೆಸಿ, ಶುದ್ಧ ಕುಡಿಯುವ ನೀರು ಘಟಕಗಳನ್ನು ಸ್ಥಾಪಿಸಿ ನಿರ್ವಹಣೆ ಜವಾಬ್ದಾರಿಯನ್ನು ಏಜೆನ್ಸಿಗಳಿಗೆ ಗುತ್ತಿಗೆ ನೀಡಲಾಗಿದೆ. ಇನ್ನು ಕೆಲವೆಡೆ ಸಂಸ್ಥೆಗಳೇ ಕೊಳವೆಬಾವಿ ಕೊರೆದು, ನಿರ್ವಹಣೆ ಮಾಡುತ್ತಿವೆ. ಹೀಗಾಗಿ, ಏಕಾಏಕಿ ಯಾವ ರೀತಿ ಏರಿಕೆ ಆಗಿದೆ ಎಂಬುದನ್ನು ಪರಿಶೀಲಿಸಿ, ನೀರಿನ ಬೆಲೆ ಏರಿಕೆ ಸಂಬಂಧ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಶಶಿಕುಮಾರ್ ತಿಳಿಸಿದರು.

ಸುದ್ದಿ 2 ನಿಮಿಷ

ಜ್ಯೋತಿಷ, ವಾಸ್ತು ತರಗತಿ

ಬೆಂಗಳೂರು: ಅದಿತ್ ವೇದಿಕ್ ಅಕಾಡೆಮಿಯು ಪ್ರತಿ ಭಾನುವಾರ ಮಧ್ಯಾಹ್ನ 2ರಿಂದ ಸಂಜೆ 6 ಗಂಟೆಯವರೆಗೆ ಜ್ಯೋತಿಷ, ವಾಸ್ತು ಹಾಗೂ ಹಸ್ತಸಾಮುದ್ರಿಕ ತರಗತಿಗಳನ್ನು ಹಮ್ಮಿಕೊಂಡಿದೆ. ಪ್ರಸಕ್ತ ಸಾಲಿನಲ್ಲಿ ಮುಂದಿನ ವಾರದಿಂದ ತರಗತಿಗಳು ಪ್ರಾರಂಭವಾಗುತ್ತವೆ. ಈ ಕೋರ್ಸ್‌ಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಠ್ಯಕ್ರಮದೊಂದಿಗೆ ನಡೆಸಲಾಗುತ್ತದೆ. ವಿಶ್ವವಿದ್ಯಾಲಯದ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ. ತರಗತಿಗಳು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಇರಲಿದೆ ಎಂದು ಅಕಾಡೆಮಿ ಅಧ್ಯಕ್ಷ ಬಿ. ಗಜೇಂದ್ರ ಪ್ರಕಾಶ್ ಯಲ್ಲಿ ತಿಳಿಸಿದ್ದಾರೆ.



ಸಂಪರ್ಕಕ್ಕೆ: 9844178723

ವಿಪತ್ತು ನಿರ್ವಹಣೆಗೆ ಸಮನ್ವಯ ಸಭೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯದಲ್ಲಿ ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಲು ಪಾಲಿಕೆ, ಬೆಸ್ಕಾಂ, ಜಲಮಂಡಳಿ ಹಾಗೂ ಸಂಚಾರ ಪೊಲೀಸ್ ಇಲಾಖೆಯ ಅಧಿಕಾರಿಗಳ ಸಮನ್ವಯ ಸಭೆ ನಡೆಸಲಾಯಿತು.

ಮಳೆಗಾಲದಲ್ಲಿ ಯಾವುದೇ ರೀತಿಯ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಆಸ್ತಿಗೆ ಯಾವುದೇ ಅನಾಹುತ ಆಗದಂತೆ ಎಲ್ಲಾ ರೀತಿಯಲ್ಲೂ ಕ್ರಮವಹಿಸಬೇಕು ಎಂದು ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗಾಳಿ ಸಹಿತ ಮಳೆಯಾದ ವೇಳೆ ಸಾಕಷ್ಟು ಕಡೆ ಮರಗಳು, ರೆಂಬೆ-ಕೊಂಬೆಗಳು ಧರೆಗುರುಳಲಿವೆ. ಪಾಲಿಕೆಯ ಅರಣ್ಯ ಶಾಖೆ ಹಾಗೂ ಅಗ್ನಿ ಶಾಮಕ ಸಿಬ್ಬಂದಿ ಸಮನ್ವಯದೊಂದಿಗೆ ಅವುಗಳನ್ನು ಕೂಡಲೇ ತೆರವುಗೊಳಿಸಬೇಕು. ಮಳೆ ನೀರುಗಾಲುವೆಗಳಲ್ಲಿ ಜಲಮಂಡಳಿಯ ಪೈಪ್‌ಗಳು ಅಡ್ಡವಾಗಿದ್ದರೆ ಗುರುತಿಸಿ ಅವುಗಳನ್ನು ಜಲಮಂಡಳಿ ಬೇರೆಡೆ ಸ್ಥಳಾಂತರಿಸಬೇಕು ಎಂದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ 10 ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಿದ್ದು, 8 ಕಡೆ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಇನ್ನುಳಿದ ಕಡೆ ತಾತ್ಕಾಲಿಕ ಪರಿಹಾರ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು. ವಲಯ ಜಂಟಿ ಆಯುಕ್ತ ಡಾ. ಕೆ. ಜಗದೀಶ್ ನಾಯ್ಕ್, ಉಪ ಆಯುಕ್ತೆ ಲಕ್ಷ್ಮೀದೇವಿ, ಮುಖ್ಯ ಎಂಜಿನಿಯರ್ ರಾಜೇಶ್ ಇದ್ದರು.

ಕನ್ನಡ ಕಾರ್ಯಕರ್ತರ ಕಮ್ಮಟಕ್ಕೆ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆ.13ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಚಾಮರಾಜಪೇಟೆಯಲ್ಲಿರುವ ತನ್ನ ಕಚೇರಿಯಲ್ಲಿ ‘ಕನ್ನಡ ಕಾರ್ಯಕರ್ತರ ಕಮ್ಮಟ’ ಹಮ್ಮಿಕೊಂಡಿದೆ.

‘ಕನ್ನಡಪರ ಚಟುವಟಿಕೆ ಮತ್ತು ಹೋರಾಟಗಳಲ್ಲಿ ಬದ್ಧತೆಯಿಂದ ತೊಡಗಿಸಿಕೊಳ್ಳುವ ಯುವ ಕಾರ್ಯಕರ್ತರನ್ನು ರೂಪಿಸುವ ಸಲುವಾಗಿ ಈ ಕಮ್ಮಟ ಹಮ್ಮಿಕೊಳ್ಳಲಾಗಿದೆ. 18ರಿಂದ 40 ವರ್ಷದೊಳಗಿನವರು ಭಾಗವಹಿಸಬಹುದು. ಕಮ್ಮಟವು ‘ಕನ್ನಡ-ಕನ್ನಡಿಗ-ಕರ್ನಾಟಕ’ ಕುರಿತಾದ ಅಭಿಮಾನ, ಸಾಧನೆ, ಸಮಸ್ಯೆ ಮತ್ತು ಅವುಗಳಿಗೆ ಕಾರ್ಯಸಾಧುವಾದ ಪರಿಹಾರ ಸೂಚಿಸುವ ಉದ್ದೇಶ ಹೊಂದಿದೆ.

ಮೊದಲು ನೋಂದಾಯಿಸಿಕೊಂಡ 30 ಮಂದಿಗೆ ಮಾತ್ರ ಪ್ರವೇಶ. ಶುಲ್ಕ ₹ 300 ನಿಗದಿ ಪಡಿಸಲಾಗಿದ್ದು, ಲೇಖನ ಸಾಮಗ್ರಿ, ಊಟೋಪಚಾರಗಳೊಂದಿಗೆ ಕಮ್ಮಟದಲ್ಲಿ ಭಾಗವಹಿಸಿದವರಿಗೆ ಪ್ರಮಾಣಪತ್ರ ನೀಡಲಾಗುತ್ತದೆ ಎಂದು ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9448709651 ಹಾಗೂ 8904483376

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

ಕಾರ್ಪೊರೇಟ್ ಗುರುತಿನ ಸಂಖ್ಯೆ (CIN) - L85110KA1993PLC013869

ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005

ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ 30ನೇ ವಾರ್ಷಿಕ ಸಾಮಾನ್ಯ ಮಹಾಸಭೆಯ ಸೂಚನೆ

ಈ ಮೂಲಕ ತಿಳಿಸುವುದೇನೆಂದರೆ ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ("Company") **30ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು (AGM)** ಕಂಪನಿಗಳ ಕಾಯಿದೆ, 2013 ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು), ನಿಯಮಗಳು, 2015 ರ ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ **ಶುಕ್ರವಾರ, ಆಗಸ್ಟ್ 11, 2023 ರಂದು ಸಂಜೆ 4:30 ಗಂಟೆಗೆ (ಭಾರತೀಯ ಕಾಲಮಾನದ ಪ್ರಕಾರ) ವೀಡಿಯೋ ಕಾನ್ಫರೆನ್ಸಿಂಗ್ ("VC") ಮೂಲಕ ಅಥವಾ ಇತರೆ ಆಡಿಯೋ ವಿಷುಯಲ್ ಮೀನ್ಸ್ ('OAVM')** ಮೂಲಕ ನಡೆಸಲಾಗುತ್ತದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (MCA) 28ನೇ, ಡಿಸೆಂಬರ್ 2022 ದಿನಾಂಕದ ಸಾಮಾನ್ಯ ಸುತ್ತೋಲೆ 10/2022 ರ ಅನುಸಾರವಾಗಿ ಮತ್ತು SEBI (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ದಿನಾಂಕ 5ನೇ ಜನವರಿ 2023 ರಂದು ಹೊರಡಿಸಿರುವ SEBI/HO/CFD/PoD-2/P/CIR/2023/4 ಸುತ್ತೋಲೆ, ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಷೇರುದಾರರ ಭೌತಿಕ ಉಪಸ್ಥಿತಿಯಿಲ್ಲದೆಯೇ ವೀಡಿಯೊ ಕಾನ್ಫರೆನ್ಸಿಂಗ್ (VC) ಅಥವಾ ಇತರ ಆಡಿಯೋ-ವಿಷುಯಲ್ ಮೀನ್ಸ್ (OAVM) ಮೂಲಕ AGM ಅನ್ನು ನಡೆಸಲು ಅನುಮತಿಸಲಾಗಿದೆ. ಅದರಂತೆ, ಕಂಪನಿಯ 30 ನೇ ಎಜಿಎಂ ಅನ್ನು VC / OAVM ಮೂಲಕ ನಡೆಸಲಾಗುತ್ತಿದೆ. ಇದಲ್ಲದೆ, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**"SEBI"**) ದಿನಾಂಕ 5ನೇ ಜನವರಿ 2023 ರಂದು ಹೊರಡಿಸಿರುವ ತನ್ನ ಸುತ್ತೋಲೆ ಸಂಖ್ಯೆ SEBI/HO/DDHS/DDHS-RACPOD1/P/CIR/2023/001 (**"SEBI ಸುತ್ತೋಲೆ"**) ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ಷೇರುದಾರರಿಗೆ ಕಳುಹಿಸುವುದರ ವಿಷಯದಲ್ಲಿ ಸಡಿಲಿಕೆಯನ್ನು ನೀಡಿದೆ. KFin ಟೆಕ್ನಾಲಜೀಸ್ ಲಿಮಿಟೆಡ್, ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA) ಮೂಲಕ ಕಂಪನಿ / ರಿಜಿಸ್ಟ್ರಾರ್ / ಠೇವಣಿಗಳಲ್ಲಿ ಜುಲೈ 7, 2023 ರ ಶುಕ್ರವಾರ ವ್ಯವಹಾರದ ಸಮಯದ ಮುಕ್ತಾಯದ ವೇಳೆ ಮುಗಿಯುವ ತನಕ ಇಮೇಲ್ ವಿಳಾಸಗಳನ್ನು ನೋಂದಾಯಿಸಿದ ಸದಸ್ಯರಿಗೆ (ಸದಸ್ಯರ ದಾಖಲಾತಿಯಲ್ಲಿ ಅಥವಾ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ಕಾಣಿಸಿಕೊಂಡಿರುವ ಷೇರುದಾರರಿಗೆ ಮಾತ್ರ) FY 2022-23 ರ ವಾರ್ಷಿಕ ವರದಿಯೊಂದಿಗೆ AGM ನ ಸೂಚನೆಯನ್ನು ಮಂಗಳವಾರ, ಜುಲೈ 18, 2023 ರಂದು ಕಂಪನಿಯಿಂದ ಎಲೆಕ್ಟ್ರಾನಿಕ್ ಮೋಡ್ ಮೂಲಕ ಮಾತ್ರ ಕಳುಹಿಸಲಾಗುತ್ತದೆ.

30ನೇ ಎಜಿಎಂ ಪ್ರಕಟಣೆ ಹಾಗೂ ವಾರ್ಷಿಕ ವರದಿ 2022-23ರ ಪ್ರತಿಗಳನ್ನು ಕಂಪನಿಯ https://www.centumelectronics.com/annual-report/ ವೆಬ್‌ಸೈಟ್‌ನಲ್ಲಿ, RTA ರವರ https://evoting.kfintech.com ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಗಳಲ್ಲೂ ಸಹ ಪ್ರಕಟಿಸಲಾಗಿರುತ್ತದೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 91ರ ಅಡಿಯಲ್ಲಿನ ನಿಯಮಗಳನ್ವಯ ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮಗಳನ್ನು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮಗಳ ಜೊತೆಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ವಯ, ಒಂದು ವೇಳೆ ಕಂಪನಿಯ ಹಣಕಾಸು ವರ್ಷ 2022-23ನೇ ಸಾಲಿನ ಎಜಿಎಂನಲ್ಲಿ ಖಚಿತಗೊಳ್ಳುವ ಅಂತಿಮ ಡಿವಿಡೆಂಡ್‌ಗೆ ಅರ್ಹವಿರುವ ಇಕ್ವಿಟಿ ಷೇರುಗಳನ್ನು ಹೊಂದಿರುವ ಅರ್ಹ ಸದಸ್ಯರ ಇತ್ಯರ್ಥಪಡಿಸುವ ದಾಖಲಾತಿ ದಿನಾಂಕವೆಂದು **ಬುಧವಾರ, ಆಗಸ್ಟ್ 2, 2023** ಎಂಬ ದಿನಾಂಕವನ್ನು ನಿಗದಿಪಡಿಸಿಲಾಗಿರುತ್ತದೆ. AGM ಸಭೆಯಲ್ಲಿ ಡಿವಿಡೆಂಡ್ ಘೋಷಣೆಯಾದಲ್ಲಿ, ಅಚಿತಹುದನ್ನು AGM ದಿನಾಂಕದಿಂದ 30 ದಿನಗಳಲ್ಲಿ ಪಾವತಿಸಲಾಗುತ್ತದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಅನುಸರಣೆಯಲ್ಲಿ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ , SEBI ಯ ನಿಯಮ 44 (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು ಮತ್ತು 2015, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮಾರ್ಗಸೂಚಿಗಳು, ಕಂಪನಿಯು ತನ್ನ 30ನೇ ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ವ್ಯವಹಾರಗಳಿಗೆ, ತನ್ನ ಸದಸ್ಯರುಗಳು ತಮ್ಮ ಮತದಾನ ಹಕ್ಕು ಚಲಾಯಿಸಲು ರಿಮೋಟ್ ಇ-ವೋಟಿಂಗ್ ಮತ್ತು ಇನ್‌ಸ್ಟಾ ಪೋಲ್ ಸಿಸ್ಟಂ, ಇವೆರಡೂ ವಿಧಾನಗಳಲ್ಲಿ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸುತ್ತಿದೆ. ಸರ್ವ ಸದಸ್ಯರಿಗೂ ನೀಡಲಾಗುತ್ತಿರುವ ಮಾಹಿತಿ:

1. ಸದಸ್ಯರು VC / OAVM ಮುಖಾಂತರ ತಮ್ಮ ರಿಮೋಟ್ ಇ-ವೋಟಿಂಗ್ ಕ್ರೆಡೆನ್ಷಿಯಲ್ಸ್ ಬಳಸಿಕೊಂಡು 30ನೇ AGM ಸಭೆಗೆ https://emeetings.kfintech.com ಮುಖಾಂತರ ಹಾಜರಾಗಬಹುದು.
2. VC / OAVM ಮುಖಾಂತರ ಪಾಲ್ಗೊಳ್ಳುವ ಸೂಚನೆಗಳು ಮತ್ತು ಇನ್‌ಸ್ಟಾ ಪೋಲ್ ಪ್ರಕ್ರಿಯೆಯ ಸೂಚನೆಗಳನ್ನು 30ನೇ AGM ಪ್ರಕಟಣೆಯಲ್ಲಿ ನೀಡಲಾಗಿರುತ್ತದೆ.
3. ನಿಗದಿತ ಕಟ್ ಆಫ್ ದಿನಾಂಕ **ಶುಕ್ರವಾರ, ಆಗಸ್ಟ್ 4, 2023** ರಂದು ಡೆಪಾಸಿಟರೀಸ್ ನಿರ್ವಹಿಸುವ ಸದಸ್ಯರ ರಜಿಸ್ಟ್ರಾರ್‌ರಲ್ಲಿ ನೋಂದಾಗಿರುವ ಅಥವಾ ಫಲಾನುಭವಿ ಮಾಲಿಕರ ರಜಿಸ್ಟರ್‌ನಲ್ಲಿ ನೋಂದಾಗಿರುವ ಹೆಸರುಗಳನ್ನು ಹೊಂದಿರುವ ಸದಸ್ಯರು ಮಾತ್ರ, ಸಂದರ್ಭಕ್ಕೆ ಅನುಗುಣವಾಗಿ 30ನೇ AGM ಸಭೆಯಲ್ಲಿ ಮತದಾನ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯ ಅಥವಾ ಮತದಾನ ಹಕ್ಕು ಪಡೆಯುತ್ತಾರೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದವರು AGM ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.
4. **ರಿಮೋಟ್ ಇ-ವೋಟಿಂಗ್ ಅವಧಿಯು ಮಂಗಳವಾರ, ಆಗಸ್ಟ್ 8, 2023 ರಂದು ಬೆಳಗ್ಗೆ 9.00 ಗಂಟೆಗೆ ಆರಂಭವಾಗುತ್ತದೆ ಮತ್ತು ಗುರುವಾರ, ಆಗಸ್ಟ್ 10, 2023 ರಂದು ಸಂಜೆ 5.00** ಗಂಟೆವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ, ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಸ್ಥಗಿತಗೊಳಸಲಾಗುತ್ತದೆ. ಸದಸ್ಯರು ಒಂದು ಬಾರಿ ನಿರ್ದಿಷ್ಟ ಠರಾವಿಗೆ ಮತ ಚಲಾಯಿಸಿದ ಬಳಿಕ, ನಂತರದಲ್ಲಿ ಸದಸ್ಯರು ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
5. ಒಂದು ವೇಳೆ, ವ್ಯಕ್ತಿಯೊಬ್ಬರು ಎಜಿಎಂ ಪ್ರಕಟಣೆಯು ರವಾನೆಗೊಂಡ ಬಳಿಕ, ಆದರೆ ರಿಮೋಟ್ ಇ-ವೋಟಿಂಗ್‌ನ **ಕಟ್ ಆಫ್ ದಿನಾಂಕದೊಳಗಾಗಿ** ಕಂಪನಿಯ ಸದಸ್ಯರಾಗಿದ್ದಲ್ಲಿ, ಅಥವಾ ಪ್ರಕಟಣೆಯು ರವಾನೆಗೊಂಡ ಬಳಿಕ ಇಮೇಲ್ ವಿಳಾಸ ನೋಂದಣಿ ಮಾಡಿಕೊಂಡಿದ್ದಲ್ಲಿ, ಅಂತಹ ಸದಸ್ಯರು ಇ-ವೋಟಿಂಗ್‌ನಲ್ಲಿ ನೀಡಲಾಗಿರುವ ಪ್ರೊಸೀಜರ್ ಮತ್ತು ಇನ್‌ಸ್ಟ್ರಕ್ಷನ್ಸ್ ಪ್ರಕಾರ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬಹುದು.
6. AGM ಸಭೆಗೂ ಮುನ್ನವೇ ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಿದ ಸದಸ್ಯರು VC / OAVM ಮುಖಾಂತರ AGM ಸಭೆಗೆ ಹಾಜರಾಗಬಹುದಾಗಿರುತ್ತದೆ, ಆದರೆ ಅಂತಹವರು ಪುನಃ ತಮ್ಮ ಮತ ಚಲಾಯಿಸಲು ಸಾಧ್ಯವಿರುವುದಿಲ್ಲ. ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸದಿರುವ ಸದಸ್ಯರು ಮತ್ತು VC / OAVM ಮುಖಾಂತರ AGM ಸಭೆಗೆ ಹಾಜರಾಗುವ ಸದಸ್ಯರು, AGM ಸಭೆಯ ಅವಧಿಯಲ್ಲಿ ಲಭ್ಯವಿರುವ ಇನ್‌ಸ್ಟಾ ಪೋಲ್ ಸಿಸ್ಟಂ ಮುಖಾಂತರ ತಮ್ಮ ಮತದಾನ ಮಾಡಲು ಅರ್ಹರಾಗಿರುತ್ತಾರೆ.
7. ಎಜಿಎಂ ಸಮಯದಲ್ಲಿ ರಿಮೋಟ್ ಇ-ವೋಟಿಂಗ್ ಮತ್ತು ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯೋಚಿತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯು ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಶ್ರೀ. ಎಸ್. ಪಿ. ನಾಗರಾಜನ್ ಅವರನ್ನು ಸ್ಕ್ರೂಟಿನೈಸರ್ ಆಗಿ ನೇಮಿಸಿದೆ.
8. ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಮ್ಮ ಠೇವಣಿ ಭಾಗವಹಿಸುವವರು(ಗಳು) ಮೂಲಕ ಠೇವಣಿಗಳೊಂದಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ನೋಂದಾಯಿಸಲು ಕೋರಲಾಗಿದೆ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಕಂಪನಿಯ RTA ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್ ನಾನಕ್ರಮ್‌ಗುಡಾ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500 032 ಗೆ ಬರೆಯಬಹುದು.
9. ಯಾವುದೇ ಸದಸ್ಯರಿಗೆ, ಎಜಿಎಂ ಸಭೆಯ ಅವಧಿಯಲ್ಲಾಗಲಿ ಅಥವಾ ಅದಕ್ಕೂ ಮುಂಚಿತವಾಗಿರಲಿ, ಯಾವುದೇ ರೀತಿಯ ತಾಂತ್ರಿಕ ನೆರವು ಅಥವಾ ಸಹಾಯ ಪಡೆಯಬಯಸಿದಲ್ಲಿ, ಅಂತಹವರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರನ್ನು ಟೋಲ್ ಫ್ರೀ ನಂಬರ್ 18003094001 ಮುಖಾಂತರ ಸಂಪರ್ಕಿಸಿ ಅಥವಾ evoting@kfintech.com ವಿಳಾಸಕ್ಕೆ ಇಮೇಲ್ ಬರೆಯಿರಿ ಎಂದು ಕೋರಲಾಗಿದೆ. ಸದಸ್ಯರು ಹೆಚ್ಚಿನ ವಿವರ ಅಥವಾ ಸ್ಪಷ್ಟೀಕರಣಗಳಿಗಾಗಿ, ಮೇಲೆ ತಿಳಿಸಲಾಗಿರುವ RTA ರವರ ವಿಳಾಸದಲ್ಲಿರುವ ಶ್ರೀ. ಎನ್ ಶಿವಕುಮಾರ್ ಇವರನ್ನು ಕೂಡ ಸಂಪರ್ಕಿಸಬಹುದು ಅಥವಾ ಅವರ shivakumar.n@kfintech.com ಇಮೇಲ್ ವಿಳಾಸಕ್ಕೆ ಅಥವಾ ದೂರವಾಣಿ 18003094001 ಸಂಖ್ಯೆಗೆ ಕೂಡ ಸಂಪರ್ಕಿಸಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್

ಬೆಂಗಳೂರು
ಜುಲೈ 18, 2023

ಕನ್ನಡ ಕಡೆಗಣನೆ: ಶಾಲೆಯ ಮೇಲೆ ಕಠಿಣ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಕಡೆಗಣಿಸಿದ ನಗರದ ಚಾಲುಕ್ಯ ವೃತ್ತದಲ್ಲಿರುವ ಸೋಫಿಯಾ ಶಾಲೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. ‘ಕನ್ನಡ ಭಾಷೆ ಕಡಗಣನೆ ಅಸ್ಮಿತೆಗೆ ಸಂಬಂಧಿಸಿದ ಸಂಗತಿಯಾಗಿರುವುದರಿಂದ ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಬೇರೆ ಬೇರೆ ರಾಜ್ಯಗಳಿಂದ ಇಲ್ಲಿಗೆ ಬಂದು ನೆಲೆಸಿರುವ ಕನ್ನಡೇತರ ಪಾಲಕರು, ತಮ್ಮ ಮಕ್ಕಳಿಗೆ ಕನ್ನಡ ಬೋಧನೆ ಅಗತ್ಯವಿಲ್ಲವೆಂದು ಶಾಲಾ ಆಡಳಿತ ಮಂಡಳಿಗೆ ತಿಳಿಸಿರುವುದರಿಂದ ಕನ್ನಡ ಬೋಧನೆ ಕೈಬಿಡಲು ಶಾಲೆ ಮುಂದಾಗಿದೆ ಎನ್ನಲಾಗಿದೆ. ಇದು ಕನ್ನಡ ನಾಡು-ನುಡಿಗೆ ಹಾಗೂ ಕನ್ನಡ ಭಾಷೆಯ ಅಸ್ಮಿತೆಗೆ ಎಸಗುವ ಅಪಚಾರವಾಗುತ್ತದೆ. ಯಾವುದೇ ರಾಜ್ಯದ, ಯಾವುದೇ ಭಾಷೆಯ ಜನ ನಮ್ಮ ರಾಜ್ಯದಲ್ಲಿ ವಾಸಿಸಲು ಸಂವಿಧಾನಾತ್ಮಕ ಹಕ್ಕಿದೆ. ಆದರೆ, ತಾವು ವಾಸಿಸುವ ನೆಲದ ಭಾಷೆಯ ಬಗ್ಗೆ ಪ್ರಾಥಮಿಕ ತಿಳುವಳಿಕೆಯಾದರೂ ಇರಬೇಕಾದದ್ದು ಅವಶ್ಯ’ ಎಂದು ಹೇಳಿದ್ದಾರೆ.

‘ಸ್ಥಳೀಯ ಭಾಷೆ, ಸಂಸ್ಕೃತಿ ಮತ್ತು ಭಾವನೆಗಳನ್ನು ಗೌರವಿಸಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯವೂ ಆಗಿದೆ. ತಾವು ನೆಲೆಸಿದ ನೆಲದ ಭಾಷೆಯನ್ನು ವ್ಯಾವಹಾರಿಕವಾಗಿ ಬಳಸುವಷ್ಟು ಕಲಿಯಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ. ಹಾಗಾಗಿ, ಕರ್ನಾಟಕದಲ್ಲಿರುವ ಪ್ರತಿಯೊಂದು ಶಾಲೆಯೂ ಕನ್ನಡ ಭಾಷೆಯನ್ನು ಬೋಧಿಸಬೇಕಾದದ್ದು ಅವುಗಳ ಆದ್ಯತೆಯಾಗಿರಬೇಕು. ಇದರಿಂದ ಹಿಂದೆ ಸರಿಯುವ ಅಥವಾ ಇದರಿಂದ ತಪ್ಪಿಸಿಕೊಳ್ಳಲು ಒಳದಾರಿ ಹುಡುಕುವ ಕ್ರಮಗಳಿಗೆ ನಾವು ಆಸ್ಪದ ಕೊಡಬಾರದು’ ಎಂದು ತಿಳಿಸಿದ್ದಾರೆ.

‘ದ್ವಿತೀಯ ಭಾಷೆಯಾಗಿ ಕನ್ನಡ ಕಲಿಸುವ ನಿಯಮಗಳಲ್ಲಿ ಯಾವುದೇ ಕಾರಣಕ್ಕೂ ಸಡಿಲಿಕೆ ಅಥವಾ ವಿನಾಯಿತಿ ನೀಡಬಾರದು. ಇದಕ್ಕೆ ವ್ಯತಿರಿಕ್ತವಾಗಿ ಶಿಕ್ಷಣ ಇಲಾಖೆಯ ಮೇಲೆ ಇಂತಹ ಶಾಲೆಗಳು ಒತ್ತಡ ತರಲು ಹಾಗೂ ಕಾನೂನು ಹೋರಾಟ ಮಾಡಲು ಸಿದ್ಧತೆ ನಡೆಸಿರುವುದನ್ನು ತಾವು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು’ ಎಂದು ಹೇಳಿದ್ದಾರೆ.

ಸ್ಪಷ್ಟನೆ ನೀಡಲು ಸೂಚನೆ

‘ಕನ್ನಡ ಭಾಷಾ ಕಲಿಕೆ ಅಧಿನಿಯಮ 2015ರ ಅನ್ವಯ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಶಾಲೆಗಳಲ್ಲಿ, ಎಲ್ಲಾ ತರಗತಿಗಳಲ್ಲಿ ಪ್ರಥಮ ಭಾಷೆಯಾಗಿ ಅಥವಾ ದ್ವಿತೀಯ ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. ಸೋಫಿಯಾ ಶಾಲೆಯ ಆಡಳಿತ ಮಂಡಳಿ ಹಾಗೂ ಹಲವಾರು ಪೋಷಕರು ಕನ್ನಡ ಭಾಷೆಯನ್ನು ಬೋಧಿಸಲು ವಿರೋಧಿಸುತ್ತಿರುವ ಅಂಶವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ಬಗ್ಗೆ ಮೂರು ದಿನಗಳ ಒಳಗೆ ಶಾಲೆಯ ಆಡಳಿತ ಮಂಡಳಿಯು ವರದಿಯೊಂದಿಗೆ ಸ್ಪಷ್ಟನೆ ನೀಡಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ಸೋಫಿಯಾ ಶಾಲೆಯ ಮುಖ್ಯಸ್ಥರಿಗೆ ಪತ್ರದ ಮೂಲಕ ಸೂಚಿಸಿದ್ದಾರೆ.

ನೈಋತ್ಯ ರೈಲ್ವೆ G20

ಟೆಂಡರು ಸೂಚನೆ ಸಂ.: 17/2023
ದಿನಾಂಕ: 11.07.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರ: ಕಡಿಮೆ ನಿರ್ವಹಣೆಯುಳ್ಳ ಲೆಡ್ ಆಸಿಡ್ ಸ್ಟೇಷನರಿ ಸೆಕೆಂಡರಿ ಸೆಲ್ 2Vx200AH ಸಾಮರ್ಥ್ಯವುಳ್ಳ 27 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ 10 ಗಂಟೆಗಳ ಡಿಸ್ಚಾರ್ಜ್ ದರದೊಂದಿಗೆ ಗಟ್ಟಿಯಾದ ರಬ್ಬರ್ ಕಂಟೇನರ್‌ನಲ್ಲಿ ಕೊಳವೆಯಾಕಾರದ ಧನಾತ್ಮಕ ಮತ್ತು ಅಂಟಿಸಿದ ಋಣಾತ್ಮಕ ಪ್ಲೇಟ್‌ಗಳೊಂದಿಗೆ ಜೋಡಿಸಲಾಗಿದೆ, ಇದು ಆರ್‌ಡಿಎಸ್‌ಓ ನ ನಿರ್ದಿಷ್ಟತಾ ಸಂ. ಐಆರ್‌ಎಸ್-ಎಸ್-88/2004 ಸೆಲ್ ಗಳು ಮೈಕ್ರೋ ಪೋರಸ್ ವೆಂಟ್ ಪ್ಲಗ್ ಕಮ್ ಸೀಲ್ಡ್ ಫ್ಲೋಟ್‌ಗಳು, ಒಳಗಿನ ಸೆಲ್ ಕನೆಕ್ಟರ್‌ಗಳು, ನಟ್ಸ್, ಬೋಲ್ಟ್‌ಗಳು ಮತ್ತು ವಾಷರ್‌ಗಳೊಂದಿಗೆ ಸರಬರಾಜು ಮಾಡಲಾಗುತ್ತದೆ. ಸೆಲ್‌ಅನ್ನು ಶುಷ್ಕ ಮತ್ತು ಚಾರ್ಜ್ ಮಾಡದೆ ಸರಬರಾಜು ಮಾಡಲಾಗುವುದು.

(ಪರಿಮಾಣ: 720 ಸಂ.) (ಟೆಂಡರು ಸಂ. L8236011)

[illegible]

S.W.Railways SWRRLY

[illegible]

ಪ್ರಕಟಣೆ

[illegible]

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy



ವಿಧಾನಸೌಧದಲ್ಲಿ ಸೋಮವಾರ ನಡೆದ ‘ದಕ್ಷಿಣ ಭಾರತ ಉತ್ಸವ 2023’ರ ಲಾಂಛನ ಬಿಡುಗಡೆ ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷ ರಮೇಶ್ ಚಂದ್ರ ಲಹೋಟಿ, ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ, ಎಫ್‌ಕೆಸಿಸಿಐ ಅಧ್ಯಕ್ಷ ಗೋಪಾಲ ರೆಡ್ಡಿ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ರಾಮ ಪ್ರಸಾತ್ ಮನೋಹರ್, ಎಫ್‌ಕೆಸಿಸಿಐ ಉಪಾಧ್ಯಕ್ಷ ಎಂ.ಜಿ. ಬಾಲಕೃಷ್ಣ, ಎಫ್‌ಕೆಸಿಸಿಐ ನಿಕಟಪೂರ್ವ ಅಧ್ಯಕ್ಷ ಐ.ಎಸ್. ಪ್ರಸಾದ್ ಹಾಗೂ ಇತರರು ಪಾಲ್ಗೊಂಡಿದ್ದರು.

ನಿರುದ್ಯೋಗಿ, ಮದ್ಯ ವ್ಯಸನಿಯಾಗಿದ್ದ ಆರೋಪಿ • ಹಿರಿಯ ಮಗನಿಂದ ಪೊಲೀಸರಿಗೆ ದೂರು

ತಂದೆ–ತಾಯಿ ಕೊಲೆ: ಮಗ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಭಾಸ್ಕರ್ (63) ಹಾಗೂ ಪತ್ನಿ ಶಾಂತಾ (60) ಅವರನ್ನು ತಲೆಗೆ ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಮಗ ಶರತ್ (26) ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಮಂಗಳೂರಿನ ಭಾಸ್ಕರ್–ಶಾಂತಾ, ಬ್ಯಾಟರಾಯನಪುರದಲ್ಲಿ 12 ವರ್ಷಗಳಿಂದ ವಾಸವಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಎರಡನೇ ಮಗ ಶರತ್, ತಂದೆ–ತಾಯಿಯನ್ನು ಕೊಂದು ಪರಾರಿಯಾಗಿದ್ದಾನೆ. ಈ ಬಗ್ಗೆ ಹಿರಿಯ ಮಗ ಸಜಿತ್ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೋಮವಾರ ಸಂಜೆ ಕೊಲೆ ನಡೆದಿದ್ದು, ಮಂಗಳವಾರ ಬೆಳಿಗ್ಗೆ ಮೃತದೇಹಗಳು ಪತ್ತೆಯಾಗಿವೆ. ಮರಣೋತ್ತರ ಪರೀಕ್ಷೆಗೆಂದು ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಶ್ವಾನದಳದ ಸಿಬ್ಬಂದಿ ಪರಿಶೀಲಿಸಿ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಪರಾರಿಯಾಗಿರುವ ಆರೋಪಿ ಶರತ್ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ತಿಳಿಸಿವೆ.



ಶಾಂತಾ ಹಾಗೂ ಭಾಸ್ಕರ್

ಅಪರಾಧ ಸುದ್ದಿ



ಶರತ್

ನಿರುದ್ಯೋಗಿಯಾಗಿದ್ದ ಆರೋಪಿ: 'ಭಾಸ್ಕರ್, ಹೋಟೆಲೊಂದರಲ್ಲಿ ಕ್ಯಾಶಿಯರ್ ಆಗಿದ್ದರು. ಶಾಂತಾ, ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿ. ಹಿರಿಯ ಮಗ ಸಜಿತ್, ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ನಿರುದ್ಯೋಗಿ ಆಗಿದ್ದ ಶರತ್, ಯಾವಾಗಲೂ ಮನೆಯಲ್ಲಿ ಇರುತ್ತಿದ್ದರು. ಮನೆ ಚಾವಣಿಯಲ್ಲಿರುವ ಕೊಠಡಿಯಲ್ಲಿ ಹೆಚ್ಚು ಸಮಯ ಒಂಟಿಯಾಗಿ ಕುಳಿತುಕೊಳ್ಳುತ್ತಿದ್ದ' ಎಂದು ಮೂಲಗಳು ಹೇಳಿವೆ.

'ಮದ್ಯವ್ಯಸನಿಯೂ ಆಗಿದ್ದ ಶರತ್, ಆಗಾಗ ಮದ್ಯ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಇದರಿಂದ ತಂದೆ–ತಾಯಿಗೆ ಕಿರಿಕಿರಿ ಆಗಿತ್ತು. ಮದ್ಯ ಕುಡಿಯುವುದನ್ನು ತ್ಯಜಿಸುವಂತೆ ಹಲವು ಬಾರಿ ತಾಕೀತು ಮಾಡಿದ್ದರು' ಎಂದು ತಿಳಿಸಿವೆ.

'ಹತ್ಯೆ ಬಳಿಕ ಮನೆ ಬಾಗಿಲನ್ನು ಹೊರಗಿನಿಂದ ಲಾಕ್ ಮಾಡಿ ಆರೋಪಿ ಪರಾರಿಯಾಗಿದ್ದಾನೆ. ಪ್ರತ್ಯೇಕವಾಗಿ ವಾಸವಿರುವ ಹಿರಿಯ ಮಗ ಸಚಿತ್, ತಂದೆ–ತಾಯಿಗೆ ಮಂಗಳವಾರ ಬೆಳಿಗ್ಗೆ ಕರೆ ಮಾಡಿದ್ದ. ಆದರೆ, ಕರೆ ಸ್ವೀಕರಿಸಿರಲಿಲ್ಲ.'

'ಗಾಬರಿಗೊಂಡ ಸಚಿತ್, ಮನೆ ಬಳಿ ಹೋಗಿ ನೋಡುವಂತೆ ಪಕ್ಕದ ಮನೆಯವರಿಗೆ ತಿಳಿಸಿದ್ದರು. ಅವರು ಮನೆ ಬಳಿ ಹೋದಾಗ ಬಾಗಿಲು ಲಾಕ್ ಆಗಿತ್ತು. ಕಿಟಕಿಯಲ್ಲಿ ನೋಡಿದಾಗ ಮೃತದೇಹಗಳು ಕಂಡಿದ್ದವು. ನಂತರವೇ ಸಚಿತ್ ಸ್ಥಳಕ್ಕೆ ಬಂದಿದ್ದರು. ಕೊಲೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ, ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಶರತ್, ಕೆಲ ದಿನಗಳಿಂದ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದ. ತಂದೆ–ತಾಯಿ ಯಾವುದೇ ವಿಷಯ ಪ್ರಸ್ತಾಪಿಸಿದರೂ ಕೋಪಗೊಳ್ಳುತ್ತಿದ್ದನೆಂದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಬಾಗಿಲು ಹಾಕಿ ಪರಾರಿ

ಸೋಮವಾರ (ಜುಲೈ17) ಸಂಜೆ ಮದ್ಯ ಕುಡಿದು ಮನೆಗೆ ಬಂದಿದ್ದ ಶರತ್, ತಂದೆ–ತಾಯಿ ಜೊತೆ ಜಗಳ ತೆಗೆದಿದ್ದ. ಪರಸ್ಪರ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು ಎನ್ನಲಾಗಿದೆ. ಇದೇ ಸಂದರ್ಭದಲ್ಲಿ ಶರತ್, ಕಬ್ಬಿಣದ ರಾಡ್‌ನಿಂದ ತಂದೆ–ತಾಯಿ ತಲೆಗೆ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದಾಗಿ ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಿಸೇರಿಯನ್‌ಗಾಗಿ ಲಂಚ

ನೆಲಮಂಗಲ ಸರ್ಕಾರಿ ಆಸ್ಪತ್ರೆ ವೈದ್ಯರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ 20 ವರ್ಷ ವಯಸ್ಸಿನ ಬಡ ಮಹಿಳೆಯ ಸಿಸೇರಿಯನ್ ನಡೆಸಲು ಪಡೆದಿದ್ದ ₹ 10,000 ಲಂಚದ ಹಣವನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ವಶಪಡಿಸಿಕೊಂಡಿದ್ದಾರೆ.

ಮಂಜುಳಾ ಎಂಬುವವರ ಹೆರಿಗೆ ಮಾಡಿಸಲು ಪ್ರಸೂತಿ ತಜ್ಞ ಡಾ. ರಾಮಚಂದ್ರ ₹ 15,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅವರ ಪತಿ ಲಿಂಗಪ್ಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರನ್ನು ಭೇಟಿಮಾಡಿ ಈ ಕುರಿತು ದೂರು ಹೇಳಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಲೋಕಾಯುಕ್ತರು, ಲಂಚ ಪ್ರಕರಣದಲ್ಲಿ ವೈದ್ಯರ ಬಂಧನಕ್ಕೆ ಕಾರ್ಯಾಚರಣೆ ನಡೆಸುವಂತೆ ಸಂಸ್ಥೆಯ ಪೊಲೀಸರಿಗೆ ನಿರ್ದೇಶನ ನೀಡಿದ್ದರು.

'ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿವೈಎಸ್‌ಪಿ ನೇತೃತ್ವದ ತಂಡ ತಕ್ಷಣವೇ ನೆಲಮಂಗಲ ಸಾರ್ವಜನಿಕ ಆಸ್ಪತ್ರೆಗೆ ತೆರಳಿತು. ಅಷ್ಟರಲ್ಲಿ ಮಂಜುಳಾ ಅವರ ಸಿಸೇರಿಯನ್ ಮುಗಿದು, ಹೆಣ್ಣು ಮಗು ಜನಿಸಿತ್ತು. ಡಾ.ರಾಮಚಂದ್ರ ಅವರ ಬದಲಿಗೆ ಡಾ. ಗುರುಪ್ರಿಯಾ ಎಂಬುವವರು ಶಸ್ತ್ರಚಿಕಿತ್ಸೆ ನಡೆಸಿದ್ದರು. ಇದಕ್ಕಾಗಿ ವಾಹಿದ್ ಎಂಬ ವಾರ್ಡ್ ಬಾಯ್ ಮೂಲಕ ₹ 10,000 ಲಂಚ ಪಡೆದುಕೊಂಡಿದ್ದರು' ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

'ವಾಹಿದ್‌ನನ್ನು ವಶಕ್ಕೆ ಪಡೆದ ಲೋಕಾಯುಕ್ತ ಪೊಲೀಸರು ಪ್ರಶ್ನಿಸಿದರು. ಆತ ಡಾ. ರಾಮಚಂದ್ರ ಅವರ ಸೂಚನೆಯಂತೆ ಲಂಚ ಪಡೆದಿರುವುದಾಗಿ ಒಪ್ಪಿಕೊಂಡ. ಡಾ. ರಾಮಚಂದ್ರ ಅವರಿಗೆ ಮೊಬೈಲ್ ಮೂಲಕ ಕರೆಮಾಡಿ ಹಣ ಪಡೆದಿರುವ ಬಗ್ಗೆ ತಿಳಿಸಿದ. ಐಶ್ವರ್ಯಾ ಎಂಬುವವರ ಬಳಿ ಹಣ ತಲುಪಿಸುವಂತೆ ಸೂಚಿಸಿದರು. ಈ ಎಲ್ಲವನ್ನೂ ವಿಡಿಯೊ ಚಿತ್ರೀಕರಣ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಲಿಂಗಪ್ಪ ಮತ್ತು ಅವರ ಕುಟುಂಬದವರು ವೈದ್ಯರ ವಿರುದ್ಧ ಅಧಿಕೃತವಾಗಿ ದೂರು ನೀಡಿಲ್ಲ. ಈ ಕಾರಣದಿಂದ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು, ವಿಚಾರಣೆ ಆರಂಭಿಸಿದ್ದಾರೆ.



ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ವಾರ್ಡ್ ಬಾಯ್ ವಾಹಿದ್ ಎಂಬಾತನಿಂದ ಲೋಕಾಯುಕ್ತ ಪೊಲೀಸರು ಲಂಚದ ಹಣ ವಶಪಡಿಸಿಕೊಳ್ಳುತ್ತಿರುವುದು

ಬಿಎಂಟಿಸಿ ಚಾಲಕ ಅಸ್ವಸ್ಥ: ಬಸ್ ಚಲಾಯಿಸಿದ ಎಸಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಮಸ್ಯೆಯಿಂದ ಚಾಲಕ ಅಸ್ವಸ್ಥಗೊಂಡಿದ್ದರಿಂದ ನಡುರಸ್ತೆಯಲ್ಲಿ ನಿಲ್ಲಿಸಿದ್ದ ಬಿಎಂಟಿಸಿ ಬಸ್ ಅನ್ನು ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ) ರಾಮಚಂದ್ರಪ್ಪ ಅವರು 1 ಕಿ.ಮೀ. ವರೆಗೆ ಚಲಾಯಿಸಿ ಸುರಕ್ಷಿತ ಸ್ಥಳಕ್ಕೆ ತಲುಪಿಸಿದ್ದಾರೆ.

ಹಳೇ ಮದ್ರಾಸ್ ರಸ್ತೆಯಲ್ಲಿ ಸೋಮವಾರ ನಡೆದಿರುವ ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಎಸಿಪಿ ಕೆಲಸಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಕೇಂದ್ರದ ವಿರೋಧ ಪಕ್ಷಗಳ ನಾಯಕರ ಸಭೆ ಪ್ರಯುಕ್ತ ಹಲಸೂರು ಉಪವಿಭಾಗದ ಎಸಿಪಿ ರಾಮಚಂದ್ರಪ್ಪ ಅವರು ಹಳೇ ಮದ್ರಾಸ್ ರಸ್ತೆಯಲ್ಲಿ ಕರ್ತವ್ಯದಲ್ಲಿದ್ದರು. ನಾಯಕರ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸುತ್ತಿದ್ದರು. ಭದ್ರತೆ ಜವಾಬ್ದಾರಿ ವಹಿಸಿಕೊಂಡಿದ್ದರು.

ಚಲಿಸುತ್ತಿದ್ದ ಬಸ್‌ನ ಚಾಲಕ, ಏಕಾಏಕಿ ಮೂರ್ಛೆ ಬಿದ್ದು ಅಸ್ವಸ್ಥಗೊಂಡಿದ್ದರು. ಆರೋಗ್ಯ ಸಮಸ್ಯೆ ಅರಿತಿದ್ದ ಚಾಲಕ, ಮೂರ್ಛೆ ಬೀಳುವುದಕ್ಕೂ ಮುನ್ನವೇ ನಡುರಸ್ತೆಯಲ್ಲಿ ಬಸ್ ನಿಲ್ಲಿಸಿದ್ದರು.

ಸಹಾಯಕ್ಕೆ ಹೋಗಿದ್ದ ಎಸಿಪಿ ರಾಮಚಂದ್ರಪ್ಪ ಹಾಗೂ ಸಿಬ್ಬಂದಿ, ಚಾಲಕನನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದ್ದರು. ನಡುರಸ್ತೆಯಲ್ಲಿ ನಿಲ್ಲಿಸಿದ್ದ ಬಸ್ ಏರಿದ ಎಸಿಪಿ ರಾಮಚಂದ್ರಪ್ಪ, 1 ಕಿ.ಮೀ.ವರೆಗೂ ಚಲಾಯಿಸಿದ್ದರು. ಸುರಕ್ಷಿತ ಸ್ಥಳದಲ್ಲಿ ಬಸ್ ನಿಲ್ಲಿಸಿ ಕೆಳಗೆ ಇಳಿದಿದ್ದರು.

ಬಸ್‌ನಲ್ಲಿದ್ದ ಪ್ರಯಾಣಿಕರೊಬ್ಬರು ಎಸಿಪಿ ಅವರ ಚಾಲನೆ ವಿಡಿಯೊವನ್ನು ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ವಿಡಿಯೊವನ್ನು ಹಂಚಿಕೊಂಡಿರುವ ಹಲವರು, 'ತುರ್ತು ಸಂದರ್ಭದಲ್ಲಿ ಚಾಲಕನನ್ನು ಆಸ್ಪತ್ರೆಗೆ ಸೇರಿಸಿರುವ ರಾಮಚಂದ್ರಪ್ಪ ಅವರು ಇತರೆ ಅಧಿಕಾರಿಗಳಿಗೆ ಮಾದರಿ' ಎಂದು ಹೊಗಳಿದ್ದಾರೆ.



ಬಿಎಂಟಿಸಿ ಬಸ್ ಚಲಾಯಿಸಿದ ಎಸಿಪಿ ರಾಮಚಂದ್ರಪ್ಪ

ಸಾವು ಗೆಲ್ಲಲಾಗದೆ ಕೊನೆಯುಸಿರೆಳೆದ ಯುವಕ

ಪ್ರಜಾವಾಣಿ ವಾರ್ತೆ

ರಾಮನಗರ: ಪುತ್ರಿಯನ್ನು ಪ್ರೀತಿಸಿದ್ದಕ್ಕಾಗಿ ಯುವಕನೊಬ್ಬನ ಮೇಲೆ ಯುವತಿ ತಂದೆ ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಿದ್ದ ಘಟನೆಯಲ್ಲಿ, ಗಂಭೀರವಾಗಿ ಗಾಯಗೊಂಡಿದ್ದ ಶಶಾಂಕ್ (18) ಮಂಗಳವಾರ ಮೃತಪಟ್ಟಿದ್ದಾರೆ.

ಶೇ 80ರಷ್ಟು ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಶಶಾಂಕ್ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಾಲ್ಕು ದಿನಗಳಿಂದ ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಶಶಾಂಕ್, ಕಡೆಗೂ ಸಾವು ಗೆಲ್ಲಲಾಗದೆ ಸಂಜೆ 5 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ ಎಂದು ಕುಂಬಳಗೋಡು ಠಾಣೆ ಪೊಲೀಸರು ತಿಳಿಸಿದರು.

ರಾಜರಾಜೇಶ್ವರಿ ನಗರ ನಿವಾಸಿಯಾದ ಶಶಾಂಕ್, ಅಲ್ಲಿನ ಎಸಿಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ಕಂಪ್ಯೂಟರ್ ವಿಜ್ಞಾನ ಓದುತ್ತಿದ್ದರು. ಸಂಬಂಧದಲ್ಲಿ ದೊಡ್ಡಪ್ಪನಾಗಿರುವ ಚಾಮರಾಜನಗರದ ಹರದನಹಳ್ಳಿಯ ಮನು ಅವರ ಪುತ್ರಿ ಲಹರಿಯನ್ನು ಪ್ರೀತಿಸುತ್ತಿದ್ದರು. ಇದಕ್ಕೆ ಯುವತಿ ಕುಟುಂಬದವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು ಎಂದು ಹೇಳಿದರು.

ಇದೇ ವಿಷಯಕ್ಕಾಗಿ, ಶಶಾಂಕ್ ಅವರನ್ನು ಮನು ಸೇರಿದಂತೆ 6 ಮಂದಿ ಕಾಲೇಜಿನ ಬಳಿ ಅಪಹರಿಸಿದ್ದರು. ಕಣಮಿಣಿಕೆ ಬಳಿಯ ನಿರ್ಜನ ಪ್ರದೇಶಕ್ಕೆ ಶಶಾಂಕ್ ಅವರನ್ನು ಕರೆದೊಯ್ದು ಹಲ್ಲೆ ನಡೆಸಿದ್ದ ಆರೋಪಿಗಳು, ನಂತರ ಮೈ ಮೇಲೆ ಪೆಟ್ರೋಲ್ ಸುರಿದು ಪರಾರಿಯಾಗಿದ್ದರು ಎಂದರು.

ನೆಲದ ಮೇಲೆ ಹೊರಳಾಡಿ ಬೆಂಕಿ ನಂದಿಸಿಕೊಂಡಿದ್ದ ಶಶಾಂಕ್, ತನ್ನ ಸಂಬಂಧಿಕರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಬಂದಿದ್ದ ಅವರು, ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ, ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಘಟನೆ ಬಳಿಕ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಎರಡು ತಂಡಗಳನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಚರಂಡಿ ಬಳಿ ನವಜಾತ ಶಿಶು ಪತ್ತೆ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ರೋಣಪುರದ ಹನುಮಂತ ದೇಗುಲ ಸಮೀಪದ ರಸ್ತೆ ಬದಿ ಚರಂಡಿ ಸಮೀಪ ಮಂಗಳವಾರ ನವಜಾತ ಶಿಶು ಸಿಕ್ಕಿದ್ದು, ಸಾರ್ವಜನಿಕರು ಜಿಲ್ಲಾಸ್ಪತ್ರೆಗೆ ಒಯ್ದು ದಾಖಲಿಸಿದ್ದಾರೆ.

'ಜಿಲ್ಲಾಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಶಿಶುವನ್ನು ದಾಖಲಿಸಲಾಗಿದೆ. ಶಿಶುವನ್ನು ಚರಂಡಿ ಸಮೀಪ ಯಾರು ಇಟ್ಟುಹೋಗಿದ್ದರು ಎಂಬ ಬಗ್ಗೆ ಮಾಹಿತಿ ಇಲ್ಲ. ಸ್ಥಳ ಪರಿಶೀಲಿಸುತ್ತೇವೆ. ಅಲ್ಲಿ ಇಟ್ಟುಹೋದವರ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದೇವೆ' ಎಂದು ಸಬ್ ಅರ್ಬನ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಎತ್ತು ಕದ್ದ ಆರೋಪ: ಥಳಿತ

ಪ್ರಜಾವಾಣಿ ವಾರ್ತೆ

ಕಲಬುರಗಿ: ತಾಲ್ಲೂಕಿನ ಜಂಬಗಾ (ಬಿ) ಗ್ರಾಮದಲ್ಲಿ ಎತ್ತು ಕದ್ದ ಆರೋಪದಲ್ಲಿ ವ್ಯಕ್ತಿಯೊಬ್ಬನನ್ನು ಗ್ರಾಮಸ್ಥರು ಮಂಗಳವಾರ ಹಿಡಿದು ಮರಕ್ಕೆ ಕಟ್ಟಿ ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ.

ಜಂಬಗಾ (ಬಿ) ನಿವಾಸಿ ಮಂಜುನಾಥ ಎಂಬಾತನನ್ನು ಸಬ್‌ಅರ್ಬನ್ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇದೇ ಗ್ರಾಮದ ಮಲ್ಲಣ್ಣ ದೇಗಾಂವ ಅವರು ತಮ್ಮ ಎರಡು ಎತ್ತುಗಳನ್ನು ಜಮೀನಿನಲ್ಲಿ ಕಟ್ಟಿದ್ದರು. ಮಂಜುನಾಥ ಸೋಮವಾರ ರಾತ್ರಿ ಒಂದು ಎತ್ತು ಕದ್ದು, ನೆರೆಯ ಅವರಾದ ಗ್ರಾಮಕ್ಕೆ ತೆರಳಿ ಮಾರಲು ಯತ್ನಿಸಿದ್ದ. ಎತ್ತಿನ ಪೂರ್ವಾಪರ ವಿಚಾರಿಸಿದಾಗ ಕದ್ದು ತಂದಿದ್ದು ಎಂದು ಗೊತ್ತಾಯಿತು. ತಕ್ಷಣವೇ ಜಂಬಗಾ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು ಎಂದು ಗ್ರಾಮಸ್ಥರೊಬ್ಬರು ಹೇಳಿದ್ದಾರೆ.

ಅವರಾದ ಗ್ರಾಮದಿಂದ ಮಂಜುನಾಥನ್ನು ಹಿಡಿದು ತಂದು ಜಂಬಗಾ ಗ್ರಾಮದ ಬೇವಿನ ಮರಕ್ಕೆ ಕಟ್ಟಲಾಯಿತು. ಕೆಲ ಸಮಯದ ನಂತರ ಸಬ್‌ಅರ್ಬನ್ ಠಾಣೆ ಪೊಲೀಸರಿಗೆ ಆರೋಪಿಯನ್ನು ಒಪ್ಪಿಸಲಾಯಿತು ಎಂದರು.

'ಆರೋಪಿ ಮದ್ಯದ ನಶೆಯಲ್ಲಿ ಮಾಲೀಕರ ಎತ್ತು ಕದ್ದು, ಮಾರಲು ಯತ್ನಿಸುತ್ತಿದ್ದ. ಗ್ರಾಮಸ್ಥರ ನೆರವಿನಿಂದ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತ ನಶೆಯಲ್ಲಿ ಆಗಾಗ ಗ್ರಾಮಸ್ಥರಿಗೂ ತೊಂದರೆ ನೀಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಜೈನ ಮುನಿ ಹತ್ಯೆ: ತನಿಖೆಗೆ ಆಗ್ರಹ

ಚಿಕ್ಕೋಡಿ (ಬೆಳಗಾವಿ): 'ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜ ಅವರ ಕೊಲೆಯಲ್ಲಿ ಒಬ್ಬನ ಕೈವಾಡ ಮಾತ್ರವಿಲ್ಲ. ಇದರ ಹಿಂದೆ ಮುಸ್ಲಿಂ ಸಂಘಟನೆಯ ಕೈವಾಡ ಇರುವ ಶಂಕೆ ಇದೆ. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಅಖಿಲ ಭಾರತೀಯ ಸಂತ ಸಮಿತಿ ರಾಜ್ಯ ಘಟಕದ ಅಧ್ಯಕ್ಷರಾದ ವಿದ್ಯಾನಂದ ಸರಸ್ವತಿ ಸ್ವಾಮೀಜಿ ಆಗ್ರಹಿಸಿದರು.

ಹಿರೇಕೋಡಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿ ಆಶ್ರಮದ ನಿವಾಸಿಗಳಿಗೆ ಸಾಂತ್ವನ ಹೇಳಿದ ಬಳಿಕ ಅವರು, ಮಾಧ್ಯಮದವರೊಂದಿಗೆ ಮಾತನಾಡಿದರು.

ಬಾಂಗ್ಲಾದೇಶದಿಂದ ಬಂದವರಿಗೆ ಎಚ್ಚರಿಕೆ ನೀಡಿದ ಶಾಸಕ ಮುನಿರಾಜು

'ಅಕ್ರಮ ವಾಸಿಗಳಿಗೆ ನೆಲೆ ಇಲ್ಲ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಬಾಂಗ್ಲಾದೇಶದಿಂದ ನುಸುಳಿಕೊಂಡು ಬಂದು ಇಲ್ಲಿ ಅಕ್ರಮವಾಗಿ ನೆಲೆಸಲು ಅವಕಾಶ ನೀಡುವುದಿಲ್ಲ. ಅಂಥವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು' ಎಂದು ಶಾಸಕ ಎಸ್. ಮುನಿರಾಜು ಎಚ್ಚರಿಸಿದರು.

ಚಿಕ್ಕಬಾಣಾವರ ಕಾವೇರಿ ಬಡಾವಣೆ ಹತ್ತಿರದ ಸುಮಾರು ಮೂರು ಎಕರೆ ತೋಟದ ಜಾಗದಲ್ಲಿ 50ಕ್ಕೂ ಹೆಚ್ಚು ಬಿಡಾರ ಹಾಕಿಕೊಂಡು ಪ್ಲಾಸ್ಟಿಕ್, ಸ್ಕ್ರಾಪ್ ಮುಂತಾದ ವಹಿವಾಟು ನಡೆಸುತ್ತಿರುವವರ ಸ್ಥಳಕ್ಕೆ ಪೊಲೀಸ್ ಸಿಬ್ಬಂದಿ ಸಮೇತ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಮಾತನಾಡಿದರು.

'ನುಸುಳುಕೋರರು ಮೊದಲು ಕೋಲ್ಕತ್ತಕ್ಕೆ ಬರುತ್ತಾರೆ. ಅಲ್ಲಿಂದ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಮಾಡಿಸಿಕೊಂಡು ದೇಶದ ಮೂಲೆಮೂಲೆಗೂ ವ್ಯಾಪಿಸುತ್ತಾರೆ. ರಾಜ್ಯದಲ್ಲಿ ಸ್ಥಳೀಯ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮೂಲಕ ವಿಳಾಸ ಬದಲಿಸಿಕೊಂಡು ವಾಸಿಸುತ್ತಾರೆ' ಎಂದರು.

'ಸುತ್ತಮುತ್ತ ಪ್ರದೇಶದಲ್ಲಿ ಸಿಗುವ ವಸ್ತುಗಳು ಪ್ಲಾಸ್ಟಿಕ್, ಸ್ಕ್ರಾಪ್ ಮತ್ತು ರಾತ್ರಿ ವೇಳೆ ಕೋಳಿ, ಮೇಕೆ ಕದಿಯುತ್ತಾರೆ. ಹಾಗೆಯೇ ದೇಶ ದ್ರೋಹಿ ಚಟುವಟಿಕೆಗಳಲ್ಲಿ ತೊಡಗಿರುವ ಶಂಕೆಯಿದೆ' ಎಂದು ಹೇಳಿದರು.

'ಹಿಂದೆ ಮೇದರಹಳ್ಳಿಯಲ್ಲಿ ನೆಲೆಸಿದ್ದರು. ಆಗ ಸೋಲದೇವನಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಮೂಲಕ ತೆರವು ಗೊಳಿಸಲಾಯಿತು. ಅಲ್ಲಿಂದ ಈ ಸ್ಥಳಕ್ಕೆ ಬಂದು ನೆಲೆಸಿದ್ದು ದಿನದಿಂದ ದಿನಕ್ಕೆ ಇವರ ಸಂಖ್ಯೆ ಹೆಚ್ಚುತ್ತಿದೆ' ಎಂದರು.



ಚಿಕ್ಕಬಾಣಾವರ ಕಾವೇರಿ ಬಡಾವಣೆ ಬಳಿಯ ಪ್ರದೇಶಕ್ಕೆ ಶಾಸಕ ಎಸ್. ಮುನಿರಾಜು ಭೇಟಿ ನೀಡಿ ಪರಿಶೀಲಿಸಿದರು.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ದೇವಂತಗಿ ಗ್ರಾಮದ 6ನೇ ತರಗತಿ ವಿದ್ಯಾರ್ಥಿನಿಯ ಮೇಲೆ ಜುಲೈ 15ರಂದು ಅತ್ಯಾಚಾರವೆಸಗಿ ಕೊಲೆ ಮಾಡಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಭಾರತೀಯ ಮಹಿಳಾ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು) ಆಗ್ರಹಿಸಿದೆ.

'ರಾಜ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಕುಟುಂಬಕ್ಕೆ ಕೂಡಲೇ ಪರಿಹಾರ ನೀಡಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಿಂದಿನ ಸರ್ಕಾರದ ಅವಧಿಯಲ್ಲಿ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ವಿ.ಎಸ್. ಉಗ್ರಪ್ಪ ಅವರ ಅಧ್ಯಕ್ಷತೆಯ ಸಮಿತಿ ನೀಡಿದ್ದ ವರದಿಯ ಶಿಫಾರಸುಗಳನ್ನು ಕೂಡಲೇ ಜಾರಿಗೊಳಿಸಬೇಕು' ಎಂದು ಒಕ್ಕೂಟದ ಅಧ್ಯಕ್ಷೆ ಎ. ಜ್ಯೋತಿ ಒತ್ತಾಯಿಸಿದ್ದಾರೆ.

ಮಹಿಳಾ ಟೆಕಿ ಆತ್ಮಹತ್ಯೆ ಪತಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ದಿವ್ಯಾ (30) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಕಿರುಕುಳ ನೀಡಿರುವ ಆರೋಪದಡಿ ಪತಿ ಅರವಿಂದ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ದಿವ್ಯಾ, ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರು. ಮನೆಯ ಕೊಠಡಿಯಲ್ಲಿದ್ದ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪೋಷಕರು ನೀಡಿರುವ ದೂರು ಆಧರಿಸಿ ಪತಿ ಹಾಗೂ ಸಂಬಂಧಿಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಿವ್ಯಾ ಹಾಗೂ ಅರವಿಂದ್, 2014ರಲ್ಲಿ ಮದುವೆಯಾಗಿದ್ದರು. ಆರಂಭದಲ್ಲಿ ಚೆನ್ನಾಗಿದ್ದ ದಂಪತಿ ನಡುವೆ ಇತ್ತೀಚೆಗೆ ಜಗಳ ಶುರುವಾಗಿತ್ತು. ದಿವ್ಯಾ ಅವರಿಗೆ ಮಾನಸಿಕ ಹಾಗೂ ದೈಹಿಕವಾಗಿ ಪತಿ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ದಿವ್ಯಾ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೋಷಕರು ದೂರಿದ್ದಾರೆ' ಎಂದು ತಿಳಿಸಿವೆ.

ಕಟ್ಟಡದಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪರೀಕ್ಷಾ ಕೊಠಡಿಗೆ ಮೊಬೈಲ್ ತೆಗೆದುಕೊಂಡು ಹೋಗಿದ್ದ ಪ್ರಕರಣ
- ಮೇಲ್ವಿಚಾರಕರು, ಆಡಳಿತ ಮಂಡಳಿ ಸದಸ್ಯರ ಕಿರುಕುಳದ ಆರೋಪ

ಬೆಂಗಳೂರು: ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ವಿದ್ಯಾರ್ಥಿ ಆದಿತ್ಯ ಪ್ರಭು ಸಿ. (19) ಆತ್ಮಹತ್ಯೆ ಪ್ರಕರಣ ಸಂಬಂಧ ಪರೀಕ್ಷೆ ಮೇಲ್ವಿಚಾರಕರು ಹಾಗೂ ಕಾಲೇಜು ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಪಿಇಎಸ್ ಕಾಲೇಜಿನ ಮಾನವಿಕ ವಿಜ್ಞಾನ ವಿಭಾಗದಲ್ಲಿ ಎರಡನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದ ಆದಿತ್ಯ, ಕಟ್ಟಡದ ಎಂಟನೇ ಮಹಡಿಯಿಂದ ಬಿದ್ದು ಸೋಮವಾರ (ಜುಲೈ 17) ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಾವಿಗೆ ಪರೀಕ್ಷೆ ಮೇಲ್ವಿಚಾರಕರು, ಕಾಲೇಜು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ಕಾರಣವೆಂದು ತಂದೆ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ಆದಿತ್ಯ ತನಗೆ ಅರಿವಿಲ್ಲದಂತೆ ಬ್ಯಾಗ್‌ನಲ್ಲಿ ಮೊಬೈಲ್ ಇರಿಸಿಕೊಂಡು ಪರೀಕ್ಷೆಗೆ ಹೋಗಿದ್ದ. ಮೊಬೈಲ್ ಸಹ ಫ್ಲೈಟ್ ಮೂಡ್‌ನಲ್ಲಿತ್ತು. ಬ್ಯಾಗ್ ತಪಾಸಣೆ ವೇಳೆ ಮೊಬೈಲ್ ನೋಡಿದ್ದ ಮೇಲ್ವಿಚಾರಕ, ಆದಿತ್ಯನನ್ನು ತರಾಟೆಗೆ ತೆಗೆದುಕೊಂಡಿದ್ದ. ಮೊಬೈಲ್ ಫ್ಲೈಟ್ ಮೂಡ್‌ನಲ್ಲಿತ್ತು ಎಂದು ಹೇಳಿದರೂ ಕೇಳಿರಲಿಲ್ಲ. ಹೆಚ್ಚು ಮಾತನಾಡಲು ಆದಿತ್ಯಗೆ ಅವಕಾಶ ನೀಡಿರಲಿಲ್ಲ' ಎಂದು ದೂರಿನಲ್ಲಿ ತಂದೆ ತಿಳಿಸಿದ್ದಾರೆ.

'ಆದಿತ್ಯನನ್ನು ಒತ್ತಾಯದಿಂದ ಕಚೇರಿಗೆ ಕರೆದೊಯ್ದು ಕಿರುಕುಳ ನೀಡಿದ್ದರು. ತಾನು ನಕಲು ಮಾಡುತ್ತಿರಲಿಲ್ಲವೆಂದು ಹೇಳಿದರೂ ಮೇಲ್ವಿಚಾರಕರು ಹಾಗೂ ಇತರರು ಕೇಳಿರಲಿಲ್ಲ. ವಿಷಯ ತಿಳಿದ ತಾಯಿ ಸಹ ಕಚೇರಿಗೆ ಹೋಗಿ ವಿಚಾರಿಸಿದ್ದರು. ಮಗ ನಕಲು ಮಾಡಿದ್ದಾನೆಂಬ ಆರೋಪಕ್ಕೆ ಸಂಬಂಧಪಟ್ಟಂತೆ ಪುರಾವೆ ತೋರಿಸುವಂತೆ ಕೋರಿದ್ದರು. ಆದರೆ, ಆರೋಪಿಗಳು ಆದಿತ್ಯ ಜೊತೆಯಲ್ಲಿ ತಾಯಿಯನ್ನೂ ಅವಮಾನಿಸಿದ್ದರು. ಬಳಿಕ, ತಾಯಿ ಕಚೇರಿಯಲ್ಲಿಯೇ ಕುಳಿತುಕೊಂಡಿದ್ದರು.'

'ಕಚೇರಿಯಿಂದ ಹೊರಗೆ ಬಂದಿದ್ದ ಆದಿತ್ಯ, ಮಹಡಿಯಿಂದ ಬಿದ್ದಿದ್ದ. ವಿಷಯ ತಿಳಿದ ತಾಯಿ ಸಹ ಸ್ಥಳಕ್ಕೆ ಓಡಿ ಹೋಗಿದ್ದರು. ಆಂಬುಲೆನ್ಸ್ ಸಹ ಸ್ಥಳಕ್ಕೆ ಬಂದಿತ್ತು. ಅಷ್ಟರಲ್ಲೇ ಆದಿತ್ಯ ಮೃತಪಟ್ಟಿದ್ದ. ಮೇಲ್ವಿಚಾರಕರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ಕಿರುಕುಳದಿಂದ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ತಂದೆ ದೂರಿನಲ್ಲಿ ಒತ್ತಾಯಿಸಿದ್ದಾರೆ.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್ ವತಿಯಿಂದ ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪದವಿ, ಸ್ನಾತಕೋತ್ತರ ಪದವಿ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದ, ನೇಕಾರ ಕುರುಹಿನಶೆಟ್ಟಿ ಜನಾಂಗದ ವಿದ್ಯಾರ್ಥಿನಿಯರು ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್, ನಂ. 13 ಅಕ್ಷಯ 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಶ್ರೀನಿಧಿ ಬಡಾವಣೆ, ಜೆ.ಪಿ. ನಗರ, 8ನೇ ಹಂತ, ಬೆಂಗಳೂರು–560062. ಮಾಹಿತಿಗೆ: 94803 53269ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

||Om Sri Manjunathaya Namaha||
Shri Dharmasthala Manjunatheshwara Educational Society ®, Ujire
President: Poojya Dr. D. Veerendra Heggade
FACULTY APPOINTMENTS
Applications are invited for the following faculty positions at
SDM Institute of Technology, Ujire (DK)
www.sdmit.in Ph: 8762127991

Faculty Positions	Qualification
Professors/ Associate/ Asst. Professors In Computer Science/ Information Science/ Artificial Intelligence & Data Sc.	Qualification and experience as per AICTE norms
Associate/ Asst. Professors In Electronics & Communication Engg.	
Candidates having BE in circuit branches and PG degree in Computer Sc. may also apply.	

Facilities*: Good salary package with PF and gratuity benefits, staff quarters, fee concession to children, subsidized medical insurance. *(conditions apply).
Interested candidates may apply along with resume and a recent passport size photo within 5 days from the date of this notification to The Principal, SDM Institute of Technology, Ujire - 574 240 or email to office@sdmit.in and principal@sdmit.in
Dr. Satheeshchandra.S
SECRETARY

NMDC Limited
(A Govt. of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
CIN:L13100TG1958GOI001674.
CONTRACTS DEPARTMENT
Pre-Tender Meeting Notice Dated:19/07/2023
NMDC Limited, A "NAVARATNA" Public Sector Company under Ministry of Steel, Govt. of India, invites experienced, reputed and competent domestic bidders to participate in the Pre-Tender Meeting on 25/07/2023 (11.00 Hrs.) for the work of "Design, Engineering, Supply, Erection, Testing and Commissioning of Fully Automated Sampling and Analysis Systems on Turnkey basis for Iron Ore mines at Kirandul, Bacheli and Donimalai Complexes of NMDC Ltd."
Venue of the Meeting: NMDC Ltd., Hyderabad
For obtaining the details Brief agenda of the meeting, Preliminary scope of work, Time schedule, project site etc. the bidders may visit NMDC website http://www.nmdc.co.in
Further, for any queries the bidders may also contact following officials directly or through email: Mr. S Sahoo, AGM (Mech.) – NMDC Ltd. (M: 9490479089) contracts@nmdc.co.in
Executive Director (Works)

ವಿಮಾನ ಸೀಟ್ ಕೆಳಗೆ ಬಚ್ಚಿಟ್ಟು 6.50 ಕೆ.ಜಿ ಬಂಗಾರ ಸಾಗಣೆ

₹4 ಕೋಟಿ ಮೌಲ್ಯದ ಚಿನ್ನದಗಟ್ಟಿ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಮಧ್ಯಪ್ರದೇಶದ ಇಂದೋರ್‌ನಿಂದ ಬೆಂಗಳೂರಿಗೆ ಬಂದಿಳಿದ ವಿಮಾನದ ಪ್ರಯಾಣಿಕ ಅಕ್ರಮವಾಗಿ ಸಾಗಿಸುತ್ತಿದ್ದ 6.50 ಕೆ.ಜಿ ತೂಕದ ಏಳು ಚಿನ್ನದ ಬಿಸ್ಕತ್‌ಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಇಂದೋರ್‌ನಿಂದ ಶುಕ್ರವಾರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕನನ್ನು ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ನಡೆಸಿದಾಗ ಚಿನ್ನದ ಬಿಸ್ಕತ್ ಸಿಕ್ಕಿವೆ. ಇವುಗಳ ಒಟ್ಟು ಮೌಲ್ಯ ನಾಲ್ಕು ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ.

ಅಕ್ರಮ ಚಿನ್ನ ಸಾಗಾಟ ಜಾಲ ಮೊದಲೇ ವಿಮಾನದ ಸೀಟ್ ಕೆಳಗೆ ಚಿನ್ನದ ಬಿಸ್ಕತ್‌ಗಳನ್ನು ಬಚ್ಚಿಟ್ಟಿತ್ತು. ಇದೇ ವಿಮಾನದಲ್ಲಿ ಪ್ರಯಾಣಿಸಿದ ಜಾಲದ ಸದಸ್ಯ ಬೆಂಗಳೂರಿನಲ್ಲಿ ಇಳಿಯುವಾಗ ಚಿನ್ನಗಟ್ಟಿಗಳನ್ನು ತನ್ನೊಂದಿಗೆ ಕೊಂಡೊಯ್ಯುತ್ತಿದ್ದ.

ಸಾಮಾನ್ಯವಾಗಿ ದೇಶೀಯ ವಿಮಾನ ಪ್ರಯಾಣಿಕರನ್ನು ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ಮಾಡುವುದಿಲ್ಲ ಎಂಬ ಧೈರ್ಯದಿಂದ ವ್ಯಕ್ತಿ ತನ್ನೊಂದಿಗೆ ಚಿನ್ನ ತಂದಿದ್ದ. ಆರೋಪಿಯ ಹಾವಭಾವದಿಂದ ಶಂಕೆಗೊಂಡ ಅಧಿಕಾರಿಗಳು ಆತನನ್ನು ತಪಾಸಣೆ ನಡೆಸಿದಾಗ ಚಿನ್ನದ ಗಟ್ಟಿಗಳು ಸಿಕ್ಕಿವೆ.




ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ 6.5 ಕೆ.ಜಿ ಚಿನ್ನ

ಇಪಿಎಸ್–95 ಪಿಂಚಣಿದಾರರ ಪ್ರತಿಭಟನೆ ನಾಳೆ

ಬೆಂಗಳೂರು: ಪಿಂಚಣಿದಾರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜುಲೈ 20ರಂದು ರಿಚ್ಮಂಡ್ ವೃತ್ತದಲ್ಲಿರುವ ಇಪಿಎಫ್‌ಓ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಯಲಿದೆ ಎಂದು ಇಪಿಎಸ್-95 ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತರ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ಅವರು ತಿಳಿಸಿದ್ದಾರೆ.

ನಿಧನ ವಾರ್ತೆ

ಚೆನ್ನಪ್ಪ



ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ಗೌಡ ಅವರ ಮಾವ, ಚಿಕ್ಕಸಂದ್ರ ನಿವಾಸಿ ಚೆನ್ನಪ್ಪ (80) ಅವರು ಸೋಮವಾರ ರಾತ್ರಿ ನಿಧನರಾದರು.

ಚೆನ್ನಪ್ಪ ಕಿರ್ಲೋಸ್ಕರ್ ಕಂಪನಿಯ ನಿವೃತ್ತ ನೌಕರರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಮತ್ತು ಪುತ್ರ ಇದ್ದಾರೆ. ಪೀಣ್ಯದ ಎಸ್.ಆರ್.ಎಸ್ ಹತ್ತಿರದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದರು.

EUREKA FORBES
Aquaguard®
ಎಚ್ಚರಿಕೆ!
ಅನಧಿಕೃತ ಫಿಲ್ಟರ್‌ಗಳನ್ನು ಮತ್ತು ಎಎಮ್‌ಸಿಯನ್ನು ಮಾರಾಟ ಮಾಡಲು ಸುರೇಖಾ ಫೋರ್ಬ್ಸ್ ಇವರು ಯುರೇಖಾ ಫೋರ್ಬ್ಸ್ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ.



ನಕಲಿ ವಾಟರ್ ಪ್ಯೂರಿಫಯರ್ ಫಿಲ್ಟರ್‌ಗಳು ನೀರನ್ನು ಶುದ್ಧೀಕರಿಸಲು ವಿಫಲವಾಗುತ್ತವೆ ಮತ್ತು ನಿಮ್ಮ ಕುಟುಂಬದ ಆರೋಗ್ಯಕ್ಕೆ ಅಪಾಯಕಾರಿಯಾಗಿವೆ.
ಅಸಲಿ ಅಕ್ವಾಗಾರ್ಡ್ ಎಎಮ್‌ಸಿ ಖರೀದಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ.

ಅರಣ್ಯ ಸಂರಕ್ಷಣೆ: ಇಂದಿರಾ ಸ್ಮರಿಸಿದ ಸಚಿವ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಕಾಳಜಿಯಿದ್ದ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರು ಅರಣ್ಯ ಸಂರಕ್ಷಣೆ, ವನ್ಯಮೃಗಗಳ ಸಂರಕ್ಷಣೆಗೆ ಕಾಯ್ದೆ ರೂಪಿಸಿದ್ದರು. ರಾಜ್ಯ ಸರ್ಕಾರ ಸಸ್ಯ, ಪ್ರಾಣಿಸಂಕುಲದ ಸಂರಕ್ಷಣೆಗೆ ಬದ್ಧವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ತಮ್ಮನ್ನು ಭೇಟಿ ಮಾಡಿದ ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಪಶ್ಚಿಮ ಘಟ್ಟಗಳ ಕುರಿತ ತಜ್ಞರ ಸಮಿತಿಯ ನಿಯೋಗದ ಜತೆ ಅವರು ಮಾತನಾಡಿದರು.

ಪಶ್ಚಿಮಘಟ್ಟದ ವೈವಿಧ್ಯ, ದೇಶದ ನಾನಾ ಭಾಗಗಳ ಹವಾಮಾನ, ಮೀನುಗಾರಿಕೆಯ ಮೇಲೆ ಪಶ್ಚಿಮ ಘಟ್ಟದ ಪ್ರಭಾವ ಕುರಿತು ಸಂಜಯ್ ಕುಮಾರ್ ವಿವರ ನೀಡಿದರು. ನಿಯೋಗದಲ್ಲಿ ಭಾರತೀಯ ವಿಜ್ಞಾನ ಮಂದಿರದ ಸುಕುಮಾರ್, ಕೇಂದ್ರ ಅರಣ್ಯ, ಜೀವಿಶಾಸ್ತ್ರ, ಹವಾಮಾನ ವೈಪರೀತ್ಯ ಸಚಿವಾಲಯದ ಸದಸ್ಯ ಕಾರ್ಯದರ್ಶಿ ಎಸ್.ಕೆ. ಖನ್ನಾ, ವಿಜ್ಞಾನಿಗಳಾದ ರಿತೇಶ್ ಜೋಶಿ, ಸುರೇಶ್ ಕುಮಾರ್ ಮತ್ತು ಭಾರತೀಯ ಭೂ ಸರ್ವೇಕ್ಷಣಾ ಇಲಾಖೆಯ ನಿರ್ದೇಶಕ ಪ್ರಕಾಶ್ ಇದ್ದರು.

ಕಲಾಗ್ರಾಮ: ಖಾಸಗಿ ಸಂಸ್ಥೆ ಸಹಯೋಗದಲ್ಲಿ ಅಭಿವೃದ್ಧಿಗೆ ಮುಂದಾಗಿದ್ದ ಸಂಸ್ಕೃತಿ ಇಲಾಖೆ

'ಚೋಖಿ ಧನಿ' ಮಾದರಿ ನನೆಗುದಿಗೆ


• ವರುಣ ಹೆಗಡೆ

ಬೆಂಗಳೂರು: ರಾಜಸ್ಥಾನದ 'ಚೋಖಿ ಧನಿ' ಮಾದರಿಯಲ್ಲಿ ಇಲ್ಲಿನ ಮಲ್ಲತ್ತಹಳ್ಳಿಯ ಕಲಾಗ್ರಾಮ ಅಭಿವೃದ್ಧಿಪಡಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುದಾನ ಒದಗಿಸಿಲ್ಲ. ಇದರಿಂದಾಗಿ ಕಲಾಗ್ರಾಮಕ್ಕೆ ಕಾಯಕಲ್ಪ ಇಲ್ಲವಾಗಿದೆ.

ಕಲಾಗ್ರಾಮಕ್ಕೆ ಕಾಯಕಲ್ಪ ನೀಡಲು ಮುಂದಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಳೆದ ವರ್ಷ ಇದರ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿತ್ತು. ಇದನ್ನು ಸರ್ಕಾರ ಬಜೆಟ್‌ನಲ್ಲಿಯೂ ಘೋಷಿಸಿತ್ತು. ಬಳಿಕ ಇಲಾಖೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ರೂಪಿಸಿ, ಅನುಮೋದನೆಗೆ ಮೂಲ ಸೌಲಭ್ಯ ಇಲಾಖೆಗೂ (ಐಡಿಡಿ) ಕಳುಹಿಸಿತ್ತು. ರಾಜಸ್ಥಾನದಲ್ಲಿ ಚೋಖಿ ಧನಿ ಗ್ರಾಮವನ್ನು ಅಭಿವೃದ್ಧಿಪಡಿಸಿದಂತೆ ಇಲ್ಲಿನ ಕಲಾಗ್ರಾಮವನ್ನು ಅಭಿವೃದ್ಧಿಪಡಿಸಲು ಇಲಾಖೆ ಚೋಖಿ ಧನಿ ಗ್ರೂಪ್ ಅನ್ನು ಸಂಪರ್ಕಿಸಿತ್ತು. ಆದರೆ, ಅವರು ಒಪ್ಪದ ಕಾರಣ ಇಲ್ಲಿನ ಖಾಸಗಿ ಸಂಸ್ಥೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಲು ಮುಂದಾಗಿತ್ತು.

ಥೀಮ್ ಪಾರ್ಕ್‌ಗಿಲ್ಲ ಆದ್ಯತೆ

ಕಲಾಗ್ರಾಮದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ವಿಭಾಗ, ಶಿಲ್ಪಕಲಾ ಅಕಾಡೆಮಿಯ ಗ್ಯಾಲರಿ, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ನಾಲ್ಕು ಬಯಲು ರಂಗಮಂದಿರಗಳು ಹಾಗೂ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಇವೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಆಡಳಿತ ಕಚೇರಿ ತಲೆಯೆತ್ತುತ್ತಿದೆ. ಈ ಪ್ರದೇಶದಲ್ಲಿ ಥೀಮ್ ಪಾರ್ಕ್ ನಿರ್ಮಿಸಬೇಕೆಂಬ ಪ್ರಸ್ತಾವ ಇಲಾಖೆಯ ಮುಂದಿತ್ತು. ಬಿಜೆಪಿ ನೇತೃತ್ವದ ಹಿಂದಿನ ರಾಜ್ಯ ಸರ್ಕಾರ ತನ್ನ ಕೊನೆಯ ಬಜೆಟ್‌ನಲ್ಲಿಯೂ ಇಲ್ಲಿ 'ಥೀಮ್ ಪಾರ್ಕ್' ನಿರ್ಮಿಸುವುದಾಗಿ ಘೋಷಿಸಿತ್ತು. ಆದರೆ, ಅನುದಾನದ ಬಗ್ಗೆ ಉಲ್ಲೇಖಿಸಿರಲಿಲ್ಲ. ನೂತನ ಸರ್ಕಾರಕ್ಕೆ ಸಂಸ್ಕೃತಿ ಇಲಾಖೆಯು ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಥೀಮ್ ಪಾರ್ಕ್ ನಿರ್ಮಾಣದ ಪ್ರಸ್ತಾವವನ್ನು ಕೈಬಿಟ್ಟಿದೆ.



ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ

ಆದರೆ, ಸರ್ಕಾರದಿಂದ ಅನುದಾನ ಮಂಜೂರಾಗದ ಕಾರಣ ಅಭಿವೃದ್ಧಿ ಕಾರ್ಯ ನಡೆದಿಲ್ಲ.

30 ಎಕರೆಯಲ್ಲಿ ವ್ಯಾಪಿಸಿಕೊಂಡಿರುವ ಕಲಾಗ್ರಾಮವನ್ನು ಸಂಸ್ಕೃತಿ ಇಲಾಖೆ ನಿರ್ವಹಣೆ ಮಾಡುತ್ತಿದೆ. ಸೂಕ್ತ ಮೂಲಸೌಕರ್ಯ ಇಲ್ಲದ ಕಾರಣ ಕಲಾಗ್ರಾಮದಲ್ಲಿ ಪ್ರತಿವರ್ಷ ಬೆರಳಣಿಕೆಯಷ್ಟು ಕಾರ್ಯಕ್ರಮಗಳಷ್ಟೇ ನಡೆಯುತ್ತಿವೆ. ಕಲಾವಿದರಿಗೆ ಉಳಿದುಕೊಳ್ಳಲು ವಸತಿ ಸೌಲಭ್ಯ ಇಲ್ಲದಿರುವುದರಿಂದ ಕಲಾ ಶಿಬಿರ, ತರಬೇತಿ ಹಾಗೂ ಪ್ರದರ್ಶನಗಳಿಗೆ ಕೂಡ ಸಮಸ್ಯೆಯಾಗುತ್ತಿದೆ. ಹೀಗಾಗಿ, ಕಲಾಗ್ರಾಮಕ್ಕೆ ಕಾಯಕಲ್ಪ ನೀಡಬೇಕೆಂಬ ಆಗ್ರಹ ಕಲಾವಿದರ ವಲಯದಲ್ಲಿತ್ತು. ಅಲ್ಲಿ ನಿರಂತರ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಇಲಾಖೆ ಮುಂದಾಗಿತ್ತು.

ಮನೋರಂಜನೆ ಜತೆಗೆ ಆತಿಥ್ಯ: ರಾಜಸ್ಥಾನದಲ್ಲಿ ಚೋಖಿ ಧನಿ ಗ್ರಾಮವನ್ನು ಚೋಖಿ ಧನಿ ಗ್ರೂಪ್ ಅಭಿವೃದ್ಧಿಪಡಿಸಿದೆ. ಅಲ್ಲಿ ಸ್ಥಳೀಯ ಪರಂಪರೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲಾಗುತ್ತಿದೆ. ಪ್ರವಾಸಿ ತಾಣವಾಗಿಯೂ ಇದು ಪ್ರಸಿದ್ಧಿ ಪಡೆದಿದೆ. ಇಲ್ಲಿ ರಾಜಸ್ಥಾನದ ಕಲಾ ಪ್ರಕಾರಗಳ ಜತೆಗೆ ಅಲ್ಲಿನ ಆಹಾರವನ್ನೂ ಸವಿಯುವ ಅವಕಾಶ ಇದೆ. ವಿವಿಧ ದರ್ಜೆಯ ಹೋಟೆಲ್‌ಗಳನ್ನೂ ನಿರ್ಮಿಸಲಾಗಿದೆ. ಸ್ಥಳೀಯ ಕಲಾವಿದರಿಗೆ ಪ್ರದರ್ಶನಗಳನ್ನು ನಡೆಸಲು ಅವಕಾಶ ಒದಗಿಸಲಾಗಿದೆ. ವಿವಿಧ ಕಲಾ ಉತ್ಸವಗಳನ್ನೂ ನಡೆಸಲಾಗುತ್ತಿದೆ. ಇದೇ ಮಾದರಿ ವಿವಿಧ ಸಾಂಸ್ಕೃತಿಕ ಚಟುವಟಿಗಳ ಜತೆಗೆ ವಸತಿ, ಆಹಾರ, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಥೀಮ್ ಪಾರ್ಕ್ ಸೇರಿ ಹಲವು ವೈವಿಧ್ಯಗಳನ್ನು ಒಂದೇ ಸೂರಿನಡಿ ತರುವುದು ಯೋಜನೆಯಲ್ಲಿತ್ತು.

'ಕಲಾಗ್ರಾಮದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿತ್ತು. ಖಾಸಗಿ ಸಂಸ್ಥೆಗಳನ್ನೂ ಸಂಪರ್ಕಿಸಲಾಗಿತ್ತು. 'ಚೋಖಿ ಧನಿ' ಮಾದರಿ ಅಭಿವೃದ್ಧಿಯಿಂದ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗುತ್ತಿತ್ತು. ನಾಟಕ, ಯಕ್ಷಗಾನ, ಜಾನಪದ ನೃತ್ಯ, ಸಂಗೀತ ಸೇರಿ ರಾಜ್ಯದ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ಸಿಗುತ್ತಿತ್ತು. ಆದರೆ, ಅನುದಾನ ನೀಡದಿದ್ದರಿಂದ ಇದು ನನೆಗುದಿಗೆ ಬಿದ್ದಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

> ನಾನು ಅಧಿಕಾರವಹಿಸಿಕೊಂಡು ಮೂರು ತಿಂಗಳಾಗಿವೆ. ಮಲ್ಲತ್ತಹಳ್ಳಿಯ ಕಲಾಗ್ರಾಮ ಅಭಿವೃದ್ಧಿ ಯೋಜನೆ ಏನಾಗಿದೆ ಎನ್ನುವುದರ ಬಗ್ಗೆ ಪರಿಶೀಲಿಸುತ್ತೇನೆ
>
> **ವಿಶ್ವನಾಥ ಹಿರೇಮಠ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಸುದ್ದಿ 2 ನಿಮಿಷ

ಲೋಕಾಯುಕ್ತ ಪೊಲೀಸರ ಕಾರ್ಯವೈಖರಿಗೆ ಹೈಕೋರ್ಟ್ ಬೇಸರ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಕೆ ಆರೋಪದಡಿ ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿಯೊಬ್ಬರ ವಿರುದ್ಧ ಪ್ರಕರಣ ದಾಖಲಿಸಿದ ಹಲವು ವರ್ಷಗಳ ನಂತರ ದೋಷಾರೋಪ ಪಟ್ಟಿ ಸಲ್ಲಿಸಿದ್ದ ಲೋಕಾಯುಕ್ತ ಪೊಲೀಸರ ಕಾರ್ಯವೈಖರಿಗೆ ಹೈಕೋರ್ಟ್ ತೀವ್ರ ಬೇಸರ ವ್ಯಕ್ತಪಡಿಸಿದೆ.

ಈ ಸಂಬಂಧ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ಪ್ರಕರಣದಿಂದ ಅಧಿಕಾರಿಯನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದೆ.

ಪ್ರಕರಣವೇನು?: ರಾಜ್ಯ ಸರ್ಕಾರದ ಕೃಷಿ ಇಲಾಖೆಯಲ್ಲಿ ರಂಗಸ್ವಾಮಿ 1977ರಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ನೇಮಕಗೊಂಡಿದ್ದರು. 1981ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಾಣಿಜ್ಯ ತೆರಿಗೆ ಇನ್‌ಸ್ಪೆಕ್ಟರ್ ಆಗಿ ನೇಮಕಗೊಂಡಿದ್ದರು. 1982ರಿಂದ 2006ರ ಮಧ್ಯದ ಸೇವಾವಧಿಯಲ್ಲಿ ಆದಾಯಕ್ಕೂ ಮೀರಿದ ಆಸ್ತಿ ಗಳಿಸಿದ್ದಾರೆ ಎಂಬ ಆರೋಪದಡಿ 2006ರ ಜೂನ್ 8ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ತನಿಖಾಧಿಕಾರಿಗಳು 2011ರ ಮಾರ್ಚ್ 10ರಂದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ತಮ್ಮ ವಿರುದ್ಧದ ಆರೋಪಗಳನ್ನು ಕೈ ಬಿಡುವಂತೆ ಕೋರಿ ರಂಗಸ್ವಾಮಿ ಲೋಕಾಯುಕ್ತ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಲೋಕಾಯುಕ್ತ ನ್ಯಾಯಾಲಯ ಪುರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಲೋಕಾಯುಕ್ತ ಪೊಲೀಸರು 2013ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಕ್ಸ್‌ಪ್ರೆಸ್ ವೇ: ವಿರುದ್ಧ ದಿಕ್ಕಿನಲ್ಲಿ ಬಸ್



ರಾಮನಗರ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕರೊಬ್ಬರು ವಿರುದ್ಧ ದಿಕ್ಕಿನಲ್ಲಿ ಬಸ್ ಚಲಾಯಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬಿಡದಿ ಠಾಣೆ ಪೊಲೀಸರು ಚಾಲಕನ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಿಡದಿ ಸಮೀಪದ ಶೇಷಗಿರಿ ಟೋಲ್ ಪ್ಲಾಜಾದಿಂದ ಹನುಮಂತನಗರದ ಆಂಜನೇಯ ದೇವಸ್ಥಾನ ಮುಂಭಾಗದ ರಸ್ತೆಯಲ್ಲಿ ಜುಲೈ 14ರಂದು ಘಟನೆ ನಡೆದಿದೆ.

ಕೆಎ–10, ಎಫ್– 0492 ನಂಬರ್‌ನ ಬಸ್ ಬೆಳಿಗ್ಗೆ 10.41ರ ಸುಮಾರಿಗೆ ಎಕ್ಸ್‌ಪ್ರೆಸ್ ವೇಯಲ್ಲಿ ವಿರುದ್ಧ ದಿಕ್ಕಿನಿಂದ ಮೈಸೂರು ಕಡೆಗೆ ವೇಗವಾಗಿ ಚಲಿಸುತ್ತಾ, ಬೆಂಗಳೂರು ಕಡೆಗೆ ಹೋಗುತ್ತಿದ್ದ ವಾಹನಗಳ ಸವಾರರಲ್ಲಿ ಆತಂಕ ಹುಟ್ಟಿಸಿತ್ತು. ಈ ದೃಶ್ಯವನ್ನು ಸೆರೆಹಿಡಿದಿದ್ದ ಅಭಿಷೇಕ್ ಎಂಬುವವರು ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು.



ಸೋಷಿಯಲಿಸ್ಟ್ ಪಾರ್ಟಿ (ಇಂಡಿಯಾ) ವತಿಯಿಂದ ಜೆ.ಸಿ. ನಗರದ ವಿವಿಧ ಪ್ರದೇಶಗಳಲ್ಲಿ ಕಸ ಗುಡಿಸುವುದರ ಮೂಲಕ ಸ್ವಚ್ಛತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಪಕ್ಷದ ಕಾರ್ಯಾಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್, ರಾಜ್ಯಾಧ್ಯಕ್ಷ ಮೈಕಲ್ ಫರ್ನಾಂಡಿಸ್, ಉಪಾಧ್ಯಕ್ಷ ಹನುಮಂತ ಇದ್ದಾರೆ

ಕೇರಳ ಮಾಜಿ ಸಿ.ಎಂ ಉಮ್ಮನ್ ಚಾಂಡಿ ನಿಧನ

ಒಂದನೇ ಪುಟದಿಂದ....

ಇದಕ್ಕೂ ಮುನ್ನ ಅವರು, ಜರ್ಮನಿಯ ಆಸ್ಪತ್ರೆಯೊಂದರಲ್ಲಿ, ಕ್ಯಾನ್ಸರ್ ಗಡ್ಡೆಯ ಗಾತ್ರವನ್ನು ಕಡಿಮೆಗೊಳಿಸುವುದಕ್ಕಾಗಿ ನಡೆಸುವ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಕಳೆದ ಡಿಸೆಂಬರ್‌ನಲ್ಲಿ ಬೆಂಗಳೂರಿನ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸಹ ಚಿಕಿತ್ಸೆ ಪಡೆದಿದ್ದರು.

ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸುವಲ್ಲಿ ಕುಟುಂಬವು ಸಹಕರಿಸುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದವು. ಆಗ, ಮಧ್ಯಪ್ರವೇಶಿಸಿದ ಕೇರಳ ಸರ್ಕಾರ ಫೆಬ್ರುವರಿಯಲ್ಲಿ ಅವರನ್ನು ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆತಂದು ಎಚ್‌ಸಿಜಿ ಆಸ್ಪತ್ರೆಯಲ್ಲಿ 'ಇಮ್ಯುನೊಥೆರಪಿ' ಚಿಕಿತ್ಸೆಗೆ ವ್ಯವಸ್ಥೆ ಮಾಡಿತ್ತು.

ಏಪ್ರಿಲ್‌ನಲ್ಲಿ ಕ್ಯಾನ್ಸರ್ ಉಲ್ಬಣಿಸಿದ್ದರಿಂದ ಚಾಂಡಿ ಅವರಿಗೆ ನೀಡುತ್ತಿದ್ದ 'ಇಮ್ಯುನೊಥೆರಪಿ'ಯನ್ನು ಸ್ಥಗಿತಗೊಳಿಸಿ, ಮನೆಯಲ್ಲಿಯೇ ಆರೈಕೆ ಮಾಡಲು ಕುಟುಂಬ ನಿರ್ಧರಿಸಿತ್ತು ಎಂದು ಮೂಲಗಳು ಹೇಳಿವೆ.

ಪುದುಪಳ್ಳಿ ವಿಧಾನಸಭಾ ಕ್ಷೇತ್ರದಿಂದ ಸತತ 12 ಬಾರಿ ಗೆದ್ದಿದ್ದ ಅವರು, ಎರಡು ಅವಧಿಗೆ (2004–2006 ಹಾಗೂ 2011–2016) ಮುಖ್ಯಮಂತ್ರಿಯಾಗಿದ್ದರು.

2018ರಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ, 2006ರಿಂದ 2011ರ ವರೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು. ಅವರ ಪಾರ್ಥಿವ ಶರೀರವನ್ನು ತಿರುವನಂತಪುರಕ್ಕೆ ಮಧ್ಯಾಹ್ನ ತರಲಾಯಿತು. ರಾಜ್ಯ ಸಚಿವಾಲಯದ ದರ್ಬಾರ್ ಹಾಲ್‌ನಲ್ಲಿ, ಸೇಂಟ್ ಜಾರ್ಜ್ ಆರ್ಥೊಡಾಕ್ಸ್ ಸಿರಿಯನ್ ಕ್ಯಾಥೆಡ್ರಲ್, ಕೆಪಿಸಿಸಿ ಕೇಂದ್ರ ಕಚೇರಿ ಹಾಗೂ ನಗರದಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ.

ಅಗಲಿದ ತಮ್ಮ ನಾಯಕನಿಗೆ ಅಂತಿಮ ನಮನ ಸಲ್ಲಿಸುವುದಕ್ಕಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಭಾರಿ ಸಂಖ್ಯೆಯಲ್ಲಿ ವಿಮಾನ ನಿಲ್ದಾಣದಲ್ಲಿ ಸೇರಿದ್ದರು.

ಅವರ ತವರೂರು ಪುದುಪಳ್ಳಿಗೆ ಬುಧವಾರ ರಸ್ತೆ ಮೂಲಕ ಪಾರ್ಥಿವ ಶರೀರವನ್ನು ಒಯ್ದು, ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೌರವ: ಮಾಜಿ ಸಚಿವ ಟಿ.ಜಾನ್ ಅವರ ಬೆಂಗಳೂರಿನ ಇಂದಿರಾನಗರದಲ್ಲಿರುವ ನಿವಾಸದಲ್ಲಿ ಚಾಂಡಿ ಅವರ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕಿ ಸೋನಿಯಾ ಗಾಂಧಿ, ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೌರವ ಸಲ್ಲಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

EDUShrine Rise Your Future
Karnataka's Top Quality Mentor for NEET/JEE/K-CET
JUNIOR LECTURERS (M.Sc. Freshers)
Phy, Che. Mat & Bio Paid Training & Promotion Accommodation & Food
SENIOR LECTURERS
For Physics, Chemistry, Mathematics & Biology across Karnataka
PROs & ADMISSION MANAGERS
MBAs / Experienced in Education Sector
ADMISSION COUNSELORS
Graduates with great communication skills
kk.edushrine@gmail.com
director@edushrine.com
Ph: 7090772505/ 7975874831

M. S. RAMAIAH FOUNDATION
MSRF
Gokula, Bangalore, Karnataka
The stalwarts in higher education and pioneers in Quality Professional Education
Invites applications from eligible candidates for its Institutions:
RAMAIAH INSTITUTE OF MANAGEMENT STUDIES (RIMS)
RAMAIAH INSTITUTE OF BUSINESS STUDIES (RIBS)
RAMAIAH INSTITUTE OF LEGAL STUDIES (RILS)
for the posts of
PROFESSORS
ASSOCIATE PROFESSORS
ASSISTANT PROFESSORS
in the areas of
1) Human Resources, Marketing, Operations, Business Analytics, Finance and General Management to teach AICTE approved Post Graduate Diploma in Management (PGDM) Program (required qualification - PGDM/MBA preferably with NET/SLET)
2) Computer Applications, English (required qualifications - MCA/MTECH, MA in English) to teach Bangalore University BCA, BCom and BBA courses
3) Law (required qualification - LLM preferably with NET/SLET) to teach BBA LLB and BA LLB of KSLU
Qualification and experience as per AICTE/Bangalore University/KSLU requirements.
ADMINISTRATIVE STAFF
Administrative and secretarial staff (minimum degree requires with fluency in English language and proficiency in computer skills.
Candidates should be suitably qualified in relevant fields, have experience of 2 to 5 years or more in the respective areas, possess good communication skills and have adequate computer knowledge.
Reservation will be as per Government Norms Kindly send your resume to director@rimsbangalore.in within 7 days.

NIRMAN INTERNATIONAL PUBLIC SCHOOL, Near Automated RTO,7th Block, Vishweshwaraiah Layout, Bangalore-91 URGENT Requires Qualified English and Social TEACHERS for Higher classes. Contact: 8123030731/ 9986055970

IMMEDIATELY REQUIRED following Teachers for SCHOOL at Mathikere: P.E, Computer and Primary Teacher Freshers can apply: gnanatejaenglishschool@gmail.com 080- 42168461/ 9019178890

WANTED KANNADA/ Physical Educaton teacher 20k to 25K, Computer Teacher/ Data entry 18 to 20k Matha's English high School, Garuve bhavi palya, Bangalore-68 M: 9449814917/ 8277258609

WANTED FOR a reputed ICSE SCHOOL North Bangalore 1.TEACHERS in English for Primary and Middle level- Candidate must be BA(English) B.Ed. 2.PT TEACHERS with B.Ped. Experienced faculty preferred. Apply with full particulars to: faculty22recruit@gmail.com

Multiple Vacancy

ALL TIME ALERT SECURITY SERVICES, Required FIELD OFFICER-3 years experience, and OFFICE BOY-1 year experience, Basavangudi Bangalore-560004. 9538530301, 9964072624, 080-41632211

Engg/ Production Technical

WANTED FRESHER Diploma/ Graduate Civil Engineer for Valuation Firm in and around Nagarabhavi with 2 wheeler, Salary 15K. Contact: 9901572333

WANTED DIPLOMA Computer Science/BCA, Male/Female, speakfluent in English, for Institution at Kengeri. Contact:6363288544

Accounts & Finance

WANTED AN ACCOUNTANT for a renowned company with 5 years experience. Immediately Contact: +919620044490

WANTED ACCOUNTANT with 5-10 years of experience, trained arts Graduates. Walk-in-interview on 26/7/2023 at 3pm, Bharatiya Samskriti Vidyapith, #76, 1st Main Road, Chamarajpet, Bangalore – 560018, Mob: 7899900241

ACCOUNTS ASSISTANT, OFFICE EXECUTIVES. Graduates With Minimum 2 Years RelevantExperience. SAFEGUARD SYSTEMS. 9343544350 8884524433.

Factory

AN ISO 9001 Company at Jigani, Require Quality Control Manager, Quality Inspector, Send your resume to: excelwirecut@yahoo.co.in Contact: 9686198499

Hospital & Medical Jobs

WE AT Athulya Assisted Living Hiring BDE's for Bengaluru who have experience of 1 to 3 years in Pharma, Health Insurance Sales and any Hospital Sales Background is Preferred. For more info Please mail your Resume to manalihr@athulyaliving.com

Placement Bureaus/Consultants

HIRING ACCOUNTANTS, Purchase/ Marketing Coordinators, HVAC Design, Contact 08023443555, anzconsultants@yahoo.co.in

General

CCTV SECURITYSYS Installer, Driver, Electrician. Daily 6Hour. Pay Rs18000-30000/-pm. Ph:9739002001

BHUMIKA BUILDERS requires experienced SITE SUPERVISOR immediately for the projects in Bangalore Call : 9538223507

MILLENNIAL HOSTELS Wanted HOSTEL WARDEN (Male/Female) Salary upto 30000/- Contact: 8951993710/ 9620857755 Email: recruitment@iesonline.co.in

Part-Time Jobs

RETIRED/ VRS Persons, Age above 45yrs Earn 50K- 60K PM here No Retirement: 9886641282/ 7019215243

Wanted

A FIRM of chartered accountants needs an Ex-Banker who retired in scale 3 or above to handle the assignment of NPA Resolution of banks in Hubli, Contact: 9739632594

WANTED COLLECTIONS & recovery officers for HDFC Bank associate. DRA certified agents preferred. Contact: 8951993114

LOOKING FOR Telecallers for Insurance/ Car Loan Process /Field Executive Basaveshwarnagar/ Peenya/ Kengeri: 9611450180

EDUCATIONAL

Special Courses

KANNADA LEARNING COURSE. Applications are open for one year Govt. Approved Kannada Certificate Course affiliated to Bangalore City University. Passing of Kannada is mandatory for getting state Govt jobs and promotions. For details contact course in-course'>charge, BET Sadathunnisa College, Bismillahnagar, Bangalore- 560029. Phone: 99724 85717, 9620060782.

Tuitions

TUTOR: WANTED for home tuition to teach (IGCSE Syllabus) Grade-5. Location: Nagarabhavi. Contact: 9900801959

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

PUBLIC NOTICE

PUBLIC NOTICE
My client intends to purchase a Vacant residential site bearing No.6, measuring 40' X 60'.3" in J.R. GREEN PARK PHASE-II, carved out in Sy.No.19, situated in Marsur Village, Kasaba Hobli, Anekal Taluk, Bangalore, Urban District, having V.P. Khatha No.1907, of Marsur Panchayat measuring East to West - 60'.3", and North to South: 40'.0, in all measuring 2410 Sq.feet and bounded on the -
East by: Private Property; West By: Road; North By : Site No.7; South By : Site No.5.
Anybody having any right, title and or interest in the above said property, are called upon to inform the undersigned within 10 days from today.
J. Kanikaraj, Advocate, No.22/3, Shamrao Compound, Mission Road, Bangalore 560 027. Mob: 94480 47021, 9902096744

PUBLIC NOTICE
Notice is hereby given that the document being original Gift deed dated 10-5-2017 executed by Sri A. Bhoopalareddy in favour of Smt M.C.Bhagyalakshmi (H.C.Bhagyalaksimi) registered as document No CKB-1-00608/ 2017-18 at the office of Sub-Registrar, Chickballapur, Chickballapur Taluk and District, has been lost / misplaced and has not been traced till date. The lost report of the same has been lodged, vide lost report No. 0644111/2023, Chickballapur police limits, Chickballapur. If found, may kindly be returned to the undersigned.
Sd/- SANDARSHA .P.B S/o A.Bhoopala Reddy Peresandra, Mandikal hobli, Chickballapur (TQ) Phone No: 91481 40783

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

REAL ESTATE SELLING

House

BTM Layout

15'X40' BBMP 'A' Khata,3 Floors Tenanted Old Building For Sale in BTM Layout 2nd Stage,Owner 8884152641,Rs.88Lakhs

Sites

Anjanapura

ANJANAPURA COMMERCIAL Property, BDA Site For Sale,40x60, 80 Feet Road. Good Location Contact: 9945835569

General

SERVICES PROVIDED for Documentations Work for Residential, Commercial and Agricultural Properties in Entire Karnataka: 6364115555

Narasapura

DTCP APPROVED Clear Title Plots 30x40sqft Onwards, Available For Sale In A Fully Developed Gated Community With All Amenities Including STP, Centralized Over Head Tank, 40Ft Black Top Asphalt Roads, Underground Power Supply, 24X7 Security, Ambulance, Essentials Store, Wifi, ClubHouse,1km From Honda Factory, Narsapura Industrial Area, MALUR. Contact Mr.Ameen Rahaman 9535190098 Mr.Naveen 9008945910 naveen.kumar@maakimpex.com

REAL ESTATE BUYING

Sites

Multiple Locations

WANTED 4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

ADMISSION CORNER

Golden opportunity for SSLC / PUC passed student's ...
SIDDAGANGA INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
43, Narasimhaswamy Layout, Service Road, Near Laggere Last Bus Stop, Laggere, Bengaluru-560058
ADMISSIONS ARE OPEN 2023-2024
JOB ORIENT DIPLOMA IN PARAMEDICAL COURSES
LABORATORY / RADIOLOGY / DIALYSIS
OPERATION THEATER / OPHTHALMIC
Eligibility & Duration: 3 years for SSLC & 2 years for PUC (Science)
For admission contact: 9743996770 / 9844068838
SGGNG-23401

BUILDERS ESSENTIAL

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

PERSONAL

Change of Name

CHANGE OF NAME
We, Sumanth Nagaraja & Shravya Ashok, R/at. # 73/1, 3rd Cross, Ashok Nagar, BSK 1st Stage, Bangalore-560050 have changed our minor son's name from Sai Shivek Sumanth to SHIVEK SUMANTH vide affidavit dated 29/06/2023 before Notary Jayalingayya Mudenoormath, Bangalore. Henceforth he shall be called SHIVEK SUMANTH only

I, SWARNALATHA PRABAKARAN, residing at Bengaluru-4 have changed my name as LATHAPRABHAKARAN,vide affidavit dated 18/7/2023 before Notary P.C.Ramaiah, Bengaluru

CHANGE OF NAME
I, ELIJAH .T, alias ELIJAH MARIO GRACE THANGARAJU aged 28 years S/o. Harry Sundar Thangaraju, Residing at No.32, Leepakshi Layout, Banjara Orchards, Horamavu Bangalore -560043, have changed my name from ELIJAH .T alias ELIJAH MARIO GRACE THANGARAJU to ELIJAH MARIO GRACE vide affidavit dated 17.07.2023 sworn to before Notary Public Y.R Chandrashekar, Bengaluru.

CHANGE OF NAME
I, RATHY BALAKRISHNAN w/o Sasikumar R/at. No.1256, Krishna, Kaliamman Temple Road, T.Dasarahalli, Bangalore- 560057 have changed my name from RATHY SASIKUMAR to RATHY BALAKRISHNAN vide affidavit dt.17/07/2023 before Notary V.Anjanappa, Bangalore

I, ANIL KUMAR, Residing at No. 9/1, 60 Feet Road, Pattegarapalya, Bangalore-560079, have Changed my name to ANIL KUMAR SAHANI vide affidavit dated 14/07/2023, before notary, K.H. Jagadish, Bangalore.

CHANGE OF NAME
I, A NETHRAVATHI, R/at. No 2204, LIG, 3rd Stage,7th B Main Road,18th B Cross, Yelahanka New Town, Bengaluru-560064, have changed my name to NETHRAVATHI MANIKANTA vide affidavit dt.17/07/2023 before Notary G.R. Ravichandra Reddy, Bengaluru

I, ROOPA MOKSHAPATHI #57, Valagerekallahalli, Dommasandra, Bengaluru-562125 have changed my name to ROOPA GOPAL REDDY vide affidavit dated-18/07/2023 before notary K.V. Mani

CHANGE OF NAME
I, SHALINI ANNAPPA, R/at. No. 002, SLV Uniworth Classic Aprt, 9th Main, 5th Cross, HBR Layout, Bengaluru-560043, have changed my name to SHALINI A S vide affidavit dt.18/07/2023 before Notary S.I.Balaguru Bengaluru. Henceforth I shall be called SHALINI A S only

I, PRABAKARAN JAYARAMAN, residing at Bengaluru-4 have changed my name as PRABHAKARAN, vide affidavit dated 18/7/2023 before Notary P.C.Ramaiah, Bengaluru.

Lost

DOCUMENTS LOST
Charanya S. Residing at House No.08, 08/1, Survey No.15, KV Shankar Layout, 2nd Main, 3rd Cross, Nanjambha Agrahara, Chamarajpet, Bangalore South, Karnataka -560018 have lost house original property document on 03.01.2023 at Chamarajapet, name of the property Sachin S. any finder please contact above address or call. 9449674845, 8105510516

DOCUMENT LOST
I S.Jeevan Rao R/o # 61 6th Main Malleshwaram Bangalore-03, have lost my Orginal Sale Deed Document survey no-45 new survey no-142, Document NO 1709/79-80, 1181/80-81, 260/85-86,291/88-89 And Conversation copy no 154, Date 04-03-2005 lost on 01-03-2023 Chanakya layout Bangalore
Finders please Contact: 9880285553 or Nearby police station.

480 ತೆರಿಗೆ ವಂಚನೆ ಪ್ರಕರಣ ಪತ್ತೆ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ಎರಡು ತಿಂಗಳಲ್ಲಿ 480 ತೆರಿಗೆ ವಂಚನೆ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ನಕಲಿ ಬಿಲ್‌ಗಳ 1,600 ಪ್ರಕರಣಗಳನ್ನು ಪತ್ತೆ ಮಾಡಿ ₹92 ಕೋಟಿ ವಸೂಲಿ ಮಾಡಲಾಗಿದೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಮಂಗಳವಾರ ಕರ್ನಾಟಕ ಸರಕು ಮತ್ತು ಸೇವೆಗಳ (ತಿದ್ದುಪಡಿ) ಮಸೂದೆ ಮಂಡಿಸಿ ವಿವರಿಸಿದ ಅವರು, '2017ರಲ್ಲಿ ₹44 ಸಾವಿರ ಕೋಟಿ ಜಿಎಸ್‌ಟಿ ಸಂಗ್ರಹವಾಗುತ್ತಿತ್ತು. ಈಗ ₹81,848 ಕೋಟಿ ಸಂಗ್ರಹವಾಗುತ್ತಿದೆ. ಶೇ 56ರಷ್ಟು ತೆರಿಗೆ ಸೇವಾ ವಲಯದಿಂದ ದೊರೆಯುತ್ತಿದೆ' ಎಂದು ವಿವರಿಸಿದರು.

'ವ್ಯಾಟ್ ವ್ಯವಸ್ಥೆಯಲ್ಲಿ ಕೇವಲ 5.8 ಲಕ್ಷ ತೆರಿಗೆ ಪಾವತಿದಾರರು ಇದ್ದರು. ಈಗ ಜಿಎಸ್‌ಟಿ ವ್ಯವಸ್ಥೆಯಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆ. ಅಡಿಕೆ, ಗುಟ್ಕಾ, ಸಿಮೆಂಟ್, ಕ್ರಷರ್‌ಗಳಿಂದ ವ್ಯಾಪಕ ತೆರಿಗೆ ವಂಚನೆ ಯಾಗುತ್ತಿರುವ ಬಗ್ಗೆ ದೂರುಗಳಿವೆ. ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. ಆರ್ಥಿಕ ಶಿಸ್ತು ಮತ್ತು ಸಂಪನ್ಮೂಲ ಕ್ರೋಡೀಕರಣಕ್ಕೆ ಒತ್ತು ನೀಡಲು ಹಾಗೂ ತೆರಿಗೆ ವಸೂಲಾತಿಯಲ್ಲಿ ಸುಧಾರಣೆಗಳನ್ನು ತರಲು ಸರ್ಕಾರ ದೃಢ ಹೆಜ್ಜೆಗಳನ್ನು ಇಟ್ಟಿದೆ' ಎಂದು ತಿಳಿಸಿದರು.

ಜೆಡಿಎಸ್‌ನ ಎಸ್‌.ಎಲ್‌. ಭೋಜೇಗೌಡ, 'ಗುಜರಿ ವಸ್ತುಗಳ ವಹಿವಾಟು ಬಗ್ಗೆ ನಿರ್ಲಕ್ಷ್ಯ ಮಾಡಲಾಗಿದೆ' ಎಂದರು. ಬಿಜೆಪಿಯ ಕೆ.ಎಸ್‌. ನವೀನ್, 'ತೆರಿಗೆ ಪಾವತಿಸುವವರಿಗೆ ನೋಟಿಸ್ ನೀಡಿ ಕಿರುಕುಳ ನೀಡಲಾಗುತ್ತಿದೆ. ಕೆಳಹಂತದ ಅಧಿಕಾರಿಗಳು ಮರ್ಯಾದೆ ಕೊಡುವುದಿಲ್ಲ' ಎಂದು ದೂರಿದರು.

ಬಿಜೆಪಿಯ ಮುನಿರಾಜು, 'ಅಧಿಕಾರಿಗಳು ದರ್ಪ ತೋರುತ್ತಾರೆ. ಅಧಿಕಾರಿಗಳ ದಬ್ಬಾಳಿಕೆಯನ್ನು ನಿಯಂತ್ರಿಸಬೇಕು' ಎಂದು ಒತ್ತಾಯಿಸಿದರು. ಚರ್ಚೆ ಬಳಿಕ ಮಸೂದೆಗೆ ಅನುಮೋದನೆ ನೀಡಲಾಯಿತು.

ಎಸ್‌ಸಿ ಮತ್ತು ಎಸ್‌ಟಿ ಗುತ್ತಿಗೆದಾರರು ಕೈಗೊಳ್ಳುವ ನಿರ್ಮಾಣ ಕಾಮಗಾರಿಗಳ ಮೊತ್ತದ ಮಿತಿಯನ್ನು ₹50 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆ ಹಾಗೂ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ)(ತಿದ್ದುಪಡಿ) ಮಸೂದೆಗೂ ವಿಧಾನ ಪರಿಷತ್ ಅನುಮೋದನೆ ನೀಡಿತು.

ರೈತರಿಗೆ ವಿಶೇಷ ಪ್ಯಾಕೇಜ್‌ಗೆ ದರ್ಶನ್ ಪುಟ್ಟಣ್ಣಯ್ಯ ಒತ್ತಾಯ

ಬೆಂಗಳೂರು: 'ಕಳೆದ ಎರಡು ತಿಂಗಳಲ್ಲಿ 42 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ಆಘಾತದ ಸಂಗತಿ. ಇದಕ್ಕೆ ಮುಂಗಾರು ವೈಫಲ್ಯವೇ ಕಾರಣ. ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು' ಎಂದು ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಚರ್ಚೆಯ ಮೇಲೆ ಭಾಗವಹಿಸಿ ಮಾತನಾಡಿದ ಅವರು, ಹಾವೇರಿ ಜಿಲ್ಲೆ ಯೊಂದರಲ್ಲೇ 18 ಜನ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಇದೆ. ಇದು ಅತ್ಯಂತ ಗಂಭೀರ ವಿಚಾರ ಎಂದು ಹೇಳಿದರು.

'ಮುಂಗಾರು ವೈಫಲ್ಯ ಆಗಿರುವುದರಿಂದ ಸಣ್ಣಪುಟ್ಟ ರೈತರಿಗೆ ಸಮಸ್ಯೆ ಆಗಿದೆ. ಸಾಕಷ್ಟು ಮಹಿಳೆಯರು ಕೃಷಿ ಸಾಲ ಮಾಡಿದ್ದು ಬಲವಂತವಾಗಿ ವಸೂಲಿ ಮಾಡುವುದನ್ನು ನಿಲ್ಲಿಸಬೇಕು. ಸಾಲ ಮಾಡಿ ಎರಡರಿಂದ ಮೂರು ಬಾರಿ ಬಿತ್ತನೆ ಮಾಡಿದ್ದಾರೆ. ಎಲ್ಲವೂ ನಷ್ಟವಾಗಿದೆ. ಸಾಲ ತೀರಿಸಲಾಗದ ಸ್ಥಿತಿಯನ್ನು ತಲುಪಿದ್ದಾರೆ' ಎಂದರು.

'ರಾಜ್ಯದಲ್ಲಿರುವ 1,400 ರೈತರ ಉತ್ಪಾದನಾ ಕೇಂದ್ರಗಳ ಪೈಕಿ ಶೇ 95 ರಷ್ಟು ಕಾರ್ಯನಿರ್ವಹಿಸುತ್ತಿಲ್ಲ. ವಿಶ್ವದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಅಗ್ರಗಣ್ಯ ರಾಜ್ಯ ಎನಿಸಿರುವ ಕರ್ನಾಟಕದಲ್ಲಿ ಸರ್ಕಾರದ ಯೋಜನೆಗಳ ಅನುಷ್ಠಾನಕ್ಕಾಗಿ ಇರುವ ಸರ್ವರ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ' ಎಂದರು.

ಉತ್ತರ ಕರ್ನಾಟಕಕ್ಕೆ ಕೈಗಾರಿಕೆ: ಜೆಡಿಎಸ್‌ನ ಕರೆಮ್ಮ ಜಿ. ನಾಯಕ, 'ನಮ್ಮ ಭಾಗದಲ್ಲಿ ಉದ್ಯೋಗ ಸಿಗದೇ ಯುವಕರು ಪುಣೆ ಅಥವಾ ಬೆಂಗಳೂರಿಗೆ ಹೋಗುವ ಸ್ಥಿತಿ ಇದೆ. ಉತ್ತರ ಕರ್ನಾಟಕ ಭಾಗಕ್ಕೆ ಹೆಚ್ಚಿನ ಉದ್ಯಮಗಳು ಬಂದರೆ ವಲಸೆ ಹೋಗುವ ಸಮಸ್ಯೆ ಇರುವುದಿಲ್ಲ' ಎಂದರು.

ಜೆಡಿಎಸ್‌ನ ಸಮೃದ್ಧಿ ಮಂಜುನಾಥ್, ಮುಳಬಾಗಿಲಿನಲ್ಲಿ 1,559 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಇತ್ತು. ಈ ಬಾರಿಯ ಬಜೆಟ್‌ನಲ್ಲಿ ಅದರ ಪ್ರಸ್ತಾಪವಿಲ್ಲ. ಇಲ್ಲಿ ಕೈಗಾರಿಕೆಗಳು ಬರದೇ ಇದ್ದರೆ ಯುವಕರಿಗೆ ಉದ್ಯೋಗ ಸಿಗುವುದಿಲ್ಲ ಎಂದು ಹೇಳಿದರು.

ಆನೆ ಹಾವಳಿ ತಪ್ಪಿಸಿ: ಬೇಲೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿ ವಿಪರೀತವಾಗಿದೆ. ಕಾಫಿ ತೋಟಗಳ ಮಾಲೀಕರ ಪಾಡು ಹೇಳತೀರದಾಗಿದೆ. ತಮ್ಮ ಬಂಗಲೆಗಳನ್ನು ಬಿಟ್ಟು ಹೋಗಿದ್ದಾರೆ. ಆನೆ ಹಾವಳಿ ತಪ್ಪಿಸಲು ₹120 ಕೋಟಿ ಬಿಡುಗಡೆ ಮಾಡಬೇಕು ಎಂದು ಬಿಜೆಪಿಯ ಸುರೇಶ್ ಒತ್ತಾಯಿಸಿದರು.

ಕಾಂಗ್ರೆಸ್‌ನ ಅಶೋಕ್ ಕುಮಾರ್ ರೈ, ಬಿಜೆಪಿಯ ಚಂದ್ರು ಲಮಾಣಿ ಮಾತನಾಡಿದರು.

ಪಟ್ಟಿ ಹಿಡಿದ ವೇದವ್ಯಾಸ ಕಾಮತ್: ಸದನದಲ್ಲಿ ಕೋಲಾಹಲ

ಬೆಂಗಳೂರು: ಬಜೆಟ್ ಪುಸ್ತಕದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಮಾಡಿದ್ದ ಟೀಕೆಗಳಿಗೆ ತಿರುಗೇಟು ನೀಡಲು ಬಿಜೆಪಿ ಶಾಸಕ ಡಿ. ವೇದವ್ಯಾಸ ಕಾಮತ್ ನರೇಂದ್ರ ಮೋದಿ ಅವಧಿಯ ಸಾಧನೆಗಳ ಪಟ್ಟಿ ಓದಲು ಆರಂಭಿಸಿದ್ದು ಮಂಗಳವಾರ ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

'ಬಜೆಟ್ ಪುಸ್ತಕವನ್ನು ರಾಜಕೀಯ ಭಾಷಣಕ್ಕೆ ಬಳಸಿಕೊಂಡಿದ್ದೀರಿ. 28 ಬಾರಿ ಕೇಂದ್ರ ಸರ್ಕಾರವನ್ನು ಟೀಕಿಸಲಾಗಿದೆ. ನಾನು ಕೇಂದ್ರ ಸರ್ಕಾರದ ಸಾಧನೆಗಳ ಪಟ್ಟಿಯೊಂದಿಗೆ ಬಂದಿದ್ದೇನೆ. ಇದರಲ್ಲಿ 803 ಯೋಜನೆಗಳ ವಿವರವಿದೆ' ಎಂದು 35 ಪುಟಗಳ ಪಟ್ಟಿಯೊಂದನ್ನು ಪ್ರದರ್ಶಿಸಿದರು.

ಪಿ.ಎಂ. ನರೇಂದ್ರಸ್ವಾಮಿ, ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ಕಾಂಗ್ರೆಸ್‌ನ ಹಲವರು ವೇದವ್ಯಾಸ್ ಕಾಮತ್ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ಸಿದ್ದು ಸವದಿ, ಡಾ.ವೈ. ಭರತ್ ಶೆಟ್ಟಿ, ಯು. ರಾಜೇಶ್ ನಾಯ್ಕ್ ಸೇರಿದಂತೆ ಬಿಜೆಪಿಯ ಹಲವರು ಕಾಮತ್ ಬೆಂಬಲಕ್ಕೆ ನಿಂತರು. ಕೆಲಕಾಲ ಸದನದಲ್ಲಿ ಭಾರಿ ಗದ್ದಲ ಉಂಟಾಯಿತು.

ಸಭಾಧ್ಯಕ್ಷ ಯು.ಟಿ. ಖಾದರ್ ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಬಳಿಕ ಮಾತು ಮುಂದುವರಿಸಿದ ಕಾಮತ್, 'ಹಿಂದಿನ ಬಿಜೆಪಿ ಸರ್ಕಾರದ ಎಲ್ಲ ಯೋಜನೆಗಳನ್ನೂ ನಿಲ್ಲಿಸಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿ ಕೋಮು ದ್ವೇಷ ನಿಯಂತ್ರಣ ಘಟಕ ತೆರೆಯಲಾಗಿದೆ. ಅಲ್ಲಿ ಪೊಲೀಸರು ಮಧ್ಯ ರಾತ್ರಿಯೂ ಬಂದು ಕಿರುಕುಳ ನೀಡುತ್ತಿದ್ದಾರೆ' ಎಂದು ದೂರಿದರು.

'ವೇಮಗಲ್ ಬಳಿ ಹೈಟೆಕ್ ಕೈಗಾರಿಕಾ ಪಾರ್ಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲೆ ವೇಮಗಲ್ ಸಮೀಪದ ಬಾವನಹಳ್ಳಿಯ 720 ಎಕರೆ ಪ್ರದೇಶದಲ್ಲಿ ಹೈಟೆಕ್ ಕೈಗಾರಿಕಾ ಪಾರ್ಕ್ ಅಭಿವೃದ್ಧಿಪಡಿ ಸಲು ಜಪಾನಿನ ಮಾರುಬೇನಿ ಕಾರ್ಪೊರೇಷನ್ ಆಸಕ್ತಿ ತೋರಿದೆ.

ಮಾರುಬೇನಿ ಕಾರ್ಪೊರೇಷನ್ ಉಪ ಪ್ರಧಾನ ವ್ಯವಸ್ಥಾಪಕ ಶಿರೋಜೋನೊ ಕಾಜೌಕಿ, ಮಾರುಬೇನಿ ಇಂಡಿಯಾ ಲಿಮಿಟೆಡ್‌ನ ಪ್ರಧಾನ ವ್ಯವಸ್ಥಾಪಕ ತಕಾಯಿಕಾ ಯೋಶಿದಾ ನೇತೃತ್ವದ ನಿಯೋಗವು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಮಂಗಳವಾರ ಭೇಟಿ ಮಾಡಿ ಚರ್ಚೆ ನಡೆಸಿತು.

'ಮಾರುಬೇನಿ ಕಾರ್ಪೊರೇಷನ್ ಪ್ರಸ್ತುತಪಡಿಸಿರುವ ಪ್ರಸ್ತಾವನೆ ಆಕರ್ಷಕವಾಗಿದೆ. ಇದನ್ನು ವಿವರವಾಗಿ ಅಧ್ಯಯನ ಮಾಡಿದ ಬಳಿಕ ಸರ್ಕಾರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಸಚಿವ ಪಾಟೀಲ ಹೇಳಿದರು.

'ಉದ್ದೇಶಿತ ಹೈಟೆಕ್ ಕೈಗಾರಿಕಾ ಪಾರ್ಕ್ ಅಭಿವೃದ್ಧಿಗೆ ನೇರವಾಗಿ ₹2,800 ಕೋಟಿ ಹೂಡಿಕೆ ಮಾಡಲಾಗುವುದು. ನಂತರ ಅಲ್ಲಿನ ಕೈಗಾರಿಕಾ ನಿವೇಶನಗಳನ್ನು ಆಸಕ್ತ ಉದ್ದಿಮೆಗಳಿಗೆ ಹಂಚಲಾಗುವುದು. ಆ ಹಂತದಲ್ಲಿ ನೇರ ವಿದೇಶಿ ಹೂಡಿಕೆ ಮೂಲಕ ಇನ್ನೂ ₹8,000 ಕೋಟಿ ಹರಿದು ಬರಲಿದೆ. ಜತೆಗೆ ಇಲ್ಲಿ 40 ಸಾವಿರ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಇದರಿಂದ ಒಟ್ಟಾರೆಯಾಗಿ ಕರ್ನಾಟಕದ ಆರ್ಥಿಕತೆಗೆ ವರ್ಷಕ್ಕೆ ಎರಡು ಬಿಲಿಯನ್ ಡಾಲರ್ ಸೇರ್ಪಡೆಯಾಗಲಿದೆ' ಎಂದು ನಿಯೋಗ ವಿವರಿಸಿತು.

ಅಧಿಕೃತ ಭಾಷೆಯಾಗಿ ತುಳು ಪೂರಕ ಕ್ರಮದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಳು ಭಾಷೆಗೆ ರಾಜ್ಯದ ಎರಡನೇ ಅಧಿಕೃತ ಭಾಷೆ ಸ್ಥಾನ ನೀಡಲು ಸರ್ಕಾರವು ಪೂರಕ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ವಿಧಾನಸಭೆಯಲ್ಲಿ ಮಂಗಳವಾರ ಭರವಸೆ ನೀಡಿದರು.

ಕಾಂಗ್ರೆಸ್‌ನ ಅಶೋಕ್ ಕುಮಾರ್ ರೈ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, 'ತುಳು ಭಾಷೆಗೆ ಅಧಿಕೃತ ಸ್ಥಾನ ನೀಡುವ ಸಂಬಂಧ ಅಧ್ಯಯನ ನಡೆಸಲು ಹಿಂದಿನ ಸರ್ಕಾರವು ಡಾ.ಎಂ. ಮೋಹನ ಆಳ್ವ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿತ್ತು. ಸಮಿತಿಯ ವರದಿ ಬಂದಿದ್ದು, ಕೆಲವು ಇಲಾಖೆಗಳ ಅಭಿಪ್ರಾಯ ಪಡೆದು ಮುಂದಿನ ತೀರ್ಮಾನ ಕೈಗೊಳ್ಳುವಂತೆ ಶಿಫಾರಸು ಮಾಡಲಾಗಿದೆ. ಅಗತ್ಯವಿರುವ ಇಲಾಖೆಗಳಿಂದ ಅಭಿಪ್ರಾಯ ಪಡೆದು ನಿರ್ಣಯ ಕೈಗೊಳ್ಳುತ್ತೇವೆ' ಎಂದರು.


'ಪಶ್ಚಿಮ ಬಂಗಾಳ, ಕೇರಳ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಹತ್ತಕ್ಕಿಂತ ಹೆಚ್ಚು ಅಧಿಕೃತ ಭಾಷೆಗಳಿವೆ. ರಾಜ್ಯದಲ್ಲಿ ತುಳು ಭಾಷೆಗೂ ಅಧಿಕೃತ ಭಾಷೆಯ ಸ್ಥಾನಮಾನ ನೀಡಬೇಕು' ಎಂದು ಆಗ್ರಹಿಸಿದರು. ಬಿಜೆಪಿಯ ಡಿ. ವೇದವ್ಯಾಸ ಕಾಮತ್ ಕೂಡ ದನಿಗೂಡಿಸಿದರು.

ಸಭಾಧ್ಯಕ್ಷ ಯು.ಟಿ. ಖಾದರ್ ಕೂಡ ಮಧ್ಯ ಪ್ರವೇಶಿಸಿ, ಬೇಡಿಕೆಯ ಪರ ಮಾತನಾಡಿದರು. ಮೂವರೂ ಕೆಲಕಾಲ ತುಳು ಭಾಷೆಯಲ್ಲೇ ಮಾತು ಮುಂದುವರಿಸಿದರು.

ಚಲನಚಿತ್ರ ನಟ ಸುದೀಪ್ ಜೊತೆ ಸಂಘರ್ಷ; ನಿರ್ಮಾಪಕ ಎಂ.ಎನ್‌.ಕುಮಾರ್ ಹೇಳಿಕೆ

'ದಾಖಲೆಗಳೊಂದಿಗೆ ರವಿಚಂದ್ರನ್ ಭೇಟಿಯಾಗುವೆ'

ಪ್ರಜಾವಾಣಿ ವಾರ್ತೆ



ಕುಮಾರ್



ರವಿಚಂದ್ರನ್

ಬೆಂಗಳೂರು: ನಿರ್ಮಾಪಕ ಎಂ.ಎನ್. ಕುಮಾರ್ ಹಾಗೂ ನಟ ಸುದೀಪ್ ನಡುವಣ ಘರ್ಷಣೆ ಇದೀಗ ನಟ ರವಿಚಂದ್ರನ್ ಅವರ ಅಂಗಳ ತಲುಪಿದೆ. 'ಧರಣಿ ಕೈಬಿಟ್ಟು ಕುಮಾರ್ ದಾಖಲೆಗಳೊಂದಿಗೆ ನನ್ನ ಬಳಿ ಬರಲಿ' ಎಂದು ರವಿಚಂದ್ರನ್ ಅವರು ಸಲಹೆ ನೀಡಿದ ಕಾರಣ ಕುಮಾರ್ ಬುಧವಾರ (ಜುಲೈ 19) ರವಿಚಂದ್ರನ್ ಅವರನ್ನು ಭೇಟಿಯಾಗಲು ನಿರ್ಧರಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಕುಮಾರ್, 'ಬುಧವಾರ ಬೆಳಿಗ್ಗೆ ನಾನು ದಾಖಲೆಗಳ ಸಹಿತ ರವಿಚಂದ್ರನ್ ಅವರನ್ನು ಭೇಟಿಯಾಗಲಿದ್ದೇನೆ. ಶಿವರಾಜ್‌ಕುಮಾರ್ ಅವರ ಭೇಟಿಗೂ ಪ್ರಯತ್ನಿಸುತ್ತಿದ್ದೇನೆ. ಅವರು ಚಿತ್ರೀಕರಣದಲ್ಲಿ ತಲ್ಲೀನರಾಗಿದ್ದಾರೆ. ಅವರು ನೀಡುವ ಮಾರ್ಗದರ್ಶನದಂತೆ ನಾನು ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ' ಎಂದರು.

ಸಹನೆ ಮೀರಿದೆ: ಎಂ.ಎನ್‌.ಕುಮಾರ್ ಪರ ನಿರ್ಮಾಪಕರ ತಂಡ ಮಂಗಳವಾರ ಮಧ್ಯಾಹ್ನ ರವಿಚಂದ್ರನ್ ಅವರನ್ನು ಭೇಟಿಯಾಗಿ ಘಟನೆಗಳ ಕುರಿತು ಚರ್ಚೆ ನಡೆಸಿತ್ತು. ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ರವಿಚಂದ್ರನ್ ಅವರು, 'ಎರಡೂ ಕಡೆ ಸಹನೆ ಮೀರಿದೆ. ಧರಣಿ ಮುಂದುವರಿಸಿದರೆ ನಾನು ಯಾವ ಮಧ್ಯಸ್ಥಿಕೆಗೂ ಬರುವುದಿಲ್ಲ. ನಾನು ಸುದೀಪ್‌ನನ್ನು ಮಗ ಎಂದು ಕರೆದರೂ, ಈ ವಿಚಾರದಲ್ಲಿ ನಾನು ಅವನನ್ನು ಕರೆಯುವುದಿಲ್ಲ. ಕುಮಾರ್ ಅವರ ಮಾತು ಸತ್ಯ ಎಂದು ಅನಿಸಿದರೆ ಸುದೀಪ್ ಬಳಿಗೆ ನಾನೇ ಹೋಗುತ್ತೇನೆ' ಎಂದಿದ್ದರು.

'ಸದ್ಯ ಎಲ್ಲ ವಿಷಯವೂ ತಣ್ಣಗಾಗಬೇಕು. ನಮಗೆ ಇಡೀ ವಿಷಯ ಕೂಲಂಕಷವಾಗಿ ತಿಳಿದಿಲ್ಲ. ಒಟ್ಟಿನಲ್ಲಿ ಸುದೀಪ್ ಅವರಿಗೆ ನೋವಾಗಿರುವುದು ನಿಜ. ಕುಮಾರ್‌ಗೆ ಏನು ನೋವಾಗಿದೆ ಎಂದು ಗೊತ್ತಿಲ್ಲ. ಇವರ ಮಾತುಗಳನ್ನು ಕೇಳಿಕೊಂಡು ತೀರ್ಮಾನ ತೆಗೆದು ಕೊಳ್ಳಲು ಆಗುವುದಿಲ್ಲ. ಎಲ್ಲರೂ ಮನೆಯವರೇ. ನಾನು ಯಾರನ್ನೂ ಕೇವಲ ಮಾತಲ್ಲಿ ನಂಬುವುದಿಲ್ಲ. ನನಗೆ ದಾಖಲೆ ಬೇಕು. ದಾಖಲೆ ಮೇಲೆ ನಡೆದ ಮಾತುಕತೆ ತಿಳಿದುಕೊಂಡು, ಅದರಲ್ಲಿ ಎಷ್ಟು ಸತ್ಯ ಎನ್ನುವುದನ್ನು ನನ್ನ ತಿಳಿವಳಿಕೆಗೆ ಬಿಡಬೇಕು. ನಾನು ಸುದೀಪ್ ಅವರ ಬಳಿ ಮಾತನಾಡಬೇಕೇ ಎನ್ನುವುದನ್ನು ದಾಖಲೆ ನೀಡಿದ ಮೇಲೆ ನಿರ್ಧರಿಸುತ್ತೇನೆ. ಯಾರು ಸರಿ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ನನ್ನ ಮಗನ ಮೇಲೆ ಆರೋಪ ಬಂದಿದೆ. ಅಷ್ಟು ಸುಲಭವಾಗಿ ಕುಮಾರ್ ಅವರನ್ನು ಬಿಡುವುದಿಲ್ಲ' ಎಂದು ನಗುತ್ತಾ ಹೇಳಿದರು.

'ಕರ್ನಾಟಕಕ್ಕೆ ರಾಜ್‌ಕುಮಾರ್ ಕುಟುಂಬವೇ ಮೊದಲು. ಶಿವರಾಜ್‌ಕುಮಾರ್ ಅವರ ಬಳಿಯೇ ಮೊದಲು ಹೋಗಬೇಕು. ಮೊದಲು ನಿಮ್ಮ ಮನವಿ ಪತ್ರವನ್ನು ಶಿವರಾಜ್‌ಕುಮಾರ್ ಅವರಿಗೆ ನೀಡಿ ಎಂದು ನಿರ್ಮಾಪಕರಿಗೆ ತಿಳಿಸಿದ್ದೇನೆ. ಅದೇ ನಮಗೆ ಪ್ರಧಾನ ಕಚೇರಿ' ಎಂದು ರವಿಚಂದ್ರನ್ ಹೇಳಿದರು.

ಲೀಡರ್ ಆಗಲ್ಲ: 'ಚಿತ್ರರಂಗದ ವಾತಾವರಣ ಸರಿ ಮಾಡುವ ಸಮಯ ಬಂದಿದೆ. ಸಂಘಟನೆಗಳು ಸರಿ ಮಾಡಿಕೊಳ್ಳದೇ ಹೋದರೆ ದಿನಾ ಬೆಳಿಗ್ಗೆ ಇಂತಹ ಘಟನೆಗಳು ನಡೆಯುತ್ತವೆ. ಕನ್ನಡ ಚಿತ್ರರಂಗಕ್ಕೆ ನಾನಂತೂ ನಾಯಕ ಆಗುವುದಿಲ್ಲ. ನನಗೆ ನನ್ನದೇ ಕೆಲಸಗಳಿವೆ. ಲೀಡರ್ ಆಗಬೇಕೆಂದರೆ ನನ್ನದೇ ದಾರಿಗಳಿವೆ. ನಾನು ಲೀಡರ್ ಆದರೆ ಮೊದಲು ಎಲ್ಲರಿಗೂ ವಿಲನ್ ಆಗುತ್ತೇನೆ. ನಾನು ಮೂವತ್ತು ವರ್ಷಗಳ ಹಿಂದೆಯೇ ಕಲಾವಿದರ ಸಂಘಟನೆ ಹೇಗೆ ನಡೆಯಬೇಕು ಎಂದು ಪುಸ್ತಕ ಮಾಡಿಕೊಟ್ಟಿದ್ದೆ. ಅದನ್ನು ಯಾರೂ ಓದಲೂ ಇಲ್ಲ. ಹೀಗಾಗಿ ಇದು ಯಾವುದೂ ಬೇಡ ಎಂದು ನಿರ್ಧರಿಸಿದ್ದೇನೆ' ಎಂದರು.



ತಿರುವನಂತಪುರಂನಲ್ಲಿ ನಡೆದ 2023–24ನೇ ಸಾಲಿನ 'ಇಂಟರ್ ಡೈರೆಕ್ಟರೇಟ್ ಶೂಟಿಂಗ್ ಕಾಂಪಿಟೇಷನ್'ನಲ್ಲಿ (ಡಿಎಸ್‌ಎಸ್‌ಸಿ) ಬೆಂಗಳೂರಿನ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್‌ನ ಜೂನಿಯರ್ ಅಂಡರ್ ಆಫೀಸರ್ ಕೆಡೆಟ್ ಸುಜಲ್ ಸಂಕಾಲ ಬೆಳ್ಳಿ ಟ್ರೋಫಿ ಪಡೆದಿದ್ದಾರೆ

ಬಿಬಿಎಂಪಿ: 6,414 ಹುದ್ದೆ ತುಂಬಲು ಉಪಮುಖ್ಯಮಂತ್ರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಖಾಲಿ ಇರುವ 6,414 ಹುದ್ದೆಗಳನ್ನು ತುಂಬಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮನವಿ ಮಾಡಿಕೊಂಡಿದೆ.

ಬಿಬಿಎಂಪಿಯ ಎಲ್ಲ ವೃಂದಗಳ 6 ಸಾವಿರಕ್ಕೂ ಹೆಚ್ಚು ಹುದ್ದೆಗಳು ಹಲವು ವರ್ಷಗಳಿಂದ ಖಾಲಿ ಇವೆ. ಅಲ್ಲದೆ, ಪಾಲಿಕೆ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸಿಗಬೇಕಾದ ಮುಂಬಡ್ತಿ ಹಾಗೂ ಆರ್ಥಿಕ ಸೌಲಭ್ಯ ವಿಳಂಬವಾಗುತ್ತಿದೆ. ಕೆಲವು ಅಧಿಕಾರಿಗಳು ಮುಂಬಡ್ತಿ ಸಿಗದೆ ನಿವೃತ್ತರೂ ಆಗಿದ್ದಾರೆ. ಈ ಸಮಸ್ಯೆಗಳನ್ನು ಈಡೇರಿಸಬೇಕು ಎಂದು ಕೋರಲಾಗಿದೆ.

ಎ ಶ್ರೇಣಿಯ ಅಧಿಕಾರಿಗಳಿಗೆ 2020ರ ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ಮುಂಬಡ್ತಿಯನ್ನು ಸರ್ಕಾರ ನೀಡಬೇಕು. ಆದರೆ, ಈ ಪ್ರಕ್ರಿಯೆ ಸರ್ಕಾರದ ಹಂತದಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಈ ಅಧಿಕಾರವನ್ನು ಮುಖ್ಯ ಆಯುಕ್ತರಿಗೆ ನೀಡಬೇಕು ಎಂದು ಸಂಘದ ಅಧ್ಯಕ್ಷ ಎ.ಅಮೃತರಾಜ್ ಮನವಿ ಮಾಡಿದ್ದಾರೆ.

ಸಹ ಕಂದಾಯ ಅಧಿಕಾರಿ, ಉಪ- ಕಂದಾಯ ಅಧಿಕಾರಿ, ಆರೋಗ್ಯಾಧಿಕಾರಿಗಳಿಗೆ ಮುಂಬಡ್ತಿ ಕಾಲಕಾಲಕ್ಕೆ ಸಿಗುತ್ತಿಲ್ಲ. ಹಿರಿಯ ಆರೋಗ್ಯ ಪರಿವೀಕ್ಷಕರು 15 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದರೂ ಮುಂಬಡ್ತಿ ಸಿಗುತ್ತಿಲ್ಲ. ಸರ್ಕಾರದ ಆದೇಶದ ಪ್ರಕಾರ ಒಬ್ಬ ನೌಕರನ ಸೇವಾವಧಿಯಲ್ಲಿ ಮೂರು ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಇದು ಪಾಲಿಕೆಯಲ್ಲಿ ಆಗುತ್ತಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಪಾಲಿಕೆಯಲ್ಲಿ 140 ವ್ಯವಸ್ಥಾಪಕರ ಹುದ್ದೆ ಮಂಜೂರಾಗಿದೆ. 32 ವ್ಯವಸ್ಥಾಪಕರ ಹುದ್ದೆ ಕಡಿಮೆಯಾಗಿದ್ದು, ಇದರಿಂದ 32 ಪ್ರಥಮ ದರ್ಜೆ ಗುಮಾಸ್ತರು ವ್ಯವಸ್ಥಾಪಕ ಹುದ್ದೆಗೆ ಮುಂಬಡ್ತಿ ಪಡೆಯಲು ವಂಚಿತರಾಗಿದ್ದಾರೆ. 32 ವ್ಯವಸ್ಥಾಪಕರ ಹುದ್ದೆಗೆ ಮಂಜೂರು ನೀಡಬೇಕು ಎಂದು ಕೋರಿದ್ದಾರೆ.

ಅಹೋರಾತ್ರಿ ತಾಳಮದ್ದಲೆ 22ಕ್ಕೆ: ಕೇವಲ ₹1 ಪ್ರವೇಶ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಣ್ಣ ಬಣ್ಣದ ವೇಷಗಳಿಲ್ಲದೆ, ಮಾತಿನ ವೈಖರಿಯ ಮೂಲಕವೇ ಕಥಾನಕವೊಂದನ್ನು ಕಟ್ಟಿಕೊಡುವ ತಾಳಮದ್ದಲೆ ಎಂಬ ಯಕ್ಷಗಾನದ ರಂಗ ಪ್ರಕಾರವೊಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಪೂರ್ಣರಾತ್ರಿ ನಡೆಯಲಿದೆ.

ಕೃಷ್ಣ ಸಂಧಾನ ಹಾಗೂ ಕರ್ಣಾರ್ಜುನ ಯಕ್ಷಗಾನ ತಾಳಮದ್ದಲೆ ಪ್ರಸಂಗಗಳು ಜು.22ರ ರಾತ್ರಿ 10ರಿಂದ ಯಕ್ಷ ಸಂಕ್ರಾಂತಿ ಹೆಸರಿನಲ್ಲಿ ನಡೆಯಲಿವೆ.

ಯಕ್ಷಗಾನ ಸಂಘಟಕ ನಾಗರಾಜ ಶೆಟ್ಟಿ ನೈಕಂಬ್ಳಿ ಅವರ ಸಂಯೋಜನೆಯಲ್ಲಿ, ಕೃಷ್ಣ ಸಂಧಾನ, ಕರ್ಣಾರ್ಜುನ ಕಥಾನಕಗಳು ರವಿಚಂದ್ರ ಕನ್ನಡಿಕಟ್ಟೆ, ಗಣೇಶ್ ಹೆಬ್ರಿ, ಚಂದ್ರಕಾಂತ ಮೂಡುಬೆಳ್ಳೆ ಅವರ ಭಾಗವತಿಕೆಯಲ್ಲಿ ನಿರೂಪಣೆಗೊಳ್ಳಲಿವೆ. ಅವಿನಾಶ್ ಬೈಪಾಡಿತ್ತಾಯ, ಅರ್ಜುನ್ ಕೊರ್ಡೇಲ್, ಕಾರ್ತಿಕ್ ಧಾರೇಶ್ವರ ಹಾಗೂ ಶಶಾಂಕ್ ಆಚಾರ್ಯ ಚೆಂಡೆ-ಮದ್ದಲೆಯಲ್ಲಿ ಸಹಕರಿಸಲಿದ್ದು, ಕಾರ್ಯಕ್ರಮಕ್ಕೆ ಆಸನ ಕಾದಿರಿಸಲು ಕೇವಲ ₹1 ಪ್ರವೇಶ ದರ ನಿಗದಿಪಡಿಸಲಾಗಿದೆ.

ದೇವಿದಾಸ ವಿರಚಿತ ಕೃಷ್ಣ ಸಂಧಾನ ಪ್ರಸಂಗದಲ್ಲಿ, ಶ್ರೀಕೃಷ್ಣನಾಗಿ ವಿಶ್ವೇಶ್ವರ ಭಟ್ ಸುಣ್ಣಂಬಳ, ಕೌರವನಾಗಿ ವಾಸುದೇವ ರಂಗಭಟ್ ಹಾಗೂ ವಿದುರನಾಗಿ ಸತೀಶ್ ಶೆಟ್ಟಿ ಮೂಡುಬಗೆ ಅರ್ಥ ಹೇಳಲಿದ್ದಾರೆ. ಬಳಿಕ ಗೇರುಸೊಪ್ಪ ಶಾಂತಪಯ್ಯ ವಿರಚಿತ ಕರ್ಣಾರ್ಜುನ ಪ್ರಸಂಗದಲ್ಲಿ, ಕರ್ಣನಾಗಿ ಸಂಕದಗುಂಡಿ ಗಣಪತಿ ಭಟ್, ಅರ್ಜುನನಾಗಿ ಜಬ್ಬಾರ್ ಸಮೊ ಸಂಪಾಜೆ, ಶಲ್ಯನಾಗಿ ವಾಸುದೇವ ರಂಗಭಟ್, ಕೃಷ್ಣನಾಗಿ ಅಶ್ವಥ್ ಹೆಗ್ಡೆ ಹಾಗೂ ಸರ್ಪಾಸ್ತ್ರವಾಗಿ ಸುಧಾಕರ ಜೈನ್ ಹೊಸಬೆಟ್ಟುಗುತ್ತು ಅವರು ವಾಗ್ವೈಖರಿ ಮೆರೆಯಲಿದ್ದಾರೆ.

ವಿವರಗಳಿಗೆ ನಾಗರಾಜ ಶೆಟ್ಟಿ ಅವರನ್ನು ಮೊಬೈಲ್ ಸಂಖ್ಯೆ 9741474255 ಮೂಲಕ ಸಂಪರ್ಕಿಸಬಹುದು.



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು

'ಭ್ರಷ್ಟಾಚಾರ: ಅಭಿವೃದ್ಧಿ ಕುಂಠಿತ'

ನಿವೃತ್ತ ಲೋಕಾಯುಕ್ತ ಎನ್‌.ಸಂತೋಷ್ ಹೆಗ್ಡೆ ಕಳವಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ಕ್ಷೇತ್ರದ 46 ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ
- ಪ್ರಾಮಾಣಿಕರನ್ನು ಗುರುತಿಸಿ, ಸನ್ಮಾನಿಸಿ
- ಕೆಂಪೇಗೌಡರ ಜಯಂತಿ

ಯಲಹಂಕ: 'ಭ್ರಷ್ಟಾಚಾರ ಎನ್ನುವುದು ಎಲ್ಲೆಡೆ ವ್ಯಾಪಕವಾಗಿ ಹರಡಿರುವ ಪರಿಣಾಮ ಅಭಿವೃದ್ಧಿ ಕುಂಠಿತವಾಗಿದೆ' ಎಂದು ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಕಳವಳ ವ್ಯಕ್ತಪಡಿಸಿದರು.

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್, ರಾಜ್ಯ ಖಾಸಗಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟ ಆಯೋಜಿಸಿದ್ದ ವೈಜ್ಞಾನಿಕ ಸಮ್ಮೇಳನ ಹಾಗೂ ನಾಡಪ್ರಭು ಕೆಂಪೇಗೌಡರ 514ನೇ ಜಯಂತಿಯಲ್ಲಿ ಅವರು ಮಾತನಾಡಿದರು.

'ದುರಾಸೆ ಬದುಕಿನಿಂದ ಹೊರಬಂದಾಗ ಮಾತ್ರ ಭ್ರಷ್ಟಾಚಾರ ನಿರ್ಮೂಲನೆಯಾಗಲು ಸಾಧ್ಯ. ಇದರ ವಿರುದ್ಧ ಹೋರಾಟ ನಿರಂತರವಾಗಿ ಇರಬೇಕಾಗಿದೆ. ಈ ಎಲ್ಲದರ ನಡುವೆ ಪ್ರಾಮಾಣಿಕರು ಹಾಗೂ ಸಾಧಕರು ಇದ್ದಾರೆ. ಅಂತವರನ್ನು ಗುರುತಿಸಿ ಗೌರವಿಸುವ ಪರಂಪರೆಯನ್ನು ವೈಜ್ಞಾನಿಕ ಸಂಶೋಧನಾ ಪರಿಷತ್ತು ನಡೆಸುತ್ತಾ ಬರುತ್ತಿರುವುದು ಅತ್ಯಂತ ಅಭಿನಂದನಾರ್ಹ' ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ಎಸ್‌.ಕೆ.ಉಮೇಶ್ ಮಾತನಾಡಿ, 'ಸಮಾಜದಲ್ಲಿ ಅಪರಾಧ ಕೃತ್ಯಗಳು ಹೆಚ್ಚುತ್ತಿವೆ. ಕಂದಾಚಾರ, ಮೌಢ್ಯಾಚರಣೆ ಸಾಮಾನ್ಯವಾಗುತ್ತಿದ್ದು, ಮನುಷ್ಯ ಸಂಬಂಧಗಳು ನಾಶವಾಗುತ್ತಿವೆ' ಎಂದು ಹೇಳಿದರು.

ನಿವೃತ್ತ ಪ್ರಾಂಶುಪಾಲ ಎನ್. ಮುನಿಕೆಂಪಣ್ಣ ಉಪನ್ಯಾಸ ನೀಡಿದರು.

ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಡಾ.ಹುಲಿಕಲ್ ನಟರಾಜ್ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 42 ಮಂದಿಗೆ ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪಿಎಚ್‌.ಡಿ: ಮರು ಪರೀಕ್ಷೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಜುಲೈ 16ರಂದು ನಡೆಸಿದ ಪಿಎಚ್‌.ಡಿ ಪ್ರವೇಶ ಪರೀಕ್ಷೆಯ ವೇಳೆಯಲ್ಲಿ ಅಕ್ರಮ ನಡೆದಿದ್ದು, ಕೂಡಲೇ ತನಿಖೆ ನಡೆಸಬೇಕು. ಜತೆಗೆ ಮರುಪರೀಕ್ಷೆ ನಡೆಸುವಂತೆ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಈ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿ ಅವರಿಗೆ ಪತ್ರ ಬರೆದಿರುವ ವಿದ್ಯಾರ್ಥಿಗಳು, 'ಪಿಎಚ್‌ಡಿ ಪ್ರವೇಶ ಪರೀಕ್ಷೆ ವೇಳೆಯಲ್ಲಿ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದು, ಹಣಕ್ಕೆ ಮಾರಾಟ ಮಾಡಿರುವ ಅನುಮಾನವಿದೆ. ಈ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಪ್ರಶ್ನೆ ಪತ್ರಿಕೆಗಳ ಸೀಲ್ ಆಗದೇ ಇರುವುದನ್ನು ಪತ್ತೆ ಹಚ್ಚಲು ಪರೀಕ್ಷಾ ಕೇಂದ್ರಗಳಲ್ಲಿನ ಸಿಸಿಟಿವಿ ದೃಶ್ಯಾವಳಿ ವಶಕ್ಕೆ ತೆಗೆದುಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿದ ಎಲ್ಲ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದ ವಿದ್ಯಾರ್ಥಿಗಳ ಗುರುತಿನ ಚೀಟಿ, ಪ್ರವೇಶ ಪತ್ರವನ್ನು ಪರಿಶೀಲಿಸದೇ ಕೇಂದ್ರಗಳಿಗೆ ಪ್ರವೇಶ ನೀಡಲಾಗಿದೆ. 15 ನಿಮಿಷ ತಡವಾಗಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಾಗಿದೆ. ಕೆಲ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ಮಾಡುವುದಕ್ಕೆ ಅವಕಾಶ ನೀಡಲಾಗಿದೆ. ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಗಳಲ್ಲಿ ನೀಡಿಲ್ಲ. ಗುಂಪು ಚರ್ಚೆಗೂ ಅವಕಾಶ ಕಲ್ಪಿಸಲಾಗಿದೆ. ಕೆಲ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿಲ್ಲ' ಎಂದು ಆರೋಪಿಸಿದ್ದಾರೆ.

'ಗೃಹ ಜ್ಯೋತಿ'ಯಲ್ಲಿ ಉಳಿದ ಯೋಜನೆಗಳು ವಿಲೀನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಹಿಂದೆ ಜಾರಿಯಲ್ಲಿದ್ದ ಮೂರು ಜ್ಯೋತಿ ಯೋಜನೆಗಳನ್ನು ಗೃಹ ಜ್ಯೋತಿ ಯೋಜನೆಯಲ್ಲಿ ವಿಲೀನ ಮಾಡಲಾಗಿದೆ. ಇದರೊಂದಿಗೆ 50 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಅನುಕೂಲ ವಾಗಲಿದೆ.

ಗೃಹ ಜ್ಯೋತಿ ಯೋಜನೆ ಅಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಜುಲೈ 1ರಿಂದಲೇ ಈ ಯೋಜನೆ ಜಾರಿಗೆ ಬಂದಿದೆ. ಆದರೆ, ಈಗಾಗಲೇ ಜಾರಿಯಲ್ಲಿರುವ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಮತ್ತು ಅಮೃತ ಜ್ಯೋತಿ ಯೋಜನೆಗಳ ಕುರಿತು ಗೊಂದಲವಿತ್ತು.

ಭಾಗ್ಯ ಜ್ಯೋತಿ ಕುಟುಂಬದವರಿಗೆ ಇದುವರೆಗೂ 40 ಯೂನಿಟ್ ಉಚಿತವಿತ್ತು. ಈಗ ಅದನ್ನು 53 ಯೂನಿಟ್ ಹಾಗೂ ಶೇ 10 ಹೆಚ್ಚುವರಿ ಉಚಿತ ವಿದ್ಯುತ್ ನೀಡುವುದಾಗಿ ಘೋಷಿಸಿದೆ. ಅಮೃತ ಜ್ಯೋತಿಗೆ 75 ಯೂನಿಟ್ ಇತ್ತು. ಈಗ ಅದನ್ನು 75 ಯೂನಿಟ್ ಜತೆಗೆ ಶೇ10 ರಷ್ಟು ಹೆಚ್ಚಿಸುವುದರ ಮೂಲಕ ಎಲ್ಲರನ್ನು ಗೃಹ ಜ್ಯೋತಿ ವ್ಯಾಪ್ತಿಗೆ ತರಲಾಗಿದೆ. ಈ ಎಲ್ಲ ಫಲಾನುಭವಿಗಳಿಗೆ ಹೆಚ್ಚುವರಿ ಯೂನಿಟ್‌ಗಳನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಜಯಚಾಮರಾಜೇಂದ್ರ ಒಡೆಯರ್ ಅವರ 104ನೇ ಜನ್ಮದಿನೋತ್ಸವದಲ್ಲಿ ಜಯಚಾಮರಾಜೇಂದ್ರ ಒಡೆಯರ್ ಭಾವಚಿತ್ರಕ್ಕೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಪುಷ್ಪ ನಮನ ಸಲ್ಲಿಸಿದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗ ಶೆಟ್ಟಿ, ಕೋಶಾಧ್ಯಕ್ಷ ಪಟೇಲ್ ಪಾಂಡು ಇದ್ದಾರೆ

ಸಾಂಸ್ಕೃತಿಕ ಪಯಣ ಉದ್ಘಾಟನೆ

'ತರಗತಿಗಳಲ್ಲಿ ವಚನ ಬಿತ್ತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸಾಂಸ್ಕೃತಿಕ ಸಂಪತ್ತಾದ ವಚನಗಳನ್ನು ಕಲಿತರೆ ಬದುಕೆಲ್ಲ ಸಂತೋಷದಿಂದ ಇರಬಹುದು ಎಂದು ವೂಡೇ ಪಿ. ಕೃಷ್ಣ ಹೇಳಿದರು.

ವಚನಜ್ಯೋತಿ ಬಳಗ ನಾಗರಬಾವಿಯ ಆರ್ಯನ್ ಪ್ರೆಸಿಡೆನ್ಸಿ ಶಾಲೆಯಲ್ಲಿ ಆಯೋಜಿಸಿದ್ದ 'ವಚನ ಕಲಿನಲಿ'- 'ತರಗತಿಗಳಲ್ಲಿ ವಚನ ಬಿತ್ತನೆ' ಸಾಂಸ್ಕೃತಿಕ ಪಯಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

25 ವರ್ಷಗಳಿಂದ ವಚನದ ಮೂಲಕ ಕನ್ನಡ ಚಟುವಟಿಕೆಗಳನ್ನು ನಡೆಸುತ್ತಿರುವ ವಚನಜ್ಯೋತಿ ಬಳಗವು ಇದೀಗ ತರಗತಿಗಳಲ್ಲಿ ವಚನ ಬಿತ್ತನೆಗೆ ಮುಂದಾಗಿರುವುದು ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, ವಚನ ಚಳವಳಿಯ ಆಧುನಿಕ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ತರಗತಿಗಳಲ್ಲಿ ವಚನಗಳನ್ನು ಪಠ್ಯ ಕ್ರಮದಲ್ಲಿ ಬೋಧಿಸುವ ಕಾರ್ಯ ಆರಂಭವಾಗಿದೆ. ಇದಕ್ಕಾಗಿ ಕನ್ನಡ ಪಠ್ಯಪುಸ್ತಕ ದಂತೆ ವಚನ ಪಠ್ಯವನ್ನು ಅಭ್ಯಾಸ ಪಠ್ಯ ಪುಸ್ತಕವಾಗಿ ಸಿದ್ದಗೊಳಿಸಲಾಗಿದೆ ಎಂದು ತಿಳಿಸಿದರು.

ಆರ್ಯನ್ ಪ್ರೆಸಿಡೆನ್ಸಿ ಶಾಲೆಯ ಮಕ್ಕಳು ವಚನಕಾರರ ವೇಷ ಧರಿಸಿ ವಚನಗಳನ್ನು ಹಾಡಿ ನೃತ್ಯ ಮಾಡಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ವೂಡೇ ಪಿ. ಕೃಷ್ಣ ಮತ್ತು ಶಾಲೆಯ ಮುಖ್ಯಸ್ಥ ಎ.ಎ. ಕುದ್ರೋಳಿ ಅವರನ್ನು ಅಭಿನಂದಿಸಲಾಯಿತು.



ನಾಗರಬಾವಿಯ ಆರ್ಯನ್ ಪ್ರೆಸಿಡೆನ್ಸಿ ಶಾಲೆಯಲ್ಲಿ ವಿದ್ಯಾರ್ಥಿಗಳು ವಚನ ಗಾಯನ ಪ್ರಸ್ತುತ ಪಡಿಸಿದರು

ನಗರದಲ್ಲಿ ಇಂದು

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮ: ಅತಿಥಿಗಳು: ವೀರೇಶಾನಂದ ಸರಸ್ವತಿ ಸ್ವಾಮೀಜಿ, ಅಂಜನಪ್ಪ ಟಿ.ಎಚ್., ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎನ್‌.ಆರ್. ಪಂಡಿತಾರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ, ಇಂಡಿಪೆಂಡೆಂಟ್ ಪಿಯು ಕಾಲೇಜು, ಕೆಂಗೇರಿ ಸ್ಯಾಟ್‌ಲೈಟ್ ಟೌನ್, ಬೆಳಿಗ್ಗೆ 9.30

2023–24ನೇ ಸಾಲಿನ ಪ್ರತಿಭಾ ಪುರಸ್ಕಾರ, ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಉದ್ಘಾಟನೆ: ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಸುಂದರ್ ರಾಜ್, ಅತಿಥಿಗಳು: ಆರ್. ರಾಮಕೃಷ್ಣನ್, ರೇಣುಕಾರಾಧ್ಯ, ಸಹನಾ, ಬಹುಮಾನ ವಿತರಣೆ: ರಾಜಶೇಖರಯ್ಯ, ಆಯೋಜನೆ ಮತ್ತು ಸ್ಥಳ: ಸಿದ್ಧಗಂಗಾ ಪದವಿ ಪೂರ್ವ ಕಾಲೇಜು, ರಘುವನಹಳ್ಳಿ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 11.30

'ಶ್ರೀಮದ್ಭಾಗವತ ಸಂಗ್ರಹ' ಧಾರ್ಮಿಕ ಪ್ರವಚನ: ಆನಂದತೀರ್ಥಾಚಾರ್ ಮಾಳಿಗೆ, ಸ್ಥಳ: ಶ್ರೀಪಾದರಾಜ ಮಠ, ರಾಘವೇಂದ್ರ ಕಾಲೊನಿ, ಸಂಜೆ 5

ವಿಮಲಾ ರಂಗಾಚಾರ್ ನಾಟಕೋತ್ಸವದ ಉದ್ಘಾಟನಾ ಸಮಾರಂಭ, ನಾಟಕ ಪ್ರಯೋಗ: ಉದ್ಘಾಟನೆ: ನಾಗೇಶ್ ವಿ. ಬೆಟ್ಟಕೋಟೆ, ಅತಿಥಿಗಳು: ವಿಮಲಾ ರಂಗಾಚಾರ್, ಬಿ.ಆರ್. ಶೇಷಾದ್ರಿ ಅಯ್ಯಂಗಾರ್, ಶೋಭಾ ವೆಂಕಟೇಶ್, ಕೆ.ಎಂ. ರಾಘವೇಂದ್ರನ್, ಆಯೋಜನೆ: ಎಂ.ಇ.ಎಸ್. ರಂಗಶಾಲೆ, ಸ್ಥಳ: ಎಂ.ಇ.ಎಸ್. ಕಿಶೋರ ಕೇಂದ್ರ, ಮಲ್ಲೇಶ್ವರ, ಸಂಜೆ 5.30


ಅಧಿಕ ಮಾಸದ ಹರಿಭಜನೆ: ಎಚ್‌.ವಿ.ಐ ಭಜನಾ ಮಂಡಳಿ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 5.30ರಿಂದ

ಪ್ರವಚನ ವಾಹಿನಿ: 'ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ'ದ ಕುರಿತ ಉಪನ್ಯಾಸ: ಪವಮಾನಾಚಾರ್ ಎಂ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in



ತಂತ್ರಜ್ಞಾನ







ಕಲೆ, ಇಲೆಕ್ಟ್ರಾನಿಕ್ಸ್ ಹಾಗೂ ಪಾಲಿಮರ್ ತಂತ್ರಜ್ಞಾನ ಕೂಡಿದರೆ ಬೇಕೆಂದಾಗ ಬೆಚ್ಚಗಿಡುವ ಬಟ್ಟೆಯನ್ನು ಸೃಷ್ಟಿಸಬಹುದಂತೆ!

ಬೇಕಾದಾಗ ಬೆವರಿಸುವ ಬಟ್ಟೆ!



ಕೊಳ್ಳೇಗಾಲ ಶರ್ಮ

'ಚೆನ್ನಾಗಿ ಗಾಳಿ ಆಡುವ ಬಟ್ಟೆ ಹಾಕಿಕೋ' ಎಂದು ಆಟಕ್ಕೆ ಹೋಗುವಾಗ ಅಮ್ಮ ಹೇಳುತ್ತಿದ್ದುದುಂಟು. ಇಲ್ಲದಿದ್ದರೆ ಮೈಯೆಲ್ಲ ಬೆವೆತು ವಾಸನೆ ಬರುತ್ತದೆ. ಸಂಕಟವೂ ಹೆಚ್ಚು ಎನ್ನುವುದು ಅವಳ ಆತಂಕ. ಬಟ್ಟೆ ಕೇವಲ ಅಲಂಕಾರದ ಆಭರಣವಲ್ಲ; ಅದು ನಮ್ಮ ದೇಹದ ಉಷ್ಣತೆಯನ್ನು ನಿಗದಿತ ಮಿತಿಯಲ್ಲಿಯೇ ಉಳಿಸುವ ಒಂದು ರಕ್ಷಣಾ ಕವಚ ಎನ್ನುವುದು ವಿಜ್ಞಾನಿಗಳ ಅಂಬೋಣ. ಏಕೆಂದರೆ ಮನುಷ್ಯನೆಂಬ ಕೂದಲು ಇಲ್ಲದ ನಗ್ನಪ್ರಾಣಿಗೆ, ಪರಿಸರದ ತಾಪ-ಕೋಪಗಳಿಂದ ಈ ಬಟ್ಟೆಯೇ ರಕ್ಷಣೆ ಒದಗಿಸುತ್ತದೆ. ಆದರೆ ಹಾಗೆ ಮಾಡಬೇಕಾದರೆ ಬಟ್ಟೆ ಉಸಿರಾಡಬೇಕು. ಅರ್ಥಾತ್, ಮೈ ಬಿಸಿಯಾದಾಗ ದೇಹದ ಉಷ್ಣ ಹೊರ ಹೋಗುವಂತೆ ಇರಬೇಕು. ಹಾಗೆಯೇ ಮೈ ತಣ್ಣಗಾದಾಗ ಆ ಬಿಸಿ ಹೊರ ಹೋಗದಂತೆ ತಡೆಯಬೇಕು. ಇವೆರಡನ್ನೂ ಮಾಡುವ ಬಟ್ಟೆ ಇಲ್ಲದಿರುವುದರಿಂದಲೇ, ಬೇಸಗೆಯಲ್ಲಿ ಹತ್ತಿಯ ತೆಳು ಬಟ್ಟೆ, ಚಳಿಗಾಲದಲ್ಲಿ ದಪ್ಪನೆಯ ಉಣ್ಣೆಯ ದಿರಿಸು ಅವಶ್ಯಕವೆನ್ನಿಸಿವೆ. ಆದರೆ ಇದೀಗ ಹೀಗೆ ಬೇಕೆಂದಾಗ ಹತ್ತಿಯ ಬಟ್ಟೆಯಂತೆ ಉಸಿರಾಡುತ್ತಲೂ, ಬೇಡ ಎಂದಾಗ ಪಾಲಿಮರು ಬಟ್ಟೆಯಂತೆ ದೇಹದ ಶಾಖ ಹೊರಹೋಗದಂತೆ ಕಾಯುತ್ತಲೂ ಇರುವ ಒಂದೇ ಬಟ್ಟೆ ಸಿದ್ಧವಂತೆ. ಪಾಲಿಮರ್ ವಿಜ್ಞಾನ, ಜಪಾನೀಯರ 'ಕಿರಿಗಾಮಿ ಕಲೆ' ಹಾಗೂ ಎಲೆಕ್ಟ್ರಾನಿಕ್ ಸಂವೇದಕಗಳ ಸಂಯೋಜನೆಯಿಂದ ಹೀಗೊಂದು ಬಟ್ಟೆಯನ್ನು ಅಮೆರಿಕೆಯ ಇಲಿನಾಯ್ ವಿಶ್ವವಿದ್ಯಾಲಯದ ಟಿಂಗ್ ಸುಆನ್ ಶೆನ್ ಮತ್ತು ಸಂಗಡಿಗರು ರೂಪಿಸಿದ್ದಾರೆ.

ಮನುಷ್ಯ ಸಮತಾಪ ಜೀವಿ. ಎಂದರೆ ನಮ್ಮ ದೇಹದ ಉಷ್ಣತೆ ಚಳಿಯಲ್ಲಿಯೂ ಬೇಸಿಗೆಯಲ್ಲಿಯೂ ಸಮಮಟ್ಟವಾಗಿರುತ್ತದೆ. ಒಂದು ವೇಳೆ ವ್ಯಾಯಾಮದಿಂದಲೋ, ಇನ್ನಾವುದೋ ಕಾರಣದಿಂದಲೋ ದೇಹದ ಬಿಸಿ ಹೆಚ್ಚಾದರೆ, ಮೈ ಬೆವೆತು ಆ ಅಧಿಕ ಉಷ್ಣತೆಯನ್ನು ಕಳೆದುಕೊಳ್ಳುತ್ತದೆ. ಬೆತ್ತಲೆಮೈಯಲ್ಲಿ ಮನೆಯೊಳಗೇ ಇದ್ದರೂ ದೇಹ ಹುಟ್ಟಿಸುವ ಶಾಖದ ಮೂರರಲ್ಲೊಂದು ಭಾಗವನ್ನು ಸದಾ ಕಳೆದುಕೊಳ್ಳುತ್ತಿರುತ್ತೇವೆ. ಇನ್ನು ಚಳಿಗಾಲದಲ್ಲಿ ಇದು ಇನ್ನೂ ಹೆಚ್ಚು. ಹೀಗಾಗಿ ಚಳಿ ಆದಾಗ ಮೈ ನಡುಗುತ್ತಾ ಹೆಚ್ಚು ಶಾಖವನ್ನು ಹುಟ್ಟಿಸಲು ಶ್ರಮಿಸುತ್ತದೆ. ಒಟ್ಟಾರೆ ದೇಹದ ಉಷ್ಣತೆ ಸುಮಾರು 37 ಡಿಗ್ರಿ ಸೆಲ್ಸಿಯಸ್‌ನಷ್ಟು ಇರುವಂತೆ ಕಾಯ್ದುಕೊಳ್ಳುತ್ತದೆ. ಬಟ್ಟೆಯು ದೇಹವು ಹೆಚ್ಚು ಶಾಖವನ್ನು ಕಳೆದುಕೊಳ್ಳದಂತೆ ನೆರವಾಗುತ್ತದೆ. ಆದರೆ ಇದೇ ಬಟ್ಟೆ, ಅತಿ ಶಾಖದಿಂದಾಗಿ ದೇಹ ಸುರಿಸಿದ ಬೆವರು ಬೇಗನೆ ಆವಿಯಾಗದಂತೆ ತಡೆದು ಸಂಕಟವನ್ನೂ ಉಂಟುಮಾಡಬಹುದು. ದೇಹದ ಬೆವರು ಬೇಗನೆ ಆವಿಯಾಗುವಂತೆ ಹಾಗೂ ಶಾಖ ಕಡಿಮೆಯಾಗುವಂತೆ ಗಾಳಿಯಾಡುವ ಬಟ್ಟೆಗಳು ಹಿತವೆನ್ನಿಸುತ್ತವೆ. ಕಿರಿಗಾಮಿ ತಂತ್ರವನ್ನು ಬಳಸಿ ಮಾಡಬಹುದು ಎನ್ನುವುದು ಸುಆನ್ ಶೆನ್ ತಂಡದ ಶೋಧ.

'ಕಿರಿಗಾಮಿ' ಎನ್ನುವುದು ಜಪಾನೀ ಕಲೆ. ಕಾಗದವನ್ನು ಕತ್ತರಿಸಿ, ಮಡಚಿ, ಹಾಳೆಯನ್ನು ಮೂರು ಆಯಾಮದ ಗೋಪುರವಾಗಿಯೋ, ಚಿತ್ರ ವಿಚಿತ್ರವಾದ ಆಕಾರವನ್ನಾಗಿಯೋ ಮಾಡುವ ಕಲೆ. ಹುಟ್ಟುಹಬ್ಬದ ಗ್ರೀಟಿಂಗಿನೊಳಗೆ ಇರುವ, ಗ್ರೀಟಿಂಗನ್ನು ತೆರೆದ ಕೂಡಲೇ ಧುತ್ತನೆ ಎದ್ದು ನಿಲ್ಲುವ ಹೃದಯದ ಆಕಾರವನ್ನು ಕಂಡಿರಬೇಕಲ್ಲ. ಅಂತಹ ಕಲೆ. ಈ ರೀತಿಯ ತಂತ್ರವನ್ನು ಬಳಸಿ, ಬೇಕೆಂದಾಗ ಹಾಳೆಯಂತೆಯೂ, ಬೇಡವೆಂದಾಗ ಮೂರು ಆಯಾಮದ ಆಕಾರವಾಗಿಯೂ ಬಟ್ಟೆಯನ್ನು ಹೆಣೆದರೆ ಹೇಗೆ? ಆಗ ಹಾಳೆ ಗಾಳಿಯಾಡದಂತೆ ಶಾಖವನ್ನು ಹಿಡಿದು ಇಡುತ್ತದೆ. ಅದೇ ಆಕಾರ ಬದಲಾದಾಗ, ರಂಧ್ರಗಳು ತೆರೆದು ಗಾಳಿಯನ್ನು ಸರಾಗವಾಗಿ ಹೊರಹೋಗುವಂತೆ ಮಾಡಬಹುದಲ್ಲ? ಇದು ಸುಆನ್ ಶೆನ್ ಅವರ ಉಪಾಯ.

ಬಟ್ಟೆಯ ಶಾಖವಹನ ಸಾಮರ್ಥ್ಯ ಬದಲಾಗುವಂತೆ ಇರಬೇಕು. 'ಶಾಖವಹನ ಸಾಮರ್ಥ್ಯ' ಎಂದರೆ ಇನ್ನೇನಲ್ಲ. ನಿರ್ದಿಷ್ಟ ದಪ್ಪದ ಬಟ್ಟೆಯ ಎರಡೂ ಬದಿಯಲ್ಲಿ ಇರುವ ಉಷ್ಣತೆಯ ವ್ಯತ್ಯಾಸ ಇದಕ್ಕೆ ಸೂಚಿ. ಇದು ಹೆಚ್ಚಿದ್ದಷ್ಟೂ ಬಟ್ಟೆ ಗಾಳಿಯಾಡುವುದು ಹೆಚ್ಚು; ಕಡಿಮೆ ಇದ್ದಷ್ಟೂ ಬಟ್ಟೆ ಬೆಚ್ಚಗೆ ಇಡುತ್ತದೆ ಎನ್ನಬಹುದು. ಬಟ್ಟೆಯು ಶಾಖವನ್ನು ಹೀರಿಕೊಳ್ಳುವುದಕ್ಕಿಂತ ಹೆಚ್ಚು ಹರಿಯಲು ಬಿಟ್ಟರೆ ತಣ್ಣಗೆನಿಸುತ್ತದೆ. ಇದಕ್ಕಾಗಿ ಬೇರೆ, ಬೇರೆ ನಾರುಗಳನ್ನು ಬೆರೆಸಿ, ಒಳಭಾಗದಲ್ಲಿ ಶಾಖವನ್ನು ಹಿಡಿದಿಡುವಂತೆಯೂ, ಹೊರಭಾಗದಲ್ಲಿ ಶಾಖವನ್ನು ಹೊರಗೆಡವುವಂತಹ ಬಟ್ಟೆಯನ್ನು ತಯಾರಿಸಲು ಪ್ರಯತ್ನಗಳು ನಡೆದಿದ್ದುವು. ಇದ್ಯಾವುದೂ ಬೇಡ. ಕೇವಲ ಕಿರಿಗಾಮಿ ತಂತ್ರದಿಂದ ಬಟ್ಟೆಯ ಶಾಖವಹನ ಸೂಚಿ ವ್ಯತ್ಯಾಸವಾಗುವಂತೆ ಮಾಡಿದ್ದೇವೆಂದು ಸುಆನ್ ಶೆನ್ ತಂಡ 'ಪಿಎನ್‌ಎಎಸ್ ನೆಕ್ಸಸ್' ಪತ್ರಿಕೆಯಲ್ಲಿ ವರದಿ ಮಾಡಿದೆ.

ಇದಕ್ಕಾಗಿ ಅವರು ತೆಳುವಾದ ನೈಲಾನ್ ಬಟ್ಟೆಯ ಮೇಲೆ ಹದವಾಗಿ ಅತಿ ಸೂಕ್ಷ್ಮವಾದ ಚಿನ್ನದ ಪುಡಿಯನ್ನು ಅಂಟಿಸಿದ್ದಾರೆ. ಚಿನ್ನ ಇಲೆಕ್ಟ್ರಾನಿಕ್ ಸರ್ಕೀಟುಗಳಿಗೆ ಅಗತ್ಯವಾದದ್ದು. ತದನಂತರ ಬಟ್ಟೆಯನ್ನು ಲೇಸರ್ ಬಳಸಿ ಉದ್ದುದ್ದದ, ಸಮಾಂತರ ಅಥವಾ ತ್ರಿಕೋನಾಕಾರದ ಸೀಳುಗಳು ಇರುವಂತೆ ಕತ್ತರಿಸಿದ್ದಾರೆ. ಹೀಗೆ ಕತ್ತರಿಸಿದ ಹಾಳೆಯನ್ನು ಸುಲಭವಾಗಿ ಬಾಗಿಸಬಹುದು. ಅದನ್ನು ಬಾಗಿಸುವುದಕ್ಕೆ ಬ್ಯಾಟರಿಯಿಂದ ವಿದ್ಯುತ್ ಹರಿಸಿದರೆ ಸಾಕು. ಚಿನ್ನ ಹುದುಗಿಸಿದ ನೈಲಾನ್ ಬಟ್ಟೆ ಬಾಗುತ್ತದೆ. ಸುಆನ್ ಶೆನ್ ತಂಡ ಈ ಬಟ್ಟೆ ದೇಹದ ಯಾವ ಮೂಲೆಯಲ್ಲಿಯೂ ಆಯಾ ಆಕಾರವನ್ನು ತಾಳಬಲ್ಲುದು ಎಂದು ನಿರೂಪಿಸಿದ್ದಾರೆ. ಅಂದರೆ ಭುಜದ ಮೇಲಿರುವ ಬಟ್ಟೆ ಸ್ವಿಚ್ ಒತ್ತಿದೊಡನೆ ಅದೇ ಆಕಾರದಲ್ಲಿ ಉಬ್ಬಿಕೊಳ್ಳುತ್ತದೆ. ಹೆಚ್ಚು ಗಾಳಿಯಾಡುತ್ತದೆ.

ಸ್ವಿಚ್ ಒತ್ತಿದೊಡನೆ ಆಕಾರ ಬದಲಿಸುವ ಬಟ್ಟೆಯು ಶಾಖವನ್ನು ಹಿಡಿದಿಡಬಹುದೇ; ಅಥವಾ ಹೆಚ್ಚಾದ ಉಷ್ಣವನ್ನು ಹೊರ ಬಿಸಾಡುತ್ತದೆಯೇ – ಎಂದೂ ಇವರು ಪರೀಕ್ಷಿಸಿದ್ದಾರೆ. ಈ ಬಟ್ಟೆಯನ್ನು ತೊಟ್ಟವರನ್ನು ವಿವಿಧ ಉಷ್ಣತೆಯ ಪರಿಸರದಲ್ಲಿ ನಿಲ್ಲಿಸಿ, ಬಟ್ಟೆಯ ಸುತ್ತಲಿರುವ ಉಷ್ಣತೆ ಎಷ್ಟೆಂದು 'ಐಆರ್' ತಂತ್ರದಿಂದ ಪತ್ತೆ ಮಾಡಿದ್ದಾರೆ. ಇದು ಕೋವಿಡ್ ಸಂದರ್ಭದಲ್ಲಿ ಜ್ವರ ಬಂದಿದೆಯೇ – ಎಂದು ಪರೀಕ್ಷಿಸಲು ಹಣೆಗೆ ಗುರಿ ಇಡುತ್ತಿದ್ದಂತಹ ಸಾಧನದಂತಹ ಉಪಕರಣ. ಹೊರಗಿನ ಉಷ್ಣತೆಯಲ್ಲಿ ಆರೇಳು ಡಿಗ್ರಿ ವ್ಯತ್ಯಾಸವಾದಾಗಲೂ ದೇಹದ ಚರ್ಮದ ಉಷ್ಣತೆಯಲ್ಲಿ ಕೇವಲ ಒಂದು ಡಿಗ್ರಿಯಷ್ಟೆ ವ್ಯತ್ಯಾಸ ಆಗಿತ್ತಂತೆ. ಅಂದರೆ ಈ ಉಸಿರಾಡುವ ಕಿರಿಗಾಮಿ ಬಟ್ಟೆ ದೇಹದ ಉಷ್ಣತೆಯನ್ನು ಎಲ್ಲ ಸಂದರ್ಭದಲ್ಲಿಯೂ ಕಾಯುತ್ತದೆ ಅಂತಷ್ಟೆ.

ಚಿನ್ನದ ಈ ಬಟ್ಟೆ ನಮಗೆ ದಕ್ಕೀತೇ ಎಂದಿರಾ? ಇರಲಿ, ಇದು ನಮಗೆ ನಿಮಗೆ ಸದ್ಯಕ್ಕೆ ಕೈಗೆಟುಕದಿರಬಹುದು. ಆದರೆ ಬೆಂಕಿಯೊಡನೆ ಸರಸವಾಡುವ ಅಗ್ನಿಶಾಮಕ ಸಿಬ್ಬಂದಿಗೆ ಇಲ್ಲವೇ ಅತಿ ಶೀತಲ ವಾತಾವರಣದಲ್ಲಿ ಕೆಲಸ ಮಾಡುವ ಅಂತರಿಕ್ಷ ಯಾತ್ರಿಗಳಿಗೆ ಸರಾಗವಾದ ದಿರಿಸನ್ನು ಇದು ಒದಗಿಸಬಹುದು. ಅಥವಾ ಚಿನ್ನದ ಬದಲಿಗೆ ಇನ್ನೇನಾದರೂ ಉಪಾಯ ಸಿಕ್ಕಲ್ಲಿ, ನಮಗೂ, ನಿಮಗೂ ಇಂತಹುದೇ ಬಟ್ಟೆ ಸಿಕ್ಕರೂ ಸಿಗಬಹುದು. ಆಗ ಕಾಶ್ಮೀರಕ್ಕೆ ಹೋಗುವಾಗಲೂ ಸೂಟ್ ಕೇಸು ಭರ್ತಿ ಬಟ್ಟೆ ಹೊರುವುದು ತಪ್ಪೀತು. ತೆಳು ನೈಲಾನ್ ಬಟ್ಟೆಯೇ ನಮ್ಮ ಮೈಯನ್ನು ಅಲ್ಲಿಯೂ ಬೆಚ್ಚಗಿರಿಸಬಹುದು – ಒಂದು ಸ್ವಿಚ್ ಒತ್ತಿದರೆ ಸಾಕು!

ಎಲ್. ವಿ. ಎಂ. 3


ಭಾರತದ ಹೆಮ್ಮೆಯ ರಾಕೆಟ್

ಬಿ. ಆರ್. ಗುರುಪ್ರಸಾದ್

ಕ್ರಯೋಜನಿಕ್ ರಾಕೆಟ್ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡಿರುವುದು ಕೇವಲ ರಷ್ಯಾ, ಅಮೆರಿಕ, ಜಪಾನ್, ಚೀನಾ, ಫ್ರಾನ್ಸ್ ಹಾಗೂ ಭಾರತ ಮಾತ್ರ.

ಭಾರತ ನಿರ್ಮಿಸಿದ ಉಡಾವಣಾ ರಾಕೆಟ್ ವಾಹನ 'ಪಿ. ಎಸ್. ಎಲ್. ವಿ.' ಒಂದು ಅತ್ಯಂತ ನಂಬಿಕಾರ್ಹ ವಾಹನ; ಇದು ಭಾರತದ 'ಕಾರ್ಯಾಶ್ವ' ('ವರ್ಕ್ ಹಾರ್ಸ್') ರಾಕೆಟ್ ವಾಹನ ಎಂಬ ಹೆಗ್ಗಳಿಕೆಯನ್ನು ಇಂದು ಪಡೆದಿದೆ. ಆದರೆ ಅದಕ್ಕಿಂತ ಸುಮಾರು ನಾಲ್ಕು ಪಟ್ಟು ಹೆಚ್ಚು ಸಾಮರ್ಥ್ಯವುಳ್ಳ, ಸಂಕೀರ್ಣವಾದ 'ಜಿ. ಎಸ್. ಎಲ್. ವಿ. ಮಾರ್ಕ್ 3' ಅಥವಾ 'ಎಲ್. ವಿ. ಎಂ. 3' ಎಂಬ ಭಾರತದ ಮತ್ತೊಂದು ರಾಕೆಟ್ ವಾಹನವೂ ಇಂದು ಒಂದು ನಂಬಿಕಾರ್ಹ ವಾಹನವಾಗಿ ಹೊರಹೊಮ್ಮುತ್ತಿದೆ. 'ಎಲ್. ವಿ. ಎಂ. 3' ರ ಸಾಮರ್ಥ್ಯ, ನಂಬಿಕಾರ್ಹತೆ ಹಾಗೂ ವೈವಿಧ್ಯ ಇವುಗಳಿಗೆ ಉತ್ತಮ ಉದಾಹರಣೆ ಎಂದರೆ ಇತ್ತೀಚಿಗೆ, ಎಂದರೆ, ಮೊನ್ನೆಯಷ್ಟೆ (ಜುಲೈ 14) ಜರುಗಿದ ಅದರ ಆರನೆಯ ಕಕ್ಷಾಯಾನ.

ಜುಲೈ 14ರಂದು ನಿಗದಿಯಾದ ಸಮಯಕ್ಕೆ, ಎಂದರೆ ಮಧ್ಯಾಹ್ನ 2:35ಕ್ಕೆ ಸರಿಯಾಗಿ ಚಾಚೂ ತಪ್ಪದೇ ಸುಮಾರು ಹದಿನಾಲ್ಕು ಮಹಡಿಗಳಷ್ಟು ಎತ್ತರದ 'ಎಲ್. ವಿ. ಎಂ. 3' ವಾಹನ ಭಾರತದ ನೆಲದಿಂದಲೇ, ಎಂದರೆ ಆಂಧ್ರಪ್ರದೇಶದ ಶ್ರೀಹರಿಕೋಟಾ ದ್ವೀಪದಲ್ಲಿನ 'ಸತೀಶ್ ಧವನ್ ಅಂತರಿಕ್ಷ ಕೇಂದ್ರ'ದ ಎರಡನೇ ಉಡಾವಣಾ ವೇದಿಕೆಯಿಂದ ಸುಗಮವಾಗಿ ಮೇಲೇರಿತು. ಆ ಅಮೋಘವಾದ ದೃಶ್ಯವನ್ನು ನೋಡಲು ಶ್ರೀಹರಿಕೋಟಾದ ವೀಕ್ಷಣಾ ಗ್ಯಾಲರಿಯಲ್ಲಿ ನೆರೆದಿದ್ದ ಸಾವಿರಾರು ಜನರು ಸೇರಿದ್ದರು; ಆ ಚಾರಿತ್ರಿಕ ದೃಶ್ಯವನ್ನು ನೋಡಲು ಟಿ.ವಿ.ಯ ಮುಂದೆ ಕೋಟ್ಯಂತರ ಭಾರತೀಯರೂ ವಿದೇಶಿಯರೂ ಕುಳಿತಿದ್ದರು. ಇವರೆಲ್ಲರ ಹರ್ಷೋದ್ಗಾರಕ್ಕೆ ಕಾರಣವೇನು ಗೊತ್ತೆ?



ಚಂದ್ರಯಾನ-3 ನೌಕೆ, ಎಲ್.ವಿ. ಎಂ. 3 ರಾಕೆಟ್ ವಾಹನದ ಮೇಲೆ ಜೋಡಿಸುವ ಮೊದಲು (ಚಿತ್ರಕೃಪೆ: ಇಸ್ರೊ)

ಅಂದು 'ಎಲ್. ವಿ. ಎಂ. 3' ವಾಹನ ಅಂತರಿಕ್ಷಕ್ಕೆ ಕೊಂಡೊಯ್ಯುತ್ತಿದ್ದ ನೌಕೆಯು ಚಂದ್ರನ ಮೇಲೆ ಇಳಿಸುವ ಉದ್ದೇಶದಿಂದ ಭಾರತ ಹಾರಿಬಿಡುತ್ತಿದ್ದ 'ಚಂದ್ರಯಾನ-3' ನೌಕೆಯಾಗಿತ್ತು. ಮಾಧ್ಯಮಗಳಂತೂ ಆ ರೋಬಾಟ್ ನೌಕೆಯ ಬಗ್ಗೆ ಹಗಲೂ ರಾತ್ರಿ ವರದಿ ಮಾಡಿ ವಿಶ್ಲೇಷಿಸಿದವು. ಆ ವರದಿಗಳಲ್ಲಿ 'ಚಂದ್ರಯಾನ-3' ನೌಕೆಯನ್ನು ಉಡಾಯಿಸಲಿದ್ದ 'ಎಲ್. ವಿ. ಎಂ. 3' ವಾಹನದ ಬಗ್ಗೆ ಸಾಕಷ್ಟು ಪ್ರಸ್ತಾಪವೇನೋ ಇತ್ತು. ಆದರೆ ನೌಕೆಯನ್ನು ಭೂಮಿಯ ಮೇಲಿನಿಂದ ಅಂತರಿಕ್ಷಕ್ಕೆ ಕೊಂಡೊಯ್ದು, ಅನಂತರ ಅದು ಭೂಮಿಯನ್ನು ಸುತ್ತುವಂತೆ ಮಾಡುವ ಕಾರ್ಯವನ್ನು ನಿರ್ವಹಿಸಲಿದ್ದ 'ಎಲ್. ವಿ. ಎಂ. 3' ರ ಮಹತ್ವದತ್ತ ಹೆಚ್ಚಿನ ಗಮನ ಕೇಂದ್ರೀಕೃತವಾಗಲಿಲ್ಲ ಎನ್ನಬಹುದು.

ಆದರೆ ತನಗೆ ವಹಿಸಿದ ಕಾರ್ಯವನ್ನು 'ಎಲ್. ವಿ. ಎಂ. 3' ಯಾವ ಆಕ್ಷೇಪಣೆಗೂ ಅವಕಾಶವಿಲ್ಲದಂತೆ ಅದ್ಭುತವಾದ ರೀತಿಯಲ್ಲಿ ನಿರ್ವಹಿಸಿತು. ನೆಲದಿಂದ ಮೇಲೆದ್ದ ಸುಮಾರು 17 ನಿಮಿಷಗಳ ಸುಮಾರಿಗೆ ಆ ರಾಕೆಟ್ ವಾಹನ 'ಚಂದ್ರಯಾನ-3'ನ್ನು ಭೂಮಿಯ ಒಂದೆಡೆ ಸುಮಾರು 170 ಕಿ.ಮೀ.ನಷ್ಟು ಎತ್ತರವಿರುವ, ಮತ್ತೊಂದೆಡೆ ಮೂವತ್ತಾರು ಸಾವಿರದ ಐನೂರು ಕಿ.ಮೀ. ಎತ್ತರವಿರುವ ದೊಡ್ಡ ಕೋಳಿಮೊಟ್ಟೆಯಾಕಾರದ ಕಕ್ಷೆಗೆ ಸೇರಿಸಿ ಅದು ಅಲ್ಲಿ ಭೂಮಿಯನ್ನು ಸುತ್ತುವಂತೆ ಮಾಡಿತು. ಅಲ್ಲಿಗೆ 'ಚಂದ್ರಯಾನ-3'ರ ಚಂದ್ರಯಾತ್ರೆಯ ಮೊದಲ ಹಂತ ಶುಭಾರಂಭವನ್ನು ಕಂಡಿತು. ಆ ನೌಕೆಯ ಭವಿಷ್ಯದ ಯಶಸ್ಸಿನ ಬಗ್ಗೆ ಆಶಾಭಾವನೆ ಮೂಡಿತು.

ಅಂತರಿಕ್ಷ ಕ್ಷೇತ್ರದಲ್ಲಿ ಸಾಧನೆಗಳನ್ನು ಮಾಡುವ ಆಶಯವನ್ನು ಹೊಂದಿರುವ ರಾಷ್ಟ್ರವೊಂದು ಉಪಗ್ರಹಗಳನ್ನು ಹಾಗೂ ಅಂತರಿಕ್ಷ ನೌಕೆಗಳನ್ನು ಭೂಕಕ್ಷೆಗೆ ಹಾರಿಬಿಡುವ ರಾಕೆಟ್ ವಾಹನಗಳ ತಂತ್ರಜ್ಞಾನವನ್ನು ಕರಗತಮಾಡಕೊಳ್ಳುವುದು ಅತ್ಯಗತ್ಯ. ಇದನ್ನು ಮನಗಂಡ ಭಾರತೀಯ ಅಂತರಿಕ್ಷ ಕಾರ್ಯಕ್ರಮದ ಪಿತಾಮಹ ವಿಕ್ರಂ ಸಾರಾಭಾಯಿಯವರು ರಾಕೆಟ್‌ಗಳ ನಿರ್ಮಾಣಕ್ಕೆ ಆದ್ಯತೆಯನ್ನು ಆ ಕಾರ್ಯಕ್ರಮದ ಪ್ರಾರಂಭದ ದಶಕದಲ್ಲೇ (1960ರ ದಶಕ) ನೀಡಿದರು. ಪರಿಣಾಮವಾಗಿ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೋ' ಇದುವರೆಗೂ ಆರು ಪೀಳಿಗೆಯ ಉಪಗ್ರಹ ಉಡಾವಣಾ ರಾಕೆಟ್‌ಗಳನ್ನು ಯಶಸ್ವಿಯಾಗಿ ನಿರ್ಮಿಸಿದೆ. ಆ ಪೈಕಿ 'ಎಲ್. ವಿ. ಎಂ. 3' ಐದನೇ ಪೀಳಿಗೆಯ ರಾಕೆಟ್ಟಾಗಿದ್ದು, ಅದು ಭಾರತ ನಿರ್ಮಿಸಿರುವ ರಾಕೆಟ್ ವಾಹನಗಳ ಪೈಕಿ ಅತ್ಯಂತ ಶಕ್ತಿಶಾಲಿಯಾದುದು. 'ಸ್ಥೂಲಕಾಯದ ಹುಡುಗ' ('ಫ್ಯಾಟ್ ಬಾಯ್'), 'ಬಾಹುಬಲಿ ರಾಕೆಟ್' ಎಂದೆಲ್ಲಾ ಹೆಸರಿರುವ ಈ ಒಂದರ ಮೇಲೊಂದು ಜೋಡಿಸಿರುವ ವಾಹನವು ಎರಡು ಹಂತಗಳನ್ನು, ಅವುಗಳೊಂದಿಗೇ ಆಚೀಚಿನ ಬದಿಯಲ್ಲಿ ಜೋಡಿಸಲ್ಪಟ್ಟಿರುವ 'ಬೂಸ್ಟರ್'ಗಳೆಂಬ ಎರಡು ರಾಕೆಟ್ ಗಳನ್ನು ಹೊಂದಿದೆ. ಜುಲೈ 14ರಂದು 'ಎಲ್. ವಿ. ಎಂ. 3' ನೆಲದಿಂದ ಮೇಲೇರಿದ್ದೇ ಆ ಎರಡು ಬೂಸ್ಟರ್‌ಗಳ ಕಾರ್ಯಾರಂಭದೊಂದಿಗೆ.

ತಲಾ ಎರಡು ಲಕ್ಷ ಐದು ಸಾವಿರ ಕೆ.ಜಿ. ತೂಕದ ಘನರೂಪದ ನೋದನಕಾರಿಗಳನ್ನು ('ಪ್ರೊಪೆಲೆಂಟ್ಸ್', ಎಂದರೆ ಇಂಧನ ಹಾಗೂ ದಹನಾನುಕೂಲಿಗಳ ಜೋಡಿ) ಆ ಎರಡು ರಕ್ಕಸ ಬೂಸ್ಟರ್‌ಗಳು ತಮ್ಮೊಳಗೆ ಹೊಂದಿದ್ದವು. ಹೀಗೆ ಒಟ್ಟಾಗಿ ಸುಮಾರು ನಾಲ್ಕು ಲಕ್ಷ ಕೆ.ಜಿ. ತೂಕದ ನೋದನಕಾರಿಗಳನ್ನು ಆ ಬೂಸ್ಟರ್‌ಗಳು ಎರಡು ನಿಮಿಷಗಳ ಸುಮಾರಿನಲ್ಲಿ ಬಕಾಸುರನಂತೆ ಕಬಳಿಸಿ ಅಪಾರವಾದ ನೂಕುಬಲವನ್ನು 'ಎಲ್. ವಿ. ಎಂ. 3'ಗೆ ಒದಗಿಸಿ, ವೇಗವನ್ನು ಅಲ್ಪ ಸಮಯದಲ್ಲಿ ವೃದ್ಧಿಸಿ ಆ ವಾಹನದಿಂದ ಬೇರ್ಪಟ್ಟವು. ಬೂಸ್ಟರ್‌ಗಳಿನ್ನೂ ಚಟುವಟಿಕೆಯಿಂದಿರುವಾಗಲೇ ತನ್ನ ಕಾರ್ಯಾರಂಭಿಸಿದ ಅದರ ಮೊದಲ ಹಂತ ಒಂದು ಲಕ್ಷ ಹದಿನೈದು ಸಾವಿರ ಕೆ.ಜಿ. ಗಳಷ್ಟು ದ್ರವನೋದನಕಾರಿಗಳನ್ನು ಬೇಗನೆ ಬಳಸಿ 'ಎಲ್. ವಿ. ಎಂ. 3'ನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವುದಲ್ಲದೇ ಅದರ ವೇಗವನ್ನು ಮತ್ತಷ್ಟು ವೃದ್ಧಿಸಿ ತಾನೂ ಅದರಿಂದ ಬೇರ್ಪಟ್ಟಿತು. ಹೀಗೆ 'ಎಲ್. ವಿ. ಎಂ. 3' ಮತ್ತಷ್ಟು ಹಗುರವಾದ ನಂತರ ಅದರ ಎರಡನೆಯ ಹಂತದ ಸರದಿ ಬಂದಿತು. ಅದು ಒಂದು ಅತ್ಯಂತ ಸಂಕೀರ್ಣವಾದ ಆದರೆ ದಕ್ಷವಾದ 'ಕ್ರಯೋಜನಿಕ್' ಹಂತ.

ಈ ಕ್ರಯೋಜನಿಕ್ ರಾಕೆಟ್ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡಿರುವುದು ಕೇವಲ ರಷ್ಯಾ, ಅಮೆರಿಕ, ಜಪಾನ್, ಚೀನಾ, ಫ್ರಾನ್ಸ್ ಹಾಗೂ ಭಾರತ ಮಾತ್ರ. ಇದು ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಅತ್ಯುತ್ತಮವಾಗಿ ಪ್ರತಿಬಿಂಬಿಸುತ್ತದೆ. ಒಟ್ಟು ಇಪ್ಪತ್ತೆಂಟೂವರೆ ಸಾವಿರ ಕೆ.ಜಿ. ತೂಕದ ಹಾಗೂ ಕೃತಕವಾಗಿ ಅತ್ಯಂತ ಶೈತ್ಯಪರಿಸರದಲ್ಲಿಟ್ಟ ದ್ರವಹೈಡ್ರೊಜನ್ ಹಾಗೂ ದ್ರವ-ಆಮ್ಲಜನಕವನ್ನು ಬಳಸುವ ಈ ಹಂತ ಹತ್ತೂವರೆ ನಿಮಿಷಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸಿದ ಫಲವಾಗಿ 'ಎಲ್. ವಿ. ಎಂ. 3' ಹಾಗೂ ಅದರ ಮೇಲಿದ್ದ 'ಚಂದ್ರಯಾನ-3' ಅಂತಿಮವಾಗಿ ಸಾಧಿಸಿದ ವೇಗ ಎಷ್ಟು ಗೊತ್ತೆ? ಗಂಟೆಗೆ ಕೇವಲ 37 ಸಾವಿರ ಕಿ.ಮೀ.ಗಳು! ಪ್ರತಿನಿತ್ಯ ಗಂಟೆಗೆ ಸುಮಾರು 30-40 ಕಿ.ಮೀ. ಸರಾಸರಿ ವೇಗದಲ್ಲಿ ನೆಲದ ಮೇಲೆ ಪಯಣಿಸುವ ನಾವು ಇದನ್ನು ಊಹಿಸಲೂ ಸಾಧ್ಯವಿಲ್ಲ.

ಈ ಕಾರ್ಯಗಳೆಲ್ಲವೂ ನಿಗದಿಯಾದ ಕಾಲಕ್ಕೆ ಜರುಗುವಂತೆ ಮಾಡಿದ ಸಾಧನವೇ 'ಎಲ್. ವಿ. ಎಂ. 3' ರ ಎಲೆಕ್ಟ್ರಾನಿಕ್ ಮೆದುಳು. ಸ್ವದೇಶಿ ಸಾಫ್ಟ್‌ವೇರ್ ಅನ್ನುಳ್ಳ ಈ ಮೆದುಳೇ 'ಎಲ್. ವಿ. ಎಂ. 3'ರ ಜೀವಾಳ.

ಅಂತೂ ಭಾರತದಲ್ಲೇ ಯೋಜಿಸಿ, ರೂಪಿಸಿ ನಿರ್ಮಿಸಲಾದ ಈ ಎಲ್ಲ ತಾಂತ್ರಿಕ ಸಾಧನಗಳನ್ನುಳ್ಳ 'ಎಲ್. ವಿ. ಎಂ. 3'ರ ಮೊದಲ ಆರು ಕಕ್ಷಾಯಾನಗಳೂ (ಜುಲೈ 14ರದೂ ಸೇರಿದಂತೆ) ಸತತವಾಗಿ ಯಶಸ್ವಿಯಾಗಿವೆ. ಪರಿಣಾಮವಾಗಿ 72 ವಿದೇಶಿ ಉಪಗ್ರಹಗಳು, ಎರಡು ಸ್ವದೇಶಿ ಉಪಗ್ರಹಗಳು ಹಾಗೂ ಚಂದ್ರನ ಅನ್ವೇಷಣೆಗಾಗಿ ತೆರಳುತ್ತಿದ್ದ / ತೆರಳುತ್ತಿರುವ ಎರಡು ರೋಬಾಟ್ ನೌಕೆಗಳು, ಇವು ಭೂಕಕ್ಷೆಯನ್ನು ನಿರಾತಂಕವಾಗಿ ಸೇರಿವೆ. ಜುಲೈ 14ರ ಯಶಸ್ಸಿನ ಬಳಿಕ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಕುರಿತ ಅರಿವು ಹೊರಜಗತ್ತಿನಲ್ಲಿ ಮತ್ತಷ್ಟು ಹೆಚ್ಚಿದೆ.



ಚಂದ್ರಯಾನ-3ರನ್ನು ಹೊತ್ತು ಆಗಸಕ್ಕೇರುತ್ತಿರುವ ಎಲ್.ವಿ.ಎಂ.3 ರಾಕೆಟ್‌ನ ಅದ್ಭುತವಾದ ದೃಶ್ಯ (ಚಿತ್ರಕೃಪೆ: ಇಸ್ರೊ)

ಮ್ಯಾಕ್‌ಬುಕ್ ಏರ್

ಸ್ಲಿಮ್ ಮತ್ತು ಫಿಟ್



ಅವಿನಾಶ್ ಬಿ.


ಆ್ಯಪಲ್ ಕಂಪನಿಯು ಇತ್ತೀಚೆಗಷ್ಟೇ ವಿನೂತನ ಶಕ್ತಿಶಾಲಿಯಾದ ಮತ್ತು 15 ಇಂಚಿನ ಪರದೆಯುಳ್ಳ ಲ್ಯಾಪ್‌ಟಾಪ್ 'ಮ್ಯಾಕ್‌ಬುಕ್ ಏರ್' ಅನ್ನು ಭಾರತೀಯ ಮಾರುಕಟ್ಟೆಗೆ ಪರಿಚಯಿಸಿದೆ. ಎರಡು ವಾರಗಳ ಕಾಲ ಇದರಲ್ಲೇ ಕೆಲಸ ಮಾಡಿದ ಅನುಭವದ ಆಧಾರದಲ್ಲಿ ಇದು ಹೇಗಿದೆ ಎಂಬ ಮಾಹಿತಿ ಇಲ್ಲಿದೆ.

ವಿನ್ಯಾಸ

ಸಾಮಾನ್ಯವಾಗಿ 13ರಿಂದ 16 ಇಂಚು ಸ್ಕ್ರೀನ್ ಗಾತ್ರ ಇರುವ ಲ್ಯಾಪ್‌ಟಾಪ್‌ಗಳು ಹೆಚ್ಚಿನವರ ಆಯ್ಕೆ. ಆದರೆ, ಇವೆರಡರ ನಡುವಿನ 15 ಇಂಚಿನ ಸ್ಕ್ರೀನ್ ಇರುವುದು ಈ ಬಾರಿಯ ಆ್ಯಪಲ್ ಮ್ಯಾಕ್‌ಬುಕ್ ಏರ್ ವೈಶಿಷ್ಟ್ಯ. ಅಗಲ ಪರದೆಯಿದ್ದರೂ, ಗಾತ್ರಕ್ಕೆ ಹೋಲಿಸಿದರೆ ಕಡಿಮೆ ತೂಕ ಮತ್ತು ಸ್ಲಿಮ್ ಆಗಿರುವ ಮ್ಯಾಕ್‌ಬುಕ್ ಇದು.

ಇದರಲ್ಲಿ, ಮ್ಯಾಕ್‌ಬುಕ್ ಸರಣಿಯ ಬಹುತೇಕ ಎಲ್ಲ ಪ್ರಮುಖ ವೈಶಿಷ್ಟ್ಯಗಳೂ ಇವೆ. ಉದಾಹರಣೆಗೆ, ಮ್ಯಾಗ್‌ಸೇಫ್ ಚಾರ್ಜಿಂಗ್, ಭರ್ಜರಿ 6 ಸ್ಪೀಕರ್‌ಗಳಿರುವ ಧ್ವನಿ ವ್ಯವಸ್ಥೆ, 1080 ಪಿಕ್ಸೆಲ್ ಸಾಮರ್ಥ್ಯದ ವೆಬ್‌ಕ್ಯಾಮೆರಾ, 15.3 ಇಂಚಿನ ಸ್ಕ್ರೀನ್ ಹಾಗೂ ಅತ್ಯಂತ ಶಕ್ತಿಶಾಲಿಯಾದ ಎಂ2 ಪ್ರೊಸೆಸರ್ ಚಿಪ್. ಇದರ ಬೆಲೆ ₹154900.00.

ನೋಡಲು 16 ಇಂಚಿನ ಮ್ಯಾಕ್‌ಬುಕ್ ಪ್ರೋ ಮಾಡೆಲ್‌ನಂತೆಯೇ ಆಕರ್ಷಕವೂ, ಐಷಾರಾಮದ ನೋಟವನ್ನೂ ಹೊಂದಿದೆ. ತೀರಾ ತ್ರಾಸದಾಯಕ ಮತ್ತು ಗ್ರಾಫಿಕ್ಸ್, ವಿಡಿಯೊ ಎಡಿಟಿಂಗ್ ಮುಂತಾದ ಕಾರ್ಯಗಳಿಗಾಗಿ ಹೆಚ್ಚುವರಿ RAM ಮತ್ತು ಹೆಚ್ಚುವರಿ ಸ್ಟೋರೇಜ್ ಬೇಕಿದ್ದರೆ ಮಾತ್ರವೇ ಹೆಚ್ಚು ಬೆಲೆ ಇರುವ ಪ್ರೋ ಮಾಡೆಲ್ ಖರೀದಿಸಬಹುದು. ಇಲ್ಲವೆಂದಾದರೆ, ಬಹುತೇಕ ಎಲ್ಲ ಅತ್ಯಾಧುನಿಕ ಸೌಕರ್ಯಗಳೂ ಈ ಏರ್ ಮಾಡೆಲ್‌ನಲ್ಲಿದೆ. ಅಗಲವಾದ ಟ್ರ್ಯಾಕ್‌ಪ್ಯಾಡ್ (ಮೌಸ್‌ನ ಕೆಲಸ ಮಾಡುವ ಜಾಗ) ಇದ್ದು, ಕೀಬೋರ್ಡ್‌ನ ಎರಡೂ ಪಾರ್ಶ್ವಗಳಲ್ಲಿ ಸಾಕಷ್ಟು ಖಾಲಿ ಜಾಗವಿದೆ.



ಮ್ಯಾಕ್‌ಬುಕ್ ಏರ್ 15

ಅಡಕವಾಗಿರುವ ಸ್ಪೀಕರ್‌ಗಳು ಶಕ್ತಿಶಾಲಿಯಾಗಿದ್ದು, ಹಿಂದೆ ಇದ್ದದ್ದಕ್ಕಿಂತ 2 ಹೆಚ್ಚು ಎಂದರೆ ಆರು ಸ್ಪೀಕರ್‌ಗಳಿವೆ. ಧ್ವನಿಯನ್ನು ಅತ್ಯುತ್ತಮವಾಗಿ ಹೊರಹೊಮ್ಮಿಸಿ, ಸರೌಂಡ್ ಸೌಂಡ್ ಅನುಭವ ನೀಡಲು ಎರಡು ಟ್ವೀಟರ್‌ಗಳು ಹಾಗೂ ಎರಡು ಶಕ್ತಿಯುತ ವೂಫರ್‌ಗಳಿವೆ. ಧ್ವನಿಯ ಗುಣಮಟ್ಟ ಚೆನ್ನಾಗಿದ್ದು, ಮೂವೀ ಅಥವಾ ಯೂಟ್ಯೂಬ್ ವಿಡಿಯೊ ವೀಕ್ಷಣೆಯ ವೇಳೆ, ಪೂರ್ಣ ಪ್ರಮಾಣದಲ್ಲಿ ವಾಲ್ಯೂಮ್ ನೀಡಿದರೂ, ಯಾವುದೇ ಅಡ್ಡ ಧ್ವನಿ (ಗೊರ ಗೊರ ಧ್ವನಿ) ಕೇಳಿಲ್ಲ.

ಪಾರ್ಶ್ವಭಾಗದಲ್ಲಿ ಎರಡು ಯುಎಸ್‌ಬಿ ಟೈಪ್ ಸಿ ಪೋರ್ಟ್‌ಗಳು ಹಾಗೂ ಚಾರ್ಜಿಂಗ್‌ಗಾಗಿ ಪ್ರತ್ಯೇಕವಾದ ಮ್ಯಾಗ್‌ಸೇಫ್ ಪೋರ್ಟ್ ಇದೆ. ಚಾರ್ಜರ್ ತುದಿಯನ್ನು ಅದರ ಸಮೀಪ ತೆಗೆದುಕೊಂಡು ಹೋದ ತಕ್ಷಣ ತಾನಾಗಿ ಅಂಟಿಕೊಳ್ಳುವುದು ಮ್ಯಾಗ್‌ಸೇಫ್ ವಿಶೇಷತೆ. ಮತ್ತೊಂದು ಪಾರ್ಶ್ವದಲ್ಲಿ 3.5ಮಿಮೀ ಹೆಡ್‌ಫೋನ್ ಜ್ಯಾಕ್ ಇದೆ. ಆದರೆ, ಇಷ್ಟು ದೊಡ್ಡ ಸ್ಕ್ರೀನ್ ಇದ್ದರೂ ಎಸ್‌ಡಿ ಕಾರ್ಡ್ ಸ್ಲಾಟ್ ಆಗಲೀ, ಎಚ್‌ಡಿಎಂಐ ಪೋರ್ಟ್ ಆಗಲೀ ಇಲ್ಲದಿರುವುದು ಕೆಲವರಿಗೆ ಕೊರತೆ ಎಂಬ ಭಾವನೆ ಬರಬಹುದು. ಇವೆರಡೂ ಮ್ಯಾಕ್‌ಬುಕ್ ಪ್ರೊ ಮಾದರಿಯಲ್ಲಿದೆ. ಆದರೆ ಇದು, ಸಾಧ್ಯವಿದ್ದಷ್ಟು ವೈರುಗಳನ್ನು ದೂರಮಾಡುವ ಆಧುನಿಕ ಚಿಂತನೆ ಎಂದುಕೊಳ್ಳಲೂಬಹುದು. ಮ್ಯಾಕ್‌ಬುಕ್ ಏರ್‌ನ ವಿಶೇಷತೆಯೆಂದರೆ ಅದರ ಅಗಲವಾದ ಸ್ಕ್ರೀನ್. ಮೇಲ್ಭಾಗದಲ್ಲಿ 1080P ಸಾಮರ್ಥ್ಯದ ವೆಬ್ ಕ್ಯಾಮೆರಾ ಸ್ಥಿತವಾಗಿರುವ 'ನಾಚ್' ಇದೆ. 60Hz ರೀಫ್ರೆಶ್ ರೇಟ್ ಇರುವ ಎಲ್‌ಸಿಡಿ ಪ್ಯಾನೆಲ್ ಇದ್ದು, ಚಿತ್ರ ಮತ್ತು ವಿಡಿಯೊಗಳ ವರ್ಣವೈವಿಧ್ಯವನ್ನು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಬಹುದು.

ಬ್ಯಾಟರಿ

66.5 ವ್ಯಾಟ್ ಲೀಥಿಯಮ್ ಪಾಲಿಮರ್ ಬ್ಯಾಟರಿ ಇದರಲ್ಲಿದ್ದು, 35W ವೇಗದ ಚಾರ್ಜಿಂಗ್‌ಗಾಗಿ ಡ್ಯುಯಲ್ ಯುಎಸ್‌ಬಿ-ಸಿ ಪೋರ್ಟ್ ಅನ್ನು ಬೆಂಬಲಿಸುವ ಪವರ್ ಅಡಾಪ್ಟರ್ ನೀಡಲಾಗಿದೆ. ಜೊತೆಗೆ, ಯುಎಸ್‌ಬಿ 'ಸಿ'ಯಿಂದ ಮ್ಯಾಗ್‌ಸೇಫ್-3 ಸಂಪರ್ಕ ಕೇಬಲ್ ಒದಗಿಸಲಾಗಿದ್ದು, ವೇಗವಾಗಿಯೇ ಚಾರ್ಜ್ ಆಗುತ್ತದೆ. 70W ಚಾರ್ಜಿಂಗನ್ನು ಬೆಂಬಲಿಸುವುದರಿಂದ, ಮತ್ತಷ್ಟು ಬೇಗನೇ ಚಾರ್ಜ್ ಮಾಡಬಹುದಾಗಿದೆ. ನಿರಂತರ 15 ಗಂಟೆ ವೈಫೈ ವೆಬ್ ಬ್ರೌಸಿಂಗಿಗೆ ಏನೂ ಅಡ್ಡಿಯಿಲ್ಲ ಎಂದು ಆ್ಯಪಲ್ ಹೇಳಿದೆ. ಎರಡು ದಿನಗಳ ಕಾಲ ಕೆಲಸ ಮಾಡಿದ (ದಿನಕ್ಕೆ ಅಂದಾಜು 8 ಗಂಟೆ) ಬಳಿಕವೂ ಶೇ.20 ಚಾರ್ಜ್ ಉಳಿದಿತ್ತು.

ಸುಲಲಿತ ಕಾರ್ಯಾಚರಣೆ

ಮ್ಯಾಕ್‌ಬುಕ್ ಕಳೆದ ವರ್ಷದಿಂದೀಚೆಗೆ ಅತ್ಯಾಧುನಿಕ ಎಂ2 ಚಿಪ್‌ಗಳನ್ನು ಬಳಸುತ್ತಿದ್ದು, 8 ಕೋರ್ ಸಿಪಿಯು ಮತ್ತು 10 ಕೋರ್ ಜಿಪಿಯು ಮೂಲಕ ಈ ಮ್ಯಾಕ್‌ಬುಕ್ ಏರ್‌ನಲ್ಲಿ ಕೆಲಸ ಮಾಡುವುದು, ಬ್ರೌಸ್ ಮಾಡುವುದು ತೀರಾ ಸುಲಲಿತ. ಅದರ ಅನುಭವವೂ ನಮಗಾಗುತ್ತದೆ. ದೈನಂದಿನ ಕೆಲಸಗಳು, ಗೇಮ್ ಅಥವಾ ಅತ್ಯಂತ ಸ್ಫುಟವಾದ, ಗರಿಷ್ಠ ರೆಸೊಲ್ಯುಶನ್ ಇರುವ ವಿಡಿಯೊಗಳನ್ನು ನೋಡುವಾಗ, ಒಂದಿನಿತೂ ವಿಳಂಬ ಅಥವಾ ಲೇಟೆನ್ಸಿಯ ಅನುಭವ ಆಗಿಲ್ಲ. ಹಲವು ಟ್ಯಾಬ್‌ಗಳನ್ನು ತೆರೆದು ವೈವಿಧ್ಯಮಯ ಕೆಲಸ (ಮಲ್ಟಿ ಟಾಸ್ಕಿಂಗ್) ಮಾಡುವಾಗಲೂ ನಾನು ಉಪಯೋಗಿಸುತ್ತಿರುವ ವಿಂಡೋಸ್‌ಗಿಂತ ಹೆಚ್ಚು ವೇಗವಾಗಿ ಕೆಲಸ ಆಗಿದೆ.

ಕನ್ನಡ

ಆ್ಯಪಲ್ ಕಂಪನಿಯು ಪ್ರಾದೇಶಿಕ ಭಾಷೆಗಳ ಮಾರುಕಟ್ಟೆಗೂ ಪೂರಕವಾಗಿ, ಸಾಧನಗಳನ್ನು ತಯಾರಿಸಿದೆ. ಹೀಗಾಗಿ, ಇದುವರೆಗೆ ಕನ್ನಡ ಕೀಬೋರ್ಡ್ ಸಮಸ್ಯೆಯೇ ದೊಡ್ಡ ತೊಡಕಾಗಿತ್ತು. ಆದರೆ, ಅದರಲ್ಲಿ ಅಂತರ್‌ನಿರ್ಮಿತವಾಗಿ ಕನ್ನಡ ಕೀಬೋರ್ಡ್ ಇತ್ತೀಚಿನ ವರ್ಷಗಳಲ್ಲಿ ಕಾಣಿಸಿಕೊಂಡಿದೆ. ಇದರಲ್ಲಿ ಕ್ವರ್ಟಿ ಹಾಗೂ ಇನ್‌ಸ್ಕ್ರಿಪ್ಟ್ ಕೀಲಿಮಣೆ ವಿನ್ಯಾಸವಿದೆ. ಇದಕ್ಕೆ ಹೊರತಾಗಿ ಬೇರೆ ಕೀಬೋರ್ಡ್‌ಗಳನ್ನು ಆ್ಯಪ್ ಸ್ಟೋರ್‌ನಿಂದ ಅಳವಡಿಸಿಕೊಳ್ಳಬಹುದು. ಮೈಕ್ರೋಸಾಫ್ಟ್ ಆಫೀಸ್ ಎಂಬ ಪಠ್ಯ ಸಂಸ್ಕರಣಾ ತಂತ್ರಾಂಶಕ್ಕೆ ಪರ್ಯಾಯವಾಗಿ ನಂಬರ್ಸ್ (ಎಕ್ಸೆಲ್), ಕೀನೋಟ್ (ಪವರ್ ಪಾಯಿಂಟ್) ಹಾಗೂ ಪೇಜಸ್, ಟೆಕ್ಸ್ಟ್-ಎಡಿಟ್ (ವರ್ಡ್) ತಂತ್ರಾಂಶಗಳಿವೆ. ಒಟ್ಟಿನಲ್ಲಿ ಹೇಳುವುದಾದರೆ, 15 ಇಂಚಿನ ಮ್ಯಾಕ್‌ಬುಕ್ ಏರ್ - ದೊಡ್ಡದಾದ ಡಿಸ್‌ಪ್ಲೇ ಹಾಗೂ ತೆಳು ಮತ್ತು ಹಗುರ - ಇವುಗಳಿಂದ ಗಮನ ಸೆಳೆಯುತ್ತದೆ. ಅತ್ಯುತ್ತಮ ಸ್ಪಷ್ಟತೆಯ ಚಿತ್ರ-ವಿಡಿಯೊಗಳ ವೀಕ್ಷಣೆ, ಉತ್ತಮ ಧ್ವನಿ ಮತ್ತು ಉತ್ತಮ ಬ್ಯಾಟರಿ ಇದೆ.

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-2/235 /2023-24 ದಿನಾಂಕ : 18-07-2023

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಹಾಗೂ 15ನೇ ಹಣಕಾಸು ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ (ಸಂಜೆ 5.30 ಗಂಟೆ ನಂತರ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5.25 ಗಂಟೆ ಒಳಗೆ)	ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಜೆ 5.30 ಗಂಟೆ ನಂತರ)
1	Kw-1	1 ಸಂಖ್ಯೆ	12.00	19-07-2023	26-07-2023	28-07-2023
2	Service Tender Kc-2	7 ಸಂಖ್ಯೆ	163.15	21-07-2023	05-08-2023	07-08-2023
3	Kw-1, Kw-2, Kw-3	4 ಸಂಖ್ಯೆ	134.10	21-07-2023	05-08-2023	07-08-2023
4	ಮೈಸೂರು ನಗರದ ಅಜೀಜ್ ಸೇಠ್ ರಸ್ತೆಯ ಉದಯಗಿರಿ ಪೊಲೀಸ್ ಸ್ಟೇಷನ್ ನಿಂದ ಗೌಸಿಯಾನಗರದ ವರೆಗೂ ತ್ಯಾಜ್ಯ ನೀರಿನ ನಿರ್ವಹಣೆಗಾಗಿ ಮುಖ್ಯ ಕೊಳವೆಮಾರ್ಗ ಅಳವಡಿಸಿ, ಆಳುಂತ್ರ ಗುಂಡಿಗಳನ್ನು ನಿರ್ಮಿಸುವ ಕಾಮಗಾರಿ. (2ನೇ ಕರೆ)	1 ಸಂಖ್ಯೆ	250.00	21-07-2023	05-08-2023	07-08-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಯಾದಗಿರಿ

ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

ಸಂಖ್ಯೆ:ಗ್ರಾಕುನೀ&ನೈ/ವಿಯಾ/ಕಿ.ಇಂ-2/ ಟೆಂಡರ್/ಪಿ.ಎಮ್.ಸಿ/2023-24/348 ದಿನಾಂಕ:18-07-2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಟೆಂಡರ್ ದಾಖಲಾತಿಗಳನ್ನು ಇ-ಪ್ರೊಕ್ಯುರಮೆಂಟ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 19.07.2023 ರಿಂದ 27.07.2023 ರ 16.00 ಗಂಟೆಯವರೆಗೆ 2) ಟೆಂಡರುಗಳನ್ನು ಇ-ಪ್ರೊಕ್ಯುರಮೆಂಟ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 27.07.2023 ರ 17,00 ಗಂಟೆಯವರೆಗೆ 3) ಟೆಂಡರಗಳನ್ನು ತೆರೆಯುವ ದಿನಾಂಕ: 31.07.2023 ರಂದು 11.00 ಗಂಟೆಯ ನಂತರ.

ಕ್ರ ಸಂ	ವಿವರ	ವಾರ್ಷಿಕ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1.	**PACKAGE-1:** Providing Project Management Consultancy (PMC) Services for implementation of Rural Drinking Water Supply Projects (2 Senior Technical Manager & 2 Technical Manager) for Yadgir Talukas in Yadgir District	11197.18	3,00,000/-
2.	**PACKAGE-1:** Providing Project Management Consultancy (PMC) Services for implementation of Rural Drinking Water Supply Projects (2 Senior Technical Manager & 2 Technical Manager) for Shahapur Talukas in Yadgir District	8621.16	3,00,000/-
3.	**PACKAGE-1:**: Providing Project Management Consultancy (PMC) Services for implementation of Rural Drinking Water Supply Projects (2 Senior Technical Manager & 2 Technical Manager) for Shorapur Talukas in Yadgir District.	10652.09	3,00,000/-

ಉಳಿದ ವಿವರಗಳನ್ನು https://kppnkarnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಗ್ರಾ.ಕು.ನೀ ಮತ್ತು ನೈ ವಿಭಾಗ, ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/72/ಕೆ.ಎಸ್.ಎಂ.ಸಿ.ಎ/2023-24

ಕರ್ನಾಟಕ ಸರ್ಕಾರ

ಅಪರ ಪ್ರಾದೇಶಿಕ ಆಯುಕ್ತರು,
ಪ್ರಾದೇಶಿಕ ಆಯುಕ್ತರ ಕಛೇರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು.

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು-27 ದೂರವಾಣಿ : 080-22109670 ಇಮೇಲ್ : caaishwaryalakshmi1@gmail.com

ಸಂಖ್ಯೆ: ಕೆ.ಪಿ.ಐ.ಡಿ-ಸಿ.ಎ/ಐ.ಲ/22/2023-24 ದಿನಾಂಕ: 18.07.2023

ಸಾರ್ವಜನಿಕ ಪ್ರಕಟಣೆ

'ಮೆ॥ ಐಶ್ವರ್ಯ ಲಕ್ಷ್ಮೀ ಚಿಟ್ಸ್ ಪ್ರೈ.ಲಿ, ಬೆಂಗಳೂರು, ದೂಷಿತ ಸಂಸ್ಥೆಯ ಠೇವಣಿದಾರರು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ 2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳುವಳಿಕೆ.

ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ2004 ರ ಕಲಂ 5(1)ರ ಅನ್ವಯ ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ,ಬೆಂಗಳೂರು ಇವರನ್ನು 'ಮೆ॥ ಐಶ್ವರ್ಯ ಲಕ್ಷ್ಮೀ ಚಿಟ್ಸ್ ಪ್ರೈ.ಲಿ ಬೆಂಗಳೂರು' ದೂಷಿತ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಇನ್ನು ಮುಂದೆ ಎಲ್ಲಾ ಕಾರ್ಯಗಳಿಗೆ ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು. 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು-27
ರವರ ಕಛೇರಿಯನ್ನು ಸಂಪರ್ಕಿಸಲು ಸೂಚಿಸುತ್ತಾ ಹಾಗೂ ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಭಾವಚಿತ್ರ ಹೊಂದಿರುವ ಅಧಿಕೃತ ಗುರುತಿನ ಚೀಟಿ/ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪವರ್ ಆಫ್ ಅಟಾರ್ನಿ (ಪಿ.ಒ.ಎ) ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿದ್ದಲ್ಲಿ ಕ್ಲೇಮ್ ಅರ್ಜಿಗಳನ್ನು ವಿತರಿಸಲಾಗುವುದು. ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 20/07/2023 ಆಗಿರುವುದು. ಈ ಪ್ರಾರಂಭಿಕ ದಿನಾಂಕದಿಂದ ಒಂದು ತಿಂಗಳು ಅಂದರೆ ಅರ್ಜಿಯನ್ನು ಸಲ್ಲಿಸುವ ಕಡೆಯ ದಿನಾಂಕ: 19/08/2023 ಅಪರಾಹ್ನ 5.30 ರೊಳಗಾಗಿ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

1. ಕೆ.ಪಿ.ಐ.ಡಿ.ಎಫ್.ಇ ಕಾಯ್ದೆಯ ಕಲಂ 7(2) ಹಾಗೂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
2. ತಪ್ಪಾಗಿ ಅಥವಾ ಆಧಾರವಿಲ್ಲದೆ ಸ್ವಯಂ-ಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ವಿರುದ್ಧ ನಿಯಮಾನುಸಾರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು.
3. ಕೆ.ಪಿ.ಐ.ಡಿ.ಎಫ್.ಇ ಕಾಯ್ದೆಯ ಕಲಂ 7(2)ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿಯು ದಿನಾಂಕ : 20/07/2023 ರಿಂದ 19/08/2023 ಆಗಿದ್ದು, ಕಛೇರಿ ಸಮಯ ಪೂರ್ವಾಹ್ನ 10.30 ಗಂಟೆಯಿಂದ ಅಪರಾಹ್ನ 05.30 ರವರೆಗೆ ಮಾತ್ರ ಕ್ಲೇಮುಗಳನ್ನು ಸಲ್ಲಿಸಲು ಕಾಲಾವಕಾಶ ನಿಗಧಿಪಡಿಸಿದೆ.
4. ಆನ್‌ಲೈನ್ ಮೂಲಕ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಯಾವುದೇ ಅವಕಾಶ ಇರುವುದಿಲ್ಲ.
5. ಅರ್ಜಿಗಳನ್ನು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅರ್ಜಿದಾರರು ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು. 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು-560027 ಕಛೇರಿಗೆ ಭೇಟಿ ನೀಡಿ ಅಥವಾ rcb.karnataka.gov.in/ sploca.karnataka.gov.in ವೆಬ್ ಸೈಟ್‌ನಿಂದ ಮಾಹಿತಿಯನ್ನು ಪಡೆಯುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :080-22109670ಯನ್ನು ಪೂರ್ವಾಹ್ನ 10.30 ರಿಂದ ಅಪರಾಹ್ನ 05.30ರವರೆಗೆ ಸಂಪರ್ಕಿಸಲು ಅವಕಾಶವಿರುತ್ತದೆ.
6. ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಭಾವಚಿತ್ರ ಹೊಂದಿರುವ ಅಧಿಕೃತ ಗುರುತಿನ ಚೀಟಿ/ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿದ್ದಲ್ಲಿ ಕ್ಲೇಮ್ ಅರ್ಜಿಗಳನ್ನು ವಿತರಿಸಲಾಗುವುದು ಅಥವಾ ನಾಮಿನಿದಾರರು ಅಥವಾ Power Of Attorney(PoA) ಹೊಂದಿರುವವರು ಮಾತ್ರ ಖುದ್ದಾಗಿ ಕ್ಲೇಮು ಅರ್ಜಿಗಳನ್ನು ಪಡೆದು, ಭರ್ತಿ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.
7. ಅರ್ಜಿಗಳನ್ನು ಮಧ್ಯವರ್ತಿಗಳು ಸಲ್ಲಿಸಲು ಅವಕಾಶವಿರುವುದಿಲ್ಲ.
8. ಅರ್ಜಿ ಪಡೆಯುವ/ಸಲ್ಲಿಸುವ ಸ್ಥಳ : ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳ ಕಾರ್ಯಾಲಯ, 3ನೇ/4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ॥ ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು-560001, ಈ ಕಛೇರಿಯಲ್ಲಿ ಅವಕಾಶವಿರುತ್ತದೆ.
9. ಅರ್ಜಿದಾರರು ಮೆ॥ ಐಶ್ವರ್ಯ ಲಕ್ಷ್ಮೀ ಚಿಟ್ಸ್ ಪ್ರೈ.ಲಿ, ಬೆಂಗಳೂರು', ಇದರಲ್ಲಿ ಒಂದಕ್ಕಿಂತ ಹೆಚ್ಚು ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
10. ಒಂದು ಬಾರಿ ಅರ್ಜಿ ಸಲ್ಲಿಸಿದ ನಂತರ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಕ್ಲೇಮು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 19.08.2023 ಮುಕ್ತಾಯದ ನಂತರ ಮಾನ್ಯ ವಿಶೇಷ ನ್ಯಾಯಾಲಯ(ಸಿ.ಸಿ.ಹೆಚ್-92), ಬೆಂಗಳೂರು ಈ ನ್ಯಾಯಾಲಯದಿಂದ ಅನುಮತಿ/ಆದೇಶ ಪಡೆದ ನಂತರ ಮಾತ್ರ ಕ್ಲೇಮುಗಳನ್ನು ಸ್ವೀಕರಿಸಲಾಗುವುದು.
11. ವಿದ್ಯುಕ್ತವಾಗಿ ಭರ್ತಿ ಮಾಡಿದ ಅರ್ಜಿ ಪ್ರತಿಗಳನ್ನು ಬೆರಳಚ್ಚು ಅಥವಾ ಶುದ್ದ ಕೈ ಬರವಣಿಗೆಯಲ್ಲಿ ಸ್ಪಷ್ಟವಾಗಿ ಓದಲು ಅನುವಾಗುವಂತೆ ಬರೆದಿರತಕ್ಕದ್ದು ಹಾಗೂ ಅದರೊಂದಿಗೆ ಸಂಬಂಧಿಸಿದ ಎಲ್ಲಾ ಧೃಡಿಕೃತ/ನೋಟರೈಸ್ಡ್ ದಾಖಲೆಗಳನ್ನು ಸಲ್ಲಿಸತಕ್ಕದ್ದು.

ಸಹಿ/-
ಸಕ್ಷಮ ಪ್ರಾಧಿಕಾರಿಗಳು ಮೆ ॥ ಐಶ್ವರ್ಯ ಲಕ್ಷ್ಮೀ ಚಿಟ್ಸ್ ಪ್ರೈ.ಲಿ,
ಪ್ರಾದೇಶಿಕ ಆಯುಕ್ತರ ಕಛೇರಿ ಬೆಂಗಳೂರು

DIPR/CP/594/Zen/2023-24

ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

7ನೇ & 8ನೇ ಮಹಡಿ, ಕಾವೇರಿ ಭವನ, ಕ.ಗೃ.ಮ. ಸಂಕೀರ್ಣ, ಕೆ.ಜಿ. ರಸ್ತೆ, ಬೆಂಗಳೂರು-560 009.

ಸಂಖ್ಯೆ: ಜಅಇ/ಆಡಳಿತ-3/ವಿನಿ-1/ವಿವ-43/ಮಾ.ಸಂ.ಟೆಂ. Part-II/2023-24 ದಿನಾಂಕ: 15.07.2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ರೋರ್ಟಲ್ ಮುಂಖಾತರ)

ಜಲಾನಯನ ಅಭಿವೃದ್ಧಿ ಇಲಾಖೆಯು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ದ್ವಿ-ಲಕೋಟೆ ಪದ್ಧತಿಯಲ್ಲಿ ನೊಂದಾಯಿತ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಸಂಗ್ರಹಣಾ ದಾಖಲಾತಿಯ ಇ-ಸಂಗ್ರಹಣೆ ಪೋರ್ಟಲ್‌ನಲ್ಲಿ https://kppp.karnataka.gov.in ನಲ್ಲಿ ಟೆಂಡರ್ ದಾಖಲಾತಿಗಳು ಲಭ್ಯವಿರುತ್ತದೆ. ಇ-ಪೋರ್ಟಲ್ ಮುಖಾತರ ನೊಂದಾಯಿತ ಸಂಸ್ಥೆಯವರು ದಿನಾಂಕ: 18.07.2023 ರಿಂದ 02.08.2023 ಸಾಯಂಕಾಲ 05:00 ಘಂಟೆಯವರೆಗೆ ರೂ.10,90,000/- ಗಳ ಇ.ಎಂ.ಡಿ. (EMD) ಮೊತ್ತವನ್ನು ಠೇವಣಿಯಿಟ್ಟು ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. (Upload ಮಾಡಬಹುದು). ಮುದ್ರಿತ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪ್ರೀ ಬಿಡ್ ಮೀಟಿಂಗ್ ದಿನಾಂಕ: 24.07.2023 ರಂದು ಬೆಳಿಗ್ಗೆ 11:00 ಗಂಟೆಗೆ ನಡೆಯಲಿದೆ.

ಸಹಿ/- ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

DIPR/CP/AAPL/RO589/23-24

ಜಿಲ್ಲಾ ಪಂಚಾಯತ್ ಕೊಡಗು ಜಿಲ್ಲೆ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯವರ ಕಾರ್ಯಾಲಯ, ಕೊಡಗು ಜಿಲ್ಲೆ

ದೇವರಾಜ ಅರಸು ಭವನ, ಜನರಲ್ ತಿಮ್ಮಯ್ಯ ಕ್ರೀಡಾಂಗಣ, ಮ್ಯಾನ್ಸ್ ಕಾಂಪೌಂಡ್ ಹತ್ತಿರ, ಕೊಡಗು ಜಿಲ್ಲೆ, ಮಡಿಕೇರಿ-571201. ದೂರವಾಣಿ ಸಂಖ್ಯೆ: 08272-295628
Email ID: dobcmkodagu@gmail.com

ಸಂಖ್ಯೆ:ಹಿಂವಕಇ/ಆಹಾರ ಟೆಂಡರ್/ಸಿಆರ್-22/2023-24 ದಿನಾಂಕ:17-07-2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023-24ನೇ ಸಾಲಿಗೆ ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳು, ತರಕಾರಿ ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನ್ನು ಸಂಪರ್ಕಿಸಬಹುದು.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ

ಕರ್ನಾಟಕ ಉಚ್ಛ ನ್ಯಾಯಾಲಯ,
ಬೆಂಗಳೂರು-560001

ಹೆಚ್‌ಸಿಸಿ ಸಂ.Misc.2023/HCA-II/58/13 ದಿನಾಂಕ: 17.07.2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಛ ನ್ಯಾಯಾಲಯವು, ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರಿನ ಪೀಠದಲ್ಲಿ **"Contract for carrying out Rodent Control, Spraying Work and Fogging Work"** ಗಾಗಿ ಟೆಂಡರನ್ನು **e-Procurement Portal** ನಲ್ಲಿ ಆಹ್ವಾನಿಸಲಾಗಿದೆ. ಟೆಂಡರನ್ನು ದಿನಾಂಕ: **03.08.2023ರ ಸಂಜೆ 4.00 ಗಂಟೆಯೊಳಗೆ** ಆಸಕ್ತರು **upload** ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in/#/portal/Search Tender/live** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/- (ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಛನ್ಯಾಯಾಲಯ ಬೆಂಗಳೂರು

ವಾಸಾಸಂಇ/ಉ.ನಿ-ಸಿ.ಪಿ/592/ಕೆಎಸ್‌ಎಂಸಿಎ/23-24

ಜಿಲ್ಲಾ ಪಂಚಾಯತ್ ಕೊಡಗು ಜಿಲ್ಲೆ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯವರ ಕಾರ್ಯಾಲಯ, ಕೊಡಗು ಜಿಲ್ಲೆ

ದೇವರಾಜ ಅರಸು ಭವನ, ಜನರಲ್ ತಿಮ್ಮಯ್ಯ ಕ್ರೀಡಾಂಗಣ, ಮ್ಯಾನ್ಸ್ ಕಾಂಪೌಂಡ್ ಹತ್ತಿರ, ಕೊಡಗು ಜಿಲ್ಲೆ, ಮಡಿಕೇರಿ-571201. ದೂರವಾಣಿ ಸಂಖ್ಯೆ: 08272-295628
Email ID: dobcmkodagu@gmail.com

ಸಂ:ಹಿಂವಕಇ/ಹೊರ.ಸಂ.ಟೆಂಡರ್/ಸಿಆರ್-23/2023-24 ದಿನಾಂಕ:17-07-2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023-24ನೇ ಸಾಲಿಗೆ ಕೊಡಗು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ತಾಲ್ಲೂಕು ಕಚೇರಿಗಳು, ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಮೊರಾರ್ಜಿ ದೇಸಾಯಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ, ಗ್ರೂಪ್ 'ಡಿ' ಮತ್ತು ಬೋಧಕ ಹುದ್ದೆಗಳಿಗೆ ತಾತ್ಕಾಲಿಕವಾಗಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನ್ನು ಸಂಪರ್ಕಿಸಬಹುದು.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ

ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ,
ಬಿ.ಹೆಚ್.ರಸ್ತೆ, ತುಮಕೂರು-572101

ದೂರವಾಣಿ :0816-2257404, ಸ.ಆ.ಅ-2251250 ಇ-ಮೇಲ್-dstumkur@gmail.com

ಡಿ.ಎನ್.ಬಿ ಕೋರ್ಸ್‌ಗೆ ಗುತ್ತಿಗೆ ಆಧಾರದ ಮೇಲೆ **Junior Consultant** ನೇಮಕಾತಿಗೆ

ತುಮಕೂರು ಜಿಲ್ಲಾ ಆಸ್ಪತ್ರೆಯ ಡಿ.ಎನ್.ಬಿ ಶೈಕ್ಷಣಿಕ ಕೇಂದ್ರದ ವಿವಿಧ ವಿಭಾಗಕ್ಕೆ ಬೋಧನೆ ಮತ್ತು ವಿಭಾಗದಲ್ಲಿನ ಕರ್ತವ್ಯ ನಿರ್ವಹಣೆಗೆ ದಿನಾಂಕ: **26.07.2023**ರಂದು ಬೆಳಿಗ್ಗೆ 11.00 ಗಂಟೆಯಿಂದ ಜಿಲ್ಲಾ ಶಸಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿ ನೇರ ಸಂದರ್ಶನ ನಡೆಯಲಿದೆ, **ಹುದ್ದೆ ವಿವರ ಈ ಕೆಳಕಂಡಂತಿದೆ.**

SI	Name of The Department	Junior Consultant
	Honorarium	Rs.1.30 lakh
1	Orthopaedics	01

ವಯೋಮಿತಿ: Junior Consultant :- ಗರಿಷ್ಠ 45 ವರ್ಷ ವಯೋಮಿತಿ, ಉತ್ತಮ ಆರೋಗ್ಯವನ್ನು ಹೊಂದಿರಬೇಕು, ಬೋದನೆ ಜೊತೆ ಹೊರರೋಗಿ, ಒಳರೋಗಿ ಮತ್ತು ವಿಭಾಗದ ಕರ್ತವ್ಯದ ನಿರ್ವಹಣೆ ವಹಿಸಿಕೊಳ್ಳುವುದು. ವೈದ್ಯಕೀಯ ಮಹಾವಿದ್ಯಾಲಯದಲ್ಲಿ 5ವರ್ಷ Associate Professor ಅಥವಾ ಡಿ.ಎನ್.ಬಿ ಕಾರ್ಯಕ್ರಮದಡಿ 6 ವರ್ಷ ಕರ್ತವ್ಯ ನಿರ್ವಹಿಸಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು. ಅರ್ಹತೆ ಬಗ್ಗೆ ಮಾಹಿತಿ ಮತ್ತು ಅರ್ಜಿಗಳನ್ನು ಡಿ.ಎನ್.ಬಿ ಶೈಕ್ಷಣಿಕ ಕೇಂದ್ರ ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿ ಕಛೇರಿಯ ವೇಳೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 3.30ರವರೆಗೆ ಪಡೆಯಬಹುದಾಗಿರುತ್ತದೆ.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ತುಮಕೂರು

DIPR/TUM/78/KSMCA/2023-24

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ, ಮೈಸೂರು

ಸಂಖ್ಯೆ: DTWO/2023-24/IND0008 ದಿನಾಂಕ: 15.07.2023

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್

2023-24ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಾಲ್ಮೀಕಿ ಆಶ್ರಮಶಾಲೆಗಳ ವಿದ್ಯಾರ್ಥಿಗಳಿಗೆ ಗ್ರೂಫ್-ಎ & ಗ್ರೂಫ್-ಬಿ ಆಹಾರ ಸಾಮಾಗ್ರಿಗಳ ಪೂರೈಕೆಗಾಗಿ ಕೆ.ಪಿ.ಪಿ.ಪಿ. ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ. 1. ಟೆಂಡರ್ ಸಂಖ್ಯೆ. : **DTWO/2023-24/IND0008** ದಿನಾಂಕ: **15.07.2023** 2. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **31.07.2023 @ 05.00 PM** 3. ಪ್ರಿ ಬಿಡ್ ದಿನಾಂಕ: **26.07.2023 @ 03.00 PM** 4. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **02.08.2023 @ 10.30** 5. ಟೆಂಡರ್ ಒಟ್ಟಾರೆ ಮೊತ್ತ : **ರೂ.400.00 ಲಕ್ಷಗಳು**
6. ಇ.ಎಂ.ಡಿ.: **ರೂ. 4.00 ಲಕ್ಷಗಳು**

ಎಲ್ಲಾ ದಾಖಲಾತಿಗಳನ್ನು ಆನ್ ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ ದಾಖಲಿಸುವುದು. ಯಾವುದೇ ಕಾರಣ ನೀಡದೇ ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಜಿಲ್ಲಾಧಿಕಾರಿಗಳು, ಮೈಸೂರು ರವರಿಗೆ ದತ್ತವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ **ದೂರವಾಣಿ ಸಂಖ್ಯೆ :0821-2427140** ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-ಯೋಜನಾ ಸಮನ್ವಯಾಧಿಕಾರಿ, ಐ.ಟಿ.ಡಿ.ಪಿ., ಮೈಸೂರು

DIPR/DDMYS/KSMCA/ 122/2023-24

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175

Bengaluru SMART CITY

ವ್ಯವಸ್ಥಾಪಕ ನಿರ್ದೇಶಕರವರ ಕಚೇರಿ, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು - 560 052.

ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ-02/ದರಪಟ್ಟಿ-01/2023-24 ದಿನಾಂಕ: 17.07.2023

ದರಪಟ್ಟಿ/ಅಂದಾಜುಪಟ್ಟಿ ಆಹ್ವಾನ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು-02 ಇವರು **"ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಗಳಿಗೆ ರೇಡಿಯಮ್ ಸ್ಟಿಕರಿಂಗ್ ಮತ್ತು ಫಿಟ್ಟಿಂಗ್ ಕಾಮಗಾರಿ"** ಗುರುತಿಸಲ್ಪಟ್ಟಿರುವ ಸಂಸ್ಥೆಗಳಿಂದ ಅನುಬಂಧದಲ್ಲಿ ವಿವರಿಸಿರುವ ಅಂಶಗಳಿಗೆ ದರಪಟ್ಟಿ / ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಸಲ್ಲಿಸುವ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸುವುದಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ. ವೇಳಾಪಟ್ಟಿಗಳ ವಿವರವು ಈ ಕೆಳಕಂಡಂತಿವೆ

ಕ್ರ ಸಂ	ದರಪಟ್ಟಿಗಳ ವಿವರಣೆ	ದರಪಟ್ಟಿಗಳಿಗಾಗಿ ಅನುಬಂಧ ಬುಕ್‌ಲೆಟ್ ವಿತರಣೆ ಮಾಡುವ ದಿನಾಂಕ ಮತ್ತು ಸ್ಥಳ	ಅನುಬಂಧ ಸಲ್ಲಿಸಲು ಕೊನೆಯ ದಿನಾಂಕ	ಅನುಬಂಧ ತೆರೆಯುವ ದಿನಾಂಕ	ಷರಾ
1.	ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಗಳಿಗೆ ರೇಡಿಯಮ್ ಸ್ಟಿಕರಿಂಗ್ ಮತ್ತು ಫಿಟ್ಟಿಂಗ್ ಕಾಮಗಾರಿ	19.07.2023ರಂದು ಬೆಳಿಗ್ಗೆ 10:00 ರಿಂದ ಸಂಜೆ 4:00 ಗಂಟೆಯವರೆಗೆ ಕಾರ್ಯಪಾಲಕ ಅಭಿಯಂತರರು-2 ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052	24.07.2023 ರ ಸಂಜೆ 4:00 ಗಂಟೆಗೆ	24.07.2023 ರ ಸಂಜೆ 4:30 ಗಂಟೆಗೆ	ಅನುಬಂಧದಲ್ಲಿನ ಸ್ಪರ್ಧಾತ್ಮಕವಾಗಿ ನಮೂದಿಸುವ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸಲು ಮಾತ್ರ ಪರಿಗಣಿಸಲಾಗುತ್ತದೆ

ಟಿಪ್ಪಣಿ:- ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಅನುಬಂಧವನ್ನು ಮುಚ್ಚಿದ ಲಕೋಟೆಯಲ್ಲಿ ಕಾರ್ಯಪಾಲಕ ಅಭಿಯಂತರರು-02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಂಗಳೂರು ಇಲ್ಲಿಗೆ ದಿನಾಂಕ: 24.07.2023ರ ಸಂಜೆ 4:00 ಗಂಟೆಯೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು.

ಸಹಿ/- ಕಾರ್ಯಪಾಲಕ ಅಭಿಯಂತರರು-02,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ವಾ.ಸಾ.ಸಂ.ಇ/583/2023-24

ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ,

ಕಾರ್ಯಪಾಲಕ ಅಭಿಯಂತರರವರ ಕಛೇರಿ, ವಿದ್ಯುತ್ ವಿಭಾಗ, ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ: ಶಿಮನಪಾಶಿ:ಕಾ.ಅ:ವಿದ್ಯುತ್:ಡಿ.ಎಂ/ಸಿ.ಆರ್:03/2023-24 ದಿನಾಂಕ: 15.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2023-24 ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿಯಡಿಯಲ್ಲಿ 02 ಸಂಖ್ಯೆಯ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಈ ಕೆಳಕಂಡ ಕ್ರಮ ಸಂಖ್ಯೆ 01 ರ ಕಾಮಗಾರಿಯನ್ನು ಕೆ.ಡಬ್ಲ್ಯೂ-02 ಹಾಗೂ ಕ್ರಮ ಸಂಖ್ಯೆ 02 ರ ಕಾಮಗಾರಿಯನ್ನು ಕೆ.ಡಬ್ಲ್ಯೂ-03 ರಂತೆ ಪ್ರಸಕ್ತ ಬ್ಲಾಕ್ ಅವಧಿಗೆ ಟೆಂಡರ್ ಬಿಡ್ ಡಾಕ್ಯೂಮೆಂಟ್ ನಲ್ಲಿ ನಿಗಧಿಪಡಿಸಿರುವಂತೆ ನೋಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಇ-ಪ್ರಕ್ಯೂರ್ ಮೆಂಟ್ ಮುಖಾಂತರ ಸದರಿ ಕಾಮಗಾರಿಗಳಿಗೆ ಕ್ರ.ಸಂ.-01 ಏಕಲಕೋಟೆ ಹಾಗೂ ಕ್ರ.ಸಂ.02 ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1. ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ನಲ್ಲಿ ಇ-ಪೇಮೆಂಟ್ ಮೂಲಕ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 15.07.2023 2. ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ನಲ್ಲಿ ಇ-ಪೇಮೆಂಟ್ ಮೂಲಕ ಕಾಮಗಾರಿಗೆ ಟೆಂಡರ್ ಬಿಡ್ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ: 21.07.2023 4:00:00 PM 3. ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ನಲ್ಲಿ ಕಾಮಗಾರಿಗೆ ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ಕ್ರ.ಸಂ.-01 : 24.07.2023 4:30:00 PM 4. ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ನಲ್ಲಿ ಕಾಮಗಾರಿಗೆ ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ಕ್ರ.ಸಂ.-02:24.07.2023 4:30:00 PM 5. ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ನಲ್ಲಿ ಕಾಮಗಾರಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ಕ್ರ.ಸಂ.-02 : 26.07.2023 10:30:00 AM

ಕ್ರ ಸಂ. 1. ಕಾಮಗಾರಿಯ ವಿವರ: Appointment of Independent Chartered Engineering Agency (ICEA) for project "Implementation of energy efficient street lights by replacement of existing conventional lamps with LED lamps along with Centralized Control & Monitoring System (CCMS) in Shivamogga City Corporation jurisdiction"**ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 21.2 **ಇಂಡೆಂಟ್ ಸಂಖ್ಯೆ:** DMA/2023-24/SE0342 **ಅನುದಾನ:** 2023-24ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ **ಮೀಸಲಾತಿ:** ಸಾಮಾನ್ಯ **ಇ.ಎಂ.ಡಿ ಮೊತ್ತ ರೂ.ಗಳಲ್ಲಿ:** 50000.00 **ಕಾಮಗಾರಿ ಪೂರೈಸುವ ಅವಧಿ (ಮಳೆಗಾಲ ಒಳಗೊಂಡಂತೆ):** 12 ತಿಂಗಳು **ಗುತ್ತಿಗೆದಾರರ ದರ್ಜೆ:** 1ನೇ ದರ್ಜೆ ಮತ್ತು ಮೇಲ್ಪಟ್ಟು (ವಿದ್ಯುತ್)

ಕ್ರ ಸಂ. 2. ಕಾಮಗಾರಿಯ ವಿವರ: ಶಿವಮೊಗ್ಗ ಮಹಾನಗರ ಪಾಲಿಕೆಯ ವಾರ್ಡ್ ನಂ:33 ಕೃಷ್ಣರಾಜೇಂದ್ರ ಜಲಶುದ್ದೀಕರಣ ಘಟಕಕ್ಕೆ ಹೆಚ್ಚುವರಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 91.00 **ಇಂಡೆಂಟ್ ಸಂಖ್ಯೆ:** DMA/2023-24/EL/WORK_INDENT 1780 **ಅನುದಾನ:** 2023-24ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ **ಮೀಸಲಾತಿ:** ಸಾಮಾನ್ಯ **ಇ.ಎಂ.ಡಿ ಮೊತ್ತ ರೂ.ಗಳಲ್ಲಿ:** 182000.00 **ಕಾಮಗಾರಿ ಪೂರೈಸುವ ಅವಧಿ (ಮಳೆಗಾಲ ಒಳಗೊಂಡಂತೆ):** 3ತಿಂಗಳು **ಗುತ್ತಿಗೆದಾರರ ದರ್ಜೆ:** 1ನೇ ದರ್ಜೆ ಮತ್ತು ಮೇಲ್ಪಟ್ಟು (ವಿದ್ಯುತ್)

ಸೂಚನೆ: ಟೆಂಡರ್ ಗೆ ಸಂಬಂಧ ಪಟ್ಟ ಯಾವುದೇ ತಿದ್ದುಪಡಿಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುತ್ತದೆ

ಸಹಿ/- ಕಾರ್ಯಪಾಲಕ ಅಭಿಯಂತರರು (ಪ್ರ) ವಿದ್ಯುತ್ ವಿಭಾಗ, ಮಹಾನಗರ ಪಾಲಿಕೆ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/66/07/23-24/210

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सत्यमेव जयते

सी.जी.-डी.एल.-अ.-26042023-245438
CG-DL-E-26042023-245438
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 1813] नई दिल्ली, मंगलवार, अप्रैल 25, 2023/वैशाख 5, 1945
No. 1813] NEW DELHI, TUESDAY, APRIL 25, 2023/VAISAKHA 5, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅಧಿಸೂಚನೆ
ನವದೆಹಲಿ, 25 ಏಪ್ರಿಲ್ 2023

ಎಸ್ ಒ 1901 (ಇ): ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ಸೆಕ್ಷನ್ 3ಎ ಯ ಉಪವಿಭಾಗ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಇನ್ನು ಮುಂದೆ ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ) ಕೇಂದ್ರ ಸರ್ಕಾರವು ಅದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂದು ತೃಪ್ತಿಗೊಂಡ ನಂತರ, ನಿರ್ಮಾಣಕ್ಕೆ ಅಗತ್ಯವಿರುವುದರಿಂದ (ಅಗಲಗೊಳಿಸುವುದು / ಎರಡು ಪಥ ಪೇವ್ಡ್ ಶೋಲ್ಡರ್ ದೊಂದಿಗೆ/ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿ 206 ರಲ್ಲಿ ಕಿ ಮೀ 207.800 ರಿಂದ 208.250 ಕಿ ಮೀ ವರೆಗಿನ (ತುಮಕೂರು - ಹೊನ್ನಾವರ ವಿಭಾಗ), ಶಿವಮೊಗ್ಗ ಜಿಲ್ಲೆ, ಕರ್ನಾಟಕ ದಲ್ಲಿರುವ ಈ ಕೆಳಗಿನ ಅನುಸೂಚಿ ನಲ್ಲಿ ವಿವರಿಸಿದಂತೆ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.

ಸದರಿ ಜಮೀನಿನಲ್ಲಿ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿ, ಅಧಿಕೃತ ಗೆಜೆಟ್ ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ, ಈ ಭೂಮಿಯನ್ನು ಕಾಯಿದೆಯ ಸೆಕ್ಷನ್ 3 ಸಿ ಯ ಉಪವಿಭಾಗ (1) ರ ಅಡಿಯಲ್ಲಿ ಮೇಲಿನ ಉದ್ದೇಶಕ್ಕಾಗಿ ಬಳಸಲು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಬಹುದು.

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಸಕಾರಣದೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಉಪ ಆಯುಕ್ತರು, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು, ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆ ಸಲ್ಲಿಸಿದವರ ಅಥವಾ ಅವರ ಪರ ವಕೀಲರ ಅಹವಾಲು ಕೇಳಲು ಅವಕಾಶ ಮಾಡಿಕೊಡುತ್ತದೆ. ಮತ್ತು ಅಂತಹ ಎಲ್ಲ ಆಕ್ಷೇಪಣೆಗಳನ್ನು ಕೇಳಿದ ನಂತರ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಯಾವುದಾದರು ಇದ್ದಲ್ಲಿ, ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಕಂಡುಬಂದರೆ, ಆದೇಶ ಪ್ರಕಾರ, ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.


ಸಕ್ಷಮ ಪ್ರಾಧಿಕಾರವು ಕಾಯಿದೆಯ ಸೆಕ್ಷನ್ 3 ಸಿ ಯ ಉಪ-ಸೆಕ್ಷನ್ 2 ರ ಅಡಿಯಲ್ಲಿ ಹೊರಡಿಸಿರುವ ಯಾವುದೇ ಆದೇಶವು ಅಂತಿಮವಾಗಿರುತ್ತದೆ.

ಅಧಿಸೂಚನೆಯಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಯೋಜನೆಗಳು ಮತ್ತು ಇತರ ವಿವರಗಳು ಲಭ್ಯವಿದ್ದು ಮತ್ತು ಆಸಕ್ತ ವ್ಯಕ್ತಿಗಳು ಇವುಗಳನ್ನು ಸಕ್ಷಮ ಪ್ರಾಧಿಕಾರದ ಮೇಲ್ಕಂಡ ಕಚೇರಿಯಲ್ಲಿ ಪರಿಶೀಲಿಸಬಹುದು.

ಅನುಸೂಚಿ : ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿ 206 ರ ಕಿಮೀ 207.800 ರಿಂದ ಕಿಮೀ 208.250 ರವರೆಗಿನ ಮಾರ್ಗದಲ್ಲಿ ಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ (ತುಮಕೂರು - ಹೊನ್ನಾವರ ವಿಭಾಗ) ಕಟ್ಟಡ ಸಹಿತ / ಕಟ್ಟಡ ರಹಿತ ವಾಗಿರುವ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ			ಜಿಲ್ಲೆ : ಶಿವಮೊಗ್ಗ		
ಕ್ರಮ ಸಂಖ್ಯೆ	ಸರ್ವೇ / ಪ್ಲಾಟ್ ನಂ.	ಜಮೀನಿನ ವಿಧ	ಜಮೀನಿನ ತರಹೆ	ವಿಸ್ತೀರ್ಣ (ಸ್ಥಳೀಯ ಯೂನಿಟ್ ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರು ಗಳಲ್ಲಿ)
ತಾಲೂಕು : ಶಿವಮೊಗ್ಗ					
ಗ್ರಾಮ : ವಾಡಿಯಾಹುಡ ವಾರ್ಡ್ (ಶಿವಮೊಗ್ಗ)					
1	1/1	ಖಾಸಗಿ	ತರಿ	12.7200000(Square Meter)	0.0012720
2	352/55, 353/56	ಖಾಸಗಿ	ತರಿ	57.1600000(Square Meter)	0.0057160
3	354/57	ಖಾಸಗಿ	ತರಿ	18.1000000(Square Meter)	0.0018100
			ಒಟ್ಟು	87.9800	0.0088

[F. No. RW/KNT-NH-206/km207.80/3A]
ABHAY JAIN, Dy. Secy.




ಸುಭಾಷಿತ

ನಾನು ಆತನಿಂದ ಏನನ್ನೂ ಕಲಿಯಲು ಸಾಧ್ಯವೇ ಇಲ್ಲ ಎಂಬಂತಹ ಅಜ್ಞಾನಿಯನ್ನು ನಾನು ಎಂದಿಗೂ ಭೇಟಿಯಾಗಿಯೇ ಇಲ್ಲ.

–ಗೆಲಿಲಿಯೊ ಗೆಲಿಲಿ

ರೂಪಾಯಿಯಲ್ಲಿ ಅಂತರರಾಷ್ಟ್ರೀಯ ವಹಿವಾಟು: ಬೇಕು ಸುದೀರ್ಘ ಅವಧಿ

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಸಂಯುಕ್ತ ಅರಬ್ ಸಂಸ್ಥಾನಕ್ಕೆ (ಯುಎಇ) ಭೇಟಿ ನೀಡಿದ್ದ ಸಂದರ್ಭದಲ್ಲಿ, ಸ್ಥಳೀಯ ಕರೆನ್ಸಿಗಳಲ್ಲಿ ವಹಿವಾಟು ಆರಂಭಿಸಲು ಮಾಡಿಕೊಂಡಿರುವ ಒಪ್ಪಂದವು ರೂಪಾಯಿಯನ್ನು ಅಂತರರಾಷ್ಟ್ರೀಯ ವಹಿವಾಟುಗಳಲ್ಲಿ ಹೆಚ್ಚೆಚ್ಚು ಬಳಕೆ ಮಾಡಬೇಕು ಎಂಬ ಕೇಂದ್ರದ ನೀತಿಗೆ ಅನುಗುಣವಾಗಿ ಇದೆ. ರಷ್ಯಾ ದೇಶವು ಉಕ್ರೇನ್ ಮೇಲೆ ದಾಳಿ ನಡೆಸಿದ ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳು ಒಟ್ಟಾಗಿ ರಷ್ಯಾದ ಮೇಲೆ ಹಲವು ನಿರ್ಬಂಧಗಳನ್ನು ಹೇರಿದವು. ಇದಾದ ನಂತರದಲ್ಲಿ ಭಾರತವು ರೂಪಾಯಿ ಬಳಸಿ ವಹಿವಾಟು ನಡೆಸುವ ವಿಚಾರವಾಗಿ ರಷ್ಯಾ ಜೊತೆಗೂ ಒಪ್ಪಂದವೊಂದನ್ನು ಮಾಡಿಕೊಂಡಿದೆ. ಇಂಡೊನೇಷ್ಯಾ ಹಾಗೂ ತಾಂಜಾನಿಯಾ ಜೊತೆ ಕೂಡ ಸ್ಥಳೀಯ ಕರೆನ್ಸಿಗಳಲ್ಲಿ ವಹಿವಾಟು ನಡೆಸುವ ವಿಚಾರವಾಗಿ ಮಾತುಕತೆಗಳು ನಡೆದಿವೆ. ಆದರೆ, ಭಾರತದ ಪಾಲಿಗೆ ಯುಎಇ ಮೂರನೆಯ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿರುವ ಕಾರಣ, ಆ ದೇಶದ ಜೊತೆ ಸ್ಥಳೀಯ ಕರೆನ್ಸಿಗಳಲ್ಲಿ ವಹಿವಾಟು ನಡೆಸಲು ಮಾಡಿಕೊಂಡಿರುವ ಒಪ್ಪಂದವು ಮಹತ್ವದ್ದಾಗುತ್ತದೆ. ಅಂತರರಾಷ್ಟ್ರೀಯ ವಹಿವಾಟುಗಳಲ್ಲಿ ರೂಪಾಯಿ ಬಳಕೆಯನ್ನು ಹೆಚ್ಚಿಸುವ ಬಯಕೆ ಭಾರತದ್ದು. ಈ ದಿಸೆಯಲ್ಲಿ, ದ್ವಿಪಕ್ಷೀಯ ವಹಿವಾಟುಗಳಲ್ಲಿ ರೂಪಾಯಿ ಬಳಕೆಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಆರಂಭಿಕ ಹೆಜ್ಜೆಗಳನ್ನು ಇರಿಸಿಯಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿನ ವಹಿವಾಟುಗಳಲ್ಲಿ ಡಾಲರ್ ಬಳಕೆಯನ್ನು ತಗ್ಗಿಸಿದರೆ, ಆ ಕರೆನ್ಸಿಯ ಸ್ಥಾನವನ್ನು ಪೂರ್ಣ ಪ್ರಮಾಣದಲ್ಲಿ ತುಂಬಲು ಬೇರೆ ಯಾವ ಕರೆನ್ಸಿಗೂ ಶಕ್ತಿಯಿಲ್ಲ. ಹೀಗಾಗಿ, ಅಂತರರಾಷ್ಟ್ರೀಯ ವಹಿವಾಟುಗಳಲ್ಲಿ ರೂಪಾಯಿಗೆ ಒಂದಿಷ್ಟು ಪಾಲು ಹೊಂದುವ ಅವಕಾಶವಿದೆ ಎಂದು ಕೇಂದ್ರ ಅಂದಾಜಿಸಿದೆ.



ಭಾರತದ ಕರೆನ್ಸಿಯನ್ನು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಬಳಸುವುದರಿಂದ ಹಲವು ಪ್ರಯೋಜನಗಳು ಇವೆಯಾದರೂ, ಅದರ ಅನುಷ್ಠಾನವು ಬಹಳ ನಿಧಾನಗತಿಯ ಪ್ರಕ್ರಿಯೆಯಾಗಿರುತ್ತದೆ

ರೂಪಾಯಿ ಬಳಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಹೆಚ್ಚಿಸಲು ಯೋಜನೆಯೊಂದನ್ನು ರೂಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರಚಿಸಿದ್ದ ಸಮಿತಿಯೊಂದು ವರದಿಯನ್ನು ಈಚೆಗೆ ಸಲ್ಲಿಸಿದೆ. ಅಂತರರಾಷ್ಟ್ರೀಯ ವಹಿವಾಟುಗಳಲ್ಲಿ ರೂಪಾಯಿ ಬಳಕೆಯನ್ನು ಇನ್ನಷ್ಟು ಹೆಚ್ಚು ಮಾಡಲು ಅದು ಹಲವು ಪ್ರಸ್ತಾವಗಳನ್ನು ಪಟ್ಟಿ ಮಾಡಿದೆ. ರೂಪಾಯಿಯಲ್ಲಿ ಮಾಡುವ ಪಾವತಿಗಳಿಗೆ ಏಕರೂಪದ ಮಾದರಿಯೊಂದನ್ನು ಅಳವಡಿಸಿಕೊಳ್ಳುವುದು, ಪಾವತಿಗಳಲ್ಲಿ ರೂಪಾಯಿಯನ್ನು ಬಳಕೆ ಮಾಡುವ ರಫ್ತುದಾರರಿಗೆ ಉತ್ತೇಜನ ನೀಡುವುದು, ಭಾರತದ ಪಾವತಿ ವ್ಯವಸ್ಥೆಯನ್ನು ಇತರ ದೇಶಗಳ ಪಾವತಿ ವ್ಯವಸ್ಥೆಯ ಜೊತೆ ಒಂದಾಗಿಸುವುದು ಸಮಿತಿಯ ಪ್ರಸ್ತಾವಗಳಲ್ಲಿ ಇವೆ. ಇವೆಲ್ಲ ರೂಪಾಯಿಯಲ್ಲಿ ವಹಿವಾಟು ಹೆಚ್ಚಿಸಲು ಇರುವ ಅಲ್ಪಾವಧಿ ಕ್ರಮಗಳು.

ಆದರೆ ಮುಂದಿನ ದಿನಗಳಲ್ಲಿ ದೇಶದ ಮುಂದೆ ಸವಾಲಿನ ಬೆಟ್ಟಗಳೇ ಇವೆ. ದೇಶದ ಅರ್ಥ ವ್ಯವಸ್ಥೆಯು ಇನ್ನಷ್ಟು ದೊಡ್ಡದಾಗಿ ಬೆಳೆಯಬೇಕು ಮತ್ತು ವ್ಯಾಪಾರ ವಹಿವಾಟಿನ ಗಾತ್ರವು ವಿಸ್ತಾರವಾಗಬೇಕು. ಒಪ್ಪಂದ ಆಗಿದ್ದರೂ ರಷ್ಯಾ ಜೊತೆ ರೂಪಾಯಿಯಲ್ಲಿ ವಹಿವಾಟು ಆರಂಭವಾಗಿಲ್ಲ. ಭಾರತದಿಂದ ತಾನು ಮಾಡಿಕೊಳ್ಳುವ ಆಮದಿನ ಮೊತ್ತವು ರೂಪಾಯಿಯಲ್ಲಿ ವಹಿವಾಟು ನಡೆಸಲು ಸಾಕಾಗುವಷ್ಟು ಇಲ್ಲ, ಭಾರತವು ರೂಪಾಯಿಯಲ್ಲಿ ಪಾವತಿಗಳನ್ನು ಮಾಡಿದರೆ ಆ ರೂಪಾಯಿಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬಳಕೆ ಮಾಡಲು ತನಗೆ ಇರುವ ಅವಕಾಶಗಳು ಕಡಿಮೆ ಎಂದು ರಷ್ಯಾ ಹೇಳಿದೆ ಎಂಬ ವರದಿಗಳು ಇವೆ. ಅದಕ್ಕಾಗಿ, ಭಾರತವು ತನಗೆ ಮಾಡಬೇಕಿರುವ ಪಾವತಿಗಳನ್ನು ಯುವಾನ್ ಬಳಸಿ ಮಾಡಲಿ ಎಂದು ರಷ್ಯಾ ಬಯಸಿದೆ. ಜಾಗತಿಕ ವಹಿವಾಟಿನಲ್ಲಿ ಭಾರತದ ಪಾಲು ಶೇಕಡ 2ರಷ್ಟು ಮಾತ್ರವೇ ಇದೆ. ಇದು ಬಹಳ ಸಣ್ಣ ಪ್ರಮಾಣ. ದೇಶದ ವ್ಯಾಪಾರ ಕೊರತೆ ಅಂತರವು ಬಹಳ ದೊಡ್ಡದಾಗಿದೆ. ಕೆಲವು ದೇಶಗಳ ಜೊತೆಗಿನ ವ್ಯಾಪಾರದಲ್ಲಿ ಮಾತ್ರ ಕೊರತೆ ಇಲ್ಲ. ಇವೆಲ್ಲ ಏನೇ ಇದ್ದರೂ, ಕೆಲವು ದೇಶಗಳ ಜೊತೆಗಾದರೂ ರೂಪಾಯಿಯಲ್ಲಿ ವಹಿವಾಟು ಆರಂಭಿಸುವ ಬಯಕೆ ಭಾರತದ್ದು. ಬಾಂಗ್ಲಾದೇಶದ ಜೊತೆ ರೂಪಾಯಿಯಲ್ಲಿ ವಹಿವಾಟಿಗೆ ಈ ತಿಂಗಳಲ್ಲಿ ಚಾಲನೆ ನೀಡಲಾಗಿದೆ. ರೂಪಾಯಿಯ ಅಂತರರಾಷ್ಟ್ರೀಕರಣವು ನಿಜ ಅರ್ಥದಲ್ಲಿ ಆಗಬೇಕು ಎಂದಾದರೆ, ದೇಶದೊಳಕ್ಕೆ ಬರುವ ಹಾಗೂ ದೇಶದಿಂದ ಹೊರಹೋಗುವ ವಿದೇಶಿ ಬಂಡವಾಳದ ಮೇಲೆ ಸರ್ಕಾರ ಅಥವಾ ಕೇಂದ್ರೀಯ ಬ್ಯಾಂಕ್‌ನ ನಿಯಂತ್ರಣ ಇರಬಾರದು. ಆದರೆ ಇದು ಸದ್ಯಕ್ಕೆ ಆಗುವಂಥದ್ದಲ್ಲ. ಭಾರತದ ಕರೆನ್ಸಿಯನ್ನು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಬಳಸುವುದರಿಂದ ಹಲವು ಪ್ರಯೋಜನಗಳು ಇವೆಯಾದರೂ, ಅದರ ಅನುಷ್ಠಾನವು ಬಹಳ ನಿಧಾನಗತಿಯ ಪ್ರಕ್ರಿಯೆಯಾಗಿರುತ್ತದೆ. ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆಯ ಜೊತೆಯಲ್ಲೇ ಇದು ವಿಕಾಸ ಹೊಂದುತ್ತ ಸಾಗುತ್ತದೆ. ಜಾಗತಿಕ ಮಟ್ಟದಲ್ಲಿ ಆಗುವ ಬದಲಾವಣೆಗಳು ಕೂಡ ಇದರ ಮೇಲೆ ಪ್ರಭಾವ ಬೀರುತ್ತವೆ.

ದೇಶದಾದ್ಯಂತ ಮಾಧ್ಯಮಗಳು ಒಂದೇ ರೀತಿಯ ಕಾಯಿಲೆಯಿಂದ ಬಳಲುತ್ತಿವೆ

ಟೊಳ್ಳು ಪ್ರಚಾರ, ಪೊಳ್ಳು ಮಾಧ್ಯಮ



ವಿಶ್ಲೇಷಣೆ

ಕೃಷ್ಣ ಪ್ರಸಾದ್

ಕರ್ನಾಟಕದ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಈ ಎರಡು ತಿಂಗಳಿನಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಹಲವಾರು ರೀತಿಯಲ್ಲಿ ವಿಶ್ಲೇಷಣೆ ಮಾಡಿವೆ. ಈ ಫಲಿತಾಂಶಕ್ಕೆ ತಮಗೆ ಅನುಕೂಲಕರವಾದ ಹಲವಾರು ಕಾರಣಗಳನ್ನು ಸಹ ಕೊಟ್ಟುಕೊಂಡಿವೆ. ಆದರೆ ಎಲ್ಲರೂ ಒಂದು ಪ್ರಶ್ನೆಯನ್ನು ಕೇಳಲು ಮಾತ್ರ ಹಿಂಜರಿಯುತ್ತಿದ್ದಾರೆ. ಅದೆಂದರೆ, 'ಕನ್ನಡಿಗರು ಇಂತಹ ನಿರ್ಣಾಯಕ ತೀರ್ಪು ನೀಡಿದ್ದು ಸುದ್ದಿ ಮಾಧ್ಯಮದ ಕಾರಣದಿಂದಲೋ ಅಥವಾ ಅದಕ್ಕೆ ಹೊರತಾಗಿಯೋ?'

ಬಹುಶಃ ಹಿಂದಿನ 9 ವರ್ಷಗಳಲ್ಲಿ ಮುಖ್ಯವಾಹಿನಿಯ ಮಾಧ್ಯಮಗಳು ನಿರ್ವಹಿಸಿದ ವಂಚಕ ಪಾತ್ರವು ಮನೆ ಮಾತಾಗಿರುವುದರಿಂದ, ಈ ವಿಷಯವನ್ನು ಉಲ್ಲೇಖಿಸದಿರುವುದೇ ಕ್ಷೇಮ ಎಂದು ಅವು ಭಾವಿಸಿರಬಹುದು. ಆದರೆ ಬಿಜೆಪಿಯ ಸೋಲಿನ ಪ್ರಮಾಣವನ್ನು ನೋಡಿದಾಗ, ಜನಾದೇಶವನ್ನು ನಿರ್ಧರಿಸುವಲ್ಲಿ ಸುದ್ದಿ ಮಾಧ್ಯಮಗಳು ಎಷ್ಟು ದುರ್ಬಲ, ಎಷ್ಟು ನಿಷ್ಪ್ರಯೋಜಕ, ಎಷ್ಟು ಅಪ್ರಸ್ತುತವಾಗಿ ವರ್ತಿಸಿದವು ಎಂಬುದು ಎದ್ದು ಕಾಣುತ್ತದೆ.

ಅಂದರೆ ಇದರ ಅರ್ಥ, ಇಲ್ಲಿ ಮಾಧ್ಯಮಗಳು ಯಾವ ಪಾತ್ರವನ್ನೂ ವಹಿಸಲಿಲ್ಲ ಎಂದಲ್ಲ ಅಥವಾ ಎಲ್ಲಾ ಮಾಧ್ಯಮಗಳು ಕಪಟತನದಿಂದ ನಡೆದುಕೊಂಡವು ಎಂದೂ ಅಲ್ಲ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಏಳಲು ಕಾರಣವಾದ ಅಂಶಗಳಲ್ಲಿ ಸುದ್ದಿ ಮಾಧ್ಯಮಗಳ ಪಾತ್ರವೂ ಒಂದಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಮಾಧ್ಯಮಗಳು ಸೂಚಿಸಿದ ಮಾರ್ಗದಲ್ಲಿ ನಡೆಯದೆ, ಅವು ಬೀಸಿದ ಬಲೆಗೆ ಬೀಳದೆ, ಓದುಗರು ಮತ್ತು ವೀಕ್ಷಕರು ತಮ್ಮ ಬುದ್ಧಿವಂತಿಕೆಗೆ ತಕ್ಕಂತೆ ಮತ ಚಲಾಯಿಸಿದ್ದು ಮಾತ್ರ ಬಹಳ ದೊಡ್ಡ ಸಾಧನೆ.

ಚುನಾವಣೆಗೆ ಮುನ್ನ ಬಹುತೇಕ ಪತ್ರಿಕೆಗಳು ಹಾಗೂ ಸುದ್ದಿವಾಹಿನಿಗಳು ಹೇಗೆ ವರ್ತಿಸಿದವು ಎಂಬುದು ರಹಸ್ಯವೇನಲ್ಲ. ಒಂದೇ ರಾಗ, ಒಂದೇ ಹಾಡು: ಮಿಷನ್ 150, ಮೋದಿ ಬ್ರಹ್ಮಾಸ್ತ್ರ, ಶಾ ಆಟ ಶುರು, ಯೋಗಿ ಹವಾ, ಡಬಲ್ ಎಂಜಿನ್ ಧಮಾಕ, ಚುನಾವಣೆ ಸಮೀಪಿಸುತ್ತಿದ್ದಂತೆ ಗಂಟೆಗಟ್ಟಲೆ ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಪ್ರಸಾರ, ಪುಟಗಟ್ಟಲೆ ಅಮಿತ್ ಶಾ ಸಂದರ್ಶನ, ನೋಡಿದಲ್ಲೆಲ್ಲ ಬಿಜೆಪಿ ಜಾಹೀರಾತು... ಸಾಮಾಜಿಕ ಜಾಲತಾಣಗಳಲ್ಲಿ ಯಥಾಪ್ರಕಾರ ಇವೆಲ್ಲ 'ವೈರಲ್'.

ಒಂದು ಪ್ರಮುಖ ಚಾನೆಲ್‌ನಲ್ಲಿ 'ಪ್ರಧಾನಿಯವರ ಅಬ್ಬರದ ಪ್ರಚಾರ' ಶೀರ್ಷಿಕೆಯಡಿ ಸುಮಾರು 68 ಗಂಟೆ ನರೇಂದ್ರ ಮೋದಿ ಅವರ ದರ್ಶನ. ಇನ್ನೊಂದರಲ್ಲಿ, ಪ್ರತಿ ಮಧ್ಯಾಹ್ನ ಮೋದಿ ಅವರ ವರ್ಚಸ್ಸಿನ ಕುರಿತು ಅರ್ಧ ಗಂಟೆ ಭಜನೆ. ರಾತ್ರಿ ಮರುಪ್ರಸಾರ. ಪತ್ರಿಕೆಯೊಂದರಲ್ಲಿ ದಿನವೊಂದಕ್ಕೆ ಬಿಜೆಪಿ ಕುರಿತು 20ರಿಂದ 30 ವರದಿಗಳು ಪ್ರಕಟವಾದರೆ, ಕಾಂಗ್ರೆಸ್‌ಗೆ ಸಂಬಂಧಿಸಿದ ಸುದ್ದಿ ಪ್ರಕಟವಾಗುತ್ತಿದ್ದುದು ಹೆಚ್ಚೆಂದರೆ ಎರಡು. ಇದು ಸಾಲದು ಎಂಬಂತೆ, ಕಾಂಗ್ರೆಸ್‌ನಲ್ಲಿ ಕಿತ್ತಾಟ, ಅತಂತ್ರ ತೀರ್ಪು ಬಂದರೆ ಜೆಡಿಎಸ್‌ಗೆ ನಿರ್ಣಾಯಕ ಪಾತ್ರ ಎಂದೆಲ್ಲ ಮಾಧ್ಯಮಗಳು ಪದೇಪದೇ ಬಿಂಬಿಸಿದವು. ಇದೆಲ್ಲದರ ಹಿಂದೆ ಮೂರು ವರ್ಷಗಳ ಸಿದ್ಧತೆ ಇತ್ತು. ತಬ್ಲಿಗ್ ಜಮಾತ್, ಹಿಜಾಬ್, ಹಲಾಲ್, ಆಜಾನ್, ಲವ್ ಜಿಹಾದ್‌ನಂತಹ ವಿಷಯಗಳಿದ್ದವು.

ಈ ಮಟ್ಟದ ನಿರಂತರ ಏಕಪಕ್ಷೀಯ ಪ್ರಸಾರಕ್ಕೆ ಹಣ, ಸಿದ್ಧಾಂತ, ಭಯ, ಭಕ್ತಿ, ಬೆದರಿಕೆಯಂತಹ ಯಾವ ಕಾರಣ ಬೇಕಾದರೂ ಆಗಿರಬಹುದು. ಇದಕ್ಕೆ ರಾಜಕಾರಣಿಗಳು, ಸಂಬಂಧಪಟ್ಟ ಮಾಧ್ಯಮಗಳ ಮಾಲೀಕರು, ಸಂಪಾದಕರು, ಜಾಹೀರಾತುದಾರರಂತಹ ಯಾರು ಬೇಕಾದರೂ ಹೊಣೆ ಆಗಿರಬಹುದು. ಏನೇ ಇರಲಿ, ಯಾರೇ ಇರಲಿ ಅದರ ಹಿಂದಿದ್ದ ಸಂದೇಶ ಒಂದೇ: ಅದೆಂದರೆ, ಬಿಜೆಪಿ ಗೆಲುವು ನಿಶ್ಚಿತ, ಮತ ಎಣಿಕೆಯಷ್ಟೇ ಬಾಕಿ. ರಾಜ್ಯದ ಮತದಾರರು ಈ ಟೊಳ್ಳು ಪ್ರಚಾರವನ್ನು ನಿರ್ಲಕ್ಷಿಸಿ ಬರೀ ಬಿಜೆಪಿಯನ್ನು ಸೋಲಿಸಲಿಲ್ಲ, ಅದು ಪೋಷಿಸಿದ ಪೊಳ್ಳು ಮಾಧ್ಯಮವನ್ನೂ ತಿರಸ್ಕರಿಸಿದ್ದಾರೆ.

ನಿಜ, ದೇಶದ ಪ್ರಧಾನಿಯೇ ಕಣಕ್ಕೆ ಇಳಿದಾಗ ಪ್ರಚಾರ ಕೊಡದೆ ಅವರನ್ನು ನಿರ್ಲಕ್ಷಿಸುವುದು ಅಸಾಧ್ಯ. ಆದರೆ ಮಾಧ್ಯಮಗಳಿಗೆ ಇರಬೇಕಾದ ಪ್ರಶ್ನಿಸುವ ಸಾಮರ್ಥ್ಯಕ್ಕೆ ಏನಾಗಿತ್ತು? ಟಿಪ್ಪು ಸುಲ್ತಾನನನ್ನು ಒಕ್ಕಲಿಗರು ಕೊಂದರು ಎಂದು ಯಾರೋ ಅವಿವೇಕಿ ಕಥೆ ಕಟ್ಟಿದರೆ, ಆ ಸುಳ್ಳನ್ನು ಮೋದಿ ಅವರು ಅನುಮೋದಿಸುವುದೇ? ಸ್ವತಂತ್ರ ಭಾರತದಲ್ಲಿ ಮಾಧ್ಯಮಗಳು ಅಧಿಕೃತ 'ನಕಲಿ ಸುದ್ದಿ' (ಫೇಕ್ ನ್ಯೂಸ್) ಪ್ರಸಾರ ಮಾಡಿದ್ದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಇನ್ನೊಂದಿಲ್ಲ. ಇಷ್ಟೆಲ್ಲ ಶ್ರಮಿಸಿದರೂ ಗೌಡರ ಪಾಳಯದಲ್ಲಿ ಬಿಜೆಪಿಗೆ ಮಾಧ್ಯಮಗಳು ಗಿಟ್ಟಿಸಿಕೊಟ್ಟಿದ್ದು ಮೊಟ್ಟೆ.

ಚುನಾವಣೆ ಘೋಷಣೆ ಆದ ನಂತರ, ಹಿಂದೆ ಯಾರೂ ಕೇಳಿಲ್ಲದ ಸಂಸ್ಥೆಗಳ ಮಹಾ, ಮೆಗಾ ಸಮೀಕ್ಷೆಗಳ ಮೂಲಕ ಮಾಧ್ಯಮಗಳು ಬಿಜೆಪಿಯ ಪರವಾಗಿ ಕಹಳೆಯನ್ನು ಊದುತ್ತಿದ್ದವು. ಒಂದು ಚಾನೆಲ್‌ನಲ್ಲಂತೂ ಬಿಜೆಪಿ ಪರವಾದ ಅಂಕವು ಆಟೊ ಮೀಟರ್‌ನಂತೆ ಏರುತ್ತಲೇ ಹೋಯಿತು. ರಾಜಕೀಯ ಅರ್ಥಶಾಸ್ತ್ರಜ್ಞ ಪ್ರವೀಣ್ ಚಕ್ರವರ್ತಿ ಅವರ ಪ್ರಕಾರ, ಶೇ 30ರಷ್ಟು ಮತದಾರರು ತಾವು ಯಾರಿಗೆ ಮತ ಹಾಕಬೇಕು ಎಂಬುದನ್ನು ಮತದಾನದ ಕೊನೆಯ ಗಳಿಗೆಯಲ್ಲಿ ನಿರ್ಧರಿಸುತ್ತಾರೆ. ಕಾಂಗ್ರೆಸ್‌ನ ಅದೃಷ್ಟ ಹೇಗಿತ್ತೆಂದರೆ, ರಾತ್ರಿ ಒಂಬತ್ತಕ್ಕೆ ನೋಡಿದ ಬಾವಿಗೆ ಕನ್ನಡಿಗರು ಮರುದಿನ ಹಗಲಿನಲ್ಲಿ ಬೀಳಲಿಲ್ಲ!

ಇದಕ್ಕೆ ವ್ಯತಿರಿಕ್ತವಾಗಿ ಸುದ್ದಿ ಮಾಧ್ಯಮಗಳು ಕಾಂಗ್ರೆಸ್ ಪರವಾಗಿ 'ಬ್ಯಾಟಿಂಗ್' ಮಾಡಿದ್ದಿದ್ದರೆ ಅದೂ ಸರಿಯಾಗುತ್ತಿರಲಿಲ್ಲ. ಹಾಗೆ ಮಾಡುವುದು ಕೂಡ ತಪ್ಪು. ಒಂದು ಪುಟ್ಟ ಕನ್ನಡ ಪೋರ್ಟಲ್ ನಾಗರಿಕರನ್ನು ಪತ್ರಕರ್ತರಂತೆ ಬಳಸಿಕೊಂಡು ಚುನಾವಣಾ ಪ್ರವೃತ್ತಿಯನ್ನು ದೊಡ್ಡ ವಾಹಿನಿಗಳಿಗಿಂತ ಹೆಚ್ಚು ನಿಖರವಾಗಿ ಮತ್ತು ಸಮಗ್ರವಾಗಿ ಹೇಗೆ ವರದಿ ಮಾಡಿತು ಎಂಬುದು ವಿಚಾರ ಮಾಡಬೇಕಾದ ಅಂಶ. ಪತ್ರಿಕೋದ್ಯಮ ಹಾಗೂ ಪತ್ರಿಕಾ ಉದ್ಯಮದ ನಡುವೆ ಇರುವ ಅಂತರ ಗೊತ್ತಿರುವವರಿಗೆ ಇದಕ್ಕೆ ಉತ್ತರ ಸುಲಭವಾಗಿ ಗೊತ್ತಾಗುತ್ತದೆ.



ದೇಶದಾದ್ಯಂತ ಮಾಧ್ಯಮಗಳು ಒಂದೇ ರೀತಿಯ ಕಾಯಿಲೆಯಿಂದ ಬಳಲುತ್ತಿವೆ. ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕದಲ್ಲಿ 180 ದೇಶಗಳ ಪೈಕಿ ಭಾರತದ ಸ್ಥಾನ 161ಕ್ಕೆ ಇಳಿದಿದೆ. ಆದರೆ ಕರ್ನಾಟಕದಲ್ಲಿ ಮಾಧ್ಯಮ ಸ್ವಾತಂತ್ರ್ಯವು ತನ್ನ ವಸ್ತುನಿಷ್ಠತೆ ಹಾಗೂ ಸಮತೋಲನವನ್ನು ಕಳೆದುಕೊಂಡು ಚಿಂತಾಜನಕ ಸ್ಥಿತಿಯಲ್ಲಿದೆ. ಜನರ ಧ್ವನಿಯಾಗುವ ಬದಲು ಅಧಿಕಾರದಲ್ಲಿರುವ ಜನರ ಧ್ವನಿಯಾಗಿ ಮಾರ್ಪಟ್ಟಿದೆ. ಒಂದು ಸಮುದಾಯದ ಜನರನ್ನು ಇನ್ನೊಂದು ಸಮುದಾಯದ ಜನರ ವಿರುದ್ಧ ಎತ್ತಿ ಕಟ್ಟಿ, ಸಾಮಾನ್ಯ ಜನರ ನೋವನ್ನು ಕಡೆಗಣಿಸಿ, ಯಾರದೋ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದ ಪತ್ರಕರ್ತರಿಗೆ ಮತದಾರರು ತಕ್ಕ ಪಾಠವನ್ನೇ ಕಲಿಸಿದ್ದಾರೆ.

ಹಿಂದೆಯೂ ಮಾಧ್ಯಮಗಳು ಚುನಾವಣೆಯ ಮೇಲೆ ಬೀರುತ್ತಿದ್ದ ಪ್ರಭಾವ ಅಷ್ಟರಲ್ಲೇ ಇತ್ತು, ಈಗಿನ ಮೊಬೈಲ್ ಯುಗದಲ್ಲಂತೂ ಇದು ಇನ್ನಷ್ಟು ಕಡಿಮೆ ಎಂದು ವಾದಿಸಬಹುದು. ನಿಜ, ಆದರೆ 2019ರಲ್ಲಿ ಲೋಕನೀತಿ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ, ಸಾಮಾಜಿಕ ಮಾಧ್ಯಮಗಳ ಜನಪ್ರಿಯತೆಯು ಮುಖ್ಯವಾಹಿನಿಗಿಂತ ಮೂರುಪಟ್ಟು ಹೆಚ್ಚಾಗಿ ಬೆಳೆಯುತ್ತಿದ್ದರೂ, ಅದರ ರಾಜಕೀಯ ಉಪಯೋಗ ಶೇ 25ರಷ್ಟು ಮಾತ್ರ. ಅಂದರೆ, ಮುಖ್ಯವಾಹಿನಿ ಮಾಧ್ಯಮಗಳಿಗೆ ಇನ್ನೂ ಮಹತ್ವದ ಸ್ಥಾನ ಇದೆ ಎಂದರ್ಥ. ರಾಜ್ಯದ ಐದು ಕೋಟಿ ಮತದಾರರಲ್ಲಿ ಪತ್ರಿಕೆಗಳು ಮತ್ತು ಚಾನೆಲ್‌ಗಳು ಪ್ರತಿನಿತ್ಯ ಸುಮಾರು ಎರಡು ಕೋಟಿ ಜನರನ್ನು ತಲುಪುತ್ತವೆ. ಜವಾಬ್ದಾರಿಯಿಂದ ನಡೆದುಕೊಳ್ಳಲು ಇದೇ ಪ್ರೇರಣೆಯಾಗಬೇಕು.

ಇದು ಮುಗಿದ ಅಧ್ಯಾಯ, ಮತ್ತೆ ಕೆದಕುವುದರಿಂದ ಏನು ಪ್ರಯೋಜನ ಅನ್ನಿಸಬಹುದು. ಕಾರಣವಿದೆ. ಸುದ್ದಿ ಮಾಧ್ಯಮಗಳು ಜನರ ಕಣ್ಣು ಮತ್ತು ಕಿವಿಗಳು. ಧ್ವನಿಯಿಲ್ಲದವರ ಧ್ವನಿ. ಸುದ್ದಿ ನಿರ್ಮಾಪಕರು ಮತ್ತು ಸುದ್ದಿ ಗ್ರಾಹಕರ ನಡುವಿನ ಸಂಬಂಧವು ನಂಬಿಕೆಯ ಮೇಲೆ ನಿಂತಿದೆ. ಈ ವಿಶ್ವಾಸವನ್ನು ಬೇರೊಬ್ಬರಿಗೆ ಹರಾಜು ಹಾಕಿದರೆ ಏನಾಗುತ್ತದೆ ಅನ್ನುವುದಕ್ಕೆ 135–66 ಸ್ಥಾನಗಳೇ ಸಾಕ್ಷಿ. ಸೋತ ಬಿಜೆಪಿ ಆತ್ಮಾವಲೋಕನ ಮಾಡಿಕೊಳ್ಳತೊಡಗಿದೆ. ಆದರೆ ಮಾಧ್ಯಮಗಳು?

1964ರಲ್ಲಿ ಪ್ರಕಟವಾದ 'ಅಂಡರ್‌ಸ್ಟ್ಯಾಂಡಿಂಗ್ ಮೀಡಿಯಾ' ಎಂಬ ಪುಸ್ತಕದಲ್ಲಿ, ಪ್ರಸಿದ್ಧ ಸಂವಹನಕಾರ ಮಾರ್ಷಲ್ ಮೆಕ್ಲುಹಾನ್, ಮಾಧ್ಯಮವೇ ಒಂದು ಸಂದೇಶ ಎಂದು ಪ್ರತಿಪಾದಿಸಿದರು. ಇದರ ಅರ್ಥ, ಮಾಧ್ಯಮಗಳು ಒಯ್ಯುವ ವಿಷಯಗಳೇ ಸಂದೇಶವಲ್ಲ, ಸ್ವತಃ ಮಾಧ್ಯಮದ ಸ್ವರೂಪವೇ ಒಂದು ಸಂದೇಶ. 2023ರ ಚುನಾವಣೆಯ ಸಂದರ್ಭದಲ್ಲಿ, ಸುದ್ದಿ ಮಾಧ್ಯಮವು ಕನ್ನಡಿಗರ ಮನಸ್ಸನ್ನು ಸಕಾರಾತ್ಮಕವಾಗಿ ರೂಪಿಸಬೇಕಾದಲ್ಲಿ ತೋರಿದ ನೈತಿಕ, ಬೌದ್ಧಿಕ ಮತ್ತು ವೃತ್ತಿಪರ ಅಸಮರ್ಪಕತೆಯು ಎದ್ದು ಕಾಣುತ್ತದೆ.

ಚುರುಮುರಿ



ನಿಜವಾದ ಸೂಪರ್‌ಸ್ಟಾರು

• ಸಿದ್ದಯ್ಯ ಹಿರೇಮಠ

'ಕನ್ನಡ, ಹಿಂದಿ, ತಮಿಳು, ತೆಲುಗು ಚಿತ್ರರಂಗದ ಘಟಾನುಘಟಿಗಳಿಗೆಲ್ಲಾ ವಿಂಬಲ್ಡನ್ ಮ್ಯಾಲೆ ಭಾಳ ಸಿಟ್ ಬಂದೈತಂತಲ್ಲೋ ಮಡುವಾಳೀ?'

'ಸಿನಿಮಾದೌರಿಗೂ ಟೆನಿಸ್ ಆಡಸೂ ವಿಂಬಲ್ಡನ್‌ನೌರಿಗೂ ಏನ್ ಸಂಬಂಧ ಐತ್ಲೋ ಮಾರಾಯ?' ಕೇಳಿದ ಕೌಳಿಕಾಯಿ ಬಸ್ಯಾ.

'ಹೌದ್ ಮತ್ತ. ಟೆನಿಸ್ ಆಡೋ ರೋಹನ್ ಬೋಪಣ್ಣ ಅವರನ್ನು ಈ ವಿಂಬಲ್ಡನ್‌ನವರು ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಭಾರತದ ಸೂಪರ್‌ಸ್ಟಾರ್ ಅಂತ ಹೊಗಳಿದ್ದಾರೆ. ಅದೂ ಅಚ್ಚ ಕನ್ನಡದಲ್ಲಿ!'

'ಅಭಿಮಾನಿಗಳಿಂದ ಸೂಪರ್‌ಸ್ಟಾರ್ ಅಂತ ಹೊಗಳಿಸಿಕೊಳ್ತಿದ್ದ ಈ ರಜನಿಕಾಂತು, ಅಮಿತಾಭ್ ಬಚ್ಚನ್ನು, ಅಮೀರ್, ಶಾರುಖ್, ಸಲ್ಮಾನ್ ಖಾನು, ಹೃತಿಕ್ ರೋಷನ್ ಅವರನ್ನೆಲ್ಲಾ ಪಕ್ಕಕ್ಕೆ ತಳ್ಳಿ, ಈ ರೋಹನ್ ಅವರೇ ದೇಶದ ಸೂಪರ್‌ಸ್ಟಾರ್ ಅಂತ ಹೊಗಳಿದ್ದು ಸಿನಿಮಾ ದೌರಿಗೆ ಇರುಸುಮುರುಸು ಉಂಟು ಮಾಡಿರಬಹುದೇನೋ?' ಮಡುವಾಳಿ ಮತ್ತೆ ಸೇರಿಸಿದ.

'ಅವರು ಏನರೇ ಅನ್ಕೊಳ್ಳಿ, ಈ ಸಿನಿಮಾದೌರು ಎಷ್ಟೇ ಚೆನ್ನಾಗಿ ನಟನೆ ಮಾಡಿದರೂ ಅದು ಅವರ ಹೊಟ್ಟೆಪಾಡು. ಅದಕ್ಕ, ನಂಗಂತೂ ದೇಶದ ಗೌರವ ಎತ್ತಿಹಿಡಿಯುವ ಕ್ರೀಡಾಪಟುಗಳು, ವಿಜ್ಞಾನಿಗಳು, ಅನಾರೋಗ್ಯಪೀಡಿತ ಜನಸಾಮಾನ್ಯರ ಸೇವೆ ಮಾಡುವ ದಾದಿಯರು, ಅಕ್ಷರ ಕಲಿಸುವ ಶಿಕ್ಷಕರೇ ನಿಜವಾದ ಸೂಪರ್ ಸ್ಟಾರ್‌ಗಳು ಅನ್ನಸ್ತಾರ ನೋಡಪಾ' ಬಸ್ಯಾ ಉಸುರಿದ.

'ಅಂತೂ ಇಂತೂ ಇದೇ ಫಸ್ಟ್ ಟೈಂ ಸಿನಿಮಾದವರನ್ನ ಹೊರತುಪಡಿಸಿ, ಬೇರೆಯವರೂ ಸೂಪರ್‌ಸ್ಟಾರ್‌ಗಳಾಗಿರ್ತಾರೆ ಅಂತ ಹೇಳಾಕ ಆ ಬ್ರಿಟಿಷ್‌ನವರ ನಾಡಿನ ವಿಂಬಲ್ಡನ್‌ನವರೇ ಮುಂದಾದ್ರಲ್ಲ, ಅದೂ ಖುಷಿ ವಿಚಾರ ನೋಡು. ಇನ್ನೊಂದ್ ವಿಷಯ ಏನಪ ಅಂದ್ರ, ನಮ್ಮ ದೇಶಕ್ಕ ಸ್ವಾತಂತ್ರ್ಯ ಸಿಕ್ಕಿ 76 ವರ್ಷ ಮುಗಿಯಾಕ ಬಂತು. ಬ್ರಿಟಿಷರಿಗೆ ಭಾರತ ಮೂಲದವರೇ ಪ್ರಧಾನಿ ಆಗ್ಯಾರ. ಆದ್ರೂ ನಮಗಿನ್ನೂ ಕೆಲವೊಂದ್ ವಿಷಯಾನ ಈ ಬ್ರಿಟಿಷರೇ ಹೇಳುವಂಥ ಸ್ಥಿತಿ ಐತಿ ನೋಡು' ಎಂದು ಹೇಳುತ್ತಲೇ ಮುಂದೆ ಸಾಗಿದ.

ದಿನದ ಟ್ವೀಟ್


ಮೇಧಾವಿಯ ಕರಾಮತ್ತು...?!



ವಿರೋಧಪಕ್ಷಗಳ ಮೈತ್ರಿಕೂಟಕ್ಕೆ I.N.D.I.A. ಎಂಬ ಹೆಸರನ್ನು ಇಡಲು ಯಾರೇ ಸಲಹೆ ಕೊಟ್ಟಿರಲಿ, ಅವರೊಬ್ಬ ಮೇಧಾವಿಯೇ ಸರಿ ಮತ್ತು 'ಇಂಡಿಯಾಗಾಗಿ I.N.D.I.A.ವನ್ನು ಆಯ್ಕೆ ಮಾಡಿ' ಎಂಬುದು ಇದಕ್ಕೆ ಸರಳವಾದ ಟ್ಯಾಗ್‌ಲೈನ್ ಆಗಬಹುದು. I.N.D.I.A. V/s ಎನ್‌ಡಿಎ ಕರಾಮತ್ತು...

ಸುಪ್ರಿಯಾ ಭಾರದ್ವಾಜ್, ಪತ್ರಕರ್ತೆ

ಕಿಡಿನುಡಿ



ಬೆಂಗಳೂರಿನಲ್ಲಿ ಕಡು ಭ್ರಷ್ಟಾಚಾರದ ಸಮ್ಮೇಳನ ನಡೆದಿದೆ. ಭ್ರಷ್ಟರು ಒಂದೇ ಸೂರಿನಡಿ ಸೇರಿದ್ದಾರೆ. ದೇಶದಲ್ಲಿ ಭ್ರಷ್ಟಾಚಾರಕ್ಕೆ ಮತ್ತಷ್ಟು ಉತ್ತೇಜನ ನೀಡುವುದೇ ಈ ಸಭೆಯ ಮೂಲ ಉದ್ದೇಶ ಎಂದು ಜನರೇ ಹೇಳುತ್ತಿದ್ದಾರೆ.

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಭಾನುವಾರ, 19-7-1998

• ತೆರಿಗೆ ಪಾವತಿ ಅವಧಿ ವಿಸ್ತರಿಸಿ ಕೋಟ್ಯಂತರ ನಷ್ಟ

ಬೆಂಗಳೂರು, ಜುಲೈ 18– ಎರಡು ಖಾಸಗಿ ಕಾರ್ಖಾನೆಗಳಿಗೆ ಸುಮಾರು 287 ಕೋಟಿ ರೂಪಾಯಿಗಳಷ್ಟು ಮಾರಾಟ ತೆರಿಗೆ ಪಾವತಿ ಅವಧಿಯನ್ನು ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಇದರಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಚ್.ಕೆ.ಪಾಟೀಲ್ ಆರೋಪಿಸಿದರು.

'ಬೆಂಗಳೂರಿನ ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೋ) ಮತ್ತು ದಾಂಡೇಲಿಯ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಗೆ ತೆರಿಗೆ ಪಾವತಿ ಅವಧಿಯನ್ನು ವಿಸ್ತರಿಸಿರುವುದರಿಂದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟವಾಗಿದೆ. ಸರ್ಕಾರದ ಈ ಕ್ರಮವನ್ನು ನ್ಯಾಯಾಂಗ ಅಥವಾ ಸಿಬಿಐ ತನಿಖೆಗೆ ಒಳಪಡಿಸಬೇಕು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಪಡಿಸಿದರು.

• ಪಟೇಲ್ ರಾಜೀನಾಮೆಗೆ ಹೆಗಡೆ ಒತ್ತಾಯ

ಬೆಂಗಳೂರು, ಜುಲೈ 18– 'ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ಕೆಲಸದ ಒತ್ತಡವನ್ನು ತಾಳಿಕೊಳ್ಳಲು ಸಾಧ್ಯವಾಗದಿದ್ದರೆ ರಾಜೀನಾಮೆ ನೀಡಿ ಬೇರೆಯವರಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು' ಎಂದು ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಇಂದು ಇಲ್ಲಿ ಸಲಹೆ ಮಾಡಿದರು.

ಭಾರತೀಯ ವಾಣಿಜ್ಯೋದ್ಯಮ ಸಂಘಗಳ ಒಕ್ಕೂಟವು (ಎಫ್‌ಐಸಿಸಿಐ) ಏರ್ಪಡಿಸಿದ್ದ ವಿಚಾರಸಂಕಿರಣವನ್ನು ಉದ್ಘಾಟಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಮಕೃಷ್ಣ ಹೆಗಡೆ, 'ಕಳೆದ ಆರು ತಿಂಗಳಲ್ಲಿ ರಾಜ್ಯ ಸರ್ಕಾರವು ಪ್ರಮುಖ ಉದ್ಯಮಗಳಿಗೆ ಸಂಬಂಧಿಸಿ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಇದರಿಂದಾಗಿ ಹಲವು ಉದ್ಯಮಗಳು ರಾಜ್ಯದಿಂದ ವಲಸೆ ಹೋಗಿವೆ' ಎಂದು ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 19-7-1973

• ಭಂಗಿಗಳಿಂದ ತಲೆ ಮೇಲೆ ಮಲ ಹೊತ್ತು ಶುದ್ಧಿ ಮಾಡುವ ಕಾರ್ಯ ಆಗಸ್ಟ್ 15ರಿಂದ ಬಂದ್

ಬೆಂಗಳೂರು, ಜುಲೈ 18– ತಲೆಯ ಮೇಲೆ ಮಲ ಹೊತ್ತು, ಶುದ್ಧಿ ಮಾಡುವ ಭಂಗಿಗಳು ಆಗಸ್ಟ್ 15ರಿಂದ ಈ ಕೆಲಸ ನಿಲ್ಲಿಸಿ ಬಿಡುತ್ತಾರೆ ಎಂದು ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಈ ಸಂಬಂಧದಲ್ಲಿ ಕೆಲವು ತಿಂಗಳುಗಳ ಹಿಂದೆಯೇ ಪುರಸಭೆಗಳಿಗೆ ಸೂಚನೆ ನೀಡಲಾಗಿದ್ದು, ಎಲ್ಲಿ ಯಾವ ಮನೆಗಳಲ್ಲಿ ಕಕ್ಕಸು ವ್ಯವಸ್ಥೆಯಿಲ್ಲವೋ ಅಂಥ ಕಡೆ ಫ್ಲಷ್‌ಔಟ್ ಕಕ್ಕಸು, ಅದಿಲ್ಲದ ಕಡೆ ಕಕ್ಕಸುಗುಂಡಿಗಳನ್ನು ಮನೆ ಮಾಲೀಕರು ಕಟ್ಟಿಸುವಂತೆ ಮಾಡಬೇಕೆಂದು ಸರ್ಕಾರ ಆದೇಶ ನೀಡಿತ್ತು.

• ಲೋಕೋಪಯೋಗಿ ಇಲಾಖೆ ಹಾಸನ ವಿಭಾಗದಲ್ಲಿ ಭಾರಿ ಹಣ ಅವ್ಯವಹಾರದ ಆರೋಪ

ಬೆಂಗಳೂರು, ಜುಲೈ 18– ರಾಜ್ಯದ ಲೋಕೋಪಯೋಗಿ ಇಲಾಖೆಯ ಹಾಸನ ವಿಭಾಗದಲ್ಲಿ ಭಾರಿ ಪ್ರಮಾಣದ ಹಣದ ಅವ್ಯವಹಾರ ನಡೆದಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ.ದೇವೇಗೌಡರು ಆಪಾದಿಸಿದ್ದಾರೆ.

ಸಂಗತ

ಗುರುವಿನ ಮೇಲೆ ಗುರ್ರ್ ಎನ್ನುವ ಮುನ್ನ...

ಒಳ್ಳೆಯ ಶಿಕ್ಷಕರನ್ನು ರೂಪಿಸುವುದು ನಮ್ಮ ಕೈಯಲ್ಲೇ ಇದೆ

• ಸದಾಶಿವ್ ಸೊರಟೂರು

ಶಿಕ್ಷಕ ಮಿತ್ರರೊಬ್ಬರು ಮೊನ್ನೆಯಷ್ಟೇ ಅವರಿಗಾದ ಒಂದು ಅನುಭವ ಹೇಳಿಕೊಂಡರು. ತಮ್ಮ ಶಾಲೆಯ ವಿದ್ಯಾರ್ಥಿಯೊಬ್ಬನ ಪೋಷಕರನ್ನು ಭೇಟಿಯಾಗಲು ಅವರ ಮನೆಗೆ ಹೋದಾಗ ನಡೆದ ಪ್ರಕರಣ ಇದು. ಪೋಷಕರ ಮನೆಯಲ್ಲಿ ಇದ್ದದ್ದು ಒಂದೇ ಕುರ್ಚಿಯಂತೆ. ಇವರು ಹೋದ ಸಮಯದಲ್ಲೇ ಅವರ ಮನೆಗೆ ಕಂದಾಯ ಇಲಾಖೆಯ ನೌಕರರೊಬ್ಬರು ಬಂದಿದ್ದರು. ಇರುವ ಒಂದು ಕುರ್ಚಿಯನ್ನು ಈ ಪೋಷಕರು ಆ ನೌಕರನಿಗೆ ಹಾಕಿ ಕೂರಿಸಿದ್ದರು. ಶಿಕ್ಷಕರನ್ನು ನಿಲ್ಲಿಸಿಯೇ ಮಾತನಾಡಿಸಿ ಕಳುಹಿಸಿದರು. ಈ ವೃತ್ತಾಂತ ಕೇಳಿ ತುಸು ಬೇಸರವಾಯಿತು. ಇಂತಹ ನೂರಾರು ನೌಕರರನ್ನು ಸಿದ್ಧಗೊಳಿಸಿ ಕಳುಹಿಸುವ ಮೇಷ್ಟ್ರು, ಅವರಿಗೆ ಅಲ್ಲಿ ಮುಖ್ಯ ಅನಿಸಲೇ ಇಲ್ಲ.

ಮಗು ನಿರಂತರವಾಗಿ ಹೋಂವರ್ಕ್ ಮಾಡದೇ ಇದ್ದದ್ದಕ್ಕೆ ಮೇಷ್ಟ್ರು ಜೋರು ಮಾಡಿದ್ದಾರೆ. ಬರೆಯಬೇಕು ಎಂದು ಗದರಿದ್ದಾರೆ. ಮಗು ಮರುದಿನ ಪೋಷಕರೊಂದಿಗೆ ಬಂದಿದೆ. ಎಲ್ಲರ ಮುಂದೆ ಜೋರು ಮಾಡಿ ಹೋಂವರ್ಕ್ ಕೇಳಿದ್ದರಿಂದ ಮಗುವಿಗೆ ಅವಮಾನವಾಯಿತಂತೆ. ಪೋಷಕರು ತಮ್ಮ ಮಗನ ಪರವಾಗಿ ಎಲ್ಲಾ ಮಕ್ಕಳ ಮುಂದೆ ಶಿಕ್ಷಕರ ಮೇಲೆ ರೇಗಾಡಿದ್ದಾರೆ. ಇದನ್ನು ಕೇಳಿಸಿಕೊಂಡ ಆ ಮಕ್ಕಳು ನಾಳೆಯಿಂದ ಶಿಕ್ಷಕರನ್ನು ಹೇಗೆ ನೋಡಬಹುದು? ಶಿಕ್ಷಕರು ಯಾವ ಹುರುಪಿನಿಂದ ಪಾಠ ಮಾಡಬಹುದು? ಬರೆದಿಲ್ಲ ಎಂದು ಹೇಳುವುದೂ ಅಪರಾಧವಾಯಿತೇ?

ಶಿಕ್ಷಕರ ಮಾತಿನ ಮೇಲೆಯೇ ಸಮಾಜ ನಡೆಯುವ ಕಾಲವೊಂದಿತ್ತು. ಗುರುಗಳನ್ನು ದೇವರಂತೆ ಕಾಣುತ್ತಿದ್ದ ಬೇಕಾದಷ್ಟು ಉದಾಹರಣೆಗಳು ನಮಗೆ ಸಿಗುತ್ತವೆ. ಆದರೆ ಈಗೇನಾಯಿತು? ಶಿಕ್ಷಕರ ಮೇಲಿನ ಗೌರವ ಕುಸಿಯುತ್ತಿರುವುದೇಕೆ? ಇದಕ್ಕೆಲ್ಲಾ ಶಿಕ್ಷಕರೇ ಕಾರಣ ಎನ್ನುವವರ ಸಂಖ್ಯೆ ದೊಡ್ಡದಿದೆ. ಅವರ ಪಾಲೂ ಇರಬಹುದಾದರೂ ಸಮಾಜದ ಪಾಲು, ವ್ಯವಸ್ಥೆಯ ಪಾಲು ಹೆಚ್ಚಾಗಿದೆ. ಗುರುವನ್ನು ಗುರ್ರ್ ಎಂದು ಹೆದರಿಸುವ ಕಾಲದಲ್ಲಿ ನಾವಿದ್ದೇವೆ. ಶಿಕ್ಷಕನನ್ನು ತೀರಾ ದೊಡ್ಡ ವ್ಯಕ್ತಿ ಎಂಬಂತೆ ಕಾಣದಿದ್ದರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಿ, ಜ್ಞಾನ ಕೊಟ್ಟು ಪೊರೆಯುವ ವ್ಯಕ್ತಿ ಅನ್ನುವ ಸೌಜನ್ಯದಿಂದ ನೋಡಿದರೂ ಸಾಕಾದೀತು!

ಶಿಕ್ಷಕರ ಕುರಿತು ಸಾಮಾನ್ಯರಲ್ಲಿ ಅನೇಕ ಬಗೆಯ ಧೋರಣೆಗಳು ಇರುತ್ತವೆ. ಬಿಟ್ಟಿ ಸಂಬಳ ಅನ್ನುವ ತನಕವೂ ಜನ ಮಾತನಾಡುತ್ತಾರೆ. ಯಥೇಚ್ಛ ರಜೆಗಳಿವೆ, ಅವರದು ಆರಾಮದಾಯಕ ಜೀವನ ಅನ್ನುತ್ತಾರೆ. ಹಾಗೆ ಮಾತಾಡಿದವರ ಮಗನಿಗೂ ಶಿಕ್ಷಕನೊಬ್ಬ ತಾಳ್ಮೆಯಿಂದ ತನ್ನ ಪಾಡಿಗೆ ತಾನು ಕಲಿಸುತ್ತಾ ಹೋಗುತ್ತಾನೆ. ಕಲಿಸುವ ಕೆಲಸ ಎಷ್ಟು ಕಷ್ಟದ್ದು ಎಂಬುದು ಹೆಚ್ಚಿನವರಿಗೆ ಅರಿವಾಗಲು ಸಾಧ್ಯವಿಲ್ಲ. ಅದೊಂದು ಧ್ಯಾನದಂತೆ. ಸರ್ಕಾರಿ ನೌಕರರ ಪೈಕಿ ಅತಿ ಕಡಿಮೆ ಅನುಕೂಲ ಪಡೆಯುತ್ತಿರುವುದು ಶಿಕ್ಷಕ ಮಾತ್ರ. ಆದರೆ ಇದು ಸಾಮಾನ್ಯರಿಗೆ ತಿಳಿದಿಲ್ಲ. ಶಿಕ್ಷಕರ ಮಹತ್ವದ ಬಗ್ಗೆ ಚೆನ್ನಾಗಿ ಮಾತನಾಡುವ ನಾವು ಅದೇ ಶಿಕ್ಷಕರನ್ನು ಗೌರವಿಸುವುದಿಲ್ಲ.

ಸಮಾಜದ ಮಧ್ಯದಿಂದಲೇ ಬರುವ ಶಿಕ್ಷಕನನ್ನು ನೀವು ಸಮಾಜದ ಹೊರತಾಗಿ ಹೇಗೆ ನೋಡಲು ಸಾಧ್ಯ? ಸಮಾಜದಲ್ಲಿ ಏನಿದೆಯೊ ಅದು ಅವನಲ್ಲೂ ಇರುತ್ತದೆ. ಒಳ್ಳೆಯ ವ್ಯವಸ್ಥೆಯಿಂದ ಒಳ್ಳೆಯ ಶಿಕ್ಷಕ ಬಂದಾನು! ನಾವೇ ಸರಿಯಿಲ್ಲದೆ ಬೇರೆಯವರನ್ನು ದೂರಬಹುದೇ? ಶಿಕ್ಷಕನನ್ನು ಪದೇ ಪದೇ ನಿರ್ಲಕ್ಷ್ಯ ಭಾವದಿಂದ ನೋಡುವುದರಿಂದ, ಶಿಕ್ಷಕರ ಮನಸ್ಸಿನಲ್ಲಿ ಎಂತಹ ಭಾವನೆಗಳು ಮೂಡಬಹುದು ಯೋಚಿಸಿ.

ಕೆಲವೇ ಕೆಲವು ಶಿಕ್ಷಕರು ಶಿಕ್ಷಕರಂತೆ ಇಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಸರಿಯಾಗಿ ಬರೆಯಲು ಬಾರದ, ಕರ್ತವ್ಯವನ್ನು ಸರಿಯಾಗಿ ನಿಭಾಯಿಸದ, ಸುಮ್ಮನೆ ಕಾಲಹರಣ ಮಾಡುವವರು ಇದ್ದಾರೆ. ಉಪವೃತ್ತಿ ಇಟ್ಟುಕೊಂಡು ಬೋಧನೆಯನ್ನು ಉಡಾಫೆ ಮಾಡುವವರೂ ಇದ್ದಾರೆ. ಅದನ್ನು ಇಲಾಖೆ ಸರಿಪಡಿಸಬೇಕು. ಅಂತಹ ಕೆಲವೇ ಕೆಲವು ಮಂದಿಯಿಂದ ಬಹುಪಾಲು ಪ್ರಾಮಾಣಿಕ ಶಿಕ್ಷಕರು ಅಪವಾದ ಹೊತ್ತುಕೊಳ್ಳಬೇಕಾಗಿದೆ.

ಯಾವ ನಾಡೂ ಅಲ್ಲಿನ ಶಿಕ್ಷಕರನ್ನು ಮೀರಿ ಬೆಳೆಯಲಾರದು. ಶಿಕ್ಷಕನ ನೋವು, ಬೇಸರವು ಸಮಾಜದ ನೋವು ಕೂಡ ಹೌದು. ವ್ಯವಸ್ಥೆಯ ಮೇಲೆ ಅದರ ಪರಿಣಾಮ ಇದ್ದೇ ಇರುತ್ತದೆ. ಮನೆಯಿಂದ ಸಮಾಜವನ್ನು ತಲುಪುವ ಮಗು, ಶಿಕ್ಷಕರ ಮೂಲಕವೇ ಸಾಗಬೇಕು. ಇಲ್ಲಿ ಎಲ್ಲರಿಗಿಂತ ಅವನ ಜವಾಬ್ದಾರಿ ಹೆಚ್ಚಿನದು.



ಒಂದು ಕಾಲದಲ್ಲಿ ಗುರುವಿಗೆ ಅತ್ಯುನ್ನತ ಸ್ಥಾನ ಕೊಟ್ಟಿದ್ದ ಭಾರತ ಈಗ ಶಿಕ್ಷಕರಿಗೆ ಉತ್ತಮ ಗೌರವ ಇರುವ ದೇಶಗಳ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಇಡೀ ಜಗತ್ತಿನಲ್ಲಿ ಶಿಕ್ಷಕರನ್ನು ಗೌರವಿಸುವವರ ಸಂಖ್ಯೆ ಬರೀ ಶೇ 36ರಷ್ಟು ಎನ್ನುವುದು ಎಂತಹ ಕಳವಳಕಾರಿ ವಿಷಯ! ಶಿಕ್ಷಕರಿಗೆ ಉತ್ತಮ ಗೌರವ ಕೊಡುವ ದೇಶಗಳ ಪಟ್ಟಿಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಅಲ್ಲಿನ ಸರಾಸರಿ ಶೇ 81ರಷ್ಟು. ಅಲ್ಲಿ ವೈದ್ಯರಿಗೆ ಸರಿಸಮಾನವಾಗಿ ಶಿಕ್ಷಕರನ್ನು ಕಾಣಲಾಗುತ್ತದೆ.

ಕಬೀರ ದಾಸ್ ಅವರು, 'ಗುರು ಮತ್ತು ದೇವರು ಎದುರಿಗೆ ಬಂದರೆ, ನಾನು ದೇವರ ಬದಲಿಗೆ ಗುರುವಿಗೆ ನಮಿಸುತ್ತೇನೆ' ಎಂದಿದ್ದರು. ಆದರೆ ಈಗ ನಮ್ಮ ಜನ ಶಿಕ್ಷಕರನ್ನು ಗೌರವಿಸುವುದಿರಲಿ, ಸರಿಯಾಗಿ ಮಾತು ಕೂಡ ಆಡಿಸಲಾರರು.

ಇಂತಹ ವಾತಾವರಣವೇ ಇದ್ದರೆ ಪ್ರತಿಭಾವಂತರು ಮೇಷ್ಟ್ರಾಗಲು ಹೇಗೆ ಬಯಸಿಯಾರು? ಎಲ್ಲೂ ಸಲ್ಲದೆ ಕೊನೆಗೆ ಇಲ್ಲಿಯಾದರೂ ಸಲ್ಲಬೇಕು ಎಂದು ಬಂದವರ ಕೈಗೆ ನಾವು ಮಕ್ಕಳನ್ನು ಕೊಡಬೇಕಾಗುತ್ತದೆ. ಕೊಟ್ಟು ಮತ್ತೆ ದೂರಬೇಕಾಗುತ್ತದೆ. ಇದು ನಮಗೆ ನಾವೇ ಮಾಡಿಕೊಳ್ಳುವ ಮೋಸ. ಒಳ್ಳೆಯ ಶಿಕ್ಷಕರನ್ನು ರೂಪಿಸುವುದು ನಮ್ಮ ಕೈಯಲ್ಲೇ ಇದೆ. ಒಂದು ನೆನಪಿರಲಿ, ಶಿಕ್ಷಕರನ್ನು ಗೌರವಿಸದ ಯಾವ ನಾಡೂ ಬೆಳೆಯುವುದಿಲ್ಲ!

ವಾಚಕರ ವಾಣಿ

ಅಧಿಕಾರ ದುರ್ಬಳಕೆ ಸಲ್ಲ

ಬಿಜೆಪಿ ವಿರುದ್ಧದ ಮಹಾಮೈತ್ರಿಕೂಟದ ಪಕ್ಷಗಳು ಬೆಂಗಳೂರಿನಲ್ಲಿ ನಡೆಸಿದ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ ಗಣ್ಯರನ್ನು ಆದರಿಸಲು ರಾಜ್ಯ ಸರ್ಕಾರವು ಸರ್ಕಾರಿ ಅಧಿಕಾರಿಗಳನ್ನು ಉಪಯೋಗಿಸಿಕೊಂಡಿದ್ದು ತಪ್ಪು. ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕೃತ ಸಭೆಯಾಗಿದ್ದರೆ ಈ ಬಗ್ಗೆ ಯಾರೂ ಮಾತನಾಡುತ್ತಿರಲಿಲ್ಲ. ಆದರೆ ಇಲ್ಲಿ ನಡೆದದ್ದು ರಾಜಕೀಯ ಪಕ್ಷಗಳ ಖಾಸಗಿ ಕಾರ್ಯಕ್ರಮ. ಹಾಗೆಯೇ ಸಂಸದರೊಬ್ಬರು ಟಿ.ವಿ. ಚಾನೆಲ್ ಒಂದರಲ್ಲಿ ಮಾತನಾಡುತ್ತಾ, ರಾಜ್ಯಕ್ಕೆ ಬರುವ ಗಣ್ಯರನ್ನು ಸ್ವಾಗತಿಸುವುದು ಪಕ್ಷದ ಹಾಗೂ ಸರ್ಕಾರದ ಕರ್ತವ್ಯ ಎಂದಿದ್ದಾರೆ. ಇಂತಹ ಹೇಳಿಕೆ ಕೊಡುವುದು ಸಹ ತಪ್ಪಾಗುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಮಹಾಮೈತ್ರಿಕೂಟ: ಉಳಿಯಬೇಕಿದೆ ಒಗ್ಗಟ್ಟು

ರಾಷ್ಟ್ರಮಟ್ಟದಲ್ಲಿ ಬಿಜೆಪಿಯನ್ನು ಒಗ್ಗಟ್ಟಾಗಿ ಎದುರಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ವಿರೋಧಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದು, ಅವುಗಳ ಉತ್ಸಾಹ ಹೆಚ್ಚಾಗಿರುವುದನ್ನು ತೋರಿಸುತ್ತದೆ. ಒಂದೇ ವೇದಿಕೆಯಲ್ಲಿ ಗುರುತಿಸಿಕೊಳ್ಳಲು ಸಜ್ಜಾಗಿರುವ ಪಕ್ಷಗಳ ನಾಯಕರಲ್ಲಿ ಪ್ರಭಾವಿಗಳಿದ್ದಾರೆ. ಚುನಾವಣಾ ತಂತ್ರ ಹಾಗೂ ಪ್ರಚಾರದಲ್ಲಿ ಪಳಗಿದವರೂ ಇದ್ದಾರೆ. ಆಡಳಿತದಲ್ಲಿ ಅನುಭವಿಗಳೂ ಹೌದು. ಈ ಎಲ್ಲ ಅಂಶಗಳು ವಿರೋಧಪಕ್ಷಗಳ ವೇದಿಕೆಗೆ ಬಲ ತುಂಬಬಲ್ಲವು ಎಂದೇ ಭಾವಿಸಲಾಗಿದೆ. ಬೆಲೆ ಏರಿಕೆ, ಮಣಿಪುರ ಗಲಭೆ ಸೇರಿದಂತೆ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದಾದ ಅವಕಾಶವೂ ಇದೆ. ಆದರೆ ಈ ಮಹಾಮೈತ್ರಿಕೂಟಕ್ಕೆ ಅಷ್ಟೇ ಸವಾಲುಗಳೂ ಇವೆ. ಜನಪ್ರಿಯತೆಯಲ್ಲಿ ಮೋದಿ ಅವರ ವರ್ಚಸ್ಸಿಗೆ ಸರಿಸಮನಾದ ವರ್ಚಸ್ಸು ಹೊಂದಿರುವ ನಾಯಕ, ಪ್ರತಿಪಕ್ಷಗಳ ಪಾಳಯದಲ್ಲಿ ಯಾರೊಬ್ಬರೂ ಕಾಣಸಿಗುತ್ತಿಲ್ಲ. ಕೆಲವು ಜನಪ್ರಿಯ ನಾಯಕರಿದ್ದರೂ ಅವರ ಪ್ರಭಾವ ದೇಶದಾದ್ಯಂತ ಒಂದೇ ರೀತಿ ಇಲ್ಲ. ಅಲ್ಲದೆ, ಒಟ್ಟಾಗಲು ಹೊರಟಿರುವ ಕೆಲವು ಪಕ್ಷಗಳಲ್ಲಿ ಆಂತರಿಕ ತಿಕ್ಕಾಟಗಳಿವೆ.

ಲೋಕಸಭೆ ಚುನಾವಣೆಯಲ್ಲಿ ಚರ್ಚೆಯಾಗುವ ವಿಷಯಗಳಿಗೂ ವಿಧಾನಸಭೆ ಚುನಾವಣೆಗಳಲ್ಲಿ ಚರ್ಚೆಯಾಗುವ ವಿಷಯಗಳಿಗೂ ಬಹಳಷ್ಟು ವ್ಯತ್ಯಾಸ ಇರುತ್ತದೆ ಎಂಬುದನ್ನೂ ಮರೆಯಬಾರದು. ಮೋದಿ ಅವರನ್ನು ಮತ್ತು ಬಿಜೆಪಿಯನ್ನು ವಿರೋಧಿಸುವ ಕಾರಣಕ್ಕೆ ಮಾತ್ರವಲ್ಲದೆ ಜನ ತಮ್ಮನ್ನು ಏಕೆ ಬೆಂಬಲಿಸಬೇಕು ಎಂಬುದನ್ನೂ ಈ ಮಹಾಘಟಬಂಧನವು ಜನರ ಮುಂದೆ ಇಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ತಾವೊಂದು ವೇಳೆ ಅಧಿಕಾರಕ್ಕೆ ಬಂದರೆ ಒಟ್ಟಾಗಿ ಮುನ್ನಡೆಯುವುದಾಗಿಯೂ ಜನರಿಗೆ ಮನವರಿಕೆ ಮಾಡಿಕೊಡಬೇಕು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ದೇಗುಲದಲ್ಲಿ ಮೊಬೈಲ್ ನಿಷೇಧ ಸ್ವಾಗತಾರ್ಹ

ಮನುಷ್ಯನಿಗೆ ನೆಮ್ಮದಿಯ ವಾತಾವರಣವನ್ನು ನಿರ್ಮಿಸುವ ಕೆಲವೇ ಸ್ಥಳಗಳಲ್ಲಿ ದೇವಸ್ಥಾನವೂ ಒಂದು. ಆದರೆ ಪ್ರಸ್ತುತ ನಮ್ಮ ಯುವಜನಾಂಗಕ್ಕೆ ದೇವರ ಬಗ್ಗೆ ಅಥವಾ ದೇವಸ್ಥಾನಗಳ ಬಗ್ಗೆ ಯಾವುದೇ ವಿಶೇಷ ಗೌರವ ಅಥವಾ ಭಕ್ತಿ ಇಲ್ಲವಾಗಿದ್ದು, ಮೊಬೈಲ್ ಫೋನ್‌ಗಳೇ ಅವರಿಗೆ ದೇವರಂತಾಗಿವೆ. ಮೊಬೈಲ್‌ನಲ್ಲಿ ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂಗಳಿಗಾಗಿ ಫೋಟೊ ತೆಗೆಯುವುದು, ವಿಡಿಯೊ ಮಾಡುವುದೇ ವೃತ್ತಿಯಾಗಿ ಬದಲಾಗಿದೆ.

ದೇವಸ್ಥಾನಗಳಲ್ಲಿ ಕೆಲವು ಯುವಜನರ ವರ್ತನೆ ಹಿರಿಯರಿಗೆ ಮುಜುಗರ ಉಂಟುಮಾಡುವಂತೆ ಇರುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ರಾಜ್ಯ ಸರ್ಕಾರವು ದೇವಾಲಯಗಳಲ್ಲಿ ಮೊಬೈಲ್ ಬಳಕೆಯನ್ನು ನಿಷೇಧ ಮಾಡಲು ಮುಂದಾಗಿರುವುದು ಸ್ವಾಗತಾರ್ಹ ಕ್ರಮ. ಮುಜರಾಯಿ ಇಲಾಖೆ ಅಧೀನದ ದೇವಸ್ಥಾನಗಳಿಗೆ ಅನ್ವಯವಾಗಲಿರುವ ಈ ಆದೇಶ, ಭಕ್ತರಿಗೆ ದೇವಸ್ಥಾನಗಳಲ್ಲಿ ನೆಮ್ಮದಿಯ ವಾತಾವರಣ ನಿರ್ಮಿಸುವುದಕ್ಕೆ ಪೂರಕವಾಗಿದೆ.

ರಾಸುಮ ಭಟ್, ಚಿಕ್ಕಮಗಳೂರು

ಎನ್‌ಡಿಎ ಹೆಸರು ಬದಲಾಗುವುದೇ?

ಕರ್ನಾಟಕದ ರಾಜಧಾನಿಯಲ್ಲಿ ಸಮಾವೇಶಗೊಂಡ ವಿರೋಧ ಪಕ್ಷಗಳ ಒಕ್ಕೂಟಕ್ಕೆ 'ಇಂಡಿಯಾ' (ಸಂಕ್ಷಿಪ್ತ ರೂಪ) ಎಂದು ಹೆಸರನ್ನು ಕೊಟ್ಟಿರುವುದು ಅತ್ಯಂತ ಸಮಯೋಚಿತ. ದೇಶದ ಎಲ್ಲ ಪಕ್ಷಗಳೂ ಇದರಲ್ಲಿ ಪಾಲ್ಗೊಂಡಿರುವುದರಿಂದ ಇದೊಂದು ಇಂಡಿಯಾದ ಪ್ರತಿಬಿಂಬವೇ ಆಗಿದೆ. ಈಗ ಇದಕ್ಕೆ ಸಮಾನಾಂತರವಾಗಿ ರಾಷ್ಟ್ರದ ರಾಜಧಾನಿಯಲ್ಲಿ ಆಡಳಿತ ಒಕ್ಕೂಟವಾದ ಎನ್‌ಡಿಎ ಸಭೆ ಜರುಗಿದೆ. ವಿರೋಧ ಪಕ್ಷಗಳ ಒಕ್ಕೂಟದ 'ಇಂಡಿಯಾ' ಹೆಸರಿಗೆ ಪ್ರತಿಯಾಗಿ ಬಹುಶಃ ಅದು 'ಭಾರತ' ಎಂದು ನಾಮಕಾರಣ ಮಾಡಬಹುದೇ ಎನ್ನುವ ಕುತೂಹಲ ಮೂಡಿದೆ. ಕಾದು ನೋಡಬೇಕು.

ಸತ್ಯಬೋಧ, ಬೆಂಗಳೂರು

ಎಲ್ಲರ ಸಹಕಾರದಿಂದ ಸರ್ಕಾರಿ ಶಾಲೆಗಳ ಉಳಿವು

ಶಿಕ್ಷಕರು ಶಾಲೆಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವಂತೆ ದಾನಿಗಳ ಬಳಿ ಹೋಗಿ ಕೇಳುವ ಬದಲು ತಮ್ಮ ಈ ಬೇಡಿಕೆಯನ್ನು ಎಸ್‌ಡಿಎಂಸಿ, ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಶಾಸಕರ ಗಮನಕ್ಕೆ ತರಬೇಕು ಎಂದು ಬಸನಗೌಡ ಮಂಜುನಾಥಗೌಡ ಪಾಟೀಲ ಹೇಳಿದ್ದಾರೆ (ವಾ.ವಾ., ಜುಲೈ 14). ಸರ್ಕಾರಿ ಶಾಲೆ ಉಳಿಯಬೇಕಾದರೆ ಬರೀ ಶಿಕ್ಷಕರಿಂದ ಸಾಧ್ಯವಿಲ್ಲ. ಪೋಷಕರು, ಎಸ್‌ಡಿಎಂಸಿ ಸದಸ್ಯರು, ದಾನಿಗಳು ಹಾಗೂ ಸಮಾಜ ಇವರೆಲ್ಲರ ಸಹಕಾರವಿದ್ದರೆ ಸರ್ಕಾರಿ ಶಾಲೆಗಳು ಉಳಿಯುತ್ತವೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಸುಮಾರು 45 ಶಾಲೆಗಳಲ್ಲಿ 'ಮಕ್ಕಳ ಮನೆ' ಸ್ಥಾಪನೆಯಾಗಿದ್ದು, ಅವು ದಾನಿಗಳ ಸಹಕಾರದಿಂದಲೇ ನಡೆಯುತ್ತಿವೆ. ಎಲ್‌ಕೆಜಿ, ಯುಕೆಜಿಯ ರೀತಿ ಇಲ್ಲಿಯೂ ಚಟುವಟಿಕೆಗಳು ನಡೆಯುತ್ತಿವೆ.

ಈ ಮಕ್ಕಳ ಮನೆ ಶಿಕ್ಷಕಿಯರ ಸಂಬಳವನ್ನು ಆಯಾ ಗ್ರಾಮದ ದಾನಿಗಳು ಕೊಡುತ್ತಿದ್ದಾರೆ. ಉದಾಹರಣೆಗೆ, ಇದೇ ತಾಲ್ಲೂಕಿನ ಮಾರಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲೂ 2022ರಲ್ಲಿ ಮಕ್ಕಳ ಮನೆ ಸ್ಥಾಪನೆಯಾಗಿದ್ದು 20 ಮಕ್ಕಳು ಕಲಿಯುತ್ತಿದ್ದಾರೆ. ಇಲ್ಲಿನ ಶಿಕ್ಷಕಿಯ ಸಂಬಳವನ್ನು ಇದೇ ಗ್ರಾಮದ ವೈದ್ಯರೊಬ್ಬರು ಕೊಡುತ್ತಿದ್ದಾರೆ. ಇನ್ನುಳಿದಂತೆ ಮಕ್ಕಳ ಲೇಖನ ಸಾಮಗ್ರಿ, ಕಲಿಕಾ ಸಾಮಗ್ರಿಗಳನ್ನೆಲ್ಲ ಇತರ ದಾನಿಗಳು ನಿರ್ವಹಿಸುತ್ತಿದ್ದಾರೆ. ಇದರಿಂದ ಈ ಶಾಲೆಯ ದಾಖಲಾತಿ ಹೆಚ್ಚಾಗಿದೆ. ಮಕ್ಕಳ ಮನೆಯಲ್ಲಿ 20 ಮಕ್ಕಳು ಇದ್ದರೆ ಒಂದರಿಂದ ಏಳನೇ ತರಗತಿವರೆಗೆ 130 ಮಕ್ಕಳಿದ್ದಾರೆ. ಶಿಕ್ಷಕರು ಕೂಡ ಉತ್ತಮವಾಗಿ ಕಾರ್ಯನಿರ್ವಹಿಸಿದಾಗ ಇದೆಲ್ಲ ಸುಲಭವಾಗಿ ಕಾರ್ಯಗತವಾಗುತ್ತದೆ. ಇದರಿಂದ ಸರ್ಕಾರಿ ಶಾಲೆಗಳು ಉಳಿಯುತ್ತವೆ.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಾದೇಶಿಕ ಪಕ್ಷಗಳಿಗೆ ಮಹತ್ವ ಕೊಟ್ಟ ಮೈತ್ರಿಯುಗ

ರಾಷ್ಟ್ರಮಟ್ಟದ ಮೈತ್ರಿರಾಜಕಾರಣ ಕಾಲದಲ್ಲಿ ಹಲವು ಬದಲಾವಣೆಗಳಿಗೆ ಭಾರತವು ಸಾಕ್ಷಿಯಾಗಿದೆ. ರಾಷ್ಟ್ರಮಟ್ಟದಲ್ಲಿ ನಡೆದ ಮೈತ್ರಿಕೂಟಗಳಲ್ಲಿನ ಪ್ರಮುಖ ಪಾಲುದಾರ ಪಕ್ಷಗಳೆಲ್ಲವೂ ರಾಷ್ಟ್ರೀಯ ಪಕ್ಷಗಳೇ ಆಗಿದ್ದವು. ಜನತಾ ಮೋರ್ಚಾ, ಜನತಾ ಪಾರ್ಟಿ, ರಾಷ್ಟ್ರೀಯ ರಂಗ, ಸಂಯುಕ್ತ ರಂಗದಲ್ಲಿ ಮುಂದಾಳು ಪಕ್ಷ ಮತ್ತು ಪ್ರಮುಖ ಮಿತ್ರಪಕ್ಷಗಳೆಲ್ಲವೂ ರಾಷ್ಟ್ರೀಯ ಪಕ್ಷಗಳೇ ಆಗಿದ್ದವು. ಆದರೆ, 90ರ ದಶಕದಲ್ಲಿ ರೂಪುಗೊಂಡ ಎನ್‌ಡಿಎ ಮತ್ತು 21ನೇ ಶತಮಾನದ ಆರಂಭದಲ್ಲಿ ರೂಪುಗೊಂಡ ಯುಪಿಎಯಲ್ಲಿ ಮೈತ್ರಿಕೂಟದ ಸ್ವರೂಪ ಬದಲಾಗಿತ್ತು. ಎರಡೂ ಮೈತ್ರಿಕೂಟಗಳನ್ನು ರಾಷ್ಟ್ರೀಯ ಪಕ್ಷಗಳೇ ಮುನ್ನಡೆಸಿದರೂ ಪ್ರಾದೇಶಿಕ ಪಕ್ಷಗಳೇ ಪ್ರಮುಖ ಮಿತ್ರಪಕ್ಷಗಳಾಗಿದ್ದವು. ಎರಡೂ ಸಂದರ್ಭಗಳಲ್ಲಿ ರಾಜ್ಯಮಟ್ಟದ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳಿಗೆ ಹೆಚ್ಚಿನ ಮಹತ್ವ ನೀಡಲಾಯಿತು. ಇದು ಭಾರತದ ರಾಷ್ಟ್ರರಾಜಕಾರಣದಲ್ಲಿ ಆದ ಪ್ರಮುಖ ಪಲ್ಲಟ ಎಂದು ಗುರುತಿಸಲಾಗಿದೆ

ಎನ್‌ಡಿಎ

ತೃತೀಯ ರಂಗದ ಉಗಮದ ನಂತರ ದೇಶದಲ್ಲಿ ಕಾಂಗ್ರೆಸ್ ಬಲ ಕುಗ್ಗತೊಡಗಿತ್ತು. ಭಾರತದ ರಾಜಕಾರಣದ ಲೆಕ್ಕಾಚಾರಗಳೂ ಬದಲಾಗ ತೊಡಗಿದ್ದವು. ರಾಷ್ಟ್ರೀಯ ರಂಗದಲ್ಲಿ ಪ್ರಾದೇಶಿಕ ಪಕ್ಷಗಳು ಇದ್ದವಾದರೂ ಅವುಗಳ ಇರುವಿಕೆ ಸಂಖ್ಯೆಗಷ್ಟೇ ಸೀಮಿತವಾಗಿತ್ತು. ಆದರೆ, ಸಂಯುಕ್ತ ರಂಗ 1996ರಲ್ಲಿ ಅಧಿಕಾರಕ್ಕೆ ಬರುವ ಹೊತ್ತಿಗೆ ಪ್ರಾದೇಶಿಕ ಪಕ್ಷಗಳು ಬಲಗೊಂಡಿದ್ದವು. ಪ್ರಾದೇಶಿಕ ಪಕ್ಷಗಳು ರಾಷ್ಟ್ರ ರಾಜಕಾರಣವನ್ನು ನಿರ್ಧರಿಸುವ ಮಟ್ಟಕ್ಕೆ ಬೆಳೆದವು. ಇದರೊಂದಿಗೆ ಪ್ರಾದೇಶವಾರು ಅಸ್ಮಿತೆ, ಅದರೊಂದಿಗಿನ ರಾಜಕಾರಣಕ್ಕೆ ಸಂಚಲನ ದೊರೆಯಿತು. 1996ರ ಚುನಾವಣೆಯಲ್ಲಿ ವಿವಿಧ ಪ್ರಾದೇಶಿಕ ಪಕ್ಷಗಳ 137 ಸದಸ್ಯರು ಲೋಕಸಭೆಗೆ ಆಯ್ಕೆಗೊಂಡಿದ್ದರು.

ಇದೇ ಸಂದರ್ಭದಲ್ಲಿ ಬಿಜೆಪಿಯು ದೇಶದ ರಾಜಕಾರಣದಲ್ಲಿ ತನ್ನ ಸ್ಥಾನ ಭದ್ರ ಪಡಿಸಿಕೊಳ್ಳುವ ಪ್ರಯತ್ನದಲ್ಲಿತ್ತು. ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಅವರು ಕೈಗೊಂಡಿದ್ದ ರಥಯಾತ್ರೆಯ ಪ್ರಯತ್ನಕ್ಕೆ ಭಾರಿ ಬೆಂಬಲವೇ ವ್ಯಕ್ತವಾಗಿತ್ತು. ನಂತರ, ಮಂಡಲ ಆಯೋಗದ ವಿರುದ್ಧದ ಹೋರಾಟ ಕೂಡ ಬಿಜೆಪಿ ಕೈಹಿಡಿಯಿತು. ಈ ಎಲ್ಲದರ ಪರಿಣಾಮ, 1984ರಲ್ಲಿ ಎರಡು ಸಂಸದರನ್ನು ಹೊಂದಿದ್ದ ಬಿಜೆಪಿ 1996ರ ಹೊತ್ತಿಗೆ 161 ಸ್ಥಾನಗಳಿಗೆ ತನ್ನ ಸಂಸದರ ಬಲವನ್ನು ಹೆಚ್ಚಿಸಿಕೊಂಡಿತ್ತು.

ಐ.ಕೆ. ಗುಜ್ರಾಲ್ ಅವರು ಪ್ರಧಾನಿ ಸ್ಥಾನದಿಂದ ಕೆಳಗಿಳಿದ ನಂತರ, ಸಮತಾ ಪಕ್ಷ, ಶಿವಸೇನಾ ಹಾಗೂ ಎಐಎಡಿಎಂಕೆಯೊಂದಿಗೆ ಹೊಂದಾಣಿಕೆಗೆ ಇಳಿದ ಬಿಜೆಪಿಯು 1998ರಲ್ಲಿ ಎನ್‌ಡಿಎ (ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್) ರಚಿಸಿಕೊಂಡು 13 ತಿಂಗಳು ಸರ್ಕಾರ ನಡೆಸಿತು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾದರು. ಎಐಎಡಿಎಂಕೆ ಬೆಂಬಲ ವಾಪಸು ಪಡೆದ ಕಾರಣ ಸರ್ಕಾರ ಪತನಗೊಂಡಿತು.


1999ರಲ್ಲಿ ನಡೆದ ಲೋಕಸಭಾ ಚುನಾವಣೆಯನ್ನು ಎನ್‌ಡಿಎಯಲ್ಲಿದ್ದ 24 ಪಕ್ಷಗಳು ಒಗ್ಗೂಡಿ ಎದುರಿಸಿದವು; ಎನ್‌ಡಿಎಗೆ ಗೆಲುವೂ ದೊರೆಯಿತು. ವಾಜಪೇಯಿ ಅವರು ಮೂರನೇ ಬಾರಿಗೆ ಪ್ರಧಾನಿಯೂ ಆದರು. ಅಟಲ್ ಬಿಹಾರಿ ವಾಜಪೇಯಿ ಅವರ ವ್ಯಕ್ತಿತ್ವದ ಕಾರಣಕ್ಕಾಗಿಯೇ ಎನ್‌ಡಿಎ ರೂಪುಗೊಂಡಿತು ಎನ್ನುವುದು ಹಲವು ವಿಶ್ಲೇಷಕರ ಅಭಿಪ್ರಾಯ. ಬಿಜೆಪಿ ಮಾತ್ರವಲ್ಲದೇ ಬೇರೆ ಪಕ್ಷಗಳ ನಾಯಕರೂ ವಾಜಪೇಯಿ ಅವರನ್ನು ಗೌರವಿಸುತ್ತಿದ್ದರು. ಇದುವೇ ಎನ್‌ಡಿಎಯ ಗೆಲುವಿಗೆ ಕಾರಣ ಎಂದೂ ಹೇಳುತ್ತಾರೆ.

2014ರಲ್ಲಿ ಬಂದ ಎನ್‌ಡಿಎ ತನ್ನ ಹಳೆಯ ತನವನ್ನು ಕೊಡವಿಗೊಂಡು, ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸರ್ಕಾರ ರಚನೆಗೆ ಮುಂದಾಯಿತು. ಈ ಹೊತ್ತಿಗೆ ಬಿಜೆಪಿ ಮತ್ತು ಸುಮಾರು 54 ಪ್ರಾದೇಶಿಕ ಪಕ್ಷಗಳು ಎನ್‌ಡಿಎಯ ಭಾಗವಾಗಿದ್ದವು. ಆದರೆ, 2014ರ ಚುನಾವಣೆಯ ನಂತರವೇ ಹಲವು ಪಕ್ಷಗಳು ಎನ್‌ಡಿಎ ಅನ್ನು ತೊರೆಯಲು ಪ್ರಾರಂಭಿಸಿದರು. 2014ರಿಂದ 2019ರವರೆಗೆ ಸುಮಾರು 19 ಮಿತ್ರಪಕ್ಷಗಳು ಎನ್‌ಡಿಎ ತೊರೆದಿದ್ದವು.

2019ರ ಚುನಾವಣೆಯ ಹೊತ್ತಿಗೆ ಹೊರ ನಡೆದ ಕೆಲವು ಪಕ್ಷಗಳು ಮತ್ತೊಮ್ಮೆ ಎನ್‌ಡಿಎಯ ಭಾಗವಾದವು. ಹಲವು ಪಕ್ಷಗಳು ಎನ್‌ಡಿಎಯ ಭಾಗವಾಗುವುದು, ಬಿಡುವುದಕ್ಕೆ ಆಯಾ ರಾಜ್ಯಗಳ ಚುನಾವಣಾ ರಾಜಕಾರಣವೂ ಕಾರಣವಾಗಿತ್ತು. ಮುಂದಿನ ಕೆಲವು ವರ್ಷಗಳಲ್ಲಿ ಎನ್‌ಡಿಎಯ ಪ್ರಮುಖ ಪಕ್ಷಗಳಾಗಿದ್ದ ಶಿರೋಮಣಿ ಅಕಾಲಿ ದಳ, ಶಿವಸೇನಾ ಮೈತ್ರಿಯಿಂದ ಹೊರಬಂದವು.


ಒಂದೆಡೆ, ಮೋದಿ ಅವರು 'ಒನ್ ಮ್ಯಾನ್ ಶೋ' ಹಾಗೂ 'ಹಿಂದುತ್ವ' ರಾಜಕಾರಣದಲ್ಲಿ ಬೇರೆ ಯಾರಿಗೂ ಪಾಲು ಕೊಡದಿರುವುದು, ಹಲವು ಪ್ರಾದೇಶಿಕ ಪಕ್ಷಗಳು ಎನ್‌ಡಿಎಯಿಂದ ಹೊರಬರಲು ಕಾರಣ ಎನ್ನುವುದನ್ನು ಹಲವು ರಾಜಕೀಯ ವಿಶ್ಲೇಷಕರು ಒಪ್ಪುತ್ತಾರೆ. 'ಬಿಜೆಪಿಯು ನಮ್ಮನ್ನು ಬಳಸಿಕೊಂಡು ಬಿಸಾಡಿತು. ನಮ್ಮ 25 ವರ್ಷಗಳನ್ನು ನಾವು ವ್ಯರ್ಥ ಮಾಡಿಕೊಂಡಿಕೊಂಡೆವು' ಎಂದು ಉದ್ಧವ್ ಠಾಕ್ರೆ ಅವರು ಎನ್‌ಡಿಎಯನ್ನು ತೊರೆದ ಸಂದರ್ಭದಲ್ಲಿ ಹೇಳಿದ್ದರು.

ಸದ್ಯ ಬಿಜೆಪಿಯ ಹಲವು ಮಿತ್ರ ಪಕ್ಷಗಳ ಪೈಕಿ ಈಶಾನ್ಯ ಭಾಗದ ಪಕ್ಷಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಶಿವಸೇನಾ, ಎನ್‌ಸಿಪಿ (ಅಜಿತ್ ಬಣ), ಎಐಎಡಿಎಂಕೆ ಪಕ್ಷಗಳೇ ಎನ್‌ಡಿಎಯ ದೊಡ್ಡ ಪಕ್ಷಗಳಾಗಿವೆ. ಅಂದಹಾಗೆ, ಪ್ರಧಾನಿ ಮೋದಿ ಅವರು ತಮ್ಮ ಸರ್ಕಾರದ ಒಂಬತ್ತನೇ ವರ್ಷದ ಆಚರಣೆಯನ್ನು 2023ರ ಮೇ 26ರಂದು ಆಚರಿಸಿದರು. ಇದೇ ವರ್ಷದ ಮೇ 15ಕ್ಕೆ ಎನ್‌ಡಿಎ ಮೈತ್ರಿಕೂಟಕ್ಕೆ 25 ವರ್ಷ ಸಂದಿದೆ.



ಅಟಲ್ ಬಿಹಾರಿ ವಾಜಪೇಯಿ

ಮೈತ್ರಿಕೂಟಗಳಲ್ಲಿ ಪ್ರಾದೇಶಿಕ ಪಕ್ಷಗಳ ವೈವಿಧ್ಯ



ಕೈಗೂಡದ ತೃತೀಯ ರಂಗ

ರಾಷ್ಟ್ರರಾಜಕಾರಣದಲ್ಲಿ ರಾಷ್ಟ್ರೀಯ ಪಕ್ಷಗಳನ್ನು ಹೊರತುಪಡಿಸಿದ ತೃತೀಯ ರಂಗವನ್ನು ರಚಿಸುವ ಹಲವು ಯತ್ನಗಳು ಈಚಿನ ವರ್ಷಗಳಲ್ಲಿ ನಡೆದಿವೆ. 2019ರ ಲೋಕಸಭಾ ಚುನಾವಣೆಯ ನಂತರ ಇಂತಹ ಪ್ರಯತ್ನಗಳು ಚುರುಕುಪಡೆದಿತ್ತು.

ಆರಂಭದಲ್ಲಿ ಟಿಎಂಸಿಯ ಮಮತಾ ಬ್ಯಾನರ್ಜಿ ಅವರು ಅಂತಹ ಯತ್ನಕ್ಕೆ ಕೈಹಾಕಿದ್ದರು. ರಾಷ್ಟ್ರರಾಜಕಾರಣದಲ್ಲಿ ಪಕ್ಷದ ಛಾಪನ್ನು ಹೆಚ್ಚಿಸಲು ಬೇರೆ–ಬೇರೆ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಸ್ಪರ್ಧಿಸಿತು. ಆದರೆ, ಅದು ನಿರೀಕ್ಷಿತ ಫಲ ನೀಡಲಿಲ್ಲ. ಬೇರೆ ಪ್ರಾದೇಶಿಕ ಪಕ್ಷಗಳ ನಾಯಕರ ಜತೆಗೆ ಅವರು ಹಲವು ಸುತ್ತಿನ ಮಾತುಕತೆ ನಡೆಸಿದರು. ಅದೂ ಫಲ ನೀಡಲಿಲ್ಲ. ಇಂಥದ್ದೇ ಪ್ರಯತ್ನವನ್ನು ತೆಲಂಗಾಣದ ಬಿಆರ್‌ಎಸ್ (ಹಿಂದಿನ ಟಿಆರ್‌ಎಸ್) ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ನಡೆಸಿದ್ದರು. ತಮಿಳುನಾಡಿನ ಡಿಎಂಕೆ, ಮಹಾರಾಷ್ಟ್ರದ ಶಿವಸೇನಾ ಮತ್ತು ಎನ್‌ಸಿಪಿ, ಟಿಎಂಸಿ, ಉತ್ತರ ಪ್ರದೇಶದ ಎಸ್‌ಪಿ ಮುಂದಾಳುಗಳ ಜತೆಗೆ ರಾವ್ ಹಲವು ಸುತ್ತಿನ ಮಾತುಕತೆ ನಡೆಸಿದ್ದರು. ಆದರೆ, ಈ ಯತ್ನವೂ ಫಲ ನೀಡಲಿಲ್ಲ.

ಯುಪಿಎ

2004ರ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತ ಪಡೆಯುವಲ್ಲಿ ವಿಫಲವಾಯಿತು. ಇನ್ನೊಂದೆಡೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಎನ್‌ಡಿಎ ಮೈತ್ರಿಕೂಟಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದವು. ಆದರೆ, ಯಾರಿಗೂ ಸ್ಪಷ್ಟ ಬಹುಮತ ಇರಲಿಲ್ಲ. ಅಂತಹ ಅತಂತ್ರ ಲೋಕಸಭೆಯ ಸ್ಥಿತಿಯಲ್ಲಿ ರೂಪುಗೊಂಡಿದ್ದೇ ಯುಪಿಎ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಮುಂದಾಳುತ್ವದಲ್ಲಿ ಯುಪಿಎಯನ್ನು ರೂಪಿಸಲಾಯಿತು. ಯುಪಿಎಯಲ್ಲಿ ದೇಶದ 13 ಪ್ರಮುಖ ರಾಜ್ಯ ಮಟ್ಟದ ಮತ್ತು ಪ್ರಾದೇಶಿಕ ಪಕ್ಷಗಳಿದ್ದವು. ಹೀಗಿದ್ದೂ, ಸರ್ಕಾರ ರಚಿಸುವಷ್ಟು ಬಹುಮತ ಯುಪಿಎಗೆ ಇರಲಿಲ್ಲ. ಆಗ ಎಡಪಕ್ಷಗಳು ಯುಪಿಎಗೆ ಬಾಹ್ಯ ಬೆಂಬಲ ನೀಡಿದವು. ಇದರಿಂದ ಸರ್ಕಾರ ರಚಿಸಲು ಯುಪಿಎಗೆ ಸಾಧ್ಯವಾಯಿತು.

ಸರ್ಕಾರ ರಚಿಸಲು ಬಹುಮತದ ಅಗತ್ಯವಿದ್ದ ಕಾರಣ ಕಾಂಗ್ರೆಸ್ ಪಕ್ಷವು, ಒಬ್ಬ ಸಂಸದನ ಬಲ ಇದ್ದ ಪ್ರಾದೇಶಿಕ ಪಕ್ಷವನ್ನೂ ಯುಪಿಎಗೆ ಸೇರಿಸಿಕೊಂಡಿತು. ಹೀಗಾಗಿ ಯುಪಿಎ ಅಡಿಯಲ್ಲಿ ಇದ್ದ ಮಿತ್ರಪಕ್ಷಗಳು ದೇಶದ ಬಹುತೇಕ ಭಾಗಗಳನ್ನು ಪ್ರತಿನಿಧಿಸುತ್ತಿದ್ದವು. ಎನ್‌ಡಿಎ ಮೈತ್ರಿಕೂಟದಲ್ಲಿ ಇದ್ದ ಪ್ರಾದೇಶಿಕ ವೈವಿಧ್ಯ ಯುಪಿಎಯಲ್ಲೂ ಇತ್ತು. ಎನ್‌ಡಿಎಯ ಭಾಗವಾಗಿದ್ದ ಕೆಲವು ಪಕ್ಷಗಳು ಯುಪಿಎಯನ್ನು ಬೆಂಬಲಿಸಿದವು. ಇಷ್ಟೆಲ್ಲಾ ಪ್ರಾದೇಶಿಕ ಪಕ್ಷಗಳು ಇದ್ದ ಕಾರಣ, ಯುಪಿಎಯಲ್ಲಿ ಕಾಂಗ್ರೆಸ್‌ನ ಮೇಲುಗಾರಿಕೆ ಸಾಧ್ಯವಾಗಲಿಲ್ಲ. ಬದಲಿಗೆ ಕೇಂದ್ರದ ಆಡಳಿತವು ನಿಜರೂಪದಲ್ಲಿ ವಿಕೇಂದ್ರೀಕರಣವಾಯಿತು.

ರಾಜ್ಯಗಳಿಗೆ ಸಂವಿಧಾನಬದ್ಧವಾಗಿ ದತ್ತವಾಗಿದ್ದ ಹಕ್ಕು ಮತ್ತು ಅಧಿಕಾರಗಳನ್ನು ಕೇಂದ್ರ ಸರ್ಕಾರವು ಗೌರವಿಸುವಂತೆ ಹಾಗೂ ಅವುಗಳನ್ನು ಚಲಾಯಿಸಲು ಅನುವು ಮಾಡಿಕೊಡುವಂತಹ ಸ್ಥಿತಿಯನ್ನು ಪ್ರಾದೇಶಿಕ ಪಕ್ಷಗಳು ನಿರ್ಮಿಸಿಕೊಂಡವು ಎಂದು 'ನ್ಯೂ ಡೈಮೆನ್ಶನ್ಸ್ ಆಫ್ ಪಾಲಿಟಿಕ್ಸ್ ಇನ್ ಇಂಡಿಯಾ' ಪುಸ್ತಕದಲ್ಲಿ ದಾಖಲಿಸಲಾಗಿದೆ. ಯುಪಿಎ ಅಡಿಯಲ್ಲಿ ಒಟ್ಟಾಗಿ ಸರ್ಕಾರ ರಚಿಸಿದ್ದರೂ, ಪ್ರಾದೇಶಿಕ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ತಮ್ಮ ಅಸಮಾಧಾನ, ಆಕ್ಷೇಪಗಳನ್ನು ದಾಖಲಿಸುವ ಅಧಿಕಾರವನ್ನು ಉಳಿಸಿಕೊಂಡಿದ್ದವು. ಯುಪಿಎಗೆ ಬಾಹ್ಯ ಬೆಂಬಲ ನೀಡಿದ್ದ ಎಡಪಕ್ಷಗಳು ಸರ್ಕಾರದ ಕಟು ವಿಮರ್ಶೆಯನ್ನೂ ಮಾಡುತ್ತಿದ್ದವು. ಜತೆಗೆ ಒಂದು ಹಂತದಲ್ಲಿ ಬೆಂಬಲವನ್ನು ವಾಪಸ್ ಪಡೆದವು. 2009ರಲ್ಲಿ ಅಸ್ತಿತ್ವಕ್ಕೆ ಬಂದ ಯುಪಿಎ–2ರಲ್ಲಿ ಮಿತ್ರಪಕ್ಷಗಳ ಸಂಖ್ಯೆ ಮತ್ತಷ್ಟು ಹೆಚ್ಚಾಯಿತು. ಎನ್‌ಡಿಎ ಭಾಗವಾಗಿದ್ದ ಟಿಎಂಸಿ, ಯುಪಿಎ–2ಕ್ಕೆ ಬೆಂಬಲ ನೀಡಿದವು. ಕಾಂಗ್ರೆಸ್‌ನ ಎದುರಾಳಿ ಪಕ್ಷಗಳಾಗಿದ್ದ ಮತ್ತು ಪರಸ್ಪರ ಎದುರಾಳಿಗಳಾಗಿದ್ದ ಬಿಎಸ್‌ಪಿ ಮತ್ತು ಎಸ್‌ಪಿ ಸಹ ಯುಪಿಎ–2ಕ್ಕೆ ಬೆಂಬಲ ನೀಡಿದವು. ಹೀಗೆ ಪ್ರಾದೇಶಿಕ ಪಕ್ಷಗಳು ಕೇಂದ್ರ ಸರ್ಕಾರದಲ್ಲಿ ಪಾಲುದಾರರಾದ ನಂತರ ರಾಷ್ಟ್ರ ರಾಜಕಾರಣದಲ್ಲಿ ಅವುಗಳ ಪ್ರಾಮುಖ್ಯ ಬದಲಾಯಿತು.



ಮನಮೋಹನ್ ಸಿಂಗ್

ಆಧಾರ: ಪ್ರಧಾನಿ ಕಾರ್ಯಾಲಯದ ಆರ್ಕೈವ್‌ಪಿಎಂಒ.ಎನ್‌ಐಸಿ.ಐಎನ್, ಲಾರೆನ್ಸ್ ಸಯೇಜ್ ಮತ್ತು ಗುರ್ಹಾರ್‌ಪಾಲ್ ಸಿಂಗ್ ಅವರ 'ನ್ಯೂ ಡೈಮೆನ್ಶನ್ಸ್ ಆಫ್ ಪಾಲಿಟಿಕ್ಸ್ ಇನ್ ಇಂಡಿಯಾ', ನೀರಾ ಚಂದೋಕೆ ಹಾಗೂ ಪ್ರವೀಣ್ ಪ್ರಿಯದರ್ಶಿನಿ ಅವರ ಸಂಪಾದಕತ್ವದ 'ಕಾನ್ಟೆಂಪರರಿ ಇಂಡಿಯಾ: ಎಕನಾಮಿಕ್ಸ್, ಸೊಸೈಟಿ, ಪಾಲಿಟಿಕ್ಸ್'



ನೀನಾಸಂ ಸತೀಶ್ ಹಾಗೂ ರಚಿತಾ ರಾಮ್

'ಮ್ಯಾಟ್ನಿ' ಮೊದಲ ಹಾಡು 21ಕ್ಕೆ

'ಅಯೋಗ್ಯ' ಸಿನಿಮಾ ಮೂಲಕ ಬೆಳ್ಳಿತೆರೆಯಲ್ಲಿ ಮೋಡಿ ಮಾಡಿದ್ದ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ಜೋಡಿಯ ಹೊಸ ಸಿನಿಮಾ 'ಮ್ಯಾಟ್ನಿ' ಬಿಡುಗಡೆಗೆ ಸಜ್ಜಾಗುತ್ತಿದೆ.

ಚಿತ್ರದ ಮೊದಲ ಹಾಡು ಜುಲೈ 21ರಂದು ಸಂಜೆ ಬಿಡುಗಡೆಯಾಗಲಿದೆ. 'ಇದೊಂದು ಪ್ರೇಮಗೀತೆ. ಅಯೋಗ್ಯ ನಂತರ ನನ್ನ ಹಾಗೂ ರಚಿತಾ ಅವರ ಜೋಡಿ ಮತ್ತೆ ನಿಮ್ಮ ಮನ ಗೆಲ್ಲುವ ನಂಬಿಕೆಯಿದೆ' ಎಂದಿದ್ದಾರೆ ಸತೀಶ್. 2020ರಲ್ಲಿ ಈ ಸಿನಿಮಾ ಸೆಟ್ಟೇರಿತ್ತು. ಕಳೆದ ಫೆಬ್ರುವರಿಯಲ್ಲಿ ಚಿತ್ರದ ಚಿತ್ರೀಕರಣ ಅಂತಿಮ ಹಂತ ತಲುಪಿತ್ತು. ಚಿತ್ರತಂಡ ಕುಲು–ಮನಾಲಿಯಲ್ಲಿ ಹಾಡೊಂದನ್ನು ಚಿತ್ರೀಕರಿಸಿ ಈ ಘೋಷಣೆ ಮಾಡಿತ್ತು. ಚಿತ್ರದಲ್ಲಿ ಇಬ್ಬರು ನಾಯಕಿಯರಿರಲಿದ್ದು, ರಚಿತಾ ರಾಮ್ ಜೊತೆಗೆ ಅದಿತಿ ಪ್ರಭುದೇವ ಅವರೂ ಸತೀಶ್‌ಗೆ ಜೋಡಿಯಾಗಿದ್ದಾರೆ.

ಮನೋಹರ್ ಕಾಂಪಲ್ಲಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರವನ್ನು ಪಾರ್ವತಿ ಎಸ್.ಗೌಡ ನಿರ್ಮಾಣ ಮಾಡಿದ್ದಾರೆ. ನಟರಾದ ನಾಗಭೂಷಣ್, ಪೂರ್ಣ, ಶಿವರಾಜ್ ಕೆ.ಆರ್.ಪೇಟೆ ಮತ್ತಿತರರು ಚಿತ್ರದ ತಾರಾಗಣದಲ್ಲಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಚಿತ್ರಕ್ಕಿದೆ. 'ಮ್ಯಾಟ್ನಿ' ಜೊತೆಗೆ ತಮ್ಮ ಮುಂದಿನ ಪ್ಯಾನ್ ಇಂಡಿಯಾ ಸಿನಿಮಾ 'ಅಶೋಕ ಬ್ಲೇಡ್' ಬಗ್ಗೆಯೂ ಸತೀಶ್ ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ. ಈ ಸಿನಿಮಾ ಎರಡು ಭಾಗಗಳಲ್ಲಿ ತೆರೆಕಾಣುತ್ತಿದೆ.

ಇದು ಗಿಣಿರಾಮನ 'ಉತ್ಸವ'

ಯಶ್, ಗಣೇಶ್, ಜೆ.ಕೆ. ಹೀಗೆ ಕನ್ನಡ ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟು ಮಿಂಚಿದ ಹಲವು ನಟರು ಚಂದನವನದಲ್ಲಿದ್ದಾರೆ. ಇದೇ ರೀತಿ ಚಿತ್ರರಂಗಕ್ಕೆ ಪ್ರವೇಶಿಸಿದವರಲ್ಲಿ ರಿತ್ವಿಕ್ ಮಠದ್ ಕೂಡಾ ಒಬ್ಬರು.

'ಗಿಣಿರಾಮ' ಧಾರಾವಾಹಿ ಮೂಲಕ ಕನ್ನಡ ಪ್ರೇಕ್ಷಕರಿಗೆ ಪರಿಚಿತರಾಗಿರುವ ಇವರು ಇದೀಗ 'ಉತ್ಸವ' ಹೊರಟಿದ್ದಾರೆ. ಚಿತ್ರರಂಗರದಲ್ಲಿ ಈ ವರ್ಷ ಹೊಸಬರ ಆಗಮನವೇ ಹೆಚ್ಚಿದೆ. ಇದಕ್ಕೆ ಮತ್ತೊಂದು ಸೇರ್ಪಡೆ ನಿರ್ದೇಶಕ ಅರುಣ್ ಸೂರ್ಯ. ನಾಗೇಂದ್ರ ಅರಸ್ ಸೇರಿದಂತೆ ಹಲವು ನಿರ್ದೇಶಕರ ಗರಡಿಯಲ್ಲಿ ಸಹಾಯಕ ಹಾಗೂ ಸಹ ನಿರ್ದೇಶಕರಾಗಿ ಕೆಲಸ ಮಾಡಿರುವ ಅನುಭವ ಇರುವ ಅರುಣ್ ಅವರ ಚೊಚ್ಚಲ ನಿರ್ದೇಶನದ ಸಿನಿಮಾ 'ಉತ್ಸವ'.

ಸದ್ದಿಲ್ಲದೆ ಮನಾಲಿ ಹಾಗೂ ಗೋವಾದಲ್ಲಿ ಶೂಟಿಂಗ್ ಪೂರ್ಣಗೊಳಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. 'ಆ ಎರಡು ವರ್ಷಗಳು', 'ಗಿಫ್ಟ್ ಬಾಕ್ಸ್' ಚಿತ್ರದಲ್ಲಿ ನಟಿಸಿದ್ದ ರಿತ್ವಿಕ್ ಅವರಿಗೆ ಇದು ಮೂರನೇ ಸಿನಿಮಾವಾಗಿದೆ. ಪೂರ್ವಿ ಜೋಷಿ ಈ ಚಿತ್ರದ ನಾಯಕಿ. ನಾಗೇಂದ್ರ ಅರಸ್, ಪ್ರಕಾಶ್ ತುಮ್ಮಿನಾಡ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಪ್ರೇಮಕಥೆಯ 'ಉತ್ಸವ' ಸಿನಿಮಾವನ್ನು ಅರಸ ಪ್ರೊಡಕ್ಷನ್‌ನಡಿ ಉಷಾ ಶ್ರೀನಿವಾಸ ನಿರ್ಮಾಣ ಮಾಡಿದ್ದಾರೆ. ಜಯಂತ ಕಾಯ್ಕಿಣಿ ಅವರು ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಎಮಿನಲ್ ಮಹಮ್ಮದ್ ಸಂಗೀತ ಚಿತ್ರಕ್ಕಿದೆ.



ರಿತ್ವಿಕ್ ಮಠದ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ರಸ್ತೆಯಲ್ಲಿ ಬೈಕ್‌ನಲ್ಲಿ ಜೋರಾಗಿ ಬರುತ್ತಿದ್ದ ಭಯೋತ್ಪಾದಕನನ್ನು ಹಿಂದಿನಿಂದ ಚೇಸ್ ಮಾಡಿಕೊಂಡುಬಂದ ಭಾರತೀಯ ಸೇನೆಯ ಕಮಾಂಡೊಗಳು ಬೈಕಿಗೆ ಗುದ್ದಿ, ಕೆಳಗೆಬಿದ್ದ ಭಯೋತ್ಪಾದಕನ ಎದೆಯ ಮೇಲೆ ಎರಗಿದ್ದಾರೆ. ತನ್ನ ಬಟ್ಟೆಯೊಳಗಿದ್ದ ಶಸ್ತ್ರಾಸ್ತ್ರ ತೆಗೆದುಕೊಳ್ಳಲೂ ಕಮಾಂಡೊಗಳು ಅವಕಾಶ ನೀಡಲಿಲ್ಲ. ಕಮಾಂಡೊಗಳು ನಿಜವಾದ ಹೀರೋಗಳು, ಸೂಪರ್. ಇದು ನಡೆದಿದ್ದು ಕಾಶ್ಮೀರದ ಶ್ರೀನಗರದಲ್ಲಿ' ಎಂಬ ಬರಹದೊಂದಿಗೆ 17 ಸೆಕೆಂಡಿನಷ್ಟಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಬ್ರೆಜಿಲ್‌ನ ಪೆರೊಲಾ ಎನ್ನುವ ಪ್ರದೇಶದಲ್ಲಿ ಈ ವಿಡಿಯೊದಲ್ಲಿರುವ ದೃಶ್ಯವು ನಡೆದಿದೆ. ಈ ಬಗ್ಗೆ ಇಲ್ಲಿನ 'ಇಸ್ಟೊಲೆ' ಎನ್ನುವ ಸುದ್ದಿ ಸಂಸ್ಥೆ ಹಾಗೂ 'ಆರ್‌ಐಸಿ' ಎಂದು ಸುದ್ದಿ ವಾಹಿನಿಯು ವರದಿ ಮಾಡಿವೆ. ಈ ಘಟನೆ ನಡೆದದ್ದು 2021ರ ಆಗಸ್ಟ್ 2ರಂದು. ಬ್ರೆಜಿಲ್‌ನ ಪೊಲೀಸರು ರಾತ್ರಿ ವೇಳೆಯಲ್ಲಿ ನಗರದಲ್ಲಿ ಗಸ್ತು ತಿರುಗುತ್ತಿದ್ದರು. ಈ ವೇಳೆ 19 ವರ್ಷದ ಬಾಲಕ, ಬೈಕ್ ಅನ್ನು ಅತೀ ವೇಗವಾಗಿ ಓಡಿಸುತ್ತಾ, ಅನುಮಾನಾಸ್ಪದವಾಗಿ ನಗರದ ರಸ್ತೆಗಳಲ್ಲಿ ತಿರುಗಾಡುತ್ತಿರುವುದನ್ನು ಪೊಲೀಸರು ನೋಡಿದ್ದಾರೆ. ಆದ್ದರಿಂದ, ಬೈಕ್ ಅನ್ನು ಹಿಂಬಾಲಿಸಿಕೊಂಡು ಬಂದು, ಹಿಡಿದಿದ್ದಾರೆ. ವಿಡಿಯೊದಲ್ಲಿ ಗಮನಿಸಿದಂತೆ ಪೊಲೀಸ್ ವಾಹನವು ರಸ್ತೆಯ ಬಲಬದಿಯ ಪಥದಲ್ಲಿ ಚಲಿಸಿದೆ. ಭಾರತದಲ್ಲಿ ವಾಹನಗಳು ರಸ್ತೆಯ ಎಡ ಪಥದಲ್ಲಿ ಚಲಿಸುತ್ತವೆ. ಈ ಎಲ್ಲ ಅಂಶಗಳು ಇದು ಕಾಶ್ಮೀರದ ಘಟನೆಯಲ್ಲ ಎಂದು ಸೂಚಿಸುತ್ತವೆ ಎಂದು ಬೂಂಲೈವ್ ಹಾಗೂ ಫ್ಯಾಕ್ಟ್‌ಚೆಕ್ಕರ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬೇಡಿಕೆ

ಆರ ಕೈ ತುತ್ತಿಗಂ ನಿನ್ನ ಕಾಯಿಸದೆ ವಿಧಿ |
ಯಾರ ಭುಜಕಂ ನಿನ್ನ ಭಾರವಾಗಿಸದೆ ||
ಆರ ಸೆಲೆ ಸುಳಿವುಮಂಟದವೊಲಾಗಿಸಿ ನಿನ್ನ |
ಪಾರಗಾಣಿಸ ಬೇಡು – ಮಂಕುತಿಮ್ಮ || 930 ||

ಪದ-ಅರ್ಥ: ಆರ = ಯಾರ, ತುತ್ತಿಗಂ = ತುತ್ತಿಗೂ, ಭುಜಕಂ = ಭುಜಕ್ಕೂ, ಸುಳಿವುಮಂಟದವೊಲಾಗಿಸಿ- = ಸುಳಿವುಮ್ (ಸುಳಿವು) + ಅಂಟದವೊಲ್(ಅಂಟದಂತೆ) + ಆಗಿಸಿ, ಸೆಲೆ = ಸೆಳೆತ, ಪಾರಗಾಣಿಸ = -ದಂಡೆಗೆ ಸೇರಿಸು,ಮುಕ್ತಾಯಗೊಳಿಸು.

ವಾಚ್ಯಾರ್ಥ: ವಿಧಿ ನನ್ನನ್ನು ಮತ್ತೊಬ್ಬರ ಕೈತುತ್ತಿಗೆ ಕೈ ಚಾಚದಂತೆ, ಇನ್ನೊಬ್ಬರ ಭುಜಕ್ಕೆ ಭಾರವಾಗದಂತೆ, ಯಾರ ಸೆಳೆತಕ್ಕೆ ಸಿಲುಕದೆ, ಯಾವ ಮೋಹದ ಅಂಟು ತಾಗದ ಹಾಗೆ, ಜಗತ್ತಿನಿಂದ ತೆರಳುವುದು ಸಾಧ್ಯವಾಗುವಂತೆ ಬೇಡಿಕೋ.

ವಿವರಣೆ: ಇದೊಂದು ಬಹುದೊಡ್ಡ ಪ್ರಾರ್ಥನೆ ಮನುಷ್ಯ ಮಾಡಬೇಕಾದದ್ದು. ಹೀಗೊಂದು ಪ್ರಾರ್ಥನೆ ಇದೆ:

ಅನಾಯಾಸೇನ ಮರಣಂ ವಿನಾದೈನ್ಯೇನ ಜೀವನಂ |
ದೇಹಿ ಮೇ ಕೃಪಯಾ ಶಂಭೋ ತ್ವಯಿ ಭಕ್ತಿಮಚಂಚಲಾ ||

'ಭಗವಂತಾ, ದೈನ್ಯವಿಲ್ಲದ ಜೀವನ, ಅನಾಯಾಸವಾದ ಸಾವು ಮತ್ತು ನಿನ್ನಲ್ಲಿ ಅಚಲವಾದ ಭಕ್ತಿಗಳನ್ನು ಕರುಣಿಸು'. ಸಾಕು ಎನ್ನುವ ಭಾವ ಬರುವವರೆಗೆ ಮನಸ್ಸಿನಲ್ಲಿ ಉಳಿಯುವುದು ಕೇವಲ ಆತಂಕ, ತುಡಿತಗಳೇ. ಸಾಕು ಎನ್ನಿಸಿದಾಗಲೇ ಮನಸ್ಸು ಹಗುರಾಗಿ ಆನಂದವನ್ನು ಪಡೆಯುವುದು. ಮರಣದಲ್ಲಿ ಸಾವಿನ ಅಂಗೀಕಾರ ಎಷ್ಟು ಮುಖ್ಯವೋ ಅದೇ ರೀತಿ ಬದುಕಿನಲ್ಲಿ ಜೀವನದ ಅಂಗೀಕಾರ ಅಷ್ಟೇ ಮುಖ್ಯ. ಯಾವ ಯಾವುದೋ ಅಲ್ಪ ಸುಖಕ್ಕಾಗಿ ಮತ್ತೊಬ್ಬರ ಮುಂದೆ ಕೈ ಚಾಚಿ ನಿಲ್ಲುವುದು ದೈನ್ಯ. ದೀನತೆ ಮನುಷ್ಯನನ್ನು ಕುಗ್ಗಿಸಿ, ಅವನ ಆತ್ಮವಿಶ್ವಾಸವನ್ನು ಹೊಡೆದುಹಾಕತ್ತದೆ. ವಿಧಿ ನನ್ನನ್ನು ಇಂಥ ದೈನ್ಯಕ್ಕೆ ದೂಡದಿರಲಿ ಎಂಬುದು ಮೊದಲ ಪ್ರಾರ್ಥನೆ. ಎರಡನೆಯ ಪ್ರಾರ್ಥನೆ, ಯಾವ ಮೋಹದ ಅಂಟೂ, ಯಾರ ಸೆಳೆತವೂ ಇರದಂತೆ ಸುಲಭವಾಗಿ ಜೀವನದಿಂದ ಪಾರು ಮಾಡು ಎನ್ನುವುದು. ಮಹಾಮೃತ್ಯುಂಜಯ ಮಂತ್ರದ ಎರಡನೆಯ ಸಾಲು ಮನನೀಯವಾದದ್ದು.

"ಊರ್ವಾರೂಕಮಿವ ಬಂಧನಾನ್ ಮೃತ್ಯೋರ್ಮುಕ್ಷೀಯ ಮಾಮೃತಾತ್" ಇದರ ಅರ್ಥ, ಹೇಗೆ ಸೌತೇಕಾಯಿಯ (ಉರ್ವಾರು) ತೊಟ್ಟು ತನ್ನ ಬಳ್ಳಿಯೊಂದಿಗೆ ಬಹಳ ತೆಳುವಾಗಿ ಅಂಟಿಕೊಂಡಿರುತ್ತದೆಯೋ ಹಾಗೆ ಮೃತ್ಯುವಿನಿಂದ ಮುಕ್ತಿ ದೊರೆಯಲಿ. ಬಳ್ಳಿಯಲ್ಲಿ ಬೆಳೆಯುವ ಕುಂಬಳಕಾಯಿ, ಸೋರೆಕಾಯಿ, ಹೀರೇಕಾಯಿಗಳಿಗೂ ಮತ್ತು ಅದೇ ರೀತಿ ಬೆಳೆಯುವ ಸೌತೇಕಾಯಿಗಳಲ್ಲಿ ಸೂಕ್ಷ್ಮ ವ್ಯತ್ಯಾಸವಿದೆ. ಸೌತೇಕಾಯಿಯನ್ನು ಬಿಡಿಸುವಾಗ ತೊಟ್ಟು ಬಳ್ಳಿಯಲ್ಲೇ ಉಳಿಯುತ್ತದೆ. ಆದರೆ ಉಳಿದ ಕಾಯಿಗಳು ತೊಟ್ಟಿನ ಜೊತೆಗೇ ಬರುತ್ತವೆ. ಸೌತೇಕಾಯಿಯ ತೊಟ್ಟಿನ ಹಾಗೆ ನಮ್ಮ ಪ್ರಪಂಚದ ಸಂಬಂಧಗಳಿರಬೇಕು. ಆಗ ಬಿಡುಗಡೆ ಸುಲಭವಾಗುತ್ತದೆ. ದೈನ್ಯವಿಲ್ಲದ, ಯಾರಿಗೂ ಭಾರವಾಗದ ಬದುಕು, ಯಾವ ಸೆಳೆತ, ಮೋಹಗಳಿಲ್ಲದೆ ಬದುಕನ್ನು ಹಗುರವಾಗಿ ತ್ಯಜಿಸುವ ಸಾಧ್ಯತೆ. ಇವೇ ನಮ್ಮ ಪ್ರಾರ್ಥನೆಯಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ದ್ವಿತೀಯ ಗಂ. 28-31 ನಕ್ಷತ್ರ: ಪುಷ್ಯ ಗಂ. 07-58 ಯೋಗ: ವಜ್ರ ಗಂ. 10-25 ಕರಣ: ಬಾಲವ ಗಂ. 15-20, ಕರ್ಕಾಟಕ ಮಾಸದ 02 ನೇ ದಿನ, ಮಳೆನಕ್ಷತ್ರ: ಪುನರ್ವಸು 4. ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-16 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 30 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 12, 8

ಮೇಷ: ಹಲವಾರು ದುಃಖಗಳು ಮಧುರ ಸಂಗೀತವನ್ನು ಕೇಳುವ ಮೂಲಕ ಪರಿಹರಿಸಿಕೊಳ್ಳುವಿರಿ. ಕೆಲಸದ ಮೇಲೆ ಗಮನ ಕಡಿಮೆಯಾದ ಕಾರಣ ಸಿಗಬೇಕಾದ ಅವಕಾಶಗಳು ಬೇರೆಯವರ ಪಾಲಾಗಲಿವೆ.

ವೃಷಭ: ಕಳೆದು ಹೋದ ಜಾನುವಾರೊಂದು ಹಲವಾರು ದಿನಗಳ ನಂತರ ಮನೆಯ ಜಾಡು ಹಿಡಿದು ಬರುವಂಥ ಸಾಧ್ಯತೆ ಇದೆ. ಹಲವಾರು ಕಾರಣಗಳಿಂದ ಅದೃಷ್ಟವಂತರೆಂದು ಅನ್ನಿಸಬಹುದು.

ಮಿಥುನ: ಸಣ್ಣ ಕಾರಣವನ್ನೇ ಹಿಡಿದು ಒಂದು ಕೆಲಸದಿಂದ ಅಮಾನತುಗೊಳಿಸುವಂಥ ಸಾಧ್ಯತೆಗಳು ಬರಬಹುದು. ನೆಚ್ಚಿನ ಕಲಾಕಾರರನ್ನು ಭೇಟಿಯಾಗಲು ನಿಮ್ಮ ಸ್ನೇಹಿತರು ಸಹಾಯ ಮಾಡಲಿದ್ದಾರೆ.

ಕರ್ಕಾಟಕ: ನಿಮ್ಮ ಪಾಲಿನ ನಂದಾದೀಪವಾಗಿ ನಿಮ್ಮ ಮನೆಗೆ ಮಗಳಾಗಿ ಬಂದವಳನ್ನು ಮತ್ತೊಂದು ಮನೆಯ ನಂದಾದೀಪವಾಗಿ ಕಳುಹಿಸಿಕೊಡುವ ಸನ್ನಿವೇಶ ನಿಮ್ಮ ಕಣ್ಣೆದುರು ಬರುವುದು. ಧೈರ್ಯ ನಿಮ್ಮ ಜತೆಯಾಗುವುದು.

ಸಿಂಹ: ನೀವು ಎಷ್ಟು ಜಾಗರೂಕರಾಗಿದ್ದರೂ ಸಾಲದೆಂಬಂತೆ ಆಗುತ್ತದೆ. ಆರೋಗ್ಯದ ವಿಚಾರದಲ್ಲಿ ಖರ್ಚುವೆಚ್ಚದ ಲೆಕ್ಕಚಾರವನ್ನು ಮಾಡುವುದು ಸಮಂಜಸವಲ್ಲ. ಪತಿಯಲ್ಲಿ ವಿಶೇಷ ಗಮನ ಇರಿಸಿ.

ಕನ್ಯಾ: ನಿಮ್ಮದೇ ಮದುವೆಯ ಮುಂದುವರೆದ ಮಾತುಕತೆಗಳು ನಿಮ್ಮ ಗಮನಕ್ಕೆ ಬಾರದೇ ಹೋಗಬಹುದು. ಹಲವು ದಿನಗಳಿಂದ ಉಳಿಸಿಕೊಂಡ ಕೆಲಸಗಳನ್ನು ಮುಂದೂಡುವುದು ಒಳ್ಳೆಯದಲ್ಲ. ನೀಲಿ ಶುಭವನ್ನು ತರುವುದು.

ತುಲಾ: ಕಾರಣವು ನಿಮಗೆ ತಿಳಿಯದೇ ಹೋದರೂ ತಂದೆ ತಾಯಿಯರ ಮುನಿಸು ಸಮಂಜಸವಾಗಿಯೇ ಇರುತ್ತದೆ. ಶರೀರದಲ್ಲಿ ಆಯಾಸ ಕಡಿಮೆಯಾಗಿ ಉಲ್ಲಾಸವಿರುವುದು. ಕಾರ್ಯ ಪ್ರಗತಿಯಲ್ಲಿ ಜವಾಬ್ದಾರಿ ಬರಲಿದೆ.

ವೃಶ್ಚಿಕ: ಕುಲದೇವರ ದರ್ಶನದಿಂದ ಈಗಿನ ನಿಮ್ಮ ಎಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಬಲ್ಲಿರಿ. ಯಶಸ್ಸಿನ ನೂತನ ಮಾರ್ಗಗಳು ಗೋಚರಿಸಲಿವೆ. ಕೃಷಿ ಉತ್ಪನ್ನದ ವ್ಯಾಪಾರಿಗಳಿಗೆ ಇಂದು ಶುಭ ದಿನವಾಗಿದೆ.

ಧನು: ಯಾರೊಂದಿಗೆ ನಿಮಗೆ ಸಮಸೆಗಳಿದ್ದರೂ ಅದನ್ನು ಸ್ವತಃ ನೀವೇ ಪರಿಹರಿಸಿಕೊಳ್ಳುವುದು ಉತ್ತಮ ಮಾರ್ಗವಾಗಿದೆ. ಆಪ್ತ ಸ್ನೇಹಿತರಲ್ಲಿನ ಭಿನ್ನಾಭಿಪ್ರಾಯಗಳು ಹಲವು ದಿನಗಳವರೆಗೆ ಮುಂದುವರಿಯಬಹುದು.

ಮಕರ: ಕಂಕಣ ಬಲವು ನಿಮ್ಮ ತಪ್ಪು ನಡತೆಯಿಂದಾಗಿಯೋ ಅಥವಾ ಮೂರನೇ ವ್ಯಕ್ತಿಯ ಅಸಂಬದ್ಧ ಹೇಳಿಕೆಯಿಂದಾಗಿ ಮುರಿದು ಬೀಳುವ ಸಾಧ್ಯತೆ ಇದೆ. ಸಾಗರದಾಚೆಗಿನ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಕುಂಭ: ಕೆಲವು ದಿನಗಳ ಕಿರು ಪ್ರಯಾಣದ ನಂತರ ಮನೆಗೆ ಹಿಂತಿರುಗಿ ಬರುವಿರಿ. ನಿಮ್ಮ ಸಾಕುಪ್ರಾಣಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಮೊಬೈಲ್ ಮಾರಾಟಗಾರರಿಗೆ ಈ ದಿನವು ವಿಶೇಷ ದಿನವಾಗಬಹುದು.


ಮೀನ: ಕೆಲವು ಕೆಲಸ ಕಾರ್ಯಗಳು ಮಾತನಾಡಿದರಷ್ಟೇ ಮುಂದುವರೆಯುವಂತಿರುವುದು. ಎಲ್ಲರಿಗಿಂತ ವಿಭಿನ್ನವಾಗಿ ಯೋಚಿಸುವ ಕೆಲವು ಸವಾಲುಗಳಿಗೆ ಪರಿಹಾರ ಸಿಗುತ್ತದೆ. ಸ್ನೇಹಿತರ ಆಸೆ ನೆರವೇರಿಸುವಿರಿ.

ಪದಬಂಧ 5384

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮಗಳೊಡನಿರುವ ಪುತ್ರ (2)
3.ತಪಸ್ಸಿನ ಶಕ್ತಿಯಿದು (4)
5.ಕೈಯಲ್ಲಿರುವ ಹಣ (3)
6.ಈತ ಆನೆ ನಡೆಸುವಾತ (4)
8.ಎಲ್ಲೆಯಿಂದ ಹೊರಹಾಕುವಿಕೆ (4)
12.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
14.ಒಪ್ಪವಾಗಿ ಮಾಡಿದ ತರ್ಜುಮೆ (4)
15.ಉತ್ತರದವರ ಸ್ನಾನ (3)
16.ಮಾನವಿರುವ ವಸ್ತುಸ್ಥಿತಿಯಿದು (4)
17.ಆಮೇಲೆ ಕಾಣಿಸಿದ ಕೂರ್ಮಾ (2)

ಮೇಲಿಂದ ಕೆಳಕ್ಕೆ
1.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
2.ದುಮುಗುಟ್ಟುತ್ತಾ ಬಂದಿರುವ ವರ (4)
3.ಶಿರವನ್ನು ವಿಕ್ರಯಿಸಿದರೆ ಪೀಳಿಗೆ ಕಾಣುವುದೇ? (4)
4.ವಂಗ ದೇಶದಿಂದ ತರಿಸಿದ ಸಾಂಬಾರ ದ್ರವ್ಯ (3)
7.ತಟಕ್ಕನೆ ಧರಿಸಿಕೊಂಡಿರುವ ಅಡ್ಡಿಕೆ (2)
9.ಹಣವನ್ನು ಸಂದಾಯ ಮಾಡುವುದು (3)
10.ನಂಬಿಕೆಗೆ ಅರ್ಹವಾಗಿರುವಿಕೆ (5)
11.ಮಕರಂದ ನೀಡುವ ಕೀಟ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಭೋಜನ ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
14.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)



5383ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತಿರುಪತಿ 3.ರಥೋತ್ಸವ
5.ಹಲಗೆ 6.ಪ್ರಾಮಾಣಿಕ
8.ಡುಕಾ 9.ಸನ್ನಿ
10.ರಸಹೀನ 12.ಆಪತ್ತು
16.ಕಳಕಳಿ 17.ಅಂಗರಾಗ

ಮೇಲಿಂದ ಕೆಳಕ್ಕೆ:
1.ತಿದಿ 2.ಪತ್ತಲ
3.ರಶಿರ್ಗಮಾ 4.ವಜ್ರ
5.ಹರಿಕಾರ 6.ಪ್ರಾಚೀನ
7.ಕಸರತ್ತು 11.ಹೀನಚಾಳಿ
13.ಪಲ್ಲಂಗ 14.ಬಿಂಕ
15.ಬೀಗ

ಸುಡೊಕು 5770

		1		7		6		2
		5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5769 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19711
ಇಂದಿನ ಅಂತ್ಯ	19749
▲	37
ದಿನದ ಗರಿಷ್ಠ	19819

ಕೊಬ್ಬರಿ ಧಾರಣೆ



ಅರಸೀಕೆರೆ	₹7500-8808
ಕೆ.ಆರ್. ಪೇಟೆ (ಇತರ)	₹7750-7750
ತುರುವೇಕೆರೆ	₹8800-8900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹505
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹512

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1770
ಸೋಯಾ (ರಿಫೈನ್ಡ್)	₹935
ಸೂರ್ಯಕಾಂತಿ (ರಿಫೈನ್ಡ್)	₹930
ಪಾಮೋಲಿನ್	₹860

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹258;465
ದ್ವಿತಳಿ (ಬಿ.ವಿ)
₹311;589

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹127

ಫೋನ್‌ಪೆ: ತಿಂಗಳ ಕಂತುಗಳ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೋನ್‌ಪೆ ಕಂಪನಿಯ ಅಂಗಸಂಸ್ಥೆಯಾಗಿರುವ 'ಫೋನ್‌ಪೆ ಇನ್ಶುರೆನ್ಸ್ ಬ್ರೋಕಿಂಗ್ ಸರ್ವಿಸಸ್', ಪ್ರಮುಖ ವಿಮಾ ಕಂಪನಿಗಳ ಜೊತೆ ಪಾಲುದಾರಿಕೆಯಲ್ಲಿ ಆರೋಗ್ಯ ವಿಮಾ ಸೇವೆಗಳನ್ನು ಒದಗಿಸಲು ಆರಂಭಿಸಿದೆ.

'ಆರೋಗ್ಯ ವಿಮೆಗೆ ಪಾವತಿಯನ್ನು ಯುಪಿಐ ಮೂಲಕ ತಿಂಗಳ ಕಂತುಗಳಲ್ಲಿ ಕೂಡ ಮಾಡಬಹುದು. ಇದರಿಂದಾಗಿ ಗ್ರಾಹಕರಿಗೆ ಇವು ಹೆಚ್ಚು ಕೈಗೆಟಕುವಂತೆ ಆಗುತ್ತವೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

'ಆರೋಗ್ಯ ವಿಮೆಗಳಿಗೆ ಮಾಡಬೇಕಿರುವ ವೆಚ್ಚವು, ಅವುಗಳ ಖರೀದಿಗೆ ಇರುವ ಅತಿದೊಡ್ಡ ಅಡ್ಡಿಗಳಲ್ಲಿ ಒಂದು. ಆದರೆ ನಾವು ತಿಂಗಳ ಪಾವತಿಗೆ ಹೆಚ್ಚಿನ ಗಮನ ನೀಡುವ ವ್ಯವಸ್ಥೆಯೊಂದನ್ನು ರೂಪಿಸಿದ್ದೇವೆ' ಎಂದು ಫೋನ್‌ಪೆ ಕಂಪನಿಯ ಹಣಕಾಸು ಸೇವೆಗಳ ಉಪಾಧ್ಯಕ್ಷ ಹೇಮಂತ್ ಗಾಲಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳುಮೆಣಸು -	500

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-42500
ಹಳತು	46000-49000

ಕಾರ್ಕಳ

ಹೊಸತು	30000-42500
ಹಳತು	40000-49000

ಸಾಗರ

ಬಿಳಿಗೋಟು	32858-33256
ಚಾಲಿ	37899-39299
ಕೆಂಪುಗೋಟು	37599-39009
ರಾಶಿ	46699-52529
ಸಿಪ್ಪೆಗೋಟು	21799-22319

ಶಿವಮೊಗ್ಗ

ಬೆಟ್ಟೆ	42109-56589
ಗೊರಬಲು	18000-43999
ರಾಶಿ	31312-55399

ಸಿದ್ದಾಪುರ

ಬಿಳಿಗೋಟು	31899-34599
ಚಾಲಿ	37919-40300
ಕೋಕ	30019-34619
ಕೆಂಪುಗೋಟು	31699-42099
ರಾಶಿ	44099-52009
ತಟ್ಟಿಬೆಟ್ಟೆ	38199-40209

ಶಿರಸಿ

ಬೆಟ್ಟೆ	40299-48869
ಬಿಳಿಗೋಟು	28099-35869
ಚಾಲಿ	35081-40761
ಕೆಂಪುಗೋಟು	28499-38269
ರಾಶಿ	43739-51649

ಯಲ್ಲಾಪುರ

ಆಪಿ	56099-59009
ಬಿಳಿಗೋಟು	24899-36499
ಚಾಲಿ	36312-40490
ಕೋಕ	20218-34899
ಕೆಂಪುಗೋಟು	28899-35318
ರಾಶಿ	45870-52899
ತಟ್ಟಿಬೆಟ್ಟೆ	41699-48699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	13900	14100	155.80ಸೆಂಟ್ಸ್
ಎಸಿ	7140	6900	7200	
ಆರ್‌ಪಿ	10100	10100	10300	ಲಂಡನ್
ಆರ್‌ಸಿ	6090	236	5950	2552 ಡಾಲರ್ಸ್

ದೇವಸ್ಥಾನಗಳಿಗೆ ಬಿಗಿ ಭದ್ರತೆ

ಕರಾಚಿ (ಪಿಟಿಐ): ಡಕಾಯಿತರ ಗುಂಪು ದೇವಸ್ಥಾನವೊಂದರ ಮೇಲೆ ರಾಕೆಟ್ ಲಾಂಚರ್ ಬಳಸಿ ದಾಳಿ ನಡೆಸಿದ ಹಿಂದೆಯೇ, ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿರುವ ವಿವಿಧ ದೇವಸ್ಥಾನಗಳಿಗೆ ಪೊಲೀಸರು ಬಿಗಿ ಭದ್ರತೆಯನ್ನು ಏರ್ಪಡಿಸಿದ್ದು, 400 ಸಿಬ್ಬಂದಿ ನಿಯೋಜಿಸಿದ್ದಾರೆ.

ಸಿಂಧ್‌ನ ಕಾಶ್ಮೋರಾ ವಲಯದಲ್ಲಿಯ ದೇವಸ್ಥಾನವೊಂದರ ಮೇಲೆ ಭಾನುವಾರ ಡಕಾಯಿತರು ದಾಳಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಬಿಗಿ ಭದ್ರತೆಗೆ ಆದೇಶ ನೀಡಲಾಗಿದೆ ಎಂದು ಸ್ಥಳೀಯ ವೆಬ್ ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ. '400 ಮಂದಿ ಸಿಬ್ಬಂದಿ ನಿಯೋಜಿಸಿದ್ದು, ಎರಡು ತಿಂಗಳ ಕಾಲ ಬಿಗಿ ಭದ್ರತೆ ನೀಡಲಾಗುವುದು. ರಕ್ಷಣಾ ಸಿಬ್ಬಂದಿಗೆ ಹಿಂದೂಗಳು ಅಗತ್ಯ ಸಹಕಾರ ನೀಡಬೇಕು' ಎಂದು ಸಿಂಧ್ ಪ್ರಾಂತ್ಯದ ಐಜಿಪಿ ಮನವಿ ಮಾಡಿದ್ದಾರೆ.

ತಗ್ಗಿದ ರಿಯಾಯಿತಿ • ನಿರ್ಬಂಧಗಳಿಂದಾಗಿ ಹಣ ಪಾವತಿಗೆ ಸಮಸ್ಯೆ

ರಷ್ಯಾ ತೈಲ ಖರೀದಿ ಇಳಿಕೆ ಸಾಧ್ಯತೆ

ನವದೆಹಲಿ (ರಾಯಿಟರ್ಸ್): ರಿಯಾಯಿತಿ ಇಳಿಕೆ, ಹಣ ಪಾವತಿಯಲ್ಲಿನ ಸಮಸ್ಯೆಯ ಕಾರಣದಿಂದಾಗಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದ ಪ್ರಮಾಣವು ಮುಂದಿನ ದಿನಗಳಲ್ಲಿ ಕಡಿಮೆ ಆಗಬಹುದು ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ ಶುರುವಾದ ನಂತರದಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ದಾಖಲೆಯ ಮಟ್ಟವನ್ನು ತಲುಪಿದೆ. ಭಾರತಕ್ಕೆ ರಷ್ಯಾ ದೇಶವು ಭಾರಿ ಪ್ರಮಾಣದಲ್ಲಿ



ರಿಯಾಯಿತಿ ನೀಡಿದ್ದು ಇದಕ್ಕೆ ಕಾರಣ.

ಆದರೆ ಸೆಪ್ಟೆಂಬರ್‌ನಲ್ಲಿ ಭಾರತ ತಲುಪಲಿರುವ ಕಚ್ಚಾ ತೈಲಕ್ಕೆ ರಿಯಾಯಿತಿಯ ಪ್ರಮಾಣವು ಪ್ರತಿ ಬ್ಯಾರೆಲ್‌ಗೆ 3 ಡಾಲರ್‌ಗೆ ಇಳಿಕೆಯಾಗಿದೆ ಎಂದು ಮೂಲಗಳು ಹೇಳಿವೆ. ಕಚ್ಚಾ ತೈಲ ಉತ್ಪಾದನೆಯನ್ನು ಕಡಿಮೆ ಮಾಡಲು ಒಪೆಕ್+ ದೇಶಗಳು ತೀರ್ಮಾನಿಸಿದ ನಂತರದಲ್ಲಿ ರಿಯಾಯಿತಿ ಪ್ರಮಾಣವು ತಗ್ಗಿದೆ. ಪಾಶ್ಚಿಮಾತ್ಯ ದೇಶಗಳು ಹೇರಿರುವ ನಿರ್ಬಂಧಗಳ ಕಾರಣದಿಂದಾಗಿ ಭಾರತದ ಕಂಪನಿಗಳಿಗೆ ರಷ್ಯಾದ ಸರಕುಗಳಿಗೆ ಹಣ ಪಾವತಿ ಮಾಡುವುದು ಕಷ್ಟವಾಗುತ್ತಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿ. ಕಂಪನಿಯು ಈಚೆಗೆ ಯುವಾನ್ (ಚೀನಾದ ಕರೆನ್ಸಿ) ಬಳಸಿ ಹಣ ಪಾವತಿಸಬೇಕಾಯಿತು.

ಆದರೆ ಈಗ ಭಾರತಕ್ಕೆ ಹೆಚ್ಚಿನ ರಿಯಾಯಿತಿ ದರದಲ್ಲಿ ಹೆಚ್ಚು ಕಚ್ಚಾ ತೈಲವನ್ನು ಪೂರೈಸಲು ಇರಾಕ್ ಮುಂದೆ ಬಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈಗ ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುತ್ತಿರುವ ದೇಶಗಳ ಸಾಲಿನಲ್ಲಿ ಇರಾಕ್ ಎರಡನೆ ಸ್ಥಾನದಲ್ಲಿದೆ.

'ರಿಯಾಯಿತಿ ಪ್ರಮಾಣವು ಕಡಿಮೆ ಆಗುತ್ತಿದೆ ಎಂಬುದು ತಿಳಿದಿದೆ. ಆದರೆ ಸೆಪ್ಟೆಂಬರ್‌ನಲ್ಲಿ ರಷ್ಯಾದಿಂದ ರವಾನೆ ಆಗುವ ತೈಲದ ಮೇಲೆ ಎಷ್ಟು ರಿಯಾಯಿತಿ ಸಿಗಲಿದೆ ಎಂಬುದು ಗೊತ್ತಾಗಿಲ್ಲ. ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 60 ಡಾಲರ್‌ಗಿಂತ ಹೆಚ್ಚಿದ್ದರೆ ನಾವು ರಷ್ಯಾದಿಂದ ತೈಲ ಖರೀದಿಸುವುದಿಲ್ಲ' ಎಂದು ತೈಲ ಸಂಸ್ಕರಣಾ ಕಂಪನಿಯೊಂದರ ಮೂಲಗಳು ಹೇಳಿವೆ.

ಉಕ್ರೇನ್ ಯುದ್ಧ: ಐರೋಪ್ಯ ಒಕ್ಕೂಟ, ಲ್ಯಾಟಿನ್ ಅಮೆರಿಕ ನಡುವೆ ಭಿನ್ನಮತ

ಬ್ರಸೆಲ್ಸ್ (ಎಪಿ): ಉಕ್ರೇನ್ ಮೇಲಿನ ರಷ್ಯಾ ಆಕ್ರಮಣಕ್ಕೆ ಸಂಬಂಧಿಸಿದ ವಿಚಾರ ಐರೋಪ್ಯ ಒಕ್ಕೂಟ, ಲ್ಯಾಟಿನ್ ಅಮೆರಿಕ ನಾಯಕರ ನಡುವೆ ಮಂಗಳವಾರ ಭಿನ್ನಮತ ಸೃಷ್ಟಿಯಾಯಿತು.

ಐರೋಪ್ಯ ಒಕ್ಕೂಟ - ಲ್ಯಾಟಿನ್ ಅಮೆರಿಕ ಶೃಂಗದ ಕೊನೆ ದಿನದ ಸಭೆ ಮಂಗಳವಾರ ನಡೆಯಿತು. ಹೊಸ ಆರ್ಥಿಕ ಉಪಕ್ರಮ, ಹೆಚ್ಚುತ್ತಿರುವ ಚೀನೀ ಪ್ರಭಾವವನ್ನು ತಡೆಯಲು ಅಗತ್ಯವಿರುವ ಸಹಕಾರದ ಕುರಿತು ಚರ್ಚಿಸಲು ಐರೋಪ್ಯ ಒಕ್ಕೂಟ ಶೃಂಗದಲ್ಲಿ ಉತ್ಸುಕತೆ ತೋರಿತು. ಆದರೆ, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ರಾಷ್ಟ್ರಗಳ ನಾಯಕರು ಶತಮಾನಗಳಷ್ಟು ಹಳೆಯದಾದ ವಸಾಹತು ಮತ್ತು ದಾಸ್ಯದ ವಿಚಾರಗಳನ್ನು ಚರ್ಚೆಯ ಮುನ್ನೆಲೆಗೆ ತರಲು ಯತ್ನಿಸಿದರು.

ಈ ಮಧ್ಯೆ, ಉಕ್ರೇನ್ ಮೇಲಿನ ರಷ್ಯಾ ಯುದ್ಧದ ವಿಚಾರವನ್ನು ಐರೋಪ್ಯ ಒಕ್ಕೂಟ ಪ್ರಸ್ತಾಪಿಸಿತು. ಇದಕ್ಕೆ ಆಕ್ಷೇಪಿಸಿದ ಲ್ಯಾಟಿನ್ ಅಮೆರಿಕ ರಾಷ್ಟ್ರಗಳು, 'ಶೃಂಗಸಭೆಯು ಯುದ್ಧದ ಕುರಿತ ಪ್ರವಚನಗಳಿಗೆ ವೇದಿಕೆಯಾಗಬಾರದು. ಇತರ ವಿಚಾರಗಳ ಚರ್ಚೆಗೆ ಬಳಕೆಯಾಗಬೇಕು' ಎಂದವು.

ಹೀಗಾಗಿ, ಐರೋಪ್ಯ ಒಕ್ಕೂಟ ಮತ್ತು ಲ್ಯಾಟಿನ್ ಅಮೆರಿಕ ರಾಷ್ಟ್ರಗಳ ನಡುವೆ ದೀರ್ಘ ಕಾಲದಿಂದಲೂ ಬಾಕಿ ಉಳಿದಿದ್ದ ವ್ಯಾಪಾರ ಒಪ್ಪಂದದ ವಿಷಯಗಳು ಚರ್ಚೆಯಾಗದೇ ಉಳಿದವು.

₹31.93 ಕೋಟಿ ಅಕ್ರಮ: ಮಾಜಿ ವ್ಯವಸ್ಥಾಪಕ ಸೆರೆ

ನವದೆಹಲಿ: ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ)ವು ಖಾಸಗಿ ಬ್ಯಾಂಕ್‌ನ ಮಾಜಿ ವ್ಯವಸ್ಥಾಪಕರೊಬ್ಬರನ್ನು ಇತ್ತೀಚೆಗೆ ಬಂಧಿಸಿದೆ.

ಪಟ್ನಾ ಮೂಲದ ಸಮಿತ್ ಕುಮಾರ್ ಬಂಧಿತ. ಇ.ಡಿ ಅಧಿಕಾರಿಗಳು ಅವರನ್ನು ಜುಲೈ 10ರಂದು ವಶಕ್ಕೆ ಪಡೆದಿದ್ದು, ಜು. 11ರಂದು ಹಣ 'ಅಕ್ರಮ ವರ್ಗಾವಣೆ ತಡೆ ಕಾಯಿದೆ' (ಪಿಎಂಎಲ್‌ಎ) ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಲಯವು ಅವರನ್ನು ಜುಲೈ 20ರ ವರೆಗೆ ಇ.ಡಿ ವಶಕ್ಕೆ ನೀಡಿದೆ.

ಪಟ್ನಾದ ಬೋರಿಂಗ್ ರಸ್ತೆ ವ್ಯವಸ್ಥಾಪಕರಾಗಿದ್ದ ವೇಳೆ ಸಮಿತ್ 'ಭೂಸ್ವಾಧೀನಗಳ ಸಕ್ಷಮ ಪ್ರಾಧಿಕಾರ ಮತ್ತು ಜಿಲ್ಲಾ ಭೂಸ್ವಾಧೀನ ಅಧಿಕಾರಿ (ಸಿಎಎಲ್‌ಎ ಕಮ್ ಡಿಎಲ್‌ಎಒ)'ಗಳ ಖಾತೆಗಳಿಂದ ನಕಲಿ ಖಾತೆಗಳಿಗೆ, 13 ವಹಿವಾಟುಗಳಲ್ಲಿ ₹31.93 ಕೋಟಿ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದರು ಎಂದು ಆರೋಪಿಸಲಾಗಿದೆ. ಈ ಬಗ್ಗೆ ಬಿಹಾರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ವಂಚನೆಯಲ್ಲಿನ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಇ.ಡಿ ಪ್ರಕರಣ ದಾಖಲಿಸಿದೆ.

ಮುತ್ತು, ಆಭರಣ ರಫ್ತು ತಗ್ಗುವ ಸಂಭವ

ನವದೆಹಲಿ (ಪಿಟಿಐ): ಭಾರತದಿಂದ ರಫ್ತಾಗುವ ಮುತ್ತುಗಳು ಹಾಗೂ ಆಭರಣಗಳ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 10ರಿಂದ ಶೇ 15ರವರೆಗೆ ಕಡಿಮೆ ಆಗಬಹುದು ಎಂದು ಮುತ್ತುಗಳು ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿಯ (ಜಿಜೆಇಪಿಸಿ) ಅಧ್ಯಕ್ಷ ವಿಪುಲ್ ಶಾ ಹೇಳಿದ್ದಾರೆ.

ಭಾರತದ ಮುತ್ತುಗಳು ಹಾಗೂ ಆಭರಣಗಳಿಗೆ ಪ್ರಮುಖ ಮಾರುಕಟ್ಟೆಯಾಗಿರುವ ಅಮೆರಿಕ ಮತ್ತು ಚೀನಾದಲ್ಲಿ ಬೇಡಿಕೆ ಕಡಿಮೆ ಆಗುತ್ತಿರುವುದು ರಫ್ತು ತಗ್ಗಬಹುದು ಎಂಬ ಅಂದಾಜಿಗೆ ಕಾರಣ ಎಂದು ಅವರು ಹೇಳಿದ್ದಾರೆ.

2022–23ನೆಯ ಹಣಕಾಸು ವರ್ಷದಲ್ಲಿ ರಫ್ತು ಪ್ರಮಾಣವು ಶೇ 2.48ರಷ್ಟು ಹೆಚ್ಚಳವಾಗಿ, ₹3 ಲಕ್ಷ ಕೋಟಿಗೆ ತಲುಪಿದೆ. 'ಅಮೆರಿಕ ಹಾಗೂ ಚೀನಾ ಮಾರುಕಟ್ಟೆಗಳು ದೇಶದ ಮುತ್ತುಗಳು ಹಾಗೂ ಆಭರಣಗಳಿಗೆ ಬಹಳ ಮುಖ್ಯ. ಆದರೆ ಅಲ್ಲಿ ಬೇಡಿಕೆ ಮಂದವಾಗುತ್ತಿದೆ. ಸಾಲಗಳ ಮೇಲಿನ ಬಡ್ಡಿ ಹೆಚ್ಚಳ, ಹಣದುಬ್ಬರ ಏರಿಕೆ, ಗ್ರಾಹಕರಲ್ಲಿ ಖರೀದಿ ವಿಶ್ವಾಸ ಕಡಿಮೆ ಆಗುತ್ತಿರುವುದು ಪರಿಣಾಮ ಬೀರಿವೆ' ಎಂದು ಶಾ ಹೇಳಿದ್ದಾರೆ. ಭಾರತದಿಂದ ರಫ್ತಾಗುವ ಮುತ್ತುಗಳು ಮತ್ತು ಆಭರಣಗಳಲ್ಲಿ ವಜ್ರದ ಪಾಲು ಶೇ 55ಕ್ಕಿಂತ ಹೆಚ್ಚು ಇದೆ.

'ಒಟಿಟಿಯಲ್ಲಿ ಭಾರತೀಯ ಸಂಸ್ಕೃತಿ ಹೀಗಳೆಯಲು ಅವಕಾಶ ನೀಡುವುದಿಲ್ಲ'

ನವದೆಹಲಿ (ಪಿಟಿಐ): 'ರಚನಾತ್ಮಕ ಸ್ವಾತಂತ್ರ್ಯ'ದ ಹೆಸರಿನಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಮಾಜವನ್ನು ತುಚ್ಛವಾಗಿ ಬಿಂಬಿಸಲು ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಒಟಿಟಿ ವೇದಿಕೆಗಳಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಮಂಗಳವಾರ ಹೇಳಿದರು.

ಒಟಿಟಿ ವೇದಿಕೆಗಳ ಪ್ರತಿನಿಧಿಗಳ ಜೊತೆ ದೆಹಲಿಯಲ್ಲಿ ನಡೆಸಿದ ಸಭೆಯಲ್ಲಿ ಅವರು ಹೀಗೆ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಅಪಾಯಕಾರಿ ಪ್ರಚಾರ ಮತ್ತು ಸೈದ್ಧಾಂತಿಕ ಪಕ್ಷಪಾತಕ್ಕಾಗಿ ಒಟಿಟಿ ವೇದಿಕೆಗಳನ್ನು ಸಾಧನಗಳನ್ನಾಗಿ ಬಳಸಬೇಡಿ ಎಂದು ಕೂಡಾ ಠಾಕೂರ್ ಅವರು ಹೇಳಿದ್ದಾರೆ.

₹41.9 ಕೋಟಿ ನಿಶ್ಚಿತ ಠೇವಣಿ ಜಪ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಮಿಳುನಾಡಿನ ಉನ್ನತ ಶಿಕ್ಷಣ ಸಚಿವ ಕೆ.ಪೊನ್ಮುಡಿ ಅವರಿಗೆ ಸೇರಿದ್ದ ₹41.9 ಕೋಟಿ ನಿಶ್ಚಿತ ಠೇವಣಿ ಮತ್ತು ₹81.7 ಲಕ್ಷ ನಗದು ಮತ್ತು ವಿದೇಶಿ ಕರೆನ್ಸಿಯನ್ನು ಜಪ್ತಿ ಮಾಡಿದ್ದಾರೆ.

ಈ ಮಧ್ಯೆ, 11 ವರ್ಷದ ಹಳೆಯ ಪ್ರಕರಣದ ಸಂಬಂಧ ಮಂಗಳವಾರ ಸತತ ಎರಡನೇ ದಿನವೂ ವಿಚಾರಣೆಗೆ ಸಚಿವರು ಇ.ಡಿ ಎದುರು ಹಾಜರಾಗಿದ್ದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗೋವಿಂದರಾಜ್, ಬೆಂಗಳೂರು

● ಪ್ರಶ್ನೆ: **ನಾನು ಮ್ಯೂಚುವಲ್ ಫಂಡ್ ಹೂಡಿಕೆದಾರ. ಕೆಲವು ವರ್ಷಗಳ ಉಳಿತಾಯದಿಂದ ಹೂಡಿಕೆ ಮಾಡಿ ನನ್ನ ಒಟ್ಟಾರೆ ಹೂಡಿಕೆಯನ್ನು ಹೆಚ್ಚಿಸಿದ್ದೇನೆ. ಈಗ ನನ್ನ ಪೋರ್ಟ್‌ಫೋಲಿಯೊ ಸುಮಾರು ಶೇಕಡ 12ರ ವಾರ್ಷಿಕ ಬೆಳವಣಿಗೆ ದರ ತೋರಿಸುತ್ತಿದೆ. ಇತ್ತೀಚೆಗೆ ಷೇರು ಮಾರುಕಟ್ಟೆ ಏರುತ್ತಾ ಸಾಗಿದೆ. ಒಂದು ವೇಳೆ ಹಠಾತ್ ಆಗಿ ಮಾರುಕಟ್ಟೆ ಕೆಳಮುಖ ಚಲಿಸಿದರೆ ಏನು ಮಾಡುವುದು ಎಂಬ ಆತಂಕ ಇದೆ. ಬ್ಯಾಲೆನ್ಸ್ಡ್ ಫಂಡ್, ಅಡ್ವಾಂಟೇಜ್ ಫಂಡ್ ಇತ್ಯಾದಿ ಫಂಡ್‌ಗಳು ಈಕ್ವಿಟಿ ಫಂಡ್‌ಗಳಿಗಿಂತ ಉತ್ತಮವೇ? ಬಂದ ಲಾಭವು ಇಲ್ಲವಾಗದಂತೆ ಹೂಡಿಕೆ ನಿಭಾಯಿಸುವುದು ಹೇಗೆ?**

ಉತ್ತರ: ಮ್ಯೂಚುವಲ್ ಫಂಡ್‌ಗಳು ದೀರ್ಘಾವಧಿಯಲ್ಲಿ ಉತ್ತಮ ಹೂಡಿಕೆ ಉತ್ಪನ್ನಗಳು. ಏರುಗತಿಯಲ್ಲಿರುವ ಮಾರುಕಟ್ಟೆ, ಹೂಡಿಕೆ ಮಾಡಿದ ಫಂಡ್‌ಗಳ ಗುಣಮಟ್ಟ, ಅಂತಹ ಫಂಡ್‌ಗಳಿಗೆ ಆಧಾರವಾಗಿರುವ ಷೇರುಗಳ ಪ್ರಸ್ತುತ ಮೌಲ್ಯ ಹಾಗೂ ಆಯ್ಕೆ ಮಾಡಿದ ಫಂಡ್‌ಗಳ ಧ್ಯೇಯೋದ್ದೇಶಗಳ ಆಧಾರದ ಮೇಲೆ ನಮಗೆ ಬರುವ ಲಾಭ-ನಷ್ಟ ನಿರ್ಧಾರವಾಗುತ್ತದೆ. ಗಳಿಸಿದ ಲಾಭವು ಕಳೆದುಹೋಗಬಾರದು ಎಂಬುದು ಎಲ್ಲ ಹೂಡಿಕೆದಾರರ ಸಹಜ ಆಕಾಂಕ್ಷೆ. ನೀವು ಉಲ್ಲೇಖಿಸಿರುವ ಈಕ್ವಿಟಿ ಫಂಡ್, ಬ್ಯಾಲೆನ್ಸ್ಡ್ ಫಂಡ್, ಅಡ್ವಾಂಟೇಜ್ ಫಂಡ್ ಇತ್ಯಾದಿಗಳು ವಿಭಿನ್ನ ಹೂಡಿಕೆ ಮಾರ್ಗ ಅನುಸರಿಸುತ್ತವೆ.

ಈಕ್ವಿಟಿ ಫಂಡ್: ಈಕ್ವಿಟಿ ಫಂಡ್‌ಗಳು ತಮ್ಮ ಹೆಚ್ಚಿನ ಮೊತ್ತವನ್ನು ಷೇರುಗಳಲ್ಲೇ ಹೂಡಿಕೆ ಮಾಡುತ್ತವೆ. ಪ್ರಸ್ತುತ ನಿಯಮಗಳ ಪ್ರಕಾರ, ಈಕ್ವಿಟಿ ಮ್ಯೂಚುವಲ್ ಫಂಡ್ ಯೋಜನೆಗಳು ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಕನಿಷ್ಠ ಶೇಕಡ 65ರಷ್ಟು ಮೊತ್ತವನ್ನು ಹೂಡಿಕೆ ಮಾಡಬೇಕು. ಅಂದರೆ, ಷೇರುಪೇಟೆ ಏರುಗತಿಯಲ್ಲಿ ಇರುವ ಸಂದರ್ಭದಲ್ಲಿ ಹೂಡಿಕೆ ಮಾಡಿದರೆ ಇದು ಅಧಿಕ ಲಾಭ ನೀಡುತ್ತದೆ.

ಬ್ಯಾಲೆನ್ಸ್ಡ್ ಫಂಡ್: ಇಲ್ಲಿ ಹಣವನ್ನು ಈಕ್ವಿಟಿ ಮತ್ತು ಸಾಲಪತ್ರಗಳಲ್ಲಿ ಬಹುತೇಕ ಸಮ ಪ್ರಮಾಣದಲ್ಲಿ ಹೂಡಿಕೆ ಮಾಡಲಾಗುತ್ತದೆ. ಉದಾಹರಣೆಗೆ, ಗರಿಷ್ಠ ಶೇ 60ರಷ್ಟು ಮೊತ್ತವನ್ನು ಈಕ್ವಿಟಿಗಳಲ್ಲಿ, ಇನ್ನುಳಿದ ಮೊತ್ತವನ್ನು ಸಾಲಪತ್ರಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಮಾರುಕಟ್ಟೆಗಳು ಗರಿಷ್ಠ ಮಟ್ಟವನ್ನು ತಲುಪಿದಾಗ ಅಥವಾ ಅತಿ ದುಬಾರಿ ಆದಾಗ, ಸಂಭವನೀಯ ಅಪಾಯ ತಡೆಯಲು ಒಂದಿಷ್ಟು ಮೊತ್ತವನ್ನು ಈಕ್ವಿಟಿಗಳಿಂದ ತೆಗೆದು ನಿಗದಿತ ಸಾಲಪತ್ರಗಳಿಗೆ ವರ್ಗಾಯಿಸಲಾಗುತ್ತದೆ. ಬಂಡವಾಳದ ಮೇಲಿನ ಲಾಭವನ್ನು ಹಾಗೆಯೇ ಇರಿಸಿ, ಸ್ಥಿರ ಆದಾಯ ಪಡೆಯುವ ಕೆಲಸವನ್ನೂ ಮಾಡಲಾಗುತ್ತದೆ. ಇದು ಹೂಡಿಕೆದಾರರಿಗೆ ಆಗುವ ಲಾಭ-ನಷ್ಟದಲ್ಲಿ ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತದೆ. ಇವು ಈಕ್ವಿಟಿ ಫಂಡ್‌ಗಳಷ್ಟು ತ್ವರಿತವಾಗಿ ಮಾರುಕಟ್ಟೆಯ ಏರಿಳಿತಗಳಿಗೆ ಸ್ಪಂದಿಸುವುದಿಲ್ಲ.

ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್: ಇವು ಬ್ಯಾಲೆನ್ಸ್ಡ್ ಫಂಡ್‌ಗಳಂತೆಯೇ ಈಕ್ವಿಟಿ ಮತ್ತು ಸಾಲಪತ್ರಗಳಲ್ಲಿ ಹೂಡಿಕೆ ಮಾಡುತ್ತವೆ. ಆದರೆ ಇಲ್ಲಿ, ಮಾರುಕಟ್ಟೆ ಏರಿಳಿತದ ಸಂದರ್ಭಕ್ಕೆ ತಕ್ಕಂತೆ ಆಂತರಿಕವಾಗಿ ಹೂಡಿಕೆ ಹಣದ ಹಂಚಿಕೆ ವಿಚಾರವಾಗಿ ಯಾವುದೇ ಮಿತಿ ಇಲ್ಲದೆ ಮ್ಯೂಚುವಲ್ ಫಂಡ್ ನಿರ್ವಾಹಕರು ಸಮಯೋಚಿತ ನಿರ್ಧಾರ ಕೈಗೊಳ್ಳುತ್ತಾರೆ. ಅಂದರೆ ಮಾರುಕಟ್ಟೆ ಮೌಲ್ಯ ಹೆಚ್ಚಿರುವಾಗ ಈಕ್ವಿಟಿ ವಿಭಾಗಕ್ಕೆ ಹಂಚಿಕೆ ಕಡಿಮೆ ಮಾಡಲಾಗುತ್ತದೆ ಮತ್ತು ಮೌಲ್ಯ ಕಡಿಮೆಯಾದಾಗ ಪುನಃ ಈಕ್ವಿಟಿ ಹೂಡಿಕೆಯನ್ನು ಹೆಚ್ಚಿಸಲಾಗುತ್ತದೆ. ಪ್ರಸ್ತುತ ನಿಮ್ಮ ಪ್ರಶ್ನೆಯಲ್ಲಿ ನೀವು ಯಾವ ವರ್ಗದ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಿದ್ದೀರಿ ಎಂಬುದನ್ನು ತಿಳಿಸಿಲ್ಲ. ನಿಮ್ಮ ಆರ್ಥಿಕ ಅಪಾಯ ತಡೆಯುವ ಸಾಮರ್ಥ್ಯಕ್ಕೆ ಸರಿಯಾಗಿ ನಿಮ್ಮ ಹೂಡಿಕೆಗಳನ್ನು ಬದಲಾಯಿಸಿಕೊಳ್ಳಿ.

ಚಂದ್ರಶೇಖರ್ ಕೆ.ಎನ್., ಊರು ತಿಳಿಸಿಲ್ಲ

● ಪ್ರಶ್ನೆ: **ನನ್ನ ವಯಸ್ಸು 67 ವರ್ಷ. ಕೇಂದ್ರ ಸರ್ಕಾರದ ಪಿಂಚಣಿದಾರ. ಆರ್ಥಿಕ ವರ್ಷ 2022-23ರಲ್ಲಿ ನನ್ನ ಪಿಂಚಣಿ ಆದಾಯ ₹4,68,000 ಮತ್ತು ಬಡ್ಡಿ ಆದಾಯ ₹2,56,000. ಹಿರಿಯ ನಾಗರಿಕರ ಉಳಿತಾಯ ಖಾತೆಯಲ್ಲಿ ಹೂಡಿಕೆ ಮಾಡಿರುವ ಮೊತ್ತ ₹1,50,000. ಹಳೆಯ ಯೋಜನೆ ಮತ್ತು ಹೊಸ ಯೋಜನೆಯ ಅಡಿ ಆದಾಯ ತೆರಿಗೆ ಹೊಣೆಗಾರಿಕೆಯ ಬಗ್ಗೆ ದಯವಿಟ್ಟು ಸಲಹೆ ನೀಡಿ.**

ಉತ್ತರ: ನೀವು ಹಿರಿಯ ನಾಗರಿಕ. ಪಿಂಚಣಿ ಹಾಗೂ ಬಡ್ಡಿ ಮೂಲಗಳಿಂದ ಆದಾಯ ಗಳಿಸುತ್ತಿದ್ದೀರಿ. ಹಿರಿಯ ನಾಗರಿಕರ ಉಳಿತಾಯ ಖಾತೆಯಲ್ಲಿ ಕೂಡ ನೀವು ಹಣ ತೊಡಗಿಸಿದ್ದೀರಿ. ಪ್ರಶ್ನೆಯಲ್ಲಿ ತಿಳಿಸಿದಂತೆ ನಿಮ್ಮ ಒಟ್ಟು ಆದಾಯ ₹7.24 ಲಕ್ಷ. ನಿಮ್ಮ ಪಿಂಚಣಿ ಆದಾಯ ಹಾಗೂ ಬಡ್ಡಿ ಆದಾಯ ಇವೆರಡೂ ತೆರಿಗೆಗೊಳಪಡುವ ಆದಾಯಗಳು. ಆರ್ಥಿಕ ವರ್ಷ 2022-23ಕ್ಕೆ ಸಂಬಂಧಿಸಿದಂತೆ, ನೀವು ಹಳೆ ತೆರಿಗೆ ಪದ್ಧತಿ ಅನುಸರಿಸಿದರೆ ಪಿಂಚಣಿ ಮೊತ್ತದ ಮೇಲೆ ಸ್ಟ್ಯಾಂಡರ್ಡ್ ಡಿಡಕ್ಷನ್ ₹50,000, ಸೆಕ್ಷನ್ 80 ಸಿ ಅಡಿ ₹1.50 ಲಕ್ಷ ಹಾಗೂ ಹಿರಿಯ ನಾಗರಿಕರು ಗಳಿಸುವ ಬಡ್ಡಿಗೆ ಸಿಗುವ ₹50,000ದ ವಿನಾಯಿತಿ ಸಿಗುತ್ತದೆ . ಒಟ್ಟು ₹2.50 ಲಕ್ಷಕ್ಕೆ ವಿನಾಯಿತಿ ಇದೆ. ಉಳಿಯುವ ಮೊತ್ತ ₹4.74 ಲಕ್ಷ. ನಿಮ್ಮ ಮೂಲ ತೆರಿಗೆ ಆದಾಯ ವಿನಾಯಿತಿ ಮಿತಿ ₹3 ಲಕ್ಷವಾದರೂ, ಸೆಕ್ಷನ್ 87ಎ ಅಡಿ ತೆರಿಗೆ ರಿಬೇಟ್ ಇರುವ ಕಾರಣ ತೆರಿಗೆ ಪಾವತಿಸುವ ಅಗತ್ಯವಿರುವುದಿಲ್ಲ. ಹೊಸ ಪದ್ಧತಿಯಡಿ ಯಾವುದೇ ಹೂಡಿಕೆಗೆ ಹಾಗೂ ಬಡ್ಡಿ ಆದಾಯಕ್ಕೆ ವಿನಾಯಿತಿ ಇಲ್ಲದ ಕಾರಣ ಸಂಪೂರ್ಣ ಆದಾಯಕ್ಕೆ ತೆರಿಗೆ ಅನ್ವಯವಾಗುತ್ತದೆ. ಹೀಗಾಗಿ ಆರ್ಥಿಕ ವರ್ಷ 2022-23ಕ್ಕೆ ಸಂಬಂಧಿಸಿ ಹಳೆ ತೆರಿಗೆ ಪದ್ಧತಿ ಸೂಕ್ತ.

ಇನ್ನು ಮುಂದಿನ ವರ್ಷ ನಿಮ್ಮ ಆದಾಯ ಇದೇ ಮಿತಿಯೊಳಗಿದ್ದರೆ, ಹೊಸ ತೆರಿಗೆ ಪದ್ಧತಿ ಸೂಕ್ತ. ಕಾರಣ ಪಿಂಚಣಿಯ ಮೇಲೆ ₹50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಪಡೆಯುವುದಕ್ಕೆ ಅನುವು ಮಾಡಲಾಗಿದೆ. ಹಾಗೂ ಹೊಸ ಪದ್ಧತಿ ಅನುಸರಿಸುವವರಿಗೆ ಅನುಕೂಲವಾಗಲೆಂದು, ಸೆಕ್ಷನ್ 87ಎ ಅಡಿ ತೆರಿಗೆಗೊಳಪಡುವ ಆದಾಯ ₹7 ಲಕ್ಷದ ತನಕ ಇದ್ದರೆ, ಪೂರ್ಣ ತೆರಿಗೆಗೆ ರಿಬೇಟ್ ಕೂಡಾ ಸಿಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ

18-7-2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	12000-12100
ದಪ್ಪ ಗುಜರಾತ್(ಹೊಸ)	12800-12900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1780
ಒಂದು ವಾರದ ಡೆಲಿವರಿ	1775
ಸೋಯಾ ಕಚ್ಚಾ	880
ಪಾಮ್ ವಾರದ ಡೆಲಿವರಿ	858
ಸೂರ್ಯಕಾಂತಿ ಎಣ್ಣೆ ಕಚ್ಚಾ	850

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59300
ಬೆಳ್ಳಿ ಕೆ.ಜಿ 75100

ಕಕ್ಷೆ ಬದಲಾವಣೆ: ಮೂರನೇ ಪ್ರಕ್ರಿಯೆ ಪೂರ್ಣ

ಬೆಂಗಳೂರು (ಪಿಟಿಐ): ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ 'ಚಂದ್ರಯಾನ 3'ರ ಗಗನ ನೌಕೆಯ ಕಕ್ಷೆ ಬದಲಿಸುವ ಮೂರನೇ ಹಂತದ ಪ್ರಕ್ರಿಯೆಯು ಮಂಗಳವಾರ ಯಶಸ್ವಿಯಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಚಂದ್ರನ ದಕ್ಷಿಣ ಧ್ರುವದತ್ತ ತಲುಪಲು ಬಾಹ್ಯಾಕಾಶ ನೌಕೆಗೆ ಅಗತ್ಯವಿರುವ ನೂಕುಬಲ ನೀಡುವ ತೃತೀಯ ಹಂತದ ಪ್ರಕ್ರಿಯೆ ಕೂಡ ಯಶಸ್ವಿಯಾಗಿದೆ. ಜುಲೈ 20ರಂದು ಮಧ್ಯಾಹ್ನ 2ರಿಂದ 3 ಗಂಟೆಯ ನಡುವೆ ಮುಂದಿನ ಹಂತದ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದೆ.

ಇಸ್ರೊದ ಬೆಂಗಳೂರಿನಲ್ಲಿರುವ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ನೌಕೆಗೆ ಅಗತ್ಯ ನೂಕುಬಲ ನೀಡುವ ಈ ಪ್ರಕ್ರಿಯೆಯನ್ನು ನಿರ್ವಹಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಯುದ್ಧ ಕಾಲದ ಒಪ್ಪಂದ ಮುರಿದ ಪುಟಿನ್

'ಆಹಾರ ಧಾನ್ಯ ರಫ್ತು ಸ್ಥಗಿತ'

ಕೀವ್ (ಎಪಿ): ಒಡೆಸಾ ಬಂದರನ್ನು ಗುರಿಯಾಗಿಸಿ ರಷ್ಯಾ ನಡೆಸಿದ ದಾಳಿಗೆ ಪ್ರತ್ಯುತ್ತರವಾಗಿ ರಕ್ಷಣಾ ಪಡೆಗಳು ಮಂಗಳವಾರ ಪ್ರತಿದಾಳಿ ನಡೆಸಿವೆ. ಇದಕ್ಕೆ ಪ್ರತೀಕಾರವಾಗಿ ಪುಟಿನ್ ಸರ್ಕಾರವು ಯುದ್ಧ ಕಾಲದ ಒಪ್ಪಂದವನ್ನು ಮುರಿದಿದೆ. ಹಾಗಾಗಿ, ಕಪ್ಪು ಸಮುದ್ರದ ಮೂಲಕ ಬೇರೆ ದೇಶಗಳಿಗೆ ಆಹಾರ ಧಾನ್ಯಗಳ ಸಾಗಣೆ ಸ್ಥಗಿತಗೊಂಡಿದೆ ಎಂದು ಉಕ್ರೇನ್ ದೂರಿದೆ.

ರಷ್ಯಾವು ಮೊದಲಿಗೆ ಡ್ರೋನ್‌ಗಳ ಮೂಲಕ ವಾಯುಪಡೆಯನ್ನು ಗುರಿಯಾಗಿಸಿಕೊಂಡು ದಾಳಿಗೆ ಪ್ರಯತ್ನಿಸಿತ್ತು. ಬಳಿಕ ಬಂದರನ್ನು ಗುರಿಯಾಗಿಸಿಕೊಂಡು ಕ್ಷಿಪಣಿಗಳ ಮೂಲಕ ದಾಳಿಗೆ ಯತ್ನಿಸಿತ್ತು. ಇದನ್ನು ರಕ್ಷಣಾ ಪಡೆಗಳು ವಿಫಲಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂದರು ಪ್ರದೇಶದ ಮೇಲೆ ಒಟ್ಟು ಆರು ಕ್ಷಿಪಣಿಗಳು ಮತ್ತು 25 ಡ್ರೋನ್‌ಗಳ ಮೂಲಕ ದಾಳಿಗೆ ಯತ್ನಿಸಿತ್ತು. ಇವುಗಳನ್ನು ಹೊಡೆದುರುಳಿಸಲಾಗಿದೆ. ಆದರೆ, ಕೆಲವು ಕಟ್ಟಡಗಳ ಮೇಲೆ ಕ್ಷಿಪಣಿಗಳ ಅವಶೇಷ ಬಿದ್ದು ಹಾನಿಯಾಗಿದೆ. ಮನೆಯಲ್ಲಿದ್ದ ಹಿರಿಯ ನಾಗರಿಕರೊಬ್ಬರು ಗಾಯಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

'ಉಕ್ರೇನ್‌ನಿಂದ ಕಪ್ಪು ಸಮುದ್ರದ ಮೂಲಕ ಹಡಗುಗಳಲ್ಲಿ ಆಫ್ರಿಕಾ, ಮಧ್ಯಪ್ರಾಚ್ಯ ಹಾಗೂ ಏಷ್ಯಾದ ಹಲವು ದೇಶಗಳಿಗೆ ಆಹಾರ ಧಾನ್ಯಗಳನ್ನು ರಫ್ತು ಮಾಡಲಾಗುತ್ತದೆ. ಇದಕ್ಕೆ ಅನುಮತಿಸಿದ್ದ ಯುದ್ಧಕಾಲದ ಒಪ್ಪಂದವನ್ನು ರಷ್ಯಾ ಈಗ ಮುರಿದಿದೆ. ಆಹಾರ ಧಾನ್ಯಗಳನ್ನು ಅವಲಂಬಿಸಿರುವ ಜನರಿಗೆ ಇದರಿಂದ ತೊಂದರೆಯಾಗಿದೆ' ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯ ಮುಖ್ಯಸ್ಥ ಆಂಡ್ರಿ ಯೆರ್ಮಾಕ್ ಹೇಳಿದ್ದಾರೆ.

26/11 ಮಾದರಿ ದಾಳಿಯ ಬೆದರಿಕೆ: ದೂರು ದಾಖಲು

ಮುಂಬೈ (ಪಿಟಿಐ): ಪಾಕಿಸ್ತಾನದ ಮಹಿಳೆ ಸೀಮಾ ಹೈದರ್ ಅವರನ್ನು ವಾಪಸ್ ಕಳುಹಿಸದಿದ್ದರೆ 26/11 ಮಾದರಿಯಲ್ಲಿ ಭಯೋತ್ಪಾದಕ ದಾಳಿ ನಡೆಸಲಾಗುವುದು ಎಂದು ಮುಂಬೈ ಪೊಲೀಸರಿಗೆ ಕರೆ ಮಾಡಿ ಬೆದರಿಕೆ ಒಡ್ಡಿದ್ದ ಪ್ರಕರಣದಲ್ಲಿ ಅಪರಿಚಿತರ ವಿರುದ್ಧ ಸೋಮವಾರ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಮುಂಬೈನ ಸಂಚಾರ ನಿಯಂತ್ರಣ ಕೊಠಡಿಗೆ ಕರೆ ಸೋಮವಾರ ಮಾಡಿದ್ದ ಅಪರಿಚಿತ ವ್ಯಕ್ತಿಯೊಬ್ಬ, ಉರ್ದುವಿನಲ್ಲಿ ಮಾತನಾಡಿ, 'ಸೀಮಾ ಹೈದರ್ ಅವರನ್ನು ವಾಪಸ್ ಆಕೆಯ ದೇಶಕ್ಕೆ ಕಳುಹಿಸದಿದ್ದರೆ 26/11ರ ಮಾದರಿಯಲ್ಲಿ ಮುಂಬೈ ಮೇಲೆ ದಾಳಿ ಮಾಡುತ್ತೇನೆ. ಇದಕ್ಕೆ ಉತ್ತರ ಪ್ರದೇಶ ಸರ್ಕಾರವೇ ಹೊಣೆ' ಎಂದು ಹೇಳಿದ್ದ.

ಬಳಿಕ ಮುಂಬೈನ ಪೊಲೀಸರು ಈ ಬೆದರಿಕೆ ಕರೆಯ ಕುರಿತು ತನಿಖೆ ಕೈಗೊಂಡಿದ್ದಾರೆ.

ಮುಂಬೈ ಸಂಚಾರ ಪೊಲೀಸರು ಈ ಸಂಬಂಧ ಅಪರಿಚಿತ ವ್ಯಕ್ತಿಗಳ ವಿರುದ್ಧ ವರ್ಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ಪ್ರಕರಣವನ್ನು ಅಪರಾಧ ದಳಕ್ಕೆ ವರ್ಗಾವಣೆ ಮಾಡಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿಯು ಮಂಗಳವಾರವೂ ಆ್ಯಪ್ ಮೂಲಕ ದೂರವಾಣಿ ಕರೆ ಮಾಡಿದ್ದಾನೆ. ಕರೆ ಮಾಡಿದ್ದ ವ್ಯಕ್ತಿಯ ಐಪಿ ವಿಳಾಸವನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ನಿರತರಾಗಿದ್ದಾರೆ.

ಪ್ರಕರಣದ ಹಿನ್ನೆಲೆ: ಪಾಕಿಸ್ತಾನದ ಪ್ರಜೆ ಸೀಮಾ ಹೈದರ್ ಅವರು ಪಬ್‌ಜಿ ಆನ್‌ಲೈನ್ ಗೇಮ್ ಮೂಲಕ ಭಾರತದ ಸಚಿನ್ ಮೀನಾ ಅವರಿಗೆ ಪರಿಚಿತರಾಗಿದ್ದರು. ಇಬ್ಬರ ನಡುವೆ ಪ್ರೀತಿ ಬೆಳೆದಿತ್ತು. ಬಳಿಕ ಮೇ ತಿಂಗಳಲ್ಲಿ ತಮ್ಮ ನಾಲ್ವರು ಮಕ್ಕಳೊಂದಿಗೆ ಉತ್ತರಪ್ರದೇಶದ ನೋಯ್ಡಾಕ್ಕೆ ಬಂದಿದ್ದ ಸೀಮಾ ಅವರು ಸಚಿನ್ ಅವರನ್ನು ವಿವಾಹವಾಗಿದ್ದರು. ವೀಸಾ ಇಲ್ಲದೆ ನೇಪಾಳದ ಮೂಲಕ ಭಾರತವನ್ನು ಪ್ರವೇಶಿಸಿದ್ದ ಸೀಮಾ ಅವರನ್ನು ಉತ್ತರ ಪ್ರದೇಶದ ಪೊಲೀಸರು ಬಂಧಿಸಿದ್ದರು.

ಗ್ರೇಟರ್ ನೋಯ್ಡಾದಲ್ಲಿ ಬಲಪಂಥೀಯ ಒಲವುಳ್ಳ ಸಣ್ಣ ಗುಂಪೊಂದು ಸೀಮಾ ವಿರುದ್ಧ ಪ್ರತಿಭಟನೆ ನಡೆಸಿ, 72 ಗಂಟೆಯೊಳಗೆ ಅವರನ್ನು ದೇಶದಿಂದ ಹೊರಗೆ ಹಾಕಬೇಕೆಂದು ಒತ್ತಾಯಿಸಿತ್ತು. ಒತ್ತಡಕ್ಕೆ ಮಣಿದಿದ್ದ ಉತ್ತರಪ್ರದೇಶದ ಭಯೋತ್ಪಾದನಾ ನಿಗ್ರಹ ದಳದ ಪೊಲೀಸರು ಸೀಮಾ ಹಾಗೂ ಸಚಿನ್ ದಂಪತಿಯನ್ನು ಬಂಧಿಸಿ ವಿಚಾರಣೆ ಕೈಗೊಂಡಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಪಾರ್ಟ್ ಟೈಮ್ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ (ದಕ್ಷಿಣ ಭಾರತೀಯ ಸಸ್ಯಾಹಾರಿ, ಮಾಂಸಹಾರಿ) ಕನಕಪುರ ರಸ್ತೆ, ಬೆಂಗಳೂರು. ಸಂಪರ್ಕಿಸಿ: 9880839279.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

General

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ತಕ್ಷಣ ಬೇಕಾಗಿದ್ದಾರೆ ಕಂಪನಿ ಆಫೀಸ್‌ಗಳಿಗೆ, 5ನೇ, 10ನೇ,ಪಿಯುಸಿ, ಐಟಿಐಡಿಗ್ರಿ ಪಾಸ್/ಫೇಲ್ ನಗರ-ಗ್ರಾಮೀಣ ಹಳ್ಳಿಯುವಕರು ಯುವತಿಯರಿಗೆ, ವಸತಿಯೂಟದೊಂದಿಗೆ 16,900-45000. 9916799477, 9964140505

ರಾವ್ ಸಂಸ್ಥೆಗೆವಯಸ್ಸಾದವರನ್ನು , ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839 , 9880120052

ನಂ.1 ಆಡಿಯೋ ವಿಷುಯಲ್ ಕಂಪನಿಗೆ ಎವಿ ಟೆಕ್ನಿಷಿಯನ್‌ಸ್ ತಕ್ಷಣವೇ ಬೇಕಾಗಿದ್ದಾರೆ. ಕನಿಷ್ಠ 2 ವರ್ಷಗಳ ಎವಿ ಟೆಕ್ನಿಷಯನ್ ಅನುಭವ ಹೊಂದಿರುವುದು ಕಡ್ಡಾಯ. ನಿಮ್ಮ ರೆಸ್ಯೂಮ್ ಕಳುಹಿಸಿ: careers@actis.co.in.

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ.16,000-45,000. SSLC, PUC, DEGREEPASS/FAIL 9945791526 / 9945721526

ಪ್ರಜಾವಾಣಿ
ಉದ್ಯೋಗಾವಕಾಶ
BOOK YOUR JOB AD IN PRAJAVANI ALL KARNATAKA ON WEDNESDAY + SUNDAY
@720/-* Per Sqcm Single Column
@750/-* Per Sqcm Multi Column
conditions apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

ಪ್ರವಾಸ

Travel

★1.9.2023 13/8ದಿನಗಳು★ ದೆಹಲಿ, ಆಗ್ರಾ,ಕಾಶಿ,ಗಯಾ, ಹರಿದ್ವಾರ ಪ್ರವಾಸ. 21.09.2023 16ದಿನಗಳು ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

EDUCATION CORNER

ಸ್ಪರ್ಧಾಮಿತ್ರ ACADEMY
IAS / KAS ಉಚಿತ ತರಬೇತಿ
ಬೆಂಗಳೂರಿನ ಸ್ಪರ್ಧಾಮಿತ್ರ IAS ಅಕಾಡೆಮಿಯು 2024ರ IAS/KAS ಪೂರ್ವಭಾವಿ ಪರೀಕ್ಷೆಗೆ (Prelims) ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪದವೀದರರಿಗೆ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆ ನಡೆಸಿ ಉಚಿತ ತರಬೇತಿ ನೀಡಲಾಗುವುದು.
ಜು–23 ರಂದು ಬೆಳಿಗ್ಗೆ 10ಕ್ಕೆ
ಬೆಂಗಳೂರು, ಮೈಸೂರು, ರಾಯಚೂರು, ಕೋಲಾರ ಧಾರವಾಡ, ದಾವಣಗೆರೆ, ವಿಜಯಪುರದಲ್ಲಿ ಏಕಕಾಲಕ್ಕೆ ಪ್ರವೇಶ ಪರೀಕ್ಷೆ ನಡೆಸಲಾಗುವುದು.
www.spardhamithra.in ವೆಬ್‌ಸೈಟ್ ಮೂಲಕ ಅರ್ಜಿಹಾಕಬಹುದು.
ಅತ್ತಿಗುಪ್ಪೆ, ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು.
9535 111 133 - 9535 111 188

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ A/C ಬಸ್ 23.08.2023 06.09.2023 04.10.2023 ಕಾಶಿ,ಬುದ್ಧಗಯಾ,ಅಲಹಾಬಾದ್. 02.09.2023 20.09.2023 15.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ದೆಹಲಿ,ಜೈಪುರ್ ಆಗ್ರಾ,ಹರಿದ್ವಾರ್ ಇತ್ಯಾದಿ. 29.09.2023 ಸೋಮನಾಥ್,ದ್ವಾರಕಾ ಓಂಕಾರೇಶ್ವರ ಮಹಾಕಾಳೇಶ್ವರ. ನಿಷ್ಕಳಂಕ ಮಹಾದೇವ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 9686708171

ಕೃಷ್ಣ ಹೆರಿಟೇಜ್ ಟೂರ್ಸ್ ಕಡಿಮೆ ದರಗಳಲ್ಲಿ ಊಟ ರೂಮಿನೊಂದಿಗೆ 5/12 ದಿನಗಳು. 18.08.2023 ನವಗ್ರಹ ದರ್ಶನ ತಂಜಾವೂರು,ಕುಂಭಕೋಣಂ ಚಿದಂಬರಂ,ವೆಲಾಂಗಣಿ ತಿರುನಲ್ಲರ್ 18ಕ್ಷೇತ್ರಗಳು 6600. 29.08.2023 ಗುಜರಾತ್,ಮಧ್ಯಪ್ರದೇಶ. 21.09.2023 ಚಾರ್‌ಧಾಮ್ 9448390735 9449721678

Pilgrimage Tours

SML ಪ್ರವಾಸಗಳು14/8 ಪುರಿ ಜಗನ್ನಾಥ್, ಭುನೇಶ್ವರ.28/8: ಶಿರಡಿ 3 ಜ್ಯೋತಿರ್ಲಿಂಗ 29/8 ಕಾಶಿ, ಜಾರ್ಖಂಡ್ ಬೈದ್ಯನಾಥ್ 9591017782.

ವಾಹನ

Four Wheelers Selling

Toyota

KA03ME1869 T-COROLLA 2005 Salvage quote W.O.T-RC. Mob-9902333299

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು





ಬೆಂಗಳೂರಿನಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ಪಶ್ಚಿಮ ಬಂಗಾಳದ ಸಿಎಂ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಇತರ ನಾಯಕರನ್ನು ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ. (ಎಡಚಿತ್ರ) ದೆಹಲಿಯಲ್ಲಿ ಮಂಗಳವಾರ ನಡೆದ ಎನ್‌ಡಿಎ ಸಭೆಯಲ್ಲಿ ಪಾಲ್ಗೊಂಡಿದ್ದ ಎನ್‌ಸಿಪಿ ಮುಖಂಡ ಪ್ರಫುಲ್ ಪಟೇಲ್, ಅಪ್ನಾ ದಳ್ (ಎಸ್) ಮುಖಂಡರಾದ ಅನುಪ್ರಿಯ ಪಟೇಲ್, ಎನ್‌ಸಿಪಿಯ ಅಜಿತ್ ಪವಾರ್ ಚರ್ಚೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಎನ್‌ಡಿಎ ವಿರುದ್ಧ ‘ಇಂಡಿಯಾ’: ರಾಹುಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ನಿರುದ್ಯೋಗ ಹೆಚ್ಚುತ್ತಿದ್ದು, ಸಂಪೂರ್ಣ ಸಂಪತ್ತು ಕೆಲವು ಉದ್ಯಮಿಗಳ ವಶಕ್ಕೆ ಸೇರುತ್ತಿದೆ. ನಮ್ಮದು ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವಿನ ಹೋರಾಟವಲ್ಲ. ನಮ್ಮದು ಬಿಜೆಪಿ ವಿಚಾರಧಾರೆ, ಚಿಂತನೆಗಳ ವಿರುದ್ಧದ ಹೋರಾಟ. ದೇಶದ ಧ್ವನಿಯ ಪರ ಹೋರಾಟ. ಈ ಕಾರಣಕ್ಕೆ ಮೈತ್ರಿಗೆ ‘ಇಂಡಿಯಾ’ ಎಂದು ಹೆಸರಿಡಲಾಗಿದೆ. ಎನ್‌ಡಿಎ ಮತ್ತು ‘ಇಂಡಿಯಾ’ ಪರಸ್ಪರ ವಿರುದ್ಧ, ‘ಇಂಡಿಯಾ’ ದ್ದುಮೋದಿ ವಿರುದ್ಧದ ಹೋರಾಟ‘ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಣ್ಣಿಸಿದರು.

‘ಇಂಡಿಯಾ ವಿರುದ್ಧ ಯಾರೇ ನಿಂತರೂ ಗೆಲುವು ಯಾರಿಗೆ ಸಿಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಮಹಾರಾಷ್ಟ್ರದಲ್ಲಿ ನಡೆಯಲಿರುವ ಮುಂದಿನ ಸಭೆಯಲ್ಲಿ, ಕಾರ್ಯಯೋಜನೆ ಸಿದ್ಧಪಡಿಸಿ, ನಮ್ಮ ವಿಚಾರಧಾರೆಗಳನ್ನು ಒಂದಾಗಿ ಜನರಿಗೆ ತಿಳಿಸಬೇಕಿದೆ. ಬಿಜೆಪಿಯ ಸಿದ್ಧಾಂತಗಳು ದೇಶದ ಪರಿಕಲ್ಪನೆಯ ಮೇಲೆ ದಾಳಿ ಮಾಡುತ್ತಿದೆ. ಇದು ರಾಜಕೀಯ ಪಕ್ಷಗಳ ಹೋರಾಟವಲ್ಲ. ಇದು ಭಾರತದ ಪರಂಪರೆ, ಸಾಮರಸ್ಯದ ಭಾವ, ಸರ್ವಜನರ ಒಳಿತಿನ ರಕ್ಷಣೆಯ ಹೋರಾಟವಾಗಿದೆ. ಪ್ರಜಾಪ್ರಭುತ್ವ, ಸಂವಿಧಾನ, ಜನರ ಧ್ವನಿಯ ರಕ್ಷಣೆಗೆ ಹೋರಾಟ ಮಾಡುತ್ತಿದ್ದೇವೆ’ ಎಂದರು.

ಸಾಧ್ಯವಾದರೆ ನಮ್ಮನ್ನು ತಡೆಯಿರಿ– ಮಮತಾ: ‘ಇಂದಿನಿಂದ ನಿಜವಾದ ಸವಾಲು ಆರಂಭವಾಗಿದೆ. ಜನರಿಂದ ಆಯ್ಕೆಯಾದ ಸರ್ಕಾರ ಕೆಡಹುವುದು, ಖರೀದಿಸುವುದು ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಕೆಲಸವಾಗಿದೆ. ಹೀಗಾಗಿ, ನಾವೆಲ್ಲರೂ ಸೇರಿ ‘ಇಂಡಿಯಾ’ ಎಂಬ ಮೈತ್ರಿಕೂಟ ಸ್ಥಾಪಿಸಿದ್ದೇವೆ‘ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

‘ನಮ್ಮ ಸವಾಲುಗಳು, ಹೋರಾಟ, ಪ್ರಚಾರ ಎಲ್ಲವನ್ನು ‘ಇಂಡಿಯಾ’ ಅಡಿಯಲ್ಲಿ ಮಾಡುತ್ತೇವೆ. ನಿಮಗೆ ಸಾಧ್ಯವಾದರೆ ನಮ್ಮನ್ನು ತಡೆಯಿರಿ.’ ಎಂದು ಸವಾಲು ಹಾಕಿದರು.

‘ದೇಶವನ್ನು ಮಾರುವುದರಲ್ಲಿ, ಪ್ರಜಾಪ್ರಭುತ್ವವನ್ನು ಖರೀದಿಸುವಲ್ಲಿ ಕೇಂದ್ರ ಸರ್ಕಾರ ಮಗ್ನವಾಗಿದೆ. ಇದೇ ಕಾರಣಕ್ಕೆ ಯಾವುದೇ ಸಂಸ್ಥೆಗಳನ್ನು ಸ್ವತಂತ್ರವಾಗಿ ಕೆಲಸ ಮಾಡಲು ಬಿಡುತ್ತಿಲ್ಲ. ಯಾವುದೇ ವಿರೋಧ ಪಕ್ಷಗಳ ನಾಯಕರು ಧ್ವನಿ ಎತ್ತಿದರೆ ಅವರ ವಿರುದ್ಧ ಐಟಿ, ಇಡಿ ದಾಳಿ ಮಾಡಲಾಗುತ್ತಿದೆ’ ಎಂದರು.

ಎಲ್ಲ ಕ್ಷೇತ್ರದ ಬರ್ಬಾದ್ ಮಾಡಿದ ಮೋದಿ– ಕೇಜ್ರಿವಾಲ್: ‘ಒಂಬತ್ತು ವರ್ಷಗಳ ಹಿಂದೆ ದೇಶದ ಜನ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿಯನ್ನು ಬಹುಮತಗಳಿಂದ ಗೆಲ್ಲಿಸಿದ್ದರು. ದೇಶಕ್ಕಾಗಿ ಕೆಲಸ ಮಾಡಲು ಅವರಿಗೆ ಅವಕಾಶಗಳಿದ್ದವು. ಆದರೆ, ಅವರು ಯಾವುದೇ ಕ್ಷೇತ್ರದಲ್ಲೂ ಪ್ರಗತಿ ಸಾಧಿಸಿಲ್ಲ. ಎಲ್ಲ ಕ್ಷೇತ್ರಗಳನ್ನು ಬರ್ಬಾದ್ ಮಾಡುವಲ್ಲಿ ಯಾವುದೇ ಅವಕಾಶಗಳನ್ನು ಬಿಟ್ಟಿಲ್ಲ. ರೈಲ್ವೆ, ಆರ್ಥಿಕತೆ, ವಿಮಾನ ನಿಲ್ದಾಣ, ಭೂಮಿ, ಆಕಾಶ ಎಲ್ಲವನ್ನು ಮಾರಿದ್ದಾರೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಾಗ್ದಾಳಿ ನಡೆಸಿದರು.

ಒಂದು ಪಕ್ಷ, ವ್ಯಕ್ತಿ ವಿರುದ್ಧ ಹೋರಾಟ ಅಲ್ಲ– ಠಾಕ್ರೆ: ‘ವಿಭಿನ್ನತೆ ನಡುವೆ ನಾವು ಒಂದಾಗಿರುವುದಕ್ಕೆ ಕಾರಣ, ನಮಗಾಗಿ ಅಲ್ಲ, ದೇಶವೇ ನಮ್ಮ ಪರಿವಾರ. ನಮ್ಮ ಹೋರಾಟ ಒಂದು ಪಕ್ಷ ಅಥವಾ ಒಬ್ಬ ವ್ಯಕ್ತಿಯ ವಿರುದ್ಧ ಅಲ್ಲ’ ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಹೇಳಿದರು.

‘ಇಂಡಿಯಾ’ ನೇತೃತ್ವ: ಮೂಡದ ಒಮ್ಮತ

ಬೆಂಗಳೂರು: ಬಿಜೆಪಿಯೇತರ ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ನೇತೃತ್ವವನ್ನು ಯಾರು ವಹಿಸಬೇಕು ಎಂಬ ವಿಷಯದಲ್ಲಿ ನಾಯಕರ ನಡುವೆ ಚರ್ಚೆ ನಡೆದರೂ, ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ.

ಹೀಗಾಗಿ, ಮುಂಬೈಯಲ್ಲಿ ನಡೆಯಲಿರುವ ಮುಂದಿನ ಸಭೆಯಲ್ಲಿ 11 ಸದಸ್ಯರ ಸಮನ್ವಯ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ.

ಯುಪಿಎ ಮೈತ್ರಿಕೂಟ ಎಂದರೆ ಕಾಂಗ್ರೆಸ್ ಎಂಬಂತಾಗಿತ್ತು. ಈ ಬಾರಿ ಆ ರೀತಿ ಆಗಬಾರದು. ಮೈತ್ರಿಕೂಟದ ನೇತೃತ್ವವನ್ನು ಕೂಡ ಕಾಂಗ್ರೆಸ್ಸೇತರರೇ ವಹಿಸಬೇಕು ಎಂದು ಬಹುತೇಕ ಪ್ರಾದೇಶಿಕ ಪಕ್ಷಗಳು ಆಗ್ರಹಿಸಿವೆ. ನಿತೀಶ್ ಕುಮಾರ್, ಮಮತಾ ಬ್ಯಾನರ್ಜಿ, ಶರದ್ ಪವಾರ್ ಪರ ಕೆಲವು ಪಕ್ಷಗಳು ಒಲವು ವ್ಯಕ್ತಪಡಿಸಿವೆ. ಹೀಗಾಗಿ, ಸಮಿತಿ ರಚಿಸಿ ಮೈತ್ರಿಕೂಟದ ಸಂಚಾಲಕರನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ ಎಂದೂ ಗೊತ್ತಾಗಿದೆ.

ಸಭೆಯಲ್ಲಿ 26 ಪಕ್ಷಗಳು

ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎಎಪಿ, ಜೆಡಿಯು, ಆರ್‌ಜೆಡಿ, ಜೆಎಂಎಂ, ಎನ್‌ಸಿಪಿ, ಶಿವಸೇನಾ (ಉದ್ಧವ್ ಠಾಕ್ರೆ), ಎಸ್‌ಪಿ, ರಾಷ್ಟ್ರೀಯ ಲೋಕದಳ, ಅಪ್ನಾ ದಳ (ಕಮೆರಾವಾಡಿ), ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ, ಸಿಪಿಐ, ಸಿಪಿಐ (ಎಂ), ಸಿಪಿಐ (ಎಂಎಲ್), ರೆವೆಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್, ಎಂಡಿಎಂಕೆ, ವಿಸಿಕೆ (ವಿಡುದಲೈ ಚಿರುತೈಗಳ್ ಕಚ್ಚಿ), ಕೆಎಂಡಿಕೆ (ಕೊಂಗುನಾಡು ಮಕ್ಕಳ್ ದೇಸಿಯಾ ಕಚ್ಚಿ), ಎಂಎಂಕೆ (ಮಣಿತನೆಯ ಮಕ್ಕಳ್ ಕಚ್ಚಿ), ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್ (ಮಾಣಿ), ಕೇರಳ ಕಾಂಗ್ರೆಸ್ (ಜೋಸೆಫ್).

ಎನ್‌ಡಿಎ ಮೈತ್ರಿಕೂಟದ ಪಕ್ಷಗಳು

ಬಿಜೆಪಿ, ಶಿವಸೇನಾ (ಶಿಂದೆ ಬಣ), ಎನ್‌ಸಿಪಿ (ಅಜಿತ್ ಪವಾರ್ ಬಣ), ರಾಷ್ಟ್ರೀಯ ಲೋಕ ಜನಶಕ್ತಿ ಪಾರ್ಟಿ (ಪಶುಪತಿ ಕುಮಾರ್ ಪಾರಸ್ ನೇತೃತ್ವ), ಎಐಎಡಿಎಂಕೆ, ಅಪ್ನಾ ದಳ, ನ್ಯಾಷನಲ್ ಪೀಪಲ್ಸ್ ಪಾರ್ಟಿ, ನ್ಯಾಷನಲಿಸ್ಟ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ, ಆಲ್ ಜಾರ್ಖಂಡ್ ಸ್ಟೂಡೆಂಟ್ಸ್ ಯೂನಿಯನ್, ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ, ಮಿಜೊ ನ್ಯಾಷನಲ್ ಫ್ರಂಟ್, ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ (ಐಟಿಎಫ್‌ಟಿ), ನಾಗಾ ಪೀಪಲ್ಸ್ ಫ್ರಂಟ್, ಆರ್‌ಪಿಐ (ಆಠವಳೆ), ಅಸ್ಸಾಂ ಗಣ ಪರಿಷತ್, ಪಿಎಂಕೆ, ತಮಿಳು ಮಾನಿಲ ಕಾಂಗ್ರೆಸ್, ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್, ಸುಹೆಲ್‌ದೇವ್ ಭಾರತೀಯ ಸಮಾಜ ಪಾರ್ಟಿ, ಶಿರೋಮಣಿ ಅಕಾಲಿ ದಳ (ಸಂಯುಕ್ತ), ಮಹಾರಾಷ್ಟ್ರವಾದಿ ಗೋಮಂತಕ್ ಪಾರ್ಟಿ, ಜನನಾಯಕ್ ಜನತಾ ಪಾರ್ಟಿ, ಪ್ರಹಾರ್ ಜನಶಕ್ತಿ ಪಾರ್ಟಿ, ರಾಷ್ಟ್ರೀಯ ಸಮಾಜ್ ಪಕ್ಷ, ಜನ ಸುರಾಜ್ಯ ಶಕ್ತಿ ಪಾರ್ಟಿ, ಕುಕಿ ಪೀಪಲ್ಸ್ ಅಲಯನ್ಸ್, ಯುನೈಟೆಡ್ ಡೆಮಾಕ್ರಟಿಕ್ ಪಾರ್ಟಿ (ಮೇಘಾಲಯ), ಹಿಲ್ ಸ್ಟೇಟ್ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ, ನಿಶಾದ್ ಪಾರ್ಟಿ, ಆಲ್ ಇಂಡಿಯಾ ಎನ್.ಆರ್.ಕಾಂಗ್ರೆಸ್, ಎಚ್‌ಎಎಂ, ಜನಸೇನಾ ಪಕ್ಷ, ಹರಿಯಾನ ಲೋಕಹಿತ ಪಾರ್ಟಿ, ಭಾರತ್ ಧರ್ಮ ಜನಸೇನಾ, ಕೇರಳ ಕಾಮರಾಜ್ ಕಾಂಗ್ರೆಸ್, ಪುತಿಯಾ ತಮಿಳಗಂ, ಲೋಕ ಜನಶಕ್ತಿ ಪಾರ್ಟಿ (ರಾಮ್‌ವಿಲಾಸ್ ಪಾಸ್ವಾನ್), ಗೂರ್ಖಾ ನ್ಯಾಷನಲ್ ಲಿಬರೇಷನ್ ಫ್ರಂಟ್

6 ಪಕ್ಷಗಳು ತಟಸ್ಥ

ನವದೆಹಲಿ: ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಹಾಗೂ ‘ಇಂಡಿಯಾ’ ಕೂಟದ ತೆಕ್ಕೆಗೂ ಸೇರದೆ ಬಿಜು ಜನತಾದಳ, ವೈಎಸ್‌ಆರ್‌ಸಿಪಿ, ಭಾರತೀಯ ರಾಷ್ಟ್ರ ಸಮಿತಿ, ಬಿಎಸ್‌ಪಿ, ಜೆಡಿಎಸ್ ಹಾಗೂ ಟಿಡಿಪಿ ಅಂತರ ಕಾಯ್ದುಕೊಂಡಿವೆ.

ಈ ಆರು ಪಕ್ಷಗಳಿಂದ ಒಟ್ಟು 28 ರಾಜ್ಯಸಭಾ ಸದಸ್ಯರಿದ್ದಾರೆ. ಸದ್ಯ ಯಾವುದೇ ಮೈತ್ರಿಕೂಟ ಸೇರದೆ ಅಧಿಕಾರದ ಸಮತೋಲನ ಸ್ಥಿತಿಯನ್ನು ಕಾಯ್ದುಕೊಂಡಿವೆ.

ಒಂದೇ ಸೂರಿನಡಿ 26 ಭ್ರಷ್ಟರು: ಮೋದಿ

ಪೋರ್ಟ್ ಬ್ಲೇರ್ (ಪಿಟಿಐ): ‘ಭ್ರಷ್ಟಾಚಾರದ ಮೂಲಕ ದೇಶವನ್ನು ಅಧೋಗತಿಗೆ ದೂಡಿದವರು ಮತ್ತೆ ತಮ್ಮ ಅಂಗಡಿಗಳನ್ನು ತೆರೆದು ಕೂತಿದ್ದಾರೆ. ಜಾತೀಯತೆ, ಭ್ರಷ್ಟಾಚಾರವೇ ಅಲ್ಲಿನ ಮಾರಾಟದ ಸರಕಾಗಿದೆ. ಸದ್ಯ ಆ ಸಂಚಾರಿ ಅಂಗಡಿಯು ಬೆಂಗಳೂರಿಗೆ ಹೋಗಿದೆ...’

–ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ನಡೆದ 26 ಪ್ರತಿಪಕ್ಷಗಳ ಸಭೆಯನ್ನು ವಿಶ್ಲೇಷಿಸಿದ್ದು ಹೀಗೆ.

ಇಲ್ಲಿನ ವೀರ ಸಾವರ್ಕರ್ ವಿಮಾನ ನಿಲ್ದಾಣದಲ್ಲಿ ನಿರ್ಮಿಸಿರುವ ಹೊಸ ಟರ್ಮಿನಲ್ ಅನ್ನು ಮಂಗಳವಾರ ವರ್ಚುವಲ್ ಮೂಲಕ ಉದ್ಘಾಟಿಸಿದ ಅವರು, ಪ್ರತಿಪಕ್ಷಗಳ ಸಭೆಯ ವಿರುದ್ಧ ಹರಿಹಾಯ್ದರು. ‘ದೇಶದಲ್ಲಿ ಈ ಪ್ರತಿಪಕ್ಷಗಳು ಎಸಗಿರುವ ಹಗರಣಗಳ ಮೊತ್ತ ₹ 20 ಲಕ್ಷ ಕೋಟಿ ದಾಟುತ್ತದೆ. ಭ್ರಷ್ಟಾಚಾರದ ಮೂಲಕ ಲಾಭಗಳಿಸುವುದೇ ಈ ಅಂಗಡಿಗಳ ಉದ್ದೇಶ. ಇದರ ಮಾರ್ಗದರ್ಶಕರು ಕೂಡ ಭ್ರಷ್ಟಾಚಾರಿಗಳೇ ಆಗಿರುತ್ತಾರೆ’ ಎಂದು ಲೇವಡಿ ಮಾಡಿದರು.

ವಿಪಕ್ಷ ನಾಯಕರಿಗೆ ದೇಶದ ಬಡವರು ಮತ್ತು ಮಕ್ಕಳ ಅಭ್ಯುದಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಸ್ವಕುಟುಂಬಗಳ ಭ್ರಷ್ಟಾಚಾರವನ್ನು ಮತ್ತಷ್ಟು ಪೋಷಿಸುವುದೇ ಅವರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಧ್ಯೇಯ ವಾಕ್ಯವಾಗಿದೆ ಎಂದು ವ್ಯಂಗ್ಯವಾಡಿದರು. ಪ್ರಜಾಪ್ರಭುತ್ವವೆಂದರೆ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ವ್ಯವಸ್ಥೆ ಎಂದರ್ಥ. ಆದರೆ, ಪ್ರತಿಪಕ್ಷಗಳದ್ದು ಇದಕ್ಕೆ ತದ್ವಿರುದ್ಧ ನೀತಿ. ಕುಟುಂಬ, ಕುಟುಂಬಕ್ಕಾಗಿ, ಕುಟುಂಬಕೋಸ್ಕರ ಎಂಬುದು ಅವರ ಮೂಲತತ್ವ. ಅವರ ಪಾಲಿಗೆ ರಾಷ್ಟ್ರದ ಹಿತಾಸಕ್ತಿ ನಗಣ್ಯವಾಗಿದೆ ಎಂದು ಆಪಾದಿಸಿದರು.

ಎನ್‌ಡಿಎ ಮಿತ್ರಪಕ್ಷಗಳನ್ನು ಇ.ಡಿ ಒಗ್ಗೂಡಿಸಿದೆ: ಎಎಪಿ

ನವದೆಹಲಿ: ಎನ್‌ಡಿಎ ನೇತೃತ್ವದ ಮಿತ್ರಪಕ್ಷಗಳು ಸಭೆ ನಡೆಸಿದ ಬೆನ್ನಲ್ಲೇ ಬಿಜೆಪಿ ವಿರುದ್ಧ ಆಮ್ ಆದ್ಮಿ ಪಕ್ಷ (ಎಎಪಿ) ವಾಗ್ದಾಳಿ ನಡೆಸಿದೆ. ಆಡಳಿತಾರೂಢ ಪಕ್ಷದ ಮಿತ್ರ ಪಕ್ಷಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಒಗ್ಗೂಡಿಸಿದೆ ಎಂದು ವ್ಯಂಗ್ಯವಾಡಿದೆ. ಎಎಪಿ ರಾಜ್ಯಸಭಾ ಸದಸ್ಯ ಮತ್ತು ರಾಷ್ಟ್ರೀಯ ವಕ್ತಾರ ರಾಘವ್ ಛಡ್ಡಾ ಅವರು, ‘ಎನ್‌ಡಿಎಯ 38 ಪಕ್ಷಗಳನ್ನು ಇ.ಡಿ ನಿಮ್ಮ ಬಳಿ ಕರೆತಂದಿದೆ’ ಎಂದು ಟ್ವೀಟ್ ಮಾಡಿದ್ದಾರೆ.



ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಅಪಹಾಸ್ಯ ಮಾಡಿ ಬೆಂಗಳೂರಿನಲ್ಲಿ ಹಾಕಲಾಗಿದ್ದ ಬ್ಯಾನರ್

ನಿತೀಶ್ ಅವಹೇಳನ ಪೋಸ್ಟರ್: ಬಿಜೆಪಿ–ಕಾಂಗ್ರೆಸ್ ವಾಕ್ಸಮರ

ಪಟ್ನಾ (ಪಿಟಿಐ): ಪ್ರತಿಪಕ್ಷಗಳ ಸಭೆಗೂ ಮೊದಲೇ ಬೆಂಗಳೂರಿನಲ್ಲಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಗುರಿಯಾಗಿಸಿಕೊಂಡು ವಿವಿಧೆಡೆ ಅಳವಡಿಸಿದ್ದ ಅವಹೇಳನಕಾರಿ ಪೋಸ್ಟರ್‌ಗಳು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವಾಗ್ವಾದ ಸೃಷ್ಟಿಸಿವೆ.

ನಿತೀಶ್ ಅವರ ಭಾವಚಿತ್ರವಿರುವ ಈ ಪೋಸ್ಟರ್‌ಗಳಲ್ಲಿ ‘ಪ್ರಧಾನಿ ಹುದ್ದೆಯ ಅನಿಶ್ಚಿತ ಆಕಾಂಕ್ಷಿ’ ಎಂಬ ಶೀರ್ಷಿಕೆ ಬರೆಯಲಾಗಿದೆ ಅಲ್ಲದೆ ಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಸುಲ್ತಾನ್ ಗಂಜ್ ಸೇತುವೆ ಕುಸಿತದ ಚಿತ್ರಗಳೂ ಇವೆ.

ಪೋಸ್ಟರ್‌ಗಳನ್ನು ಅಳವಡಿಸಿದ್ದು ಯಾರು ಎಂಬುದು ನಿಗೂಢವಾಗಿದೆ. ಸಭೆಯ ಆರಂಭಕ್ಕೂ ಮೊದಲು ಇವುಗಳನ್ನು ಸರ್ಕಾರ ತೆರವುಗೊಳಿಸಿದೆ.

‘ನಿತೀಶ್ ಅವರಿಗೆ ಮಾನಹಾನಿ ಮಾಡುವ ಉದ್ದೇಶದಿಂದ ಈ ಪೋಸ್ಟರ್‌ಗಳನ್ನು ಕಾಂಗ್ರೆಸ್ ಪಕ್ಷವೇ ಅಳವಡಿಸಿದೆ’ ಎಂದು ಬಿಜೆಪಿ ಆಪಾದಿಸಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ‘ಪ್ರತಿಪಕ್ಷಗಳ ಒಗ್ಗಟ್ಟಿನಿಂದ ಕಂಗೆಟ್ಟಿರುವ ಕೇಸರಿ ಪಾಳಯವು ಈ ಅಸಹ್ಯಕರವಾದ ರಾಜಕೀಯಕ್ಕೆ ಇಳಿದಿದೆ’ ಎಂದು ತಿರುಗೇಟು ನೀಡಿದೆ.

ವಿರೋಧ ಪಕ್ಷಗಳ ತಯಾರಿ ಭರ್ಜರಿ

ಒಂದನೇ ಪುಟದಿಂದ...

‘ಕೇಂದ್ರ ಸರ್ಕಾರ ವಿರೋಧ ಪಕ್ಷಗಳ ನಾಯಕರು, ಕಾರ್ಯಕರ್ತರ ವಿರುದ್ಧ ಸಿಬಿಐ, ಇ.ಡಿ ಮತ್ತಿತರ ಸಂಸ್ಥೆಗಳನ್ನು ಅಸ್ತ್ರವಾಗಿ ಬಳಸುತ್ತಿದೆ. ತಮ್ಮ ತಮ್ಮ ರಾಜ್ಯಗಳಲ್ಲಿ ರಾಜಕೀಯವಾಗಿ ಭಿನ್ನಾಭಿಪ್ರಾಯ ಹೊಂದಿದ್ದರೂ, ಇಂತಹ ಪರಿಸ್ಥಿತಿಯಲ್ಲಿ ದೇಶವನ್ನು ರಕ್ಷಿಸಲು ನಾವು ಒಟ್ಟಾಗಿದ್ದೇವೆ. ಒಮ್ಮತದಿಂದ ಅನೇಕ ನಿರ್ಣಯಗಳನ್ನು ಕೈಗೊಂಡಿದ್ದೇವೆ’ ಎಂದರು.

‘ದೇಶದ ಬಹುತೇಕ ಮಾಧ್ಯಮಗಳು ಮೋದಿ ನಿಯಂತ್ರಣದಲ್ಲಿವೆ. ಮೋದಿ ಸರ್ಕಾರದ ವಿರುದ್ಧ ಯುವಕರು, ರೈತರು, ಉದ್ಯಮಿಗಳು ಬೇಸತ್ತಿದ್ದಾರೆ. ಈ ಪರಿಸ್ಥಿತಿಯ ವಿರುದ್ಧ ನಾವು ಒಟ್ಟಾಗಿ ಹೋರಾಟ ಮಾಡಿ 2024ರ ಚುನಾವಣೆಯಲ್ಲಿ ಯಶಸ್ಸು ಸಾಧಿಸುವ ವಿಶ್ವಾಸವಿದೆ’ ಎಂದರು.

‘ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ವಿಚಾರ ದಲ್ಲಿ ಒಮ್ಮತ ಮೂಡಿದೆಯೇ’ ಎಂಬ ಪ್ರಶ್ನೆಗೆ, ‘ಯುಸಿಸಿ ಮಸೂದೆ ನೋಡದೆ ಚರ್ಚೆ ಮಾಡಲು ಹೇಗ ಸಾಧ್ಯ? ನಾವು ಮಣಿಪುರದ ಸಂಘರ್ಷ, ನಿರುದ್ಯೋಗ, ಹಣದುಬ್ಬರ ಮತ್ತಿತರ ವಿಚಾರಗಳ ಬಗ್ಗೆ ಹೋರಾಟ, ಪ್ರಜಾಪ್ರಭುತ್ವ ರಕ್ಷಣೆ ವಿಚಾರವಾಗಿ ಚರ್ಚಿಸಿದ್ದೇವೆ’ ಎಂದು ಅವರು ಹೇಳಿದರು.

‘ಸೀಟು ಹಂಚಿಕೆ ವಿಚಾರವಾಗಿ ಹೇಗೆ ತೀರ್ಮಾನಿಸುತ್ತೀರಿ?’ ಎಂದು ಕೇಳಿದಾಗ, ‘ಇದು ದೊಡ್ಡ ವಿಚಾರವಲ್ಲ. ಎಲ್ಲ ನಾಯಕರು, ಸಮನ್ವಯ ಸಮಿತಿ ಸೇರಿ ತೀರ್ಮಾನ ಮಾಡಲಿದೆ’ ಎಂದು ಹೇಳಿದರು.

‘ಎನ್‌ಸಿಪಿ ನಾಯಕ ಶರದ್ ಪವಾರ್, ಶಿವಸೇನೆ ನಾಯಕ ಉದ್ಧವ್ ಠಾಕ್ರೆ ಸೇರಿದಂತೆ ಪ್ರಾದೇಶಿಕ ಪಕ್ಷಗಳ ನಾಯಕರು ಇಲ್ಲಿದ್ದಾರೆ. ಶಾಸಕರು ಪಕ್ಷ ಬಿಟ್ಟು ಹೋಗಿರಬಹುದು. ಆದರೆ, ಜನ ಈ ನಾಯಕರ ಬೆನ್ನಿಗೆ ನಿಲ್ಲಲಿದ್ದಾರೆ. ನಾವು ಒಟ್ಟಾಗಿ ಇರುತ್ತೇವೆ. ಆ ಬಗ್ಗೆ ಚಿಂತಿತೆ ಬೇಡ’ ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಸುದ್ದಿಗೋಷ್ಠಿಯಲ್ಲಿ ಎನ್‌ಸಿಪಿಯ ಶರದ್ ಪವಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಪಂಜಾಬ್ ಮುಖ್ಯಮಂತ್ರಿ ಭಗವಂತ ಸಿಂಗ್ ಮಾನ್, ಸಿಪಿಎಂನ ಸೀತಾರಾಂ ಯೆಚೂರಿ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಸಿಪಿಐನ ಡಿ. ರಾಜಾ ಇದ್ದರು. ಸೋನಿಯಾ ಗಾಂಧಿ, ನಿತೀಶ್ ಕುಮಾರ್, ಲಾಲೂ ಪ್ರಸಾದ್ ಹಾಜರಿರಲಿಲ್ಲ.

ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ನಿರ್ಧಾರ

ಲೋಕಸಭೆಯ ಮುಂದಿನ ಚುನಾವಣೆಯಲ್ಲಿ ಎನ್‌ಡಿಎ 330ಕ್ಕೂ ಹೆಚ್ಚು ಸ್ಥಾನ ಗೆಲ್ಲಲಿದೆ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ

ಮೋದಿ ನಾಯಕತ್ವದಲ್ಲೇ 2024ರ ಚುನಾವಣೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲೆ ವಿಶ್ವಾಸ ವ್ಯಕ್ತಪಡಿಸಿರುವ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು, 2024ರ ಲೋಕಸಭೆ ಚುನಾವಣೆಯನ್ನು ಅವರ ನೇತೃತ್ವದಲ್ಲಿಯೇ ಎದುರಿಸಲಾಗುವುದು ಎಂದು ನಿರ್ಣಯ ಅಂಗೀಕರಿಸಿವೆ.

ಬಿಜೆಪಿ ಇಲ್ಲಿ ಮಂಗಳವಾರ ಆಯೋಜಿಸಿದ್ದ ಎನ್‌ಡಿಎ ಸಭೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಈ ಸಂಬಂಧ ನಿರ್ಣಯ ಮಂಡಿಸಿದರೆ, ಎಐಎಡಿಎಂಕೆ ನಾಯಕ ಕೆ.ಪಳನಿಸ್ವಾಮಿ ಮತ್ತು ಎಜಿಪಿ ನಾಯಕ ಅತುಲ್ ಬೋರಾ ಅವರು ಅನುಮೋದಿಸಿದರು.

‘ಎನ್‌ಡಿಎ ಸರ್ಕಾರ ಪ್ರಧಾನಿ ನಾಯಕತ್ವದಲ್ಲಿ ಕಳೆದ ಒಂಭತ್ತು ವರ್ಷಗಳಲ್ಲಿ ಸೇವೆ, ಉತ್ತಮ ಆಡಳಿತ, ಬಡವರ ಕಲ್ಯಾಣದ ಚಿಂತನೆಗಳನ್ನು ಸಾಕಾರಗೊಳಿಸಿದೆ. ಎಲ್ಲ ವರ್ಗ, ವಲಯ ಮತ್ತು ಸಮುದಾಯಗಳು ಭಾಗಿಯಾಗಿವೆ. ದೂರದರ್ಶಿತ್ವ ಮತ್ತು ಭಾರತವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವ ಯಶಸ್ವಿ ನಾಯಕತ್ವಕ್ಕಾಗಿ ಎಲ್ಲ ಮೈತ್ರಿ ಪಕ್ಷಗಳು ಪ್ರಧಾನಿ ಅವರಿಗೆ ಅಭಿನಂದಿಸಲಿವೆ’ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ಸಭೆಯ ನೇತೃತ್ವವನ್ನು ಸ್ವತಃ ಪ್ರಧಾನಿ ವಹಿಸಿದ್ದರು. ಮುಖಂಡರಾದ ಶಿಂದೆ, ನಾಗಲ್ಯಾಂಡ್ ಮುಖ್ಯಮಂತ್ರಿ ನೇಪಿಯು ರಿಯೊ, ಪಳನಿಸ್ವಾಮಿ, ಎಚ್‌ಎಎಂ ಪಕ್ಷದ ಜಿತನ್ ರಾಮ್ ಮಾಂಝಿ ಸೇರಿ ವಿವಿಧ ಪಕ್ಷಗಳ ಮುಖಂಡರು ಅವರ ಅಕ್ಕಪಕ್ಕ ನಿಂತು ಒಗ್ಗಟ್ಟು ಪ್ರದರ್ಶಿಸಿದರು. ಸಭೆಯ ನಂತರ ಮಾತನಾಡಿದ ಶಿಂದೆ, ‘ಸಭೆಯಲ್ಲಿ ವಿವಿಧ ಪಕ್ಷಗಳ ಮುಖ್ಯಸ್ಥರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸಿಕ್ಕ ಬೆಂಬಲವು ಆತ್ಮವಿಶ್ವಾಸವನ್ನು ಹೆಚ್ಚಿಸಿದೆ’ ಎಂದು ಹೇಳಿದರು.

ಶಕ್ತಿ ಪ್ರದರ್ಶಿಸಿದ ಮೋದಿ ಬಳಗ

ಒಂದನೇ ಪುಟದಿಂದ

2014ಕ್ಕಿಂತ ಮೊದಲು ಅಧಿಕಾರದ ಕಾರಿಡಾರ್‌ಗಳಲ್ಲಿ ತಿರುಗಾಡುತ್ತಿದ್ದ ಮಧ್ಯವರ್ತಿಗಳನ್ನು ನಾವು ಹೊರಗೆ ಹಾಕಿದ್ದೇವೆ. ಭ್ರಷ್ಟಾಚಾರರಹಿತ ಹಾಗೂ ಕಳಂಕರಹಿತ ಆಡಳಿತ ನೀಡಿದ್ದೇವೆ. ಇದನ್ನು ನೋಡಿ ವಿರೋಧ ಪಕ್ಷಗಳಿಗೆ ಸಹಿಸಲು ಆಗುತ್ತಿಲ್ಲ ಎಂದರು. ನಾವು ಭವ್ಯ ಭಾರತ ನಿರ್ಮಾಣಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಅವರು ಹೇಳಿದರು.

ಜನರ ತಿಳಿವಳಿಕೆಯ ಸಾಮರ್ಥ್ಯವನ್ನು ವಿರೋಧ ಪಕ್ಷಗಳು ನಿರ್ಲಕ್ಷ್ಯ ಮಾಡುತ್ತಿವೆ. ಆದರೆ, ಯಾವ ಸ್ವಾರ್ಥದ ಲಾಭ ಅವರ ಕಣ್ಣನ್ನು ಕುರುಡಾಗಿಸುತ್ತದೆ ಎಂಬುದು ಜನರಿಗೆ ಗೊತ್ತಿದೆ ಎಂದು ಅವರು ತಿಳಿಸಿದರು.

ಬ್ರಿಜ್‌ಭೂಷಣ್‌ಗೆ ಮಧ್ಯಂತರ ಜಾಮೀನು



ಬ್ರಿಜ್‌ಭೂಷಣ್ ಸಿಂಗ್

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ, ಭಾರತೀಯ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ಇಲ್ಲಿಯ ನ್ಯಾಯಾಲಯವೊಂದು ಎರಡು ದಿನಗಳ ಮಧ್ಯಂತರ ಜಾಮೀನು ನೀಡಿ ಮಂಗಳವಾರ ಆದೇಶ ಹೊರಡಿಸಿದೆ.

₹25,000 ವೈಯಕ್ತಿಕ ಬಾಂಡ್ ಇರಿಸುವಂತೆ ಷರತ್ತು ವಿಧಿಸಿ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವರು ಜಾಮೀನು ಮಂಜೂರು ಮಾಡಿದರು. ಇದೇ ವೇಳೆ, ಡಬ್ಲ್ಯುಎಫ್‌ಐ ಅಮಾನತ್ತಿನಲ್ಲಿರುವ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರಿಗೂ ಜಾಮೀನು ನೀಡಿದರು. ಬ್ರಿಜ್‌ಭೂಷಣ್ ಜಾಮೀನು ಅರ್ಜಿ ವಿಚಾರಣೆಯು ಗುರುವಾರ ನಿಗದಿಯಾಗಿದೆ. ಹಾಗಾಗಿ ಅಲ್ಲಿಯವರೆಗೂ ಇಬ್ಬರಿಗೂ ಮಧ್ಯಂತರ ಜಾಮೀನು ಮಂಜೂರು ಮಾಡಿದರು.

ಬ್ರಿಜ್‌ಭೂಷಣ್ ಮತ್ತು ತೋಮರ್ ಅವರಿಗೆ ಸಮನ್ಸ್ ನೀಡಲಾಗಿತ್ತು. ಅದರಂತೆ ಅವರು ನ್ಯಾಯಾಲಯಕ್ಕೆ ಹಾಜರಾಗಿದ್ದರು ಮತ್ತು ಜಾಮೀನು ನೀಡುವಂತೆ ಮನವಿ ಮಾಡಿದರು.

ಛತ್ತೀಸಗಢ: ₹2,000 ಕೋಟಿ ಮೊತ್ತದ ಅಬಕಾರಿ ಹಗರಣ

ಇ.ಡಿ ತನಿಖೆಗೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಛತ್ತೀಸಗಢದಲ್ಲಿ ನಡೆದಿರುವ ₹ 2,000 ಕೋಟಿ ಮೊತ್ತದ ಅಬಕಾರಿ ಹಗರಣ ಕುರಿತಂತೆ ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾನ್ಶು ಧುಲಿಯಾ ಅವರಿದ್ದ ನ್ಯಾಯಪೀಠವು ಈ ಸಂಬಂಧ ಮಧ್ಯಂತರ ಆದೇಶವನ್ನು ನೀಡಿತು. ಛತ್ತೀಸಗಢ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಸುಮೀರ್ ಸೋಧಿ ಅವರು, ‘ಇ.ಡಿ ಅಧಿಕಾರಿಗಳು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿದ್ದಾರೆ’ ಎಂದು ಪೀಠದ ಗಮನಕ್ಕೆ ತಂದರು.

‘ಜಪ್ತಿ ಮಾಡಲು ಅನುವಾಗುವಂತೆ ಆಸ್ತಿಯನ್ನು ಘೋಷಿಸಿಕೊಳ್ಳಬೇಕು ಎಂದು ರಾಜ್ಯದ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಇದು, ಇ.ಡಿಯ ತನಿಖಾ ವೈಖರಿಯು ನಿಜಕ್ಕೂ ದಿಗ್ಭ್ರಮೆ ಉಂಟು ಮಾಡುವಂತಹದ್ದಾಗಿದೆ’ ಎಂದು ಹೇಳಿದರು.

ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅವರ ಹೆಸರನ್ನೂ ಉಲ್ಲೇಖಿಸಲು ಇ.ಡಿ ಯತ್ನಿಸುತ್ತಿದೆ ಎಂದು ರಾಜ್ಯ ಸರ್ಕಾರವು ಪ್ರತಿಪಾದಿಸಿದೆ. ಇ.ಡಿ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು, ಸಿಬಲ್ ಅವರ ಅಭಿಪ್ರಾಯಗಳನ್ನು ನಿರಾಕರಿಸಿದರು. ‘ಇ.ಡಿಯು ರಾಜ್ಯದಲ್ಲಿ ನಡೆದಿರುವ ಹಗರಣವೊಂದರ ತನಿಖೆಯನ್ನು ನಡೆಸುತ್ತಿದೆ’ ಎಂದು ಹೇಳಿದರು.

21ರಂದು ರಾಹುಲ್ ಮೇಲ್ಮನವಿ ವಿಚಾರಣೆಗೆ ಒಪ್ಪಿಗೆ



ನವದೆಹಲಿ (ಪಿಟಿಐ): ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್ ವಿಧಿಸಿರುವ ಶಿಕ್ಷೆಗೆ ತಡೆ ನೀಡಲು ನಿರಾಕರಿಸಿದ ಗುಜರಾತ್ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

ಹೈಕೋರ್ಟ್ ಆದೇಶದ ವಿರುದ್ಧ ಜುಲೈ 15ರಂದು ರಾಹುಲ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಪರ ಹಾಜರಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, ಜುಲೈ 21 ಅಥವಾ 24ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ನ್ಯಾಯಪೀಠವನ್ನು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಮನೋಜ್ ಮಿಶ್ರಾ ಅವರಿದ್ದ ಪೀಠವು, ಜುಲೈ 21ರಂದು ವಿಚಾರಣೆ ನಡೆಸುವುದಾಗಿ ಹೇಳಿದೆ.

2019ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯ ಪ್ರಚಾರ ಸಂದರ್ಭದಲ್ಲಿ ರಾಹುಲ್ ಅವರು 2019ರ ಏಪ್ರಿಲ್ 13ರಂದು ಕೋಲಾರದಲ್ಲಿ ಭಾಷಣ ಮಾಡಿದ್ದರು. ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ, ‘ಎಲ್ಲಾ ಕಳ್ಳರಿಗೆ ಮೋದಿ ಎಂಬ ಉಪನಾಮ ಏಕಿದೆ’ ಎಂದು ಪ್ರಶ್ನಿಸಿದ್ದರು. ಈ ಬಗ್ಗೆ ಗುಜರಾತ್ ಶಾಸಕ ಪೂರ್ಣೇಶ್ ಮೋದಿ ಅವರು, ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಈ ಪ್ರಕರಣದಲ್ಲಿ ರಾಹುಲ್ ಅವರು ಎರಡು ವರ್ಷ ಶಿಕ್ಷೆಗೆ ಗುರಿಯಾಗಿ ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿದ್ದಾರೆ.

‘ಗೋ ವಧೆ ನಿಷೇಧಕ್ಕೆ ನಿರ್ದೇಶನ ನೀಡಲಾಗದು’

ನವದೆಹಲಿ (ಪಿಟಿಐ): ಅಪಾಯದ ಅಂಚಿನಲ್ಲಿರುವ ತಳಿಗೆ ಸೇರಿದ ಗೋವು ವಧೆಯನ್ನು ನಿಷೇಧಿಸುವಂತೆ ನಿರ್ದೇಶನ ನೀಡಲು ಸುಪ್ರೀಂ ಕೋರ್ಟ್ ಈಚೆಗೆ ನಿರಾಕರಿಸಿದೆ. ಈ ಕುರಿತು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇರುವುದು ಶಾಸಕಾಂಗಕ್ಕೆ ಮಾತ್ರ. ಈ ನಿಟ್ಟಿನಲ್ಲಿ ಕಾನೂನು ರಚಿಸುವಂತೆ ಶಾಸಕಾಂಗಕ್ಕೆ ನಿರ್ದೇಶಿಸಲು ಸುಪ್ರೀಂ ಕೋರ್ಟ್‌ಗೆ ಸಾಧ್ಯವಿಲ್ಲ ಎಂದು ಹೇಳಿದೆ.

ಆದರೆ, ವಿನಾಶದ ಅಂಚಿನಲ್ಲಿರುವ ಸ್ಥಳೀಯ ಜಾನುವಾರು ತಳಿಗಳನ್ನು ಕಾಪಾಡುವ ಮತ್ತು ಸಂರಕ್ಷಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಅರ್ಜಿದಾರರು ಅಹವಾಲು ಸಲ್ಲಿಸಬಹುದು ಎಂದು ಕೂಡಾ ಕೋರ್ಟ್ ತಿಳಿಸಿದೆ.

ಸ್ಥಳೀಯ ಜಾನುವಾರು ತಳಿಗಳ ಸಂರಕ್ಷಣೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏಕರೀತಿಯ ನಿಲುವು ತೆಗೆದುಕೊಂಡಿವೆ. ಹಾಗಾಗಿ ಈ ನಿಟ್ಟಿನಲ್ಲಿ ಹೆಚ್ಚಿನ ನಿರ್ದೇಶನಗಳ ಅಗತ್ಯವಿಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) 2018ರ ಆಗಸ್ಟ್‌ರಲ್ಲಿ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರೊಬ್ಬರು ಅರ್ಜಿ ಸಲ್ಲಿಸಿದ್ದರು.

ರಾಷ್ಟ್ರೀಯ ಜಾನುವಾರು ನೀತಿ, 2013 ಅನ್ನು ಉಲ್ಲೇಖಿಸಿ ಎನ್‌ಜಿಟಿ ಆದೇಶ ನೀಡಿದೆ. ಕೆಲ ರಾಜ್ಯಗಳು ತಮ್ಮದೇ ಆದ ಜಾನುವಾರು ವಧೆ ವಿರೋಧಿ ನೀತಿಯನ್ನು ಹೊಂದಿವೆ. ಆದರೆ ಯಾವ ರಾಜ್ಯವೂ ಸ್ಥಳೀಯ ತಳಿಗಳನ್ನು ಸಂರಕ್ಷಿಸುವ ಕುರಿತು ವಿರೋಧ ವ್ಯಕ್ತಪಡಿಸಿಲ್ಲ ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಓಕ ಮತ್ತು ಸಂಜಯ್ ಕರೋಲ್ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಟಿ.ವಿ, ಬಾನುಲಿ ಪ್ರಚಾರಕ್ಕೆ ಸಮಯ ನಿಗದಿ: ಆಯೋಗ

ನವದೆಹಲಿ (ಪಿಟಿಐ): ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜಕೀಯ ಪಕ್ಷಗಳು ಪ್ರಚಾರ ಕೈಗೊಳ್ಳಲು ಸಮಯವನ್ನು ಇನ್ನು ಮುಂದೆ ಆನ್‌ಲೈನ್ ಮೂಲಕವೇ ನಿಗದಿಪಡಿಸಲಾಗುವುದು ಎಂದು ಚುನಾವಣಾ ಆಯೋಗವು ಮಂಗಳವಾರ ಪ್ರಕಟಿಸಿದೆ.

ಸಮಯ ನಿಗದಿಪಡಿಸಿ ರಾಜಕೀಯ ಪಕ್ಷಗಳಿಗೆ ‘ಡಿಜಿಟಲ್ ಏರ್ ಟೈಮ್ ವೋಚರ್’ ವಿತರಿಸಲು ಆಯೋಗವು ನಿಯಮಗಳಿಗೆ ತಿದ್ದುಪಡಿ ತಂದಿದೆ. ಅಂದರೆ, ಇನ್ನು ಮುಂದೆ ಪಕ್ಷಗಳ ಪ್ರತಿನಿಧಿಗಳು ಇಂತಹ ವೋಚರ್ ಪಡೆಯಲು ಆಯೋಗದ ಕಚೇರಿಗೆ ತೆರಳುವ ಅಗತ್ಯವಿಲ್ಲ.

ಸರ್ಕಾರಿ ಪ್ರಸಾರ ಮಾಧ್ಯಮಗಳ ಮೂಲಕ ಪ್ರಚಾರಕ್ಕಾಗಿ ಪಕ್ಷಗಳಿಗೆ ಉಚಿತವಾಗಿ ಸಮಯ ನಿಗದಿಪಡಿಸುವ ಯೋಜನೆ 1998ರ ಜನವರಿಯಲ್ಲಿ ಜಾರಿಗೆ ಬಂದಿತ್ತು. ಚುನಾವಣೆ ವೇಳೆ ಸರ್ಕಾರಿ ಮಾಧ್ಯಮವು ಎಲ್ಲ ಪಕ್ಷಗಳಿಗೆ ಸಮಾನವಾಗಿ ಲಭ್ಯವಿರಬೇಕು ಎಂಬುದು ಇದರ ಆಶಯ. ಈ ಯೋಜನೆಯ ಪ್ರಕಾರ ಮಾನ್ಯತೆ ಪಡೆದಿರುವ ರಾಷ್ಟ್ರೀಯ ಪಕ್ಷಗಳು ಹಾಗೂ ರಾಜ್ಯಗಳ ಮಾನ್ಯತೆ ಪಡೆಯದ ಪಕ್ಷಗಳಿಗೆ ಸಮಾನವಾಗಿ ಸಮಯ ನಿಗದಿಪಡಿಸಲಾಗುತ್ತದೆ. ಹಿಂದಿನ ಚುನಾವಣೆಯಲ್ಲಿನ ಸಾಧನೆ ಆಧರಿಸಿ ಹೆಚ್ಚುವರಿ ಸಮಯ ಹಂಚಿಕೆಯಾಗಲಿದೆ.

ಸಂಕ್ಷಿಪ್ತ ಸುದ್ದಿ

ಸೋನಿಯಾ, ರಾಹುಲ್ ಇದ್ದ ವಿಮಾನ ಭೂಸ್ಪರ್ಶ

ಭೋಪಾಲ್ (ಪಿಟಿಐ): ಕಾಂಗ್ರೆಸ್ ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರು ಪ್ರಯಾಣಿಸುತ್ತಿದ್ದ ವಿಮಾನವು ಮಂಗಳವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ.

ಭೋಪಾಲ್‌ನ ಪೊಲೀಸ್ ಕಮಿಷನರ್ ಹರಿನಾರಾಯಣ್ ಈ ವಿಷಯ ದೃಢಪಡಿಸಿದ್ದಾರೆ. ಆದರೆ, ತುರ್ತು ಭೂಸ್ಪರ್ಶಕ್ಕೆ ಕಾರಣ ತಿಳಿದುಬಂದಿಲ್ಲ.

ಬೆಂಗಳೂರಿನಲ್ಲಿ ನಡೆದ ವಿರೋಧ ಪಕ್ಷಗಳ ಮೈತ್ರಿಕೂಟದ ಸಭೆಯಲ್ಲಿ ಭಾಗವಹಿಸಿದ ಬಳಿಕ ಉಭಯ ನಾಯಕರು ವಾಪಸಾಗುತ್ತಿದ್ದರು.

ಸರ್ವಪಕ್ಷಗಳ ಸಭೆ ಇಂದು

ನವದೆಹಲಿ (ಪಿಟಿಐ): ಗುರುವಾರ ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವಪಕ್ಷ ಸಭೆಯನ್ನು ಬುಧವಾರ ಕರೆದಿದೆ.

ಬಂಧನ: ಬಾಲಾಜಿ, ಪತ್ನಿ ‘ಸುಪ್ರೀಂ’ಗೆ ಅರ್ಜಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತಮ್ಮನ್ನು ಬಂಧಿಸಿರುವುದನ್ನು ಎತ್ತಿ ಹಿಡಿದು ಮದ್ರಾಸ್ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ತಮಿಳುನಾಡು ಸಚಿವ ಸೆಂಥಿಲ್ ಬಾಲಾಜಿ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಇದೇ ವಿಚಾರವಾಗಿ ಸಚಿವ ಬಾಲಾಜಿ ಪತ್ನಿ ಮೇಗಲಾ ಅವರು ಕೂಡ ಸುಪ್ರೀಂಕೋರ್ಟ್‌ಗೆ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ.

ಬಾಲಾಜಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಸೆಷನ್ಸ್ ನ್ಯಾಯಾಲಯ ಆದೇಶಿಸಿರುವುದು ಕೂಡ ಕಾನೂನುಬದ್ಧ ಎಂದು ಜುಲೈ 14ರಂದು ಹೈಕೋರ್ಟ್ ಹೇಳಿತ್ತು.

ಬಾಲಾಜಿ ಅವರನ್ನು ಇ.ಡಿ ಬಂಧಿಸಿದ್ದು ಹಾಗೂ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದನ್ನು ಪ್ರಶ್ನಿಸಿ ಮೇಗಳಾ ಹೈಕೋರ್ಟ್‌ನಲ್ಲಿ ಇತ್ತೀಚೆಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಡಿ.ಭರತ ಚಕ್ರವರ್ತಿ ಹಾಗೂ ನಿಶಾ ಬಾನು ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಭಿನ್ನ ತೀರ್ಪು ನೀಡಿತ್ತು. ಆಗ, ಈ ವಿಷಯ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಸಿ.ವಿ.ಕಾರ್ತಿಕೇಯನ್ ಅವರನ್ನು 3ನೇ ನ್ಯಾಯಮೂರ್ತಿಯಾಗಿ ನೇಮಿಸಿದ್ದ ಸುಪ್ರೀಂಕೋರ್ಟ್, ಅರ್ಜಿ ವಿಚಾರಣೆ ನಡೆಸುವಂತೆ ಸೂಚಿಸಿತ್ತು.

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ
ಕ್ರ.ಸಂ:ಕೃಮಾಇ/ಕೃಉಮಾಸ/ವಿ/ಅಭಿಕೆ/437/2023–24 ದಿನಾಂಕ:15.07.2023

ಇ–ಸಂಗ್ರಹಣಾ ಟೆಂಡರ್ ಪ್ರಕಟಣೆ –02 ಕರೆ

1) **ಕಾಮಗಾರಿಯ ಹೆಸರು:** ವಿಜಯಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2023–24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಬಸವನ ಬಾಗೇವಾಡಿ ಉಪ ಮಾರುಕಟ್ಟೆ ಪ್ರಾಂಗಣದ ಆವರಣ ಗೋಡೆಗೆ ಹೊಂದಿಕೊಂಡು ಇಂಗಳೇಶ್ವರ ಮುಖ್ಯ ರಸ್ತೆಯಿಂದ ಜಾಲಿಹಾಳ ಗ್ರಾಮಕ್ಕೆ ಹೋಗುವ ಕೂಡು ರಸ್ತೆಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ.

ಟೆಂಡರಗಿಟ್ಟ ಮೊತ್ತ ರೂ. 32,90,396/– (GST ಪ್ರತ್ಯೇಕ) ಇ.ಎಂ.ಡಿ. ಮೊತ್ತ ರೂ. 65,900/– ಗಳು.

ಮೇಲ್ಕಂಡಂತೆ ಇ–ಪೋರ್ಟಲ್ (E-Portal) ಮೂಲಕ ಟೆಂಡರ ಹೊರಡಿಸಲಾಗಿದ್ದು, ಭರ್ತಿ ಮಾಡಿದ ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: 04.08.2023 ರ ಸಾಯಂಕಾಲ 5.30 ಗಂಟೆಗೆ ನಿಗದಿಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ https://kppp.karnataka.gov.inರಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ, ವಿಜಯಪುರ
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ, ವಿಜಯಪುರ

ವಾಸಾಸಂಇ/ವಿಜಯಪುರ/64/ಕೆಎಸ್‌ಎಂಸಿಎ/2023–24

ಟ್ರಯಲ್ಸ್ ಇಲ್ಲದೇ ಏಷ್ಯನ್ ಗೇಮ್ಸ್‌ಗೆ ಸ್ಥಾನ ಗಿಟ್ಟಿಸಿದ ಕುಸ್ತಿಪಟುಗಳು: ನಿರ್ಣಯಕ್ಕೆ ಖಂಡನೆ

ಬಜರಂಗ್, ವಿನೇಶಾಗೆ ನೇರ ಅರ್ಹತೆ

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ಹಾಗೂ ವಿನೇಶಾ ಫೋಗಟ್ ಅವರಿಗೆ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ನೇರ ಅರ್ಹತೆಯನ್ನು ಭಾರತ ಕುಸ್ತಿ ಫೆಡರೇಷನ್ ಅಡ್‌ಹಾಕ್ ಸಮಿತಿಯು ನೀಡಿದೆ.

ಈ ಕುರಿತು ಸಮಿತಿಯು ರಾಷ್ಟ್ರೀಯ ಕುಸ್ತಿ ತಂಡದ ಮುಖ್ಯ ತರಬೇತುದಾರರ ಅಭಿಮತವನ್ನೂ ಪಡೆದಿಲ್ಲ. ಇದು, ತರಬೇತಿ ಸಿಬ್ಬಂದಿ ಮತ್ತು ಇನ್ನುಳಿದ ಕುಸ್ತಿಪಟುಗಳಿಗೆ ಅಸಮಾಧಾನ ಮೂಡಿಸಿದೆ.

'ಪುರುಷರ ಫ್ರೀಸ್ಟೈಲ್ 65 ಕೆ.ಜಿ. ಮತ್ತು ಮಹಿಳೆಯರ 53 ಕೆ.ಜಿ ವಿಭಾಗಗಳಲ್ಲಿ ಈಗಾಗಲೇ ಸ್ಪರ್ಧಿಗಳನ್ನು ಅಂತಿಮಗೊಳಿಸಲಾಗಿದೆ. ಮೂರು ಶೈಲಿಗಳಲ್ಲಿಯ ಇನ್ನೂ ಆರು ವಿಭಾಗಗಳಲ್ಲಿ ಟ್ರಯಲ್ಸ್ ನಡೆಯಲಿವೆ ಎಂದೂ ಅಡ್‌ಹಾಕ್ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ. ಆದರೆ ಈ ಅಧಿಸೂಚನೆಯಲ್ಲಿ ಸಮಿತಿಯು ಬಜರಂಗ್ ಮತ್ತು ವಿನೇಶಾ ಅವರ ಹೆಸರುಗಳನ್ನು ಉಲ್ಲೇಖಿಸಿಲ್ಲ. ಆದರೆ ಸಮಿತಿಯ ಸದಸ್ಯ ಅಶೋಕ್ ಗಾರ್ಗ್ ಅವರು ಆಯ್ಕೆಯನ್ನು ಖಚಿತಪಡಿಸಿದ್ದಾರೆ. 'ಹೌದು, ಬಜರಂಗ್ ಮತ್ತು ವಿನೇಶಾ ಅವರಿಗೆ ಆಯ್ಕೆ ಟ್ರಯಲ್ಸ್‌ನಿಂದ ವಿನಾಯಿತಿ ನೀಡಲಾಗಿದೆ' ಎಂದು ಗಾರ್ಗ್ ತಿಳಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಸುದೀರ್ಘ ಧರಣಿಯಲ್ಲಿ ಬಜರಂಗ್ ಮತ್ತು ವಿನೇಶಾ ಮುಂಚೂಣಿಯಲ್ಲಿದ್ದರು.

ಅವರು ಇತ್ತೀಚಿನ ಟೂರ್ನಿಗಳಲ್ಲಿ ತಮ್ಮ ವಿಭಾಗಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ಇದೇ ತೂಕದ ವಿಭಾಗಗಳಲ್ಲಿ ಭಾರತದ ಸುಜೀತ್ ಕಲಾಕಲ್ ಮತ್ತು ಅಂತಿಮ್ ಪಂಘಾಲ್ ಅವರು ಕೂಡ ಗಮನಾರ್ಹ ಸಾಧನೆ ಮಾಡಿದ್ದಾರೆ. 20 ವರ್ಷದೊಳಗಿನವರ ವಿಭಾಗದಲ್ಲಿ ಅಂತಿಮ್ ವಿಶ್ವ ಚಾಂಪಿಯನ್ ಆಗಿದ್ದರು. ಹೋದ ವರ್ಷ ಸೀನಿಯರ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿಯೂ ಅವರು ಬೆಳ್ಳಿ ಪದಕ ಗಳಿಸಿದ್ದರು.


ವಿನೇಶಾ ಫೋಗಟ್ ಹಾಗೂ ಬಜರಂಗ್ ಪೂನಿಯಾ

ಸುಜೀತ್ ಅವರು ಪ್ರಸ್ತುತ 23 ವರ್ಷದೊಳಗಿನವರ ಮತ್ತು 20 ವರ್ಷದೊಳಗಿನ ಏಷ್ಯನ್ ಚಾಂಪಿಯನ್ ಕೂಡ ಆಗಿದ್ದಾರೆ. ಇತ್ತೀಚಿನ 20 ವರ್ಷದೊಳಗಿನ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿಯೂ ಕಂಚು ಗಳಿಸಿದ್ದಾರೆ.

ಆದರೆ ಪ್ರತಿಭಟನೆಯಲ್ಲಿ ಪ್ರಮುಖರಾಗಿದ್ದ ಸಾಕ್ಷಿ ಮಲಿಕ್, ಸತ್ಯವ್ರತ ಕಾದಿಯಾನ್, ಜಿತೆಂದರ್ ಕಿನ್ಹಾ ಮತ್ತು ಸಂಗೀತಾ ಫೋಗಟ್ ಅವರನ್ನು ನೇರ ಆಯ್ಕೆಗೆ ಸಮಿತಿಯು ಪರಿಗಣಿಸಿಲ್ಲ.

ಸೆಪ್ಟೆಂಬರ್‌ನಲ್ಲಿ ಚೀನಾದಲ್ಲಿ ಏಷ್ಯನ್ ಗೇಮ್ಸ್ ಆಯೋಜನೆಗೊಳ್ಳಲಿದೆ. ಅದಕ್ಕಾಗಿ ಭಾರತ ತಂಡದ ಆಯ್ಕೆಯನ್ನು ಇದೇ 22 ಹಾಗೂ 23ರಂದು ದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ನಡೆಸಲು ಅಡ್‌ಹಾಕ್ ಸಮಿತಿಯು ತೀರ್ಮಾನಿಸಿದೆ.

ಗ್ರಿಕೊ ರೋಮನ್ (60 ಕೆ.ಜಿ, 67 ಕೆ.ಜಿ, 77 ಕೆ.ಜಿ, 87 ಕೆ.ಜಿ, 97 ಕೆ.ಜಿ, 130 ಕೆ.ಜಿ), ಮಹಿಳೆಯರ ವಿಭಾಗದಲ್ಲಿ (50 ಕೆ.ಜಿ, 53 ಕೆ.ಜಿ, 57 ಕೆ.ಜಿ, 62 ಕೆ.ಜಿ, 68 ಕೆ.ಜಿ, 76 ಕೆ.ಜಿ) ಆಯ್ಕೆ ಟ್ರಯಲ್ಸ್ ಇದೇ 22ರಂದು ನಡೆಯುತ್ತವೆ. ಪುರುಷರ ಫ್ರೀಸ್ಟೈಲ್ (57 ಕೆ.ಜಿ, 65 ಕೆ.ಜಿ, 74 ಕೆ.ಜಿ, 86 ಕೆ.ಜಿ, 97 ಕೆ.ಜಿ, 125 ಕೆ.ಜಿ) ಟ್ರಯಲ್ಸ್ 23ರಂದು ನಡೆಯಲಿವೆ.

ಬಜರಂಗ್ ಪೂನಿಯಾ ಅವರು ಕಿರ್ಗಿಸ್ತಾನದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ವಿನೇಶಾ ಅವರು ಹಂಗರಿಯ ಬುಡಾಪೆಸ್ಟ್‌ನಲ್ಲಿ ವಿಶೇಷ ತರಬೇತಿ ಪಡೆಯುತ್ತಿದ್ದಾರೆ. ಅಲ್ಲಿಯೇ ನಡೆದ ರ‍್ಯಾಂಕಿಂಗ್ ಸರಣಿ ಕುಸ್ತಿಯಲ್ಲಿ ವಿನೇಶಾ ಅವರು ಅನಾರೋಗ್ಯದಿಂದಾಗಿ ಸ್ಪರ್ಧಿಸಲಿಲ್ಲ.

ಆಯ್ಕೆಯ ಮಾಹಿತಿ ಕೋಚ್‌ಗಳಿಗೇ ಗೊತ್ತಿಲ್ಲ!

ಫ್ರೀಸ್ಟೈಲ್ ರಾಷ್ಟ್ರೀಯ ತಂಡದ ಕೋಚ್ ಜಗಮಂದರ್ ಸಿಂಗ್ ಮತ್ತು ಮಹಿಳಾ ತಂಡದ ಕೋಚ್ ವೀರೇಂದ್ರ ದಹಿಯಾ ಅವರಿಗೆ ಈ ಆಯ್ಕೆಯ ಕುರಿತು ಮಾಹಿತಿಯನ್ನೇ ನೀಡಿಲ್ಲ.

'ಈ ನಿರ್ಧಾರ ತೆಗೆದುಕೊಳ್ಳುವ ಕುರಿತು ನಮಗೆ ಸುಳಿವೂ ಸಹ ಸಿಕ್ಕಿಲ್ಲ. ಅಡ್‌ಹಾಕ್ ಸಮಿತಿಯು ಸಭೆಗಳನ್ನು ನಡೆಸುವುದನ್ನೂ ನಿಲ್ಲಿಸಿದೆ. ಕುಸ್ತಿಪಟುಗಳ ಆಯ್ಕೆಗೆ ನಾವು ಯಾವುದೇ ಶಿಫಾರಸು ಮಾಡಿಲ್ಲ. ಎಲ್ಲ ವಿಭಾಗಗಳಲ್ಲಿಯೂ ಆಯ್ಕೆ ಟ್ರಯಲ್ಸ್ ನಡೆಯಬೇಕು ಎಂಬುದಕ್ಕೆ ನಾವು ಒತ್ತು ನೀಡಿದ್ದೇವೆ' ಎಂದು ಜಗಮಂದರ್ ಸಿಂಗ್ ಹೇಳಿದ್ದಾರೆ.

'ಕಳೆದ ಎಂಟು ತಿಂಗಳುಗಳಿಂದ ಬಜರಂಗ್ ಮತ್ತು ವಿನೇಶಾ ಅವರು ಯಾವುದೇ ಟೂರ್ನಿಯಲ್ಲಿಯೂ ಭಾಗವಹಿಸಿಲ್ಲ. ಅವರ ಸಾಮರ್ಥ್ಯ, ದೈಹಿಕ ಕ್ಷಮತೆ, ವೇಗ, ತೂಕ ಮತ್ತಿತರ ಅಂಶಗಳ ಕುರಿತು ಅಂದಾಜು ಕೂಡ ಇಲ್ಲ. ಅವರಿಬ್ಬರೂ ಸ್ಪರ್ಧಿಸುವ ವಿಭಾಗಗಳಲ್ಲಿ ಆಯ್ಕೆಯಾಗಲು ಯುವ ಕುಸ್ತಿಪಟುಗಳು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಅವರು ಉತ್ತಮ ದೈಹಿಕ ಕ್ಷಮತೆ ಹೊಂದಿದ್ದಾರೆ. ಭರವಸೆಯ ಸ್ಪರ್ಧಿಗಳಾಗಲು ಸಮರ್ಥರಿದ್ದಾರೆ. ಆದರೆ ಅಡ್‌ಹಾಕ್ ಸಮಿತಿಯು ಎಲ್ಲ ನಿಯಮಗಳನ್ನೂ ಮೀರಿ ನಿರ್ಣಯ ಕೈಗೊಂಡಿದೆ' ಎಂದು ವೀರೇಂದ್ರ ದಹಿಯಾ ಹೇಳಿದ್ದಾರೆ.

ಚುನಾವಣೆ: ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಚುನಾವಣೆ ಪ್ರಕ್ರಿಯೆಗೆ ತಡೆ ನೀಡಿ ಗುವಾಹಟಿ ಹೈಕೋರ್ಟ್ ಹೊರಡಿಸಿದ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಡೆಹಿಡಿದಿದೆ.

ಜೂನ್ 25ರ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಎಸ್.ವಿ.ಭಟ್ಟಿ ಅವರನ್ನೊಳಗೊಂಡ ಪೀಠವು ಕೇಂದ್ರ ಕ್ರೀಡಾ ಸಚಿವಾಲಯ, ಅಸ್ಸಾಂ ಕುಸ್ತಿ ಸಂಸ್ಥೆ ಮತ್ತು ಇತರರಿಗೆ ನೋಟಿಸ್ ನೀಡಿತು.

ಈ ಪ್ರಕರಣಕ್ಕೆ ಸಂಬಂಧಪಡದ ವ್ಯಕ್ತಿಯೊಬ್ಬರು ಹೈಕೋರ್ಟ್‌ನಲ್ಲಿ ಹಾಜರಾಗಿ ಚುನಾವಣೆಗೆ ತಡೆಯಾಜ್ಞೆ ತಂದಿದ್ದಾರೆ. ಇದರಿಂದಾಗಿ ಚುನಾವಣೆ ಮುಂದಕ್ಕೆ ಹೋಗುತ್ತಲೇ ಇದೆ ಎಂದು ದೂರುದಾರರಾದ ಆಂಧ್ರ ಪ್ರದೇಶ ಅಮೆಚೂರ್ ಕುಸ್ತಿ ಸಂಸ್ಥೆ ಪರ ಹಾಜರಾದ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಕುಸ್ತಿ ಫೆಡರೇಷನ್ ಚುನಾವಣೆ ಮುಂದೂಡುವಂತೆ ಅಸ್ಸಾಂ ಕುಸ್ತಿ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸಿದ್ದ ಗುವಾಹಟಿ ಹೈಕೋರ್ಟ್ ಮುಂದಿನ ವಿಚಾರಣೆಯನ್ನು ಜುಲೈ 28ಕ್ಕೆ ಮುಂದೂಡಿತ್ತು. ಜುಲೈ 11ಕ್ಕೆ ಚುನಾವಣೆ ನಡೆಯಬೇಕಿತ್ತು.

ಭಾರತ ಕುಸ್ತಿ ಫೆಡರೇಷನ್‌ಗೆ ಸಂಯೋಜನಗೊಂಡಿರುವ ಕಾರಣ ತನಗೆ ಮತದಾನದ ಹಕ್ಕು ನೀಡುವಂತೆ ಅಸ್ಸಾಂ ಕುಸ್ತಿ ಸಂಸ್ಥೆ ವಾದಿಸಿ ಹೈಕೋರ್ಟ್ ಮೊರೆಹೋಗಿತ್ತು. ರಾಷ್ಟ್ರೀಯ ಫೆಡರೇಷನ್, ಅಸ್ಸಾಂ ಕುಸ್ತಿ ಸಂಸ್ಥೆಯನ್ನು ಪ್ರತ್ಯೇಕ ರಾಜ್ಯ ಘಟಕ ಎಂದು ಮಾನ್ಯ ಮಾಡಿಲ್ಲ.

ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಎರಡನೇ ಸುತ್ತಿಗೆ ಸಾತ್ವಿಕ್–ಚಿರಾಗ್

ಯೋಸು, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿತು.

ಮಂಗಳವಾರ ನಡೆದ ಪುರುಷರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತದ ಜೋಡಿ 21–16, 21–14 ರಿಂದ ಥಾಯ್ಲೆಂಡ್‌ನ ಸುಪಕ್ ಜೊಮ್ಕೊ-ಕಿಟಿನುಪಾಂಗ್ ಕೆಡ್ರೆನ್ ಅವರನ್ನು ಮಣಿಸಿತು. ಮುಂದಿನ ಸುತ್ತಿನಲ್ಲಿ ಅವರು ಚೀನಾದ ಹಿ ಜಿ ತಿಂಗ್– ಝೌ ಹಾವೊ ಡಾಂಗ್ ಅವರನ್ನು ಎದುರಿಸುವರು. ಕಳೆದ ತಿಂಗಳು ಇಂಡೊನೇಷ್ಯಾ ಓಪನ್ ಟೂರ್ನಿ ಗೆದ್ದ ಬಳಿಕ ಭಾರತದ ಜೋಡಿ ಆಡುತ್ತಿರುವ ಮೊದಲ ಟೂರ್ನಿ ಇದು.

ಎಂ.ಆರ್.ಅರ್ಜುನ್ ಮತ್ತು ಧ್ರುವ್ ಕಪಿಲಾ ಅವರು ಚೀನಾದ ಲಿಯು ಚೆನ್-ಒವು ಕ್ಸುವಾನ್ ಯಿ ವಿರುದ್ಧದ ಮೊದಲ ಸುತ್ತಿನ ಪಂದ್ಯವನ್ನು ಅರ್ಧದಲ್ಲೇ ತ್ಯಜಿಸಿದರು. ಅರ್ಜುನ್ ಅವರು ಬೆನ್ನುನೋವಿನಿಂದ ಬಳಲಿದ್ದು ಇದಕ್ಕೆ ಕಾರಣ. ಈ ವೇಳೆ ಭಾರತದ ಜೋಡಿ ಮೊದಲ ಗೇಮ್‌ನಲ್ಲಿ 5–6 ರಲ್ಲಿ ಹಿನ್ನಡೆಯಲ್ಲಿತ್ತು.

ಹರ್ಷಿತ್ ಅಗರವಾಲ್ ಮತ್ತು ಶಾಶ್ವತ್ ದಲಾಲ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಪ್ರಧಾನ ಸುತ್ತು ಪ್ರವೇಶಿಸಲು ವಿಫಲರಾದರು. ಅರ್ಹತಾ ಹಂತದ ಮೊದಲ ಪಂದ್ಯದಲ್ಲಿ ಮಲೇಷ್ಯಾದ ತಾನ್ ಜಿಯಾ ಜಿ ಅವರನ್ನು ಮಣಿಸಿದ ಹರ್ಷಿತ್, ಎರಡನೇ ಪಂದ್ಯದಲ್ಲಿ 15–21, 21–10, 10–21 ರಿಂದ ಕೊರಿಯಾದ ಚೊಯ್ ಪೆಯಾಂಗ್ ಎದುರು ಪರಾಭವಗೊಂಡರು.

ಶಾಶ್ವತ್ ಅವರು ಅರ್ಹತಾ ಹಂತದ ಮೊದಲ ಪಂದ್ಯದಲ್ಲಿ 14–21, 17–21 ರಿಂದ ಕೊರಿಯಾದ ಜೆಯಾಂಗ್ ಮಿನ್ ಸೆಯೊನ್ ಕೈಯಲ್ಲಿ ಸೋತರು.


ಸಾತ್ವಿಕ್ (ಬಲ) ಮತ್ತು ಚಿರಾಗ್ ಶೆಟ್ಟಿ

ಅತಿವೇಗದ ಸ್ಮ್ಯಾಷ್: ಸಾತ್ವಿಕ್ ದಾಖಲೆ

ಸೊಕಾ, ಜಪಾನ್ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಬ್ಯಾಡ್ಮಿಂಟನ್‌ನಲ್ಲಿ ಪುರುಷರ ವಿಭಾಗದಲ್ಲಿ ಅತಿವೇಗದ ಸ್ಮ್ಯಾಷ್ ಹೊಡೆದು ಗಿನ್ನೆಸ್ ದಾಖಲೆ ಮಾಡಿದ್ದು, 10 ವರ್ಷಗಳ ಹಿಂದಿನ ದಾಖಲೆ ಮುರಿದಿದ್ದಾರೆ.

ಸಾತ್ವಿಕ್ ಅವರು ಸಿಡಿಸಿದ ಸ್ಮ್ಯಾಷ್‌ನಲ್ಲಿ ಶಟಲ್‌ಕಾಕ್ ಗಂಟೆಗೆ 565 ಕಿ.ಮೀ. ವೇಗದಲ್ಲಿ ಸಾಗಿದೆ. ಮಲೇಷ್ಯಾದ ಆಟಗಾರ ತಾನ್ ಬೂನ್ ಹೆಯೊಂಗ್ ಅವರು 2013 ರಲ್ಲಿ ಗಂಟೆಗೆ 493 ಕಿ.ಮೀ. ವೇಗದಲ್ಲಿ ಸ್ಮ್ಯಾಷ್ ಸಿಡಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಮಹಿಳೆಯರ ವಿಭಾಗದಲ್ಲಿ ಮಲೇಷ್ಯಾದ ತಾನ್ ಪರ್ಲ್ (ಗಂಟೆಗೆ 438 ಕಿ.ಮೀ ವೇಗ) ಅವರು ಹೊಸ ದಾಖಲೆ ಮಾಡಿದ್ದಾರೆ.

ಪ್ರಮುಖ ಕ್ರೀಡಾ ಪರಿಕರಗಳ ಉತ್ಪಾದನಾ ಸಂಸ್ಥೆ, ಜಪಾನ್‌ನ ಯೋನೆಕ್ಸ್ ಕಂಪನಿಯು ವೇಗದ ಸ್ಮ್ಯಾಷ್ ದಾಖಲಿಸಲು ನಡೆಸಿದ ಪ್ರದರ್ಶನ ಕೂಟದಲ್ಲಿ ಸಾತ್ವಿಕ್ ಅವರ ಸಾಧನೆ ಮೂಡಿಬಂದಿದೆ.

17ನೇ ಕ್ರಮಾಂಕಕ್ಕಿಳಿದ ಸಿಂಧು

ನವದೆಹಲಿ (ಪಿಟಿಐ): ಸ್ಥಿರ ಪ್ರದರ್ಶನ ಕಂಡುಕೊಳ್ಳಲು ಕೆಲವು ತಿಂಗಳಿಂದ ಪರದಾಡುತ್ತಿರುವ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಬಿಡಬ್ಲ್ಯುಎಫ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಐದು ಸ್ಥಾನಗಳಷ್ಟು ಕುಸಿತ ಕಂಡಿದ್ದು 17ನೇ ಸ್ಥಾನಕ್ಕಿಳಿದಿದ್ದಾರೆ. ಇದು ದಶಕದ ಅವಧಿಯಲ್ಲಿ ಅವರ ಅತಿ ಕಡಿಮೆ ರ‍್ಯಾಂಕಿಂಗ್ ಎನಿಸಿದೆ.

ಪಾದದ ನೋವಿನಿಂದ ಐದು ತಿಂಗಳ ವಿಶ್ರಾಂತಿ ಪಡೆದಿದ್ದ ಸಿಂಧು, ಮರಳಿ ಕಣಕ್ಕಿಳಿದ ಬಳಿಕ ಎಂದಿನ ಲಯ ಕಂಡುಕೊಳ್ಳಲು ವಿಫಲರಾಗಿದ್ದಾರೆ. ಈ ಋತುವಿನಲ್ಲಿ ಅವರಿಗೆ ಒಂದೇ ಒಂದು ಪ್ರಶಸ್ತಿ ಗೆದ್ದುಕೊಳ್ಳಲು ಸಾಧ್ಯವಾಗಿಲ್ಲ.

ವಿಶ್ವದ ಮಾಜಿ ಎರಡನೇ ನಂಬರ್ ಆಟಗಾರ್ತಿ ಸಿಂಧು, 2022ರ ಕಾಮನ್‌ವೆಲ್ತ್ ಕ್ರೀಡೆಗಳ ಪ್ರಶಸ್ತಿ ಗೆಲ್ಲುವ ವೇಳೆ ಈ ನೋವಿಗೆ ಒಳಗಾಗಿದ್ದರು.

ಪ್ರಸ್ತುತ ಅವರು 14 ಟೂರ್ನಿಗಳಿಂದ 49,480 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅವರು ಈ ಹಿಂದೆ 17ನೇ ಸ್ಥಾನದಲ್ಲಿದ್ದಿದ್ದು 2013ರ ಜನವರಿಯಲ್ಲಿ. 2016 ರಿಂದೀಚೆಗೆ ಅಗ್ರ 10ರೊಳಗೆ ಸ್ಥಾನ ಪಡೆದಿದ್ದ ಅವರು 2016ರ ಏಪ್ರಿಲ್‌ನಲ್ಲಿ ಜೀವನಶ್ರೇಷ್ಠ 2ನೇ ಕ್ರಮಾಂಕಕ್ಕೆ ಏರಿದ್ದರು. ಎಚ್.ಎಸ್.ಪ್ರಣಯ್ 10ನೇ ಕ್ರಮಾಂಕಕ್ಕೆ ಇಳಿದಿದ್ದಾರೆ. ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಕ್ರಮವಾಗಿ 12 ಮತ್ತು 20ನೇ ಸ್ಥಾನದಲ್ಲಿದ್ದಾರೆ. ಸೈನಾ ನೆಹ್ವಾಲ್ 5 ಸ್ಥಾನಗಳಷ್ಟು ಕೆಳಗಿಳಿದಿದ್ದು 36ನೇ ಸ್ಥಾನದಲ್ಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 3ನೇ ಕ್ರಮಾಂಕದಲ್ಲಿರುವುದು ಭಾರತೀಯ ಆಟಗಾರರ ಉತ್ತಮ ರ‍್ಯಾಂಕಿಂಗ್ ಎನಿಸಿದೆ.

ಶೂಟಿಂಗ್: ಭಾರತಕ್ಕೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಭಾರತ ತಂಡ, ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ ಪದಕ ಪಟ್ಟಿಯಲ್ಲಿ ಚೀನಾವನ್ನು ಹಿಂದಕ್ಕೆ ಹಾಕಿ ಅಗ್ರಸ್ಥಾನಕ್ಕೇರಿದೆ. ಭಾರತ ಮಂಗಳವಾರ ಗೆದ್ದ ಒಂದು ಚಿನ್ನ ಸೇರಿ ಒಟ್ಟು ನಾಲ್ಕು ಚಿನ್ನ ಗೆದ್ದುಕೊಂಡಿದೆ.

ಚೀನಾ 3 ಸ್ವರ್ಣ ಗೆದ್ದು ಕೊಂಡಿದೆ. ಪಾರ್ಥ ಮಾನೆ, ಅಭಿನಯ್ ಶಾ ಮತ್ತು ಧನುಷ್ ಶ್ರೀಕಾಂತ್ ಅವರನ್ನೊಳಗೊಂಡ ತಂಡ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತಕ್ಕೆ ದಿನ ಏಕೈಕ ಚಿನ್ನ ತಂದುಕೊಟ್ಟಿತು.

ಮಹಿಳೆಯರ ಸ್ಕೀಟ್‌ನಲ್ಲಿ ರೈಝಾ ಧಿಲ್ಲೋನ್ ಬೆಳ್ಳಿಯ ಪದಕಕ್ಕೆ ಗುರಿಯಿಟ್ಟರೆ, ಉಮಾಮಹೇಶ್ ಮದ್ದಿನೇನಿ ಪುರುಷರ 10 ಮೀ. ಏರ್ ರೈಫಲ್ ವೈಯಕ್ತಿಕ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದರು. ಟೂರ್ನಿಯಲ್ಲಿ ಇನ್ನೂ ಆರು ದಿನಗಳು ಬಾಕಿವುಳಿದಿವೆ. ಭಾರತದ 10 ಮೀ. ಏರ್ ರೈಫಲ್ ತಂಡ 1886.7 ಅಂಕ ಗಳಿಸಿದರೆ, 1883.5 ಅಂಕ ಗಳಿಸಿದ ಚೀನಾ ಎರಡನೇ ಸ್ಥಾನಕ್ಕೆ ಸರಿಯಿತು. ಕೊರಿಯಾ ಬೆಳ್ಳಿಯ ಪದಕ ಪಡೆಯಿತು. ಇದು ಅಭಿನಯ್ ಅವರಿಗೆ ಎರಡನೆ ಪದಕ. ಅವರು ಸೋಮವಾರ ಗೌತಮಿ ಭಾನೋಟ್ ಜೊತೆಗೆ 10 ಮೀ. ಏರ್ ರೈಫಲ್ ಮಿಕ್ಸೆಡ್ ಟೀಮ್ ಸ್ವರ್ಣ ಗೆದ್ದುಕೊಂಡಿದ್ದರು.

ಕಾಮನ್‌ವೆಲ್ತ್ ಗೇಮ್ಸ್ ಆತಿಥ್ಯ: ಹಿಂದೆ ಸರಿದ ವಿಕ್ಟೋರಿಯಾ

ಮೆಲ್ಬರ್ನ್ (ಎಎಫ್‌ಪಿ): 2026ರ ಕಾಮನ್‌ವೆಲ್ತ್ ಕ್ರೀಡಾಕೂಟದ ಆತಿಥ್ಯದಿಂದ ಆಸ್ಟ್ರೇಲಿಯಾದ ವಿಕ್ಟೋರಿಯಾ ಪ್ರಾಂತ್ಯವು ಹಿಂದೆ ಸರಿದಿದೆ. ಈ ಬೆಳವಣಿಗೆಯು ಕೂಟದ ಸಂಘಟಕರಿಗೆ ಬಲುದೊಡ್ಡ ಹಿನ್ನಡೆ ಉಂಟುಮಾಡಿದೆ.

'ಕೂಟದ ಆಯೋಜನೆಗೆ ಭಾರೀ ಖರ್ಚು ತಗಲುತ್ತದೆ. ಅಷ್ಟು ಹಣ ಹೊಂದಿಸಲು ಸಾಧ್ಯವಿಲ್ಲ' ಎಂದು ವಿಕ್ಟೋರಿಯಾ ಪ್ರಾಂತ್ಯದ ಮುಖ್ಯಸ್ಥ ಡೇನಿಯಲ್ ಆ್ಯಂಡ್ರ್ಯೂಸ್ ಹೇಳಿದ್ದಾರೆ.

ಕಾಮನ್‌ವೆಲ್ತ್ ಕೂಟದ ಆಯೋಜನೆಗೆ ₹ 11 ಸಾವಿರ ಕೋಟಿ ಬೇಕಾಗಬಹುದು ಎಂದು ಕಳೆದ ವರ್ಷ ಅಂದಾಜು ಮಾಡಲಾಗಿತ್ತು. ಆದರೆ ಅಂದಾಜು ಮಾಡಲಾದ ಬಜೆಟ್‌ಗಿಂತಲೂ ಮೂರು ಪಟ್ಟು ಹೆಚ್ಚು ವೆಚ್ಚ ತಗಲುವ ಸಾಧ್ಯತೆಯಿದೆ. ₹ 39 ಸಾವಿರ ಕೋಟಿಯಷ್ಟು ಖರ್ಚು ಮಾಡಿ ಕ್ರೀಡಾಕೂಟ ಆಯೋಜಿಸಲು ನಾವು ಸಿದ್ಧವಿಲ್ಲ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಆಸ್ಪತ್ರೆಗಳು ಮತ್ತು ಶಾಲೆಗಳಿಗೆ ಮೀಸಲಿಟ್ಟ ಹಣವನ್ನು ಕ್ರೀಡಾಕೂಟಕ್ಕೆ ಬಳಸುವುದಿಲ್ಲ. ಆತಿಥ್ಯದಿಂದ ಹಿಂದೆ ಸರಿಯುವ ನಿರ್ಧಾರವನ್ನು ಕಾಮನ್‌ವೆಲ್ತ್ ಕೂಟದ ಸಂಘಟಕರಿಗೆ ತಿಳಿಸಿದ್ದೇವೆ' ಎಂದರು.

ಈ ನಿರ್ಧಾರವು 2026 ರ ಕೂಟ ನಡೆಯುವ ಬಗ್ಗೆ ಅನುಮಾನ ಮೂಡಿಸಿರುವುದು ಮಾತ್ರವಲ್ಲದೆ, ಒಟ್ಟಾರೆಯಾಗಿ ಕಾಮನ್‌ವೆಲ್ತ್ ಕ್ರೀಡಾಕೂಟದ ಭವಿಷ್ಯದ ಬಗ್ಗೆಯೇ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ವಿಶ್ಲೇಷಿಸಲಾಗುತ್ತಿದೆ. ಏಕೆಂದರೆ, ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ರಾಷ್ಟ್ರಗಳ ಸಂಖ್ಯೆ ಈಚೆಗಿನ ವರ್ಷಗಳಲ್ಲಿ ಕಡಿಮೆಯಾಗುತ್ತಾ ಬಂದಿದೆ.



ಬೆಂಗಳೂರಿನಲ್ಲಿ ಕರ್ನಾಟಕ ಗಾಲ್ಫ್ ಅಸೋಸಿಯೇಷನ್ ಸಹಯೋಗದಲ್ಲಿ ನಡೆದ ದ ಗಾಲ್ಫ್ ಫೌಂಡೇಷನ್ (ಟಿಜಿಎಫ್) 13ನೇ ಆಹ್ವಾನಿತ ಫಂಡ್ ರೈಸರ್ಸ್ ಗಾಲ್ಫ್‌ನಲ್ಲಿ ಪ್ರಶಸ್ತಿ ಗೆದ್ದ ಮನೀಷಕುಮಾರ್ ವರ್ಮಾ (ಎಡಬದಿಯಿಂದ ಮೊದಲನೇಯವರು), ಮನೀಷಕುಮಾರ್ ವರ್ಮಾ (ಮೂರನೇಯವರು) ಅವರೊಂದಿಗೆ ಮಿಸ್ ಇಂಡಿಯಾ ಮೊದಲ ರನ್ನರ್ ಅಪ್ ಶ್ರೇಯಾ ಪೂಜಾ, ಟಿಜಿಎಫ್ ಸಂಸ್ಥಾಪಕ ಅಮಿತ್ ಲೂತ್ರಾ ಇದ್ದಾರೆ

ಹಾಕಿ: ಜರ್ಮನಿಗೆ ಮಣಿದ ಭಾರತ

ವೀಸ್‌ಬಾಡನ್, ಜರ್ಮನಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದವರು ಜರ್ಮನಿ ವಿರುದ್ಧ ಮಂಗಳವಾರ ನಡೆದ ಪಂದ್ಯವನ್ನು 1–4 ಗೋಲುಗಳಿಂದ ಸೋತರು.

ತಲಾ ಎರಡು ಗೋಲುಗಳನ್ನು ಗಳಿಸಿದ ನಿಕ್ ಲೊರೆನ್ಜ್ (6 ಮತ್ತು 59ನೇ ನಿ.) ಹಾಗೂ ಜೆಟ್ ಫ್ಲೆಶುಟ್ಜ್ (14 ಮತ್ತು 43ನೇ ನಿ.) ಅವರು ಜರ್ಮನಿ ತಂಡದ ಗೆಲುವಿಗೆ ಕಾರಣರಾದರು. ಭಾರತದ ತಂಡದ ಪರ ಯುವ ಆಟಗಾರ್ತಿ ವೈಷ್ಣವಿ ವಿಠಲ್ ಫಾಲ್ಕೆ (29ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಆಕ್ರಮಣಕಾರಿ ಆಟವಾಡಿದ ಜರ್ಮನಿ ತಂಡದವರು ಮೊದಲ ಕ್ವಾರ್ಟರ್‌ನಲ್ಲಿ ಎರಡು ಗೋಲುಗಳನ್ನು ಗಳಿಸಿ ಭಾರತದ ಮೇಲೆ ಒತ್ತಡ ಹೇರಿದರು. ಎರಡನೇ ಕ್ವಾರ್ಟರ್‌ನಲ್ಲಿ ಗೋಲು ಗಳಿಸಿದ ಭಾರತ, ಹಿನ್ನಡೆಯನ್ನು 1–2 ಕ್ಕೆ ತಗ್ಗಿಸಿತು. ಆದರೆ ವಿರಾಮದ ಬಳಿಕ ಮತ್ತೆ ಎರಡು ಗೋಲುಗಳನ್ನು ಗಳಿಸಿದ ಆತಿಥೇಯರು ನಿರಾಯಾಸ ಗೆಲುವು ದಾಖಲಿಸಿದರು.

ಬುಧವಾರ ಭಾರತ ಮತ್ತೆ ಜರ್ಮನಿ ವಿರುದ್ಧ ಹಣಾಹಣಿ ನಡೆಸಲಿದೆ.

ಡುರಾಂಡ್ ಕಪ್ ಟೂರ್ನಿಯ ಟ್ರೋಫಿಗಳಿಗೆ ಅದ್ದೂರಿ ಸ್ವಾಗತ

ಫುಟ್‌ಬಾಲ್ ಇತಿಹಾಸ ನೆನಪಿಸಿದ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯಾದ ಅತ್ಯಂತ ಹಳೆಯ ಫುಟ್‌ಬಾಲ್ ಟೂರ್ನಿ ಎನಿಸಿರುವ ಡುರಾಂಡ್ ಕಪ್‌ನ ಟ್ರೋಫಿಗಳಿಗೆ ಮಂಗಳವಾರ ಉದ್ಯಾನನಗರಿಯಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಡುರಾಂಡ್ ಕಪ್ ವಿಜೇತರಿಗೆ ನೀಡುವ ಮೂರು ಟ್ರೋಫಿಗಳ ಪ್ರವಾಸಕ್ಕೆ ಜೂನ್ 30 ರಂದು ನವದೆಹಲಿಯಲ್ಲಿ ಚಾಲನೆ ಲಭಿಸಿತ್ತು. ಇಲ್ಲಿನ ಆರ್ಮಿ ಸರ್ವಿಸ್ ಕೋರ್ (ಎಎಸ್‌ಸಿ) ಸೆಂಟರ್ ಮತ್ತು ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಟ್ರೋಫಿಗಳನ್ನು ಬರಮಾಡಿಕೊಳ್ಳಲಾಯಿತು.

132ನೇ ಡುರಾಂಡ್ ಕಪ್ ಟೂರ್ನಿ ಆ 3 ರಿಂದ ಸೆ.3ರ ವರೆಗೆ ನಡೆಯಲಿದೆ. ಅತ್ಯಂತ ಹಳೆಯ ಟೂರ್ನಿಯ ಇತಿಹಾಸವನ್ನು ದೇಶದ ವಿವಿಧೆಡೆಯಿರುವ ಫುಟ್‌ಬಾಲ್ ಪ್ರೇಮಿಗಳಿಗೆ ತಲುಪಿಸುವ ಉದ್ದೇಶದಿಂದ ಟ್ರೋಫಿಗಳ ಪ್ರವಾಸ ಆಯೋಜಿಸಲಾಗಿದೆ.

ಡೆಹ್ರಾಡೂನ್, ಉಧಂಪುರ, ಜೈಪುರ, ಪುಣೆ, ಮುಂಬೈ, ಕಾರವಾರ, ಕೇರಳದ ಏಳಿಮಲ, ಕೊಚ್ಚಿ ಮತ್ತು ಗುವಾಹಟಿ ಪ್ರವಾಸ ಮುಗಿಸಿದ ಬಳಿಕ ಟ್ರೋಫಿಗಳನ್ನು ಬೆಂಗಳೂರಿಗೆ ತರಲಾಗಿದೆ.

ನಗರದಲ್ಲಿ ಟ್ರೋಫಿಯ ಪ್ರವಾಸಕ್ಕೆ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾ ಜನರಲ್ ಆಫೀಸರ್ ಕಮಾಂಡಿಂಗ್ (ಜಿಒಸಿ) ಮೇಜರ್ ಜನರಲ್ ರವಿ ಮುರುಗನ್ ಅವರು ಹಸಿರು ನಿಶಾನೆ ತೋರಿಸಿದರು. ಟ್ರೋಫಿಗಳನ್ನು ವಿಧಾನಸೌಧ ಮತ್ತು ಬೆಂಗಳೂರು ಅರಮನೆಯ ಮುಂಭಾಗ ಕೆಲಸಮಯ ಪ್ರದರ್ಶನಕ್ಕೆ ಇಡಲಾಯಿತು.

ಈ ವೇಳೆ ಮಾತನಾಡಿದ ರವಿ ಮುರುಗನ್, 'ಡುರಾಂಡ್ ಕಪ್ ಟೂರ್ನಿಯು ಭಾರತದ ಫುಟ್‌ಬಾಲ್‌ನ ಇತಿಹಾಸದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ. ದೇಶದ ಅತ್ಯಂತ ಹಳೆಯ ಟೂರ್ನಿಯ ಟ್ರೋಫಿಗಳು ಬೆಂಗಳೂರಿಗೆ ತಲುಪಿರುವುದು ಸ್ಮರಣೀಯ ಕ್ಷಣ' ಎಂದರು.

ಮೂರು ಟ್ರೋಫಿಗಳು: ಡುರಾಂಡ್ ಕಪ್ ಟೂರ್ನಿಯನ್ನು ಗೆಲ್ಲುವ ತಂಡಕ್ಕೆ ಮೂರು ಟ್ರೋಫಿಗಳನ್ನು ನೀಡಲಾಗುತ್ತದೆ. ಮೂರೂ ಟ್ರೋಫಿಗಳನ್ನು ಪ್ರದರ್ಶಿಸಲಾಯಿತು. ಡುರಾಂಡ್ ಕಪ್ ಮತ್ತು ಶಿಮ್ಲಾ ಟ್ರೋಫಿ (ಇವೆರಡೂ ರೋಲಿಂಗ್ ಶೀಲ್ಡ್) ಹಾಗೂ ಪ್ರೆಸಿಡೆಂಟ್ಸ್ ಕಪ್ (1956ರಲ್ಲಿ ಮೊದಲ ಬಾರಿ ಪ್ರದಾನ ಮಾಡಲಾಗಿತ್ತು) ಈ ಮೂರು ಟ್ರೋಫಿಗಳಾಗಿವೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಗೌರವ ಕಾರ್ಯದರ್ಶಿ ಎಂ.ಸತ್ಯನಾರಾಯಣ, ಬಿಎಫ್‌ಸಿ ನಿರ್ದೇಶಕ (ಫುಟ್‌ಬಾಲ್) ಡರೆನ್ ಕಾಲ್ಡೀರಾ, ಸೇನೆಯ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.


ಡುರಾಂಡ್ ಕಪ್ ಟ್ರೋಫಿಗಳನ್ನು ಸ್ವಾಗತಿಸುವ ಸಮಾರಂಭದಲ್ಲಿ (ಎಡದಿಂದ) ಬ್ರಿಗೇಡಿಯರ್ ಅಜಯ್ ದುಗ್ಗಲ್ (ಕಮಾಂಡೆಂಟ್, ಎಎಸ್‌ಸಿ ಸೆಂಟರ್), ಕೆಎಸ್‌ಎಫ್‌ಎ ಗೌರವ ಕಾರ್ಯದರ್ಶಿ ಎಂ.ಸತ್ಯನಾರಾಯಣ, ಮೇಜರ್ ಜನರಲ್ ರವಿ ಮುರುಗನ್, ಏರ್ ವೈಸ್ ಮಾರ್ಷಲ್ ಆರ್.ವಿ.ರಾಮಕಿಶೋರ್ ಮತ್ತು ಕಮಾಂಡರ್ ವಿ.ಬಿ.ಬಳ್ಳಾರಿ ಪಾಲ್ಗೊಂಡರು

ಧೋನಿಯ ವಾಹನ ಪ್ರೀತಿಗೆ ವೆಂಕಿ, ಜೋಶಿ ಕ್ಲೀನ್‌ಬೌಲ್ಡ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದಲ್ಲಿ ಆಡಿದ್ದ ಮಧ್ಯಮವೇಗಿ ವೆಂಕಟೇಶ್ ಪ್ರಸಾದ್ ಮತ್ತು ಎಡಗೈ ಸ್ಪಿನ್ನರ್ ಸುನಿಲ್ ಜೋಶಿ ಅವರ ಬೌಲಿಂಗ್‌ಗೆ ಹಲವು ಖ್ಯಾತನಾಮ ಬ್ಯಾಟರ್‌ಗಳೂ ಔಟಾಗಿದ್ದರು. ಕರ್ನಾಟಕದ ಈ ಇಬ್ಬರು ಬೌಲರ್‌ಗಳು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿಯ ವಾಹನಪ್ರೀತಿಗೆ ಕ್ಲೀನ್‌ಬೌಲ್ಡ್ ಆಗಿದ್ದಾರೆ!

ಸೋಮವಾರ ರಾಂಚಿಯಲ್ಲಿರುವ ಧೋನಿ ಅವರ ನಿವಾಸಕ್ಕೆ ವೆಂಕಿ ಮತ್ತು ಜೋಶಿ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಧೋನಿಯವರ ಬೈಕ್ ಮತ್ತು ವಾಹನಗಳ ಸಂಗ್ರಹವನ್ನು ನೋಡಿ ಬೆರಗಾಗಿದ್ದಾರೆ. ದೊಡ್ಡ ಗ್ಯಾರೇಜ್ ಕಟ್ಟಿಸಿರುವ ಧೋನಿ ತಮ್ಮ ನೆಚ್ಚಿನ ಬೈಕ್ ಮತ್ತು ಕಾರುಗಳನ್ನು ಇಟ್ಟಿದ್ದಾರೆ. ಪ್ರತಿಯೊಂದು ವಾಹನವನ್ನೂ ಜತನದಿಂದ ನಿರ್ವಹಿಸುತ್ತಿದ್ದಾರೆ. ಈ ವಿಶಾಲವಾದ ಗ್ಯಾರೇಜ್ ವೀಕ್ಷಿಸುವ ವಿಡಿಯೊ ತುಣುಕನ್ನು ವೆಂಕಟೇಶ್ ಪ್ರಸಾದ್ ಅವರು ತಮ್ಮ ಟ್ವಿಟರ್‌ನಲ್ಲಿ ಹಾಕಿದ್ದಾರೆ. ಬಹಳಷ್ಟು ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ನಾವಿಬ್ಬರೂ ಕೆನರಾ ಬ್ಯಾಂಕ್ ಅಧಿಕಾರಿಗಳಾಗಿರುವುದರಿಂದ ರಾಂಚಿಯಲ್ಲಿ ನಡೆದ ಸಭೆಗೆ ತೆರಳಿದ್ದೆವು. ಈ ಸಂದರ್ಭದಲ್ಲಿ ಧೋನಿಯವರ ಮನೆಗೆ ಭೇಟಿ ನೀಡಿದೆವು. ಧೋನಿ ಅವರ ವಿಶಾಲ ಮನೆ, ಆಟೋಮೊಬೈಲ್ ಸಂಗ್ರಹ, ಕೃಷಿ ಮತ್ತು ಸಾಕುಪ್ರಾಣಿಗಳನ್ನು ನೋಡಿ ಬಹಳ ಸಂತೋಷವಾಯಿತು. ಅವರು ಅಮೋಘ ಕ್ರಿಕೆಟಿಗ ಹೌದು. ಅಲ್ಲದೇ ನಿಜಕ್ಕೂ ಅದ್ಭುತ ವ್ಯಕ್ತಿ. ಅವರ ಜೀವನಪ್ರೀತಿ ಮಾದರಿಯಾದುದು' ಎಂದು ಸುನಿಲ್ ಜೋಶಿ 'ಪ್ರಜಾವಾಣಿ'ಗೆ ತಿಳಿಸಿದರು.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿರುವ ಧೋನಿ ಈಚೆಗೆ ಮೊಣಕಾಲಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಚೇತರಿಸಿಕೊಂಡಿದ್ದು ತಮ್ಮ ಮನೆಯಲ್ಲಿ ವಿಶ್ರಾಂತಿಯಲ್ಲಿದ್ದಾರೆ. ಅಲ್ಲದೇ ಫಿಟ್‌ನೆಸ್ ಮತ್ತು ರಿಕವರಿ ಕೂಡ ಆರಂಭಿಸಿದ್ದಾರೆ.


ಮಹೇಂದ್ರಸಿಂಗ್ ಧೋನಿ ತಮ್ಮ ನೆಚ್ಚಿನ ವಾಹನಗಳನ್ನು ಸಂಗ್ರಹಿಸಿರುವ ಗ್ಯಾರೇಜ್‌ಗೆ ಸುನಿಲ್ ಜೋಶಿ (ಎಡ) ಮತ್ತು ವೆಂಕಟೇಶ್ ಪ್ರಸಾದ್ ಭೇಟಿ ನೀಡಿದರು

ಆ್ಯಷಸ್: ಮ್ಯಾಂಚೆಸ್ಟರ್‌ನಲ್ಲಿ ಇಂದಿನಿಂದ ನಾಲ್ಕನೇ ಟೆಸ್ಟ್

'ಸಮಬಲ' ಹೋರಾಟಕ್ಕೆ ಇಂಗ್ಲೆಂಡ್ ಛಲ

ಮ್ಯಾಂಚೆಸ್ಟರ್ (ಎಎಫ್‌ಪಿ): ಇಂಗ್ಲೆಂಡ್ ತಂಡವು ಈ ಬಾರಿ ತವರಿನಂಗಳದಲ್ಲಿ ಆ್ಯಷಸ್ ಟ್ರೋಫಿ ಜಯಿಸುವ ಕನಸು ಜೀವಂತವಾಗಿಟ್ಟುಕೊಳ್ಳಬೇಕಾದರೆ ಬುಧವಾರ ಆರಂಭವಾಗುವ ಟೆಸ್ಟ್‌ನಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ.

ಎಮಿರೆಟ್ಸ್ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಆ್ಯಷಸ್ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯ ನಡೆಯಲಿದೆ. ಪ್ರವಾಸಿ ಆಸ್ಟ್ರೇಲಿಯಾ ತಂಡವು ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುಂದಿದೆ. ಪ್ಯಾಟ್ ಕಮಿನ್ಸ್ ನಾಯಕತ್ವದ ಬಳಗವು ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಜಯ ಸಾಧಿಸಿತ್ತು. ಆದರೆ ಮೂರನೇ ಪಂದ್ಯದಲ್ಲಿ ಬೆನ್ ಸ್ಟೋಕ್ಸ್ ಬಳಗವು ತಿರುಗೇಟು ನೀಡಿತ್ತು. ಅದರಿಂದಾಗಿ 3–0ಯಿಂದ ಸರಣಿ ಕೈವಶ ಮಾಡಿಕೊಳ್ಳುವ ಆಸ್ಟ್ರೇಲಿಯಾದ ಕನಸು ಈಡೇರಲಿಲ್ಲ. ಈ ಬಾರಿ ಸರಣಿಯ ಮೂರು ಪಂದ್ಯಗಳಲ್ಲಿಯೂ ರೋಚಕ ಫಲಿತಾಂಶಗಳು ಹೊರಹೊಮ್ಮಿವೆ. ಉಭಯ ತಂಡಗಳ ಹೋರಾಟ ಟೆಸ್ಟ್ ಕ್ರಿಕೆಟ್‌ನ ಸೊಬಗನ್ನು ಹೆಚ್ಚಿಸಿದೆ.

ಇದೀಗ ಇಂಗ್ಲೆಂಡ್ ತಂಡಕ್ಕೆ ಅನುಭವಿ ವೇಗಿ ಜಿಮ್ಮಿ ಆ್ಯಂಡರ್ಸನ್ ಕೂಡ ಮರಳಿದ್ದಾರೆ. ಅದರಿಂದಾಗಿ ಸ್ಟುವರ್ಟ್ ಬ್ರಾಡ್, ಮಾರ್ಕ್ ವುಡ್ ಹಾಗೂ ಕ್ರಿಸ್ ವೋಕ್ಸ್ ಅವರೊಂದಿಗೆ ಜಿಮ್ಮಿ ಕೂಡ ಎದುರಾಳಿ ತಂಡಕ್ಕೆ 'ಸ್ವಿಂಗ್ ಸವಾಲು' ಒಡ್ಡಲು ಸಿದ್ಧರಾಗಿದ್ದಾರೆ.

ಬೆನ್ ಸ್ಟೋಕ್ಸ್, ಜೋ ರೂಟ್, ಹ್ಯಾರಿ ಬ್ರೂಕ್ ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ಬ್ಯಾಟಿಂಗ್ ವಿಭಾಗದ ಹೊಣೆಯೂ ಅವರ ಮೇಲೆ ಹೆಚ್ಚಿದೆ.

ಅದೇ ಆಸ್ಟ್ರೇಲಿಯಾ ತಂಡದಲ್ಲಿ ಬ್ಯಾಟಿಂಗ್ ಪಡೆ ಉತ್ತಮವಾಗಿದೆ. ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್ ಮತ್ತು ಮಾರ್ನಸ್ ಲಾಬುಷೇನ್ ಅವರು ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಆರಂಭಿಕ ಉಸ್ಮಾನ್ ಖ್ವಾಜಾ ಕೂಡ ಉತ್ತಮ ಲಯದಲ್ಲಿದ್ದಾರೆ. ಆದರೆ ಡೇವಿಡ್ ವಾರ್ನರ್ ಅವರ ಬ್ಯಾಟಿಂಗ್ ಅಸ್ಥಿರವಾಗಿರುವುದರಿಂದ ತಂಡಕ್ಕೆ ಉತ್ತಮ ಆರಂಭ ಚಿಂತೆ ಕಾಡುತ್ತಿದೆ.

ನಾಯಕ ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಸ್ಪಿನ್ನರ್ ನೇಥನ್ ಲಯನ್ ತಂಡದ ಬೌಲಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ಪಂದ್ಯವನ್ನು ಜಯಿಸಿಕೊಡಬಲ್ಲ ಸಮರ್ಥರೂ ಹೌದು. ಈ ಪಂದ್ಯವನ್ನು ಜಯಿಸಿದರೆ ಆಸ್ಟ್ರೇಲಿಯಾಕ್ಕೆ ಸರಣಿ ಕೈವಶವಾಗುತ್ತದೆ. ಆದರೆ, ಇಂಗ್ಲೆಂಡ್ ಕಳೆದ ಪಂದ್ಯದಲ್ಲಿ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದ್ದು ಇಲ್ಲಿಯೂ ಕಠಿಣ ಸವಾಲೊಡ್ಡುವ ನಿರೀಕ್ಷೆ ಇದೆ. ಅದರಿಂದಾಗಿ ಮತ್ತೊಂದು ರೋಚಕ ಹಣಾಹಣಿ ನಡೆಯುವ ಸಾಧ್ಯತೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ಟೆನ್, ಟೆನ್ 5 ಎಚ್‌ಡಿ

ಏಷ್ಯನ್ ಗೇಮ್ಸ್: ಹರ್ಮಿತ್ ಅಸಮಾಧಾನ

ನವದೆಹಲಿ (ಪಿಟಿಐ): ಚೀನಾದಲ್ಲಿ ಇದೇ ವರ್ಷ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಆಡುವ ಭಾರತ ಟೇಬಲ್ ಟೆನಿಸ್ ತಂಡದ ಸಿಂಗಲ್ಸ್ ವಿಭಾಗಕ್ಕೆ ತಮ್ಮನ್ನು ಆಯ್ಕೆ ಮಾಡದಿರುವ ಕ್ರಮವನ್ನು 'ಅನ್ಯಾಯ' ಎಂದು ಹರ್ಮಿತ್ ದೇಸಾಯಿ ಟೀಕಿಸಿದ್ದಾರೆ.

ಕಳೆದ ಒಂದು ದಶಕದಿಂದ ಹರ್ಮಿತ್ ಅವರು ಭಾರತ ತಂಡವನ್ನು ಪ್ರಮುಖ ಟೂರ್ನಿಗಳಲ್ಲಿ ಪ್ರತಿನಿಧಿಸಿದ್ದಾರೆ. ಆದರೆ ಈ ಸಲದ ಏಷ್ಯನ್ ಕ್ರೀಡಾಕೂಟದಲ್ಲಿ ಅವರನ್ನು ಸಿಂಗಲ್ಸ್‌ಗೆ ಪರಿಗಣಿಸಲಾಗಿಲ್ಲ. ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ತಂಡಗಳಲ್ಲಿ ಅವರಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಇಬ್ಬರಿಗೆ ಮಾತ್ರ ಅವಕಾಶವಿದೆ. ಆದ್ದರಿಂದ ಅನುಭವಿ ಆಟಗಾರ ಅಚಂತ ಶರತ್ ಕಮಲ್ ಮತ್ತು ಜಿ. ಸತ್ಯನ್ ಅವರನ್ನು ಆಯ್ಕೆ ಮಾಡಲಾಗಿದೆ.


ಹರ್ಮಿತ್ ದೇಸಾಯಿ

'ಈಗ ನಾನು ಮೂರನೇ ಬಾರಿ ಏಷ್ಯನ್ ಗೇಮ್ಸ್‌ನಲ್ಲಿ ಆಡಲಿದ್ದೇನೆ. ದೇಶಿ ಮತ್ತು ಅಂತರರಾಷ್ಟ್ರೀಯ ಮಟ್ಟ ದಲ್ಲಿ ನನ್ನ ಸಾಧನೆಯು ಸಿಂಗಲ್ಸ್‌ನಲ್ಲಿಯೂ ತೃಪ್ತಿಕರವಾಗಿದೆ. ಆದ್ದರಿಂದ ತಂಡ ಮತ್ತು ಡಬಲ್ಸ್ ಅಷ್ಟೇ ಅಲ್ಲ; ಸಿಂಗಲ್ಸ್‌ನಲ್ಲಿ ಆಡಲೂ ನಾನು ಅರ್ಹನಾಗಿದ್ದೇನೆ' ಎಂದು ಹರ್ಮಿತ್ ಹೇಳಿದರು.

29 ವರ್ಷದ ದೇಸಾಯಿ ಮಂಗಳವಾರ ಪ್ರಕಟವಾದ ಐಟಿಟಿಎಫ್ ರ‍್ಯಾಂಕಿಂಗ್‌ನಲ್ಲಿರುವ ಭಾರತೀಯರ ಪೈಕಿ ಅಗ್ರಸ್ಥಾನ ಪಡೆದಿದ್ದಾರೆ. ಹೋದ ತಿಂಗಳು ಲಾಗೋಸ್‌ನಲ್ಲಿ ನಡೆದಿದ್ದ ಡಬ್ಲ್ಯುಟಿಟಿ ಕಂಟೆಂಡರ್ ಟೂರ್ನಿಯಲ್ಲಿ ಸೆಮಿಫೈನಲ್ ಮತ್ತು ಟ್ಯುನಿಷ್‌ನಲ್ಲಿ ನಡೆದಿದ್ದ ಡಬ್ಲ್ಯುಟಿಟಿಯಲ್ಲಿ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಸದ್ಯ ಅವರು ಒಟ್ಟಾರೆ 64ನೇ ರ‍್ಯಾಂಕ್‌ನಲ್ಲಿದ್ದಾರೆ. ಶರತ್ (69) ಮತ್ತು ಸತ್ಯನ್ (88) ಅವರಿಗಿಂತ ಮೇಲಿನ ಸ್ಥಾನದಲ್ಲಿದ್ದಾರೆ. ಆದರೆ ತಂಡದ ಆಯ್ಕೆ ಪ್ರಕ್ರಿಯೆ ನಡೆದ ಹೊತ್ತಿನಲ್ಲಿ ದೇಸಾಯಿ 71ನೇ ಸ್ಥಾನದಲ್ಲಿದ್ದರು. ಶರತ್ 54 ಹಾಗೂ ಸತ್ಯನ್ 88ನೇ ಸ್ಥಾನದಲ್ಲಿದ್ದರು.

